ಯಲಬುರ್ಗಾ ಪ್ರದೇಶದ ಚೆನ್ನದಾಸರ ಸಮುದಾಯದ ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು

ಶರಣಪ್ಪ ವೈ ತಳವಾರ

ಮಾರ್ಗದರ್ಶಕರು

ಡಾ.ಟಿ.ವಿಜಯ್ ಪೂಣಚ್ಚ

ಪ್ರಾಧ್ಯಾಪಕರು

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಅಕ್ಟೋಬರ್ ೨೦೦೯

ಯಲಬುರ್ಗಾ ಪ್ರದೇಶದ ಚೆನ್ನದಾಸರ ಸಮುದಾಯದ ಚಾರಿತ್ರಿಕ ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯ, ಹಂಪಿ, ಚರಿತ್ರೆ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಲ್ಲಿಸಿದ ನಿಬಂಧ)

ಸಂಶೋಧಕರು
ಶರಣಪ್ಪ ವೈ ತಳವಾರ

ಮಾರ್ಗದರ್ಶಕರು
ಡಾ.ಟಿ.ವಿಜಯ್ ಪೂಣಚ್ಚ
ಪ್ರಾಧ್ಯಾಪಕರು

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಅಕ್ಟೋಬರ್ ೨೦೦೯

ದೃಢೀಕರಣ ಪತ್ರ

'ಯಲಬುರ್ಗಾ ಪ್ರದೇಶದ ಚೆನ್ನದಾಸರ ಸಮುದಾಯದ ಚಾರಿತ್ರಿಕ ಅಧ್ಯಯನ' ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯ, ಚರಿತ್ರೆ ವಿಭಾಗದ ಎಂ.ಫಿಲ್. ಪದವಿಗಾಗಿ ಶರಣಪ್ಪ ವೈ ತಳವಾರ., ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಪ್ರಸ್ತುತ ನಿಬಂಧವು ಈ ಮೊದಲು ಬೇರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 14.10.2009.

ಡಾ. ಟಿ. ವಿಜಯ್ ಪೂಣಚ್ಚ
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪ್ರಮಾಣ ಪತ್ರ

'ಯಲಬುರ್ಗಾ ಪ್ರದೇಶದ ಚೆನ್ನದಾಸರ ಸಮುದಾಯದ ಚಾರಿತ್ರಿಕ ಅಧ್ಯಯನ' ಎಂಬ ನಿಬಂಧವನ್ನು ಡಾ. ಟಿ. ವಿಜಯ್ ಪೂಣಚ್ಚ, ಪ್ರಾಧ್ಯಾಪಕರು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯ, ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 14.10.2009

(ಶರಣಪ್ಪ ವೈ ತಳವಾರ)
ಸಂಶೋಧಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಪರಿವಿಡಿ

• • •

ಅಧ್ಯಾಯ ಒಂದು

ಪ್ರಸ್ತಾವನೆ

ಪ್ರಸ್ತಾವನೆ

೧.೧. ಯಲಬುರ್ಗಾ ಪ್ರದೇಶದ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ

೧.೨. ಚೆನ್ನದಾಸರ ಮೂಲ ಮತ್ತು ಐತಿಹಾಸಿಕ ಹಿನ್ನೆಲೆ

೧.೩. ಸಾಹಿತ್ಯಿಕ ಆಧಾರಗಳು/ಆಕರಗಳು

೧.೪. ಚರಿತ್ರೆ ರಚನಾಶಾಸ್ತ್ರದ ಆಯಾಮಗಳು

೧.೫. ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಾಯ ಒಂದು

ಪ್ರಸ್ತಾವನೆ

ಒಂದು ನಾಡಿನ ಚರಿತ್ರೆಯೆಂದರೆ, ಆ ನಾಡನ್ನಾಳಿದ ರಾಜರ ಚರಿತ್ರೆ ಎಂಬ ಭಾವನೆ ಸಾಮಾನ್ಯವಾಗಿ ರೂಢಿಯಲ್ಲಿದೆ. ಚರಿತ್ರೆಯನ್ನು ರೂಪಿಸಿದ ಪ್ರಧಾನ ಪರಂಪರೆ ಇದೇ ಹಾದಿಯಲ್ಲಿದೆ. ಆದರೆ ಒಂದು ನಾಡು ಎಂದರೆ ಅದನ್ನು ಆಳಿದ ರಾಜತ್ವವಲ್ಲ, ಅಲ್ಲಿವಾಸಿಸುವ ಜನ ಆ ಜನರ ಬದುಕಿದ ರೀತಿ, ಅನುಸರಿಸಿದ ಧರ್ಮ, ನಿರ್ಮಿಸಿದ ಕಲೆ, ಅವರ ಜೀವನ ಸಮಸ್ಯೆಗಳು ಹಾಗೂ ಅವರ ಜೀವನ ಮೌಲ್ಯಗಳು ಇತಿಹಾಸದ ಭಾಗವಾಗಿರುತ್ತವೆ. ಹೀಗಾಗಿ ಒಂದು ನಾಡಿನ ಚರಿತ್ರೆ ರಚಿಸಲು ರಾಜವಂಶಗಳಷ್ಟೇ ಅಲ್ಲದೆ, ನಾಡಿನ ಜನತೆಯ ಚರಿತ್ರೆಯೂ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಇತ್ತೀಚಿನ ದಶಕಗಳಲ್ಲಿ ಇತಿಹಾಸದ ಅರ್ಥವ್ಯಾಪ್ತಿಯು ಇಂದು ರಾಜ ಮಹಾರಾಜರ ರಾಜಕೀಯ ಅಧ್ಯಯನದಿಂದ ಜನಸಾಮಾನ್ಯರ ಬದುಕಿನ ಅಧ್ಯಯನವಾಗಿ ರೂಪಾಂತರಗೊಳ್ಳತೊಡಗಿದೆ. ಇದರಿಂದಾಗಿ ಜನಸಾಮಾನ್ಯರ ಚರಿತ್ರೆಗೆ ಮಹತ್ವ ಬಂದಿದೆ. ಜನರ ಜೀವನದ ಆಚಾರಗಳು, ಧರ್ಮ, ಸಮಾಜ, ಕಲೆ, ಸಂಸ್ಕೃತಿಗಳು ತಮ್ಮದೇ ಆದ ವೈಶಿಷ್ಟ್ಯತೆಯನ್ನು ಹೊಂದಿರುವುದು ಕಂಡುಬರುತ್ತದೆ. ಆರ್ಯ ಪೂರ್ವಕಾಲದಲ್ಲಿ ಸ್ಥಳ ಜನ್ಯ ಬುಡಕಟ್ಟುಗಳು ತಮ್ಮದೇ ಆದ ಸಂಸ್ಕೃತಿ ಹಾಗೂ ಆಚರಣೆಗಳನ್ನು ಹೊಂದಿದ್ದವು. ಭಾರತಕ್ಕೆ ಆರ್ಯರ ಆಗಮನವಾದ ಮೇಲೆ ಇಲ್ಲಿಯ ಸಂಸ್ಕೃತಿಯ ಚಿತ್ರಣವೇ ಬದಲಾಯಿತು. ಮೂಲ ಸಂಸ್ಕೃತಿಗಳನ್ನು ಕ್ಷುದ್ರ, ಕ್ಷುಲ್ಲಕ ಆಚರಣೆಗಳೆಂದೇ ಆರ್ಯರು ವೈದಿಕ ಸಂಸ್ಕೃತಿಯೇ ಅಧಿಕೃತವಾದ ಸಂಸ್ಕೃತಿ ಎಂದು ಪ್ರಮುಖವಾದ ಇತಿಹಾಸ ಬರವಣಿಗೆಗಳು ಸಾರಿದವು. ಇದರಿಂದಾಗಿ ಅವೈದಿಕ ಸಂಸ್ಕೃತಿಗಳು ನಿರಂತರವಾಗಿ ಚರಿತ್ರೆಯ ಕಾಲಘಟ್ಟದಲ್ಲಿ ನಿರ್ಲಕ್ಷಕ್ಕೊಳಗಾದವು.

ಈ ಬಗೆಯಲ್ಲಿ ನಿರ್ಲಕ್ಷಕ್ಕೊಳಗಾದ ಸಮುದಾಯಗಳನ್ನು ಚಾರಿತ್ರಿಕವಾಗಿ ಅಭ್ಯಸಿಸುವುದು ಮುಖ್ಯವೆಂದು ಭಾವಿಸಿದ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು, ಆದಿವಾಸಿ ಸಮುದಾಯಗಳ ಅಧ್ಯಯನಕ್ಕೆ ಹೆಚ್ಚು ಒತ್ತು ಕೊಟ್ಟಿದೆ. ಅಂಥಹ ಅಲೆಮಾರಿ ಸಮುದಾಯದಲ್ಲಿ ಒಂದಾದ ಹಾಗೂ ಸಮಾಜದಲ್ಲಿ ನೆಲೆ ನಿಲ್ಲಲು ಯಾವುದೇ ಸ್ತರಗಳಿಲ್ಲದೆ ಸಂಪೂರ್ಣವಾಗಿ ಅಲಕ್ಷಕ್ಕೆ ಒಳಗಾದ ಈ ಚೆನ್ನದಾಸರ ಸಮುದಾಯವು, ಕೊಪ್ಪಳ ಜಿಲ್ಲೆಯ ಯಲಬುರ್ಗಾ

ಪ್ರದೇಶದಲ್ಲಿ ಕಂಡುಬರುತ್ತದೆ. ಇಂತಹ ಸಮುದಾಯವು ತನ್ನದೇ ಆದ ಕಲೆ ಮತ್ತು ಸಂಸ್ಕೃತಿಯನ್ನು ಹೊಂದಿದ್ದರೂ ಸಹ ವಸಾಹತುಶಾಹಿ ಚರಿತ್ರೆಕಾರರಾಗಲಿ ಇಲ್ಲವೆ ರಾಷ್ಟ್ರೀಯವಾದಿ ಚರಿತ್ರೆಕಾರರಾಗಲಿ ಚರಿತ್ರೆಯ ರಚನೆಯಲ್ಲಿ ಗಮನಕ್ಕೆ ಬರದೆ ಇದದ್ದು ಕಂಡುಬರುತ್ತದೆ. ಆದರೆ ಸ್ವಾತಂತ್ರ್ಯ ನಂತರದಲ್ಲಿ ಅಲೆಮಾರಿ ಸಮುದಾಯಗಳ ಕುರಿತು ಅಲ್ಪಸ್ವಲ್ಪ ಅಧ್ಯಯನ ನಡೆದಿದ್ದರಿಂದ ಅಂತಹ ಸಮುದಾಯಗಳ ಮೂಲ ಮತ್ತು ವಲಸೆಯನ್ನು ಸ್ಥೂಲವಾಗಿ ಪರಿಚಯಿಸುತ್ತವೆ.

ಪ್ರಸ್ತುತ ಲಭ್ಯವಿರುವ ಸಾಹಿತ್ಯದಲ್ಲಿ ಚೆನ್ನದಾಸರ ಸಮುದಾಯಕ್ಕೆ ಸಂಬಂಧಿಸಿದ ಕೆಲವು ಚಾರಿತ್ರಿಕ ಆಕರಗಳು ಇರುವುದನ್ನು ಹಲವಾರು ವಿದ್ವಾಂಸರು ಗುರುತಿಸಿದ್ದಾರೆ. ೧೫ ಮತ್ತು ೧೬ನೇ ಶತಮಾನಗಳಲ್ಲಿ ಹರಿದಾಸ ಪಂಥದ ವೈಷ್ಣವ ಧರ್ಮವು ಪ್ರವರ್ಧಮಾನಕ್ಕೆ ಬರುವ ಮೊದಲೇ ಚೆನ್ನದಾಸ ಅಥವಾ ದಾಸರು ಎನ್ನುವ ಸಮುದಾಯದ ಬಗ್ಗೆ ಟಿಪ್ಪಣಿಗಳು ಸಿಗುತ್ತವೆ (ಹಿಮ್ಮಡಿ.ವೈ.ಬಿ, ೨೦೦೮: ೩೨). ಆರ್ಯರನ್ನು ಪ್ರತಿಭಟಿಸಿದ ದ್ರಾವಿಡರೇ ದಸ್ಯುಗಳಾಗಿ ದಾಸರಾಗಿದ್ದರೆಂದೂ, ಕಲಾ ನಿಪುಣರಾಗಿದ್ದ ಅವರನ್ನು ನಟುವರೆಂದು ಕರೆದಿದ್ದಾರೆಂದೂ, ಅವರೇ ಮುಂದೆ ೬, ೭ನೇ ಶತಮಾನದಷ್ಟೊತ್ತಿಗೆ ವೈಷ್ಣವ ಧರ್ಮಕ್ಕೆ ಸೇರ್ಪಡೆಯಾಗುತ್ತ ವೈಷ್ಣವ ಭಿಕ್ಷುಕರಾದರೆಂಬ ವಾದವು ಇಲ್ಲಿ ಮುಖ್ಯವಾಗಿದೆ. ಆರ್ಯರು ದಕ್ಷಿಣ ಭಾರತಕ್ಕೆ ಬಂದು ಇಲ್ಲಿಯವರನ್ನು ತಮ್ಮ ದಾಸರನ್ನಾಗಿ ಮಾಡಿಕೊಂಡಿದ್ದರೂ ಇರಬಹುದು ಅಥವಾ ಆರ್ಯ ಮತ್ತು ದ್ರಾವಿಡರ ಸಂಗಮದ ಸಂತತಿ ಎಂದು ಭಾವಿಸಲೂ ಸಾಧ್ಯವಿದೆ (ಧೂಪದ ಎಂ.ಟಿ: ೩೨).

ಎಡ್ಗರ್ ಥರ್ಸ್ಟನರ ''ಕ್ಯಾಸ್ಟ್ ಆಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾದಲ್ಲಿ'' (೧೯೦೭) ದಾಸರಿ ಎಂಬ ಪದವನ್ನು ಗುರುತಿಸಿದ್ದಾರೆ. ಕೆ.ಎಸ್.ಸಿಂಗ್‌ರವರ ''ಪೀಪಲ್ ಆಫ್ ಇಂಡಿಯಾ'' ಎಂಬ ಗ್ರಂಥದಲ್ಲಿ (೧೯೯೩) ಈ ಸಮುದಾಯಕ್ಕೆ ಸಂಬಂಧಿಸಿದಂತೆ ಚೆನ್ನದಾಸ, ದಂಡಿಗದಾಸ, ದಾಸರಿ ಮತ್ತು ಹೊಲೆಯದಾಸರಿ ಎಂಬ ಉಲ್ಲೇಖಗಳನ್ನು ತಿಳಿಸಿದ್ದಾರೆ. ಮತ್ತು ಎಲ್.ಕೆ.ಅನಂತ ಕೃಷ್ಣ ಅಯ್ಯನವರ ''ದಿ ಮೈಸೂರ ಟ್ರೈಬ್ಸ್ ಆಂಡ್ ಕ್ಯಾಸ್ಟ್ಸ'' (೧೯೯೮), ಸಯ್ಯದ್ ಸಿರಾಜ್ ಉಲ್ ಹಸನರವರ ''ದಿ ಕ್ಯಾಸ್ಟ್ಸ ಆಂಡ್ ಟ್ರೈಬ್ಸ್ ಆಫ್ ಹೆಚ್.ಇ.ಹೆಚ್ ನಿಜಾಮ ಡೋಮಿನಿಯನ್ಸ್'' (೧೯೮೯)ದಲ್ಲಿ ಈ ಸಮುದಾಯದ ಕೆಲವೊಂದು ಸಣ್ಣಪುಟ್ಟ ಮಾಹಿತಿಗಳನ್ನು ದಾಖಲಿಸಿದ್ದಾರೆ. ಕೆ.ಎಂ.ಮೇತ್ರಿಯವರು (ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ ಚೆನ್ನದಾಸರ, ೨೦೦೮, ಪ್ರಸ್ತಾವನೆ xxi) ಚೆನ್ನದಾಸ ಸಮುದಾಯವನ್ನು ಹೊಲಯದಾಸರ, ಹೊಲೆಯದಾಸರಿ, ಗಂಡಿಗದಾಸರ, ಚಕ್ರವಾದ್ಯದಾಸ, ದೊಂಬಿದಾಸರು ಎಂಬ ಇತ್ಯಾದಿ ಹೆಸರುಗಳಿಂದ ಕರೆದಿರುವುದರ ಬಗ್ಗೆ ಪ್ರಸ್ತಾಪಿಸಲಾಗಿದೆ. ಚೆನ್ನದಾಸರ ಸಮುದಾಯಕ್ಕೆ ಪ್ರಾದೇಶಿಕವಾಗಿ ಕರ್ನಾಟಕದಲ್ಲಿ ಬೇರೆ ಬೇರೆ ಉಪನಾಮಗಳಿದ್ದರೂ ಈ ಸಮುದಾಯ ತನ್ನನ್ನು ಚೆನ್ನದಾಸರು ಎಂದು ಗುರುತಿಸಿಕೊಂಡಿದೆ ಎಂದು ವೈ.ಬಿ.ಹಿಮ್ಮಡಿಯವರು ತಿಳಿಸುತ್ತಾರೆ (ಹಿಮ್ಮಡಿ.ವೈ.ಬಿ, ೨೦೦೮).

ಈ ಮೇಲಿನ ಆಧಾರಗಳ ಸಹಾಯದಿಂದ ಯಲಬುರ್ಗಾ ಪ್ರದೇಶದ ಚೆನ್ನದಾಸರು ವಂಶಪಾರಂಪರ್ಯವಾಗಿ ಅಳವಡಿಸಿಕೊಂಡು ಬಂದ ವೃತ್ತಿಯಾದ ತತ್ವಪದಗಳ ಹಾಡುಗಾರಿಕೆ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿ ಹಾಗೂ

ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಯಾವ ದಿಶೆಯಲ್ಲಿ ಹೆಜ್ಜೆಯನ್ನು ಹಾಕಿದ್ದಾರೆ ಎನ್ನುವ ಇತ್ಯಾದಿ ಸಂಗತಿಗಳ ಕುರಿತು ಅಧ್ಯಯನದಲ್ಲಿ ಚರ್ಚಿಸಲು ಪ್ರಯತ್ನ ಮಾಡಲಾಗುತ್ತದೆ.

ಪ್ರಸ್ತುತ ಅಧ್ಯಯದ ಮೊದಲನೆಯ ಭಾಗದಲ್ಲಿ ಯಲಬುರ್ಗಾ ಪ್ರದೇಶದ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆಯನ್ನು ತಿಳಿಯಲಾಗುವುದು. ಎರಡನೆಯ ಭಾಗದಲ್ಲಿ ಚೆನ್ನದಾಸರ ಮೂಲ ಹಾಗೂ ಐತಿಹಾಸಿಕ ಹಿನ್ನೆಲೆಯನ್ನು ಗುರುತಿಸಲಾಗಿದೆ. ಮೂರನೆಯ ಭಾಗದಲ್ಲಿ ಚೆನ್ನದಾಸರ ಸಮುದಾಯದ ಅಧ್ಯಯನಕ್ಕೆ ಬೇಕಾದ ಸಾಹಿತ್ಯಿಕ ಆಧಾರಗಳನ್ನು ಸಂಗ್ರಹಸಲಾಗಿದೆ. ನಾಲ್ಕನೆಯ ಭಾಗದಲ್ಲಿ ಚೆನ್ನದಾಸರ ಚರಿತ್ರೆಯ ರಚನಾಶಾಸ್ತ್ರದ ಆಯಾಮಗಳನ್ನು ತಿಳಿಸಲಾಗಿದೆ. ಕೊನೆಯ ಭಾಗದಲ್ಲಿ ಅಧ್ಯಯನದ ಉದ್ದೇಶ ವ್ಯಾಪ್ತಿ ಮತ್ತು ಸ್ವರೂಪದ ಕುರಿತು ಚರ್ಚಿಸಲಾಗಿದೆ.

೧.೧. ಯಲಬುರ್ಗಾ ಪ್ರದೇಶದ ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ

ಭೌಗೋಳಿಕ ಹಿನ್ನೆಲೆ

ಯಲಬುರ್ಗಾ ಪ್ರದೇಶವು ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೇರಿದ ಐದು ಜಿಲ್ಲೆಗಳಲ್ಲಿ ಕೊಪ್ಪಳ ಜಿಲ್ಲೆಯ ನಾಲ್ಕು ತಾಲೂಕುಗಳಲ್ಲಿ ಒಂದಾಗಿದೆ. ಈ ಪ್ರದೇಶವು ಜಿಲ್ಲಾ ಕೇಂದ್ರದಿಂದ ೪೨ ಕಿ.ಮೀ. ಅಂತರದಲ್ಲಿದ್ದು, ಅಕ್ಷಾಂಶ ೧೫° ಉತ್ತರ ಮತ್ತು ರೇಖಾಂಶ ೭೫°.೩೮ ಪೂರ್ವದಲ್ಲಿದೆ. ಭೌಗೋಳಿಕ ವಿಸ್ತೀರ್ಣವು ೧೯೪೦ ಚ.ಕಿ.ಮೀ.ಇದ್ದು ೧೪೪ ಹಳ್ಳಿಗಳನ್ನೊಳಗೊಂಡಿದೆ. ಈ ಪ್ರದೇಶವು ಪೂರ್ಣವಾಗಿ ಒಣ ಪ್ರದೇಶದ ಬಯಲು ಭೂಮಿಯಾಗಿದ್ದು, ಇಲ್ಲಿಯ ಕೃಷಿಯು ಹೆಚ್ಚಾಗಿ ನೈರುತ್ಯ ಮಾನಸೂನ್ ಮಳೆಯನ್ನು ಅವಲಂಬಿಸಿದೆ. ಇಂತಹ ಪ್ರದೇಶದ ಪಶ್ಚಿಮ ಭಾಗವು ಕಪ್ಪು ಮಣ್ಣಿನಿಂದ ಕೂಡಿದ್ದಾಗಿದೆ. ಈ ಭಾಗದಲ್ಲಿ ಹತ್ತಿ, ಕಡಲೆ, ಜೋಳ, ಸೂರ್ಯಕಾಂತಿ ಇತ್ಯಾದಿ ಬೆಳೆಗಳು ಪ್ರಮುಖವಾಗಿವೆ. ಪೂರ್ವ, ಉತ್ತರ ಹಾಗೂ ದಕ್ಷಿಣ ಭಾಗಗಳಲ್ಲಿ ಕೆಂಪು ಮಣ್ಣಿನ ಪ್ರದೇಶವು ಕಂಡುಬರುತ್ತದೆ. ಇಲ್ಲಿ ಒಣಬೇಸಾಯದ ಜೊತೆಗೆ ಅಲ್ಲಲ್ಲಿ ಕೊಳವೆಭಾವಿಗಳ ಮೂಲಕ ನೀರಾವರಿ ಕೃಷಿ ಪದ್ಧತಿಯನ್ನು ಕಾಣಬಹುದು. ರೈತರು ಈ ಭಾಗದಲ್ಲಿ ಶೇಂಗಾ, ಸಜ್ಜೆ, ಜೋಳ, ಸೂರ್ಯಕಾಂತಿ, ಗೋವಿನಜೋಳ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ. ಇತ್ತೀಚೆಗೆ ರೈತರು ಆಧುನಿಕ ಕೃಷಿ ತಂತ್ರಜ್ಞಾನ ಬಳಸಿಕೊಂಡು ವಾಣಿಜ್ಯ ಬೆಳೆಗಳಾದ ದಾಳಿಂಬೆ, ಮಾವು, ದ್ರಾಕ್ಷಿ ಮೊದಲಾದ ಬೆಳೆಗಳನ್ನು ಸಹ ಬೆಳೆಯುತ್ತಾರೆ.

ಇನ್ನೂ ಈ ಪ್ರದೇಶದಲ್ಲಿ ಸಿಗುವ ನೈಸರ್ಗಿಕ ಸಂಪನ್ಮೂಲಗಳೆಂದರೆ ಗ್ರಾನೈಟ್ ಮತ್ತು ಇತರ ಬಗೆಯ ಕಲ್ಲುಗಳು ಕುಕನೂರು, ಹರಿಶಂಕರಿಬಂಡಿ, ಗೋರ್ಲೆಕೊಪ್ಪ, ಮಸಭಹಂಚಿನಾಳ, ಇಟಗಿ, ವಜ್ರಬಂಡಿ ಮತ್ತು ನಿಂಗಲಬಂಡಿಗಳಲ್ಲಿ ಕಂಡುಬರುತ್ತವೆ. ಈ ಭಾಗದ ಪ್ರಮುಖ ಜಲಾಶಯವೆಂದರೆ ಹಿರೇಹಳ್ಳ ಆಣೆಕಟ್ಟು. ಈ ಜಲಾಶಯದಿಂದ ಈ ಪ್ರದೇಶದ ಕೆಲವು ಗ್ರಾಮಗಳಿಗೆ ಕುಡಿಯುವ ನೀರು ಒದಗಿಸುವ ಪ್ರಮುಖ ಯೋಜನೆಯಾಗಿದೆ.

ಇಂತಹ ಭೌಗೋಳಿಕ ಹಿನ್ನೆಲೆಯನ್ನು ಹೊಂದಿದ ಈ ಪ್ರದೇಶದಲ್ಲಿ ಚೆನ್ನದಾಸರ ಸಮುದಾಯವು ಪೂರ್ವ ಹಾಗೂ ಉತ್ತರ ಭಾಗದಲ್ಲಿ ನೆಲೆಸಿರುವದು ಕಂಡುಬರುತ್ತದೆ. ಈ ಪ್ರದೇಶದ ಜನಸಂಖ್ಯೆಯು ೨೦೦೧ರ ಜನಗಣತಿಯ ಪ್ರಕಾರ ೨,೧೯,೮೪೯ ಲಕ್ಷ ಜನಸಂಖ್ಯೆಯನ್ನು ಹೊಂದಿದೆ. ಈ ಜನಸಂಖ್ಯೆಯಲ್ಲಿ ವೀರಶೈವ ಲಿಂಗಾಯತ ಮತ್ತು

ಕುರುಬ ಜನಾಂಗ ಹೆಚ್ಚಿನ ಸಂಖ್ಯೆಯಲ್ಲಿದ್ದರೆ, ಹರಿಜನ, ವಾಲ್ಮೀಕಿ ನಾಯಕ, ಲಂಬಾಣಿ, ರೆಡ್ಡಿ, ಬ್ರಾಹ್ಮಣ, ಕೊರವ, ಉಪ್ಪಾರ, ಕುಂಬಾರ, ಕಮ್ಮಾರ ಇತ್ಯಾದಿ ಜನಾಂಗಗಳು ಅನುಕ್ರಮವಾಗಿ ಜನಸಂಖ್ಯೆಯಲ್ಲಿ ಸ್ಥಾನ ಹೊಂದಿವೆ. ಅದರಲ್ಲಿ ಚೆನ್ನದಾಸರ ಸಮುದಾಯದ ಜನಸಂಖ್ಯೆಯು ೧೯೯೧ ಇದ್ದದು ತಿಳಿದುಬರುತ್ತದೆ. ಇವುಗಳ ಜೊತೆಗೆ ಇಸ್ಲಾಂ, ಜೈನ ಹಾಗೂ ಕ್ರೈಸ್ತ ಧರ್ಮದ ಜನರು ಸಹ ಈ ಪ್ರದೇಶದಲ್ಲಿ ನೆಲೆಸಿದ್ದಾರೆ.

ಐತಿಹಾಸಿಕ ಹಿನ್ನೆಲೆ

ನಾಡಿನ ಚರಿತ್ರೆಯಲ್ಲಿ ಕೊಪ್ಪಳ ಜಿಲ್ಲೆಯ ವಿಶೇಷವಾದ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದಂತಹ ಪ್ರದೇಶವಾಗಿದೆ. ಕಾರಣ ಕೊಪ್ಪಳ ಹಾಗೂ ಸುತ್ತಮುತ್ತಲಿನ ಜನವಸತಿ ಪ್ರದೇಶಗಳು ಪ್ರಾಚೀನ ಕಾಲದಲ್ಲಿ ಮೌರ್ಯರ ಆಳ್ವಿಕೆಗೆ ಒಳಪಟ್ಟಿದ್ದವು ಎಂಬುದನ್ನು ದೃಢಪಡಿಸುವಂತಹ ಅಶೋಕನ ಕಾಲದ ಎರಡು ಶಾಸನಗಳು ಈ ಪ್ರದೇಶದಲ್ಲಿ ಸಿಕ್ಕಿರುವದರಿಂದ ಚರಿತ್ರೆಯಲ್ಲಿ ಈ ಪ್ರದೇಶಕ್ಕೆ ಚಾರಿತ್ರಿಕವಾದ ಮಹತ್ವ ಕೊಡಲಾಗಿದೆ. ಅಂತಹ ಐತಿಹಾಸಿಕತೆಯುಳ್ಳ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಯಲಬುರ್ಗಾ ಪ್ರದೇಶವು ಒಂದಾಗಿದೆ. ಈ ಪ್ರದೇಶದ ಐತಿಹಾಸಿಕತೆಯನ್ನು ಚರಿತ್ರೆಕಾರರು ನವಶಿಲಾಯುಗದಿಂದ ಗುರುತಿಸಲು ಪ್ರಯತ್ನಿಸಿದ್ದಾರೆ. ಆದರೆ ಚಾರಿತ್ರಿಕ ಯುಗ ಪ್ರಾರಂಭವಾಗುವುದು, ಮೌರ್ಯರ ಆಳ್ವಿಕೆಯಿಂದ ಎಂಬುದು ಕೊಪ್ಪಳದ ಪಾಲ್ಕಿಗುಂಡದ ಶಾಸನಗಳಿಂದ ತಿಳಿದು ಬರುತ್ತದೆ. ಇವರ ನಂತರ ಶಾತವಾಹನರು, ಕದಂಬರು, ಬಾದಾಮಿ ಚಾಲುಕ್ಯರು ಕಲಚೂರರ ಆಳ್ವಿಕೆಗೊಳಪಟ್ಟ ಕಾಲದಲ್ಲಿ ಯರಂಬುರಿಗಿಯ ಸಿಂಧರು ಈ ಪ್ರದೇಶದಲ್ಲಿ ಸಿಂಧವಂಶ ಪ್ರಾರಂಭಿಸಿ ಪ್ರಾಚೀನ ಅರಸುಮನೆತನಗಳ ಸಾಮಂತರಾಗಿ ಆಳ್ವಿಕೆಯನ್ನು ಮಾಡಿದ್ದರು ಎಂಬುವದು ತಿಳಿದುಬರುತ್ತದೆ (ಶಿರೂರ ೧೯೮೮: ೨೨). ಸಿಂಧರ ನಂತರ ಈ ಪ್ರದೇಶವು ದೇವಗಿರಿ ಯಾದವರು, ಹೊಸಮಲೆಯದುರ್ಗದ ಅರಸರು, ವಿಜಯನಗರ ಅರಸರು ಹಾಗೂ ಹೈದರಾಬಾದ್ ನಿಜಾಮನ ಆಳ್ವಿಕೆಗೆ ಒಳಪಟ್ಟಿತ್ತು ಎಂಬುವದು ಈ ಕಾಲದ ಶಾಸನಗಳು ನಾಣ್ಯಗಳು ದೇವಾಲಯಗಳು ಇತ್ಯಾದಿ ಆಕರಗಳ ಮೂಲಕ ತಿಳಿಯಬಹುದು. ಈ ಪ್ರದೇಶದ ಕುರಿತು ಅಧ್ಯಯನ ಮಾಡಿದ ಪ್ರಮುಖ ವಿದ್ವಾಂಸರು ಪಿ.ಬಿ.ದೇಸಾಯಿ, ಅ.ಸುಂದರ, ಬಿ.ವಿ.ಶಿರೂರು, ಬಿ.ಸಿ.ಪಾಟೀಲ್, ವಾಸುದೇವ ಬಡಿಗೇರ, ದೇವರಕೊಂಡಾರೆಡ್ಡಿ, ಸೂರ್ಯನಾಥ ಕಾಮತ್ ಮೊದಲಾದವರು. ಇವರು ಒದಗಿಸಿಕೊಟ್ಟು ಮಾಹಿತಿಯೊಂದಿಗೆ ಈ ಪ್ರದೇಶದಲ್ಲಿ ಆಳ್ವಿಕೆಯನ್ನು ನಡೆಸಿದ ಈ ಮೇಲಿನ ಅರಸು ಮನೆತನಗಳ ಕುರಿತು ಸಾಕಷ್ಟು ಮಾಹಿತಿಗಳನ್ನು ತಮ್ಮ ದಾಖಲೆಗಳಲ್ಲಿ ಉಲ್ಲೇಖಿಸಿರುವುದು ಕಂಡುಬರುತ್ತದೆ.

ಪ್ರಾಗೈತಿಹಾಸಿಕ ಕಾಲ

ಈ ಪ್ರದೇಶದಲ್ಲಿ ನೂತನ ಶಿಲಾಯುಗದಿಂದ ಪ್ರಾಗೈತಿಹಾಸಿಕ ಕಾಲವನ್ನು ಗುರುತಿಸಬಹುದು. ಈ ಕಾಲದಲ್ಲಿ ಕಂಡುಬರುವ ನಿವೇಶನಗಳ ಉತ್ಖನನ ಕಾರ್ಯವನ್ನು ಕೈಗೊಂಡ ಇತ್ತೀಚಿನ ವಿದ್ವಾಂಸರು ವಾಸುದೇವ ಬಡಿಗೇರ ಅವರು ಯಲಬುರ್ಗಾ ಪ್ರದೇಶದಲ್ಲಿ ಕಂಡುಬರುವ ನೆಲೆಗಳಾದ ಕಾತರಾಳ, ಕೆರೀಹಳ್ಳ, ಜರಗುಂಟಿ, ತಿಪನಾಳ, ಲಿಂಗನಬಂಡಿಗಳಲ್ಲಿ ಇವರು ಕುರುಹುಗಳನ್ನು ಪತ್ತೆಹಚ್ಚಿದ್ದಾರೆ. ಈ ನಿವೇಶನದಲ್ಲಿ ನೂತನಶಿಲಾಯುಗ, ತಾಮ್ರಯುಗ

ಹಾಗೂ ಕಬ್ಬಿಣ ಯುಗಕ್ಕೆ ಸಂಬಂಧಿಸಿದ ಅವಶೇಷಗಳಾದ ಬೂದಿದಿಬ್ಬ, ಚರ್ಟಶಿಲೆಯ ಚಕ್ಕೆಗಳು, ಮಡಿಕೆ, ಕಬ್ಬಿಣದ ಕಾರ್ಯಗಾರ ಅವಶೇಷಗಳು ದೊರೆತಿವೆ (ಶಿವತಾರಕ ೨೦೦೧: ೨೨).

ಮೌರ್ಯರ ಕಾಲ

ಯಲಬುರ್ಗಾ ಪ್ರದೇಶ ಹಾಗೂ ಇತರ ಸುತ್ತಮುತ್ತಲಿನ ಪ್ರದೇಶಗಳ ಇತಿಹಾಸಕಾಲ ಪ್ರಾರಂಭವಾಗುವುದು ಮೌರ್ಯರ ಆಳ್ವಿಕೆಯಿಂದ ಎಂದು ಹೇಳಬಹುದು. ಮೊದಲು ಈ ಪ್ರದೇಶವು ನಂದರ ಅರಸ ಮಹಾಪದ್ಮನ ಆಳ್ವಿಕೆಗೆ ಒಳಪಟ್ಟಿದ್ದು, ತದನಂತರ ಚಂದ್ರಗುಪ್ತನು ನಂದರನ್ನು ಸೋಲಿಸಿದ ತರುವಾಯ ಅವರ ಸಾಮ್ರಾಜ್ಯದ ಭಾಗವಾಗಿದ್ದ ಕರ್ನಾಟಕದ ಭಾಗಗಳೂ ಮೌರ್ಯರ ಆಳ್ವಿಕೆಯ ವ್ಯಾಪ್ತಿಗೆ ಬಂದಿರಬಹುದೆಂದು ತಿಳಿಯಲಾಗಿದೆ (ತೆಲಗಾವಿ, ೨೦೦೪: ೧೪). ಮೌರ್ಯರ ಆಳ್ವಿಕೆಗೆ ಈ ಪ್ರದೇಶವು ಒಳಪಟ್ಟಿತು ಎಂಬುವುದನ್ನು ಯಲಬುರ್ಗಾ ಪ್ರದೇಶದ ಹತ್ತಿರವಿರುವ ಕೊಪ್ಪಳದಲ್ಲಿ ಮೌರ್ಯರಿಗೆ ಸಂಬಂಧಿಸಿದಂತೆ ಗವಿಮಠ ಸಮೀಪದ ಪಾಲ್ಕಿಗುಂಡಿನ ಬಂಡಿಯ ಮೇಲೆ ಎರಡು ಅಶೋಕನ ಶಾನಗಳು ದೊರೆತಿವೆ. ಪಾಲ್ಕಿಗುಂಡಿನಲ್ಲಿರುವ ಅಶೋಕನ ಶಾಸನ ತ್ರುಟಿತವಾಗಿವೆ. ಆದರೆ ಎರಡು ಶಾಸನಗಳ ವಿಷಯ ಒಂದೇ ಗವಿಮಠ ಸಮೀಪದ ಬಂಡೇಗಲ್ಲಿನ ಶಾಸನದಲ್ಲಿ ದೇವನಾಂಪ್ರಿಯನಾದ ಅಶೋಕನು ತನ್ನ ಸಾಮ್ರಾಜ್ಯದ ಜನರು ಆಚರಿಸಬೇಕಾದ ಧರ್ಮವನ್ನು ಕುರಿತು ಹೇಳಿದ್ದಾರೆ (ದೇವರಕೊಂಡಾರೆಡ್ಡಿ ೧೯೯೯: ೨೪).

ಕ್ರಿ.ಪೂ.೩ನೇ ಶತಮಾನದಲ್ಲಿ ಈ ಪ್ರದೇಶವು ಮೌರ್ಯವಂಶದ ದೊರೆ ಅಶೋಕನ ಆಳ್ವಿಕೆಗೆ ಒಳಪಟ್ಟಿತು ಎಂಬ ಅಂಶವು ಈ ಶಾಸನಗಳಿಂದ ತಿಳಿದುಬರುತ್ತದೆ. ಅಶೋಕನ ಶಾಸನಗಳ ಆಧಾರದಿಂದ ಯಲಬುರ್ಗಾ ಪ್ರದೇಶವು ಕೊಪ್ಪಳ ಹತ್ತಿರದಲ್ಲಿ ಇರುವದರಿಂದ ಮೌರ್ಯರ ಆಳ್ವಿಕೆಗೆ ಒಳಪಟ್ಟಿತು ಎಂದು ತಿಳಿಯಬಹುದು.

ಶಾತವಾಹನರು

ಮೌರ್ಯರ ನಂತರ ಶಾತವಾಹನರು ಈ ಪ್ರದೇಶವನ್ನು ಆಳಿರಬೇಕು. ಇದಕ್ಕೆ ಸಂಬಂಧಿಸಿದಂತೆ ವಿದ್ವಾಂಸರು ಕೆಲವೊಂದು ಆಧಾರಗಳ ಮೂಲಕ ಈ ರೀತಿ ಅಭಿಪ್ರಾಯಪಡುತ್ತಾರೆ. ಸನ್ನತಿ ಪರಿಸರದಲ್ಲಿ ದೊರೆತ ೬೦ಕ್ಕೂ ಹೆಚ್ಚು ಪ್ರಾಕೃತ ಶಾಸನಗಳು ಕನ್ನಡ ನಾಡಿನಲ್ಲಿದ್ದ ಶಾತವಾಹನ ಆಳ್ವಿಕೆಯನ್ನು ಸಮರ್ಥಿಸುವಂಥವು, ಹಾಗೇ ಬಳ್ಳಾರಿ ಜಿಲ್ಲೆಯ ಮ್ಯಾಕೆದೋಣಿ ಮತ್ತು ಹಿರೇಹಡಗಲಿಯ ಪ್ರಾಕೃತ ಶಾಸನಗಳು ಈ ಪ್ರದೇಶವನ್ನು ಗುರುತಿಸುವುದು 'ಶಾತವಾಹನೀಹಾರ' ಮತ್ತು 'ಶಾತವಾಹನೀರಠ' (ಶಾತವಾಹನೀರಾಷ್ಟ್ರ) ಎಂಬ ಪ್ರಯೋಗಗಳಿಂದ ಇದನ್ನು ಆಧರಿಸಿ ಚರಿತ್ರೆಕಾರರು ಶಾತವಾಹನರು ಈ ಪ್ರದೇಶದಿಂದಲೇ ರಾಜಕೀಯ ಚಟುವಟಿಕೆಗಳನ್ನು ಆರಂಭಿಸಿದರೆಂಬ ಅನುಮಾನಕ್ಕೆ ಹೆಚ್ಚು ಬಲ ಇದೆ. ತಮ್ಮ ಸಾಮ್ರಾಜ್ಯವನ್ನು ಈ ಪ್ರದೇಶದಿಂದ ಪಶ್ಚಿಮದ ಕಡೆಗೆ ವಿಸ್ತರಿಸಿದರೆಂದು ಹೇಳುವುದು ಸರಿಯೆಂದು ಕಾಣುತ್ತದೆಯೆಂಬ ತೀರ್ಮಾನವನ್ನು ಪ್ರಕಟಿಸಿರುವುದುಂಟು. ಆದರೆ ಅಜಯ್ ಮಿತ್ರಶಾಸ್ತ್ರಿಯವರ ಪ್ರಕಾರ, ಕರ್ನಾಟಕದ ಉತ್ತರ ಕರ್ನಾಟಕ ಭಾಗದಲ್ಲಿ ಇವರ ಒಂದು ರಾಜಧಾನಿ ಸ್ಥಾಪಿತವಾಗಿದ್ದಲ್ಲಿ ಅದು ಗುಲ್ಬರ್ಗಾ ಜಿಲ್ಲೆ ಸನ್ನತಿಯಲ್ಲೇ (ತೆಲಗಾವಿ ೨೦೦೪: ೮೭). ಇನ್ನು ಈ ಪ್ರದೇಶದಲ್ಲಿ ಶಾತವಾಹನರ ಆಳ್ವಿಕೆ ಮಾಡಿರುವದನ್ನು

ಬಲಪಡಿಸುವ ಆಧಾರಗಳೆಂದರೆ ನಾಣ್ಯಗಳು, ಈ ವಂಶಕ್ಕೆ ಸಂಬಂಧಿಸಿದ ೫೫೩೪ ಬೆಳ್ಳಿಯ ಮುದ್ರಾಂಕಿತ ನಾಣ್ಯಗಳು ಕೊಪ್ಪಳ ತಾಲೂಕಿನ ಚಿಕ್ಕಸಿಂದೋಗಿಯಲ್ಲಿ ದೊರೆತ ಆಧಾರದ ಮೇಲೆ ಶಾತವಾಹನರ ಆಳ್ವಿಕೆಗೆ ಈ ಪ್ರದೇಶವು ಒಳಪಟ್ಟಿತ್ತು ಎಂದು ಊಹಿಸಬಹುದು (ಬೆಟ್ಟದೂರು, ೨೦೦೫: ೯). ಇವರ ತರುವಾಯ ಈ ಪ್ರದೇಶವು ಬಹುಮಟ್ಟಿಗೆ ಬನವಾಸಿ ಆದಿ ಕದಂಬರ ರಾಜ್ಯಕ್ಕೆ ಸೇರಿದ್ದಿರಬೇಕೆಂಬ ಊಹೆಗೆ ಎಡೆಯಿದೆ.

ಬನವಾಸಿ ಆದಿಕದಂಬರು

ಈ ಪ್ರದೇಶವು ಕನ್ನಡ ನಾಡಿನ ಪ್ರಥಮ ಮನೆತನ ಎಂಬ ಹೆಗ್ಗಳಿಕೆಗೆ ಪಾತ್ರವಾದ ಬನವಾಸಿ ಆದಿಕದಂಬರ ಆಳ್ವಿಕೆಗೆ ಒಳಪಟ್ಟಿತು ಎಂಬುವುದನ್ನು ಕೆಲವು ಆಧಾರಗಳಿಂದ ತಿಳಿಯಬಹುದು. ಸಾಮಾನ್ಯವಾಗಿ ಇತಿಹಾಸ ತಜ್ಞರು ಕದಂಬ ರಾಜ್ಯದ ಉತ್ತರದ ಮೇರೆ ಮಲಪ್ರಭಾ ನದಿಯೆಂದೂ, ಪೂರ್ವದ ಮೇರೆ ಶ್ರೀಶೈಲವೆಂದೂ ಗುರುತಿಸುತ್ತಾರೆ. ಕಾರಣ ಈ ಪ್ರದೇಶವು ತುಂಗಭದ್ರಾ ಮತ್ತು ಮಲಪ್ರಭಾ ಸಮತಲದಲ್ಲಿ ಬಹುಮಟ್ಟಿಗೆ ಬರುತ್ತದೆ. ಇದಕ್ಕೆ ಪೂರಕವಾಗಿ ಮಯೂರವರ್ಮನ ಪುನರ್ ವಿಮರ್ಶಿಸಿದ ಚಂದ್ರವಳ್ಳಿಯ ಶಾಸನದಲ್ಲಿ ಕುಪಣದ ಚಾಮರ ಉಲ್ಲೇಖವಿದೆ. (ಕುಪಣ ಅಂದರೆ ಕೊಪ್ಪಳದ ಪ್ರಾಚೀನ ಹೆಸರು). ಅಂದಾಗ ಯಲಬುರ್ಗಾ ಪ್ರದೇಶವು ಸಹ ಇವರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಬಹುದು. ಕದಂಬರ ಸಾಮಂತ ಬಾದಾಮಿ ಚಾಲುಕ್ಯ ೧ನೇ ಪುಲಕೇಶಿ ಪ್ರಬಲವಾಗಿ ಕದಂಬರ ಕೊನೆಯ ಅರಸು ಕೃಷ್ಣವರ್ಮನನ್ನು ಸೋಲಿಸಿ ಕ್ರಿ.ಶ.೫೪೧ರಲ್ಲಿ ಸ್ವತಂತ್ರನಾದನು. ಆಗ ಈ ಪ್ರದೇಶವು ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತು ಎನ್ನುವುದು ತಿಳಿದು ಬರುತ್ತದೆ (ಪಾಟೀಲ್, ೧೯೯೮: ೪).

ಬಾದಾಮಿ ಚಾಲುಕ್ಯರು

ದಕ್ಷಿಣ ಭಾರತದಲ್ಲಿ ಆಳ್ವಿಕೆಯನ್ನು ಮಾಡಿದ ಪ್ರಮುಖ ಅರಸು ಮನೆತನಲ್ಲಿ ಬಾದಾಮಿ ಚಾಲುಕ್ಯರ ಮನೆತನವೂ ಒಂದಾಗಿದೆ. ಇವರ ಆಳ್ವಿಕೆಯ ಕಾಲಾವಧಿಯಲ್ಲಿ ಯಲಬುರ್ಗಾ ಪ್ರದೇಶವು ಆಳ್ವಿಕೆಗೆ ಒಳಪಟ್ಟಿತು ಎನ್ನುವದು ತಿಳಿದುಬರುತ್ತದೆ. ಬನವಾಸಿ ಆದಿ ಕದಂಬರ ಕೊನೆಯ ಅರಸನಾದ ಕೃಷ್ಣವರ್ಮನನ್ನು ಕ್ರಿ.ಶ.೫೪೧ರಲ್ಲಿ ಚಾಲುಕ್ಯರ ಅರಸ ೧ನೇ ಪುಲಕೇಶಿಯು ಸೋಲಿಸುವುದರ ಮೂಲಕ ಈ ಪ್ರದೇಶಗಳನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡಿದ್ದ ಎನ್ನುವದನ್ನು ಈ ಪ್ರದೇಶದಲ್ಲಿರುವ ಇಟಗಿ ಮತ್ತು ಕುಕನೂರ ಶಾಸನಗಳು ಸ್ಪಷ್ಟವಾಗಿ ತಿಳಿಸುತ್ತವೆ. ಇಟಗಿಯ ಶಾಸನವೊಂದು ಯುದ್ಧಮಲ್ಲ ಸತ್ಯಾಶ್ರಯನ ಕಾಲಕ್ಕೆ ಸೇರಿದೆ. ಈ ಶಾಸನಗಳ ಆಧಾರದಿಂದ ಈ ಪ್ರದೇಶವು ಬಾದಾಮಿ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತೆಂಬುದು ಸ್ಪಷ್ಟವಾಗಿದೆ (ದೇವರಕೊಂಡಾರೆಡ್ಡಿ, ೧೯೯೯: ೨೪).

ಯಲಬುರ್ಗಿಯ ಸಿಂದರು

ಈ ಪ್ರದೇಶದಲ್ಲಿ ಯಲಬುರ್ಗಿಯ ಸಿಂದರ ಮನೆತನವು ಬಾದಾಮಿ ಚಾಲುಕ್ಯರ, ರಾಷ್ಟ್ರಕೂಟರ ಹಾಗೂ ಕಲ್ಯಾಣಿಯ ಚಾಲುಕ್ಯರ ಆಳ್ವಿಕೆಯ ಕಾಲಾವಧಿಯಲ್ಲಿ ಸಾಮಂತರಾಗಿ ಆಳ್ವಿಕೆಯನ್ನು ಮಾಡಿದರು ಎಂಬುದು ತಿಳಿದು ಬರುತ್ತದೆ. ಈ ಪ್ರದೇಶದಲ್ಲಿ ಸಿಂದ ಅಥವಾ ಸಿಂದ ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಈ ಮನೆತನವು ಕ್ರಿ.ಶ.೫-೬ನೇಯ ಶತಮಾನದಿಂದಲೇ ಕನ್ನಡ ನಾಡಿನ ಚರಿತ್ರೆಯಲ್ಲಿ ಕಾಲೂರಿ ನಿಂತಿರುವುದು ಗೋಚರಿಸುತ್ತದೆ (ಶಿರೂರು,

೧೯೭೭: ೨). ಕ್ರಮೇಣ ಕರ್ನಾಟಕದ ಹಲವಾರು ಭಾಗಗಳನ್ನು ಪಶಪಡಿಸಿಕೊಂಡು ಈ ಭಾಗದ ಪ್ರಾತಿನಿಧಿಕ ಹೆಸರನ್ನು ಧರಿಸಿ ಹಲವು ಹತ್ತು ಭಾಗಗಳಲ್ಲಿ ರಾಜ್ಯಭಾರ ಮಾಡಿತು. ಈ ವಂಶ ವಿಜಾಪುರ ಜಿಲ್ಲೆಯ ಬಾಗಲುಕೋಟೆಯಲ್ಲಿ ಬಾಗಡಗೆಯ ಸಿಂದರು, ಬಳ್ಳಾರಿ ಜಿಲ್ಲೆಯ ಕುರುಗೋಡು ಭಾಗದಲ್ಲಿ ಕುರುಗೋಡ ಸಿಂದರು, ಶಿವಮೊಗ್ಗ ಜಿಲ್ಲೆಯ ಹೊನ್ನಳ್ಳಿ ತಾಲೂಕಿನ ಬೆಳಗುತ್ತಿಯ ಪರಿಸರದಲ್ಲಿ ಬೆಳಗುತ್ತಿಯ ಸಿಂದರು, ಧಾರವಾಡ ಜಿಲ್ಲೆಯ ಕರಜಿಗಿ ತಾಲೂಕಿನ ಗುತ್ತಲದ ಸುತ್ತ ಮುತ್ತಣ ಪ್ರದೇಶದಲ್ಲಿ ಗುತ್ತಲದ ಸಿಂದರು, ಧಾರವಾಡ ಜಿಲ್ಲೆಯ ಮುಳುಗುಂದ ಭಾಗದಲ್ಲಿ ಮುಳುಗುಂದ ಸಿಂದರು ಮೊದಲಾದವರು ಈ ವಂಶದ ಪ್ರಮುಖರು, ಅವರಲ್ಲಿ ಅತ್ಯಂತ ಪ್ರಸಿದ್ಧರಾದರು ಮತ್ತು ಮುಖ್ಯರಾದವರು ಯಲಬುರ್ಗಿಯ ಸಿಂದರು.

ಯಲಬುರ್ಗಿಯ ಸಿಂದವಂಶವು ಸಪ್ತಸಹೋದರರಿಂದ ಪ್ರಾರಂಭವಾಗುತ್ತದೆ. ಸಪ್ತ ಸಹೋದರರಲ್ಲಿ ಹಿರಿಯನು ೧ನೇಯ ಆಚುಗಿ ಸಿಂದ ವಂಶವನ್ನು ಹೇಳುವ ಬಹಳಷ್ಟು ಶಾಸನಗಳು ಇವನಿಂದಲೇ ಮೊದಲುಗೊಳ್ಳುತ್ತಿವೆ ಸೂಡಿ ಮತ್ತು ನಿಡಗುಂದಿ ಶಾಸನಗಳು ಇವರನ್ನು ''ಆದಿಮಂಡಳಿಕ'' ಎಂದು ಬಣ್ಣಿಸಿವೆಯಾದರಿಂದ ಯಲಬುರ್ಗಿಯ ಸಿಂದವಂಶಕ್ಕೆ ಇವನೇ ಕಲ್ಯಾಣಿ ಚಾಲುಕ್ಯರ ೬ನೇ ವಿಕ್ರಮಾದಿತ್ಯನ ಸಾಮಂತನಾಗಿ ಆಳ್ವಿಕೆಯನ್ನು ಮಾಡುತ್ತಾನೆ. ಇವನ ನಂತರ ೧ನೇಯ ಆಚುಗಿಯ ಸಹೋದರರಾದ ನಾಕ, ಸಿಂಘ, ದಾಸ, ದೇವ, ಚಾವುಂಡ ಮತ್ತು ಚಾವ, ಬೊಮ್ಮ (೧೦೮೩) ೨ನೇಯ ಆಚರಸ (೧೧೧೩-೧೧೨೫) ೨ನೇಯ ಆಚರಸ ಯಲಬುರ್ಗಿಯ ಸಿಂದ ವಂಶದ ಅರಸರಲ್ಲಿಯೇ ಅತ್ಯಂತ ಪ್ರಸಿದ್ಧವಾದ ಅರಸನಾಗಿದ್ದು ಅಲ್ಲದೆ 'ತ್ರಿಭುವನ ಮಲ್ಲಕೇಸರಿ' ಎಂಬ ಬಿರುದನ್ನು ಪಡೆದು ೬ನೇಯ ವಿಕ್ರಮಾದಿತ್ಯನ ಬಲಿಷ್ಠ ಸಾಮಂತರಲ್ಲಿ ಒಬ್ಬನಾಗಿದ್ದನು. ೨ನೇಯ ಆಚರಸ ನಂತರ ೧ನೇಯ ಪರ್ಮಾಡಿದೇವ (೧೧೨೫-೧೧೪೪) ೨ನೇಯ ಚಾವುಂಡ (೧೧೪೪-೧೧೯೬), ಬಿಜ್ಜಳ ಮತ್ತು ವಿಕ್ರಮರು (೧೧೮೯-೧೨೨೦), ಮೂರನೆಯ ಆಚುಗಿ ಮತ್ತು ಎರಡನೆಯ ಪೆರ್ಮಾಡಿ (೧೧೬೩-೧೧೯೪) ಕ್ರಮವಾಗಿ ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ ಆಳ್ವಿಕೆಯನ್ನು ಮಾಡುತ್ತಾರೆ. ಆದರೆ ಚಾಲುಕ್ಯರ ಅರಸರು ಅಸಮರ್ಥರಾಗಿದ್ದರಿಂದ ಕ್ರಿ.ಶ.೧೨೧೫ರ ಸುಮಾರಿನಲ್ಲಿ ಈ ನಾಡು ದೇವಗಿರಿ ಯಾದವರ ಕೈವಶವಾಯಿತು (ಶಿರೂರ, ೧೯೭೭: ೫೪).

ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ಬಳಿಕ ಅಧಿಕಾರ ವಹಿಸಿಕೊಂಡ ಮನೆತನ ರಾಷ್ಟ್ರಕೂಟರದು. ಇವರಲ್ಲಿ ಪ್ರಮುಖ ಅರಸ ಅಮೋಘವರ್ಷ. ಅಮೋಘವರ್ಷನ ಕಾಲದಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯದ ವ್ಯಾಪ್ತಿ ಕವಿರಾಜ ಮಾರ್ಗದಲ್ಲಿ ಹೇಳಿರುವಂತೆ ಕಾವೇರಿಯಿಂದ ಗೋದಾವರಿಯವರಿಗೆ ವಿಸ್ತರಿಸಿತ್ತು. ಈ ಅವಧಿಯಲ್ಲಿ ಯಲಬುರ್ಗಾ ಪ್ರದೇಶವನ್ನು ಆಳುತ್ತಿದ್ದ ಯರಂಬುರಿಗಿಯ ಸಿಂಧರು ರಾಷ್ಟ್ರಕೂಟರ ಸಾಮಂತರಾಗಿ ಮುಂದುವರಿದಿರಬಹುದು ಎಂಬುವದು ಶಾಸನಗಳಿಂದ ತಿಳಿದು ಬರುತ್ತದೆ. ಈ ಪ್ರದೇಶದಲ್ಲಿ ರಾಷ್ಟ್ರಕೂಟರ ಮನೆತನಕ್ಕೆ ಸಂಬಂಧಿಸಿದ ಶಾಸನಗಳು ಇಟಗಿ, ಅರಕೇರಿ, ಸಂಕನೂರುಗಳಲ್ಲಿ ದೊರೆತಿವೆ. ಇವು ಇಂದ್ರ, ನೃಪತುಂಗ, ಪ್ರಭೂತ ವರ್ಷ, ಗೋವಿಂದ, ಇಮ್ಮಡಿ ಕೃಷ್ಣ, ಮುಮ್ಮಡಿಕೃಷ್ಣ ಮತ್ತು ಖೊಟ್ಟಿಗನ ಆಳ್ವಿಕೆಗೆ ಸೇರಿದವುಗಳಾಗಿವೆ (ದೇವರಕೊಂಡಾರೆಡ್ಡಿ, ೧೯೯೯: ೩೦).

ಈ ಶಾಸನಗಳೊಂದಿಗೆ ಇವರ ಕಾಲದ ದೇವಾಲಯಗಳು ಈ ಪ್ರದೇಶದಲ್ಲಿರುವ ಗ್ರಾಮಗಳಲ್ಲಿ ಕಂಡುಬರುತ್ತವೆ. ಅಂತಹ ದೇವಾಲಯಗಳೆಂದರೆ, ಯಲಬುರ್ಗಿಯಿಂದ ೮ ಕಿ.ಮೀ. ದೂರದ ಅಂತರದಲ್ಲಿರುವ ಕರಮುಡಿಯ ಕಲ್ಲೇಶ್ವರ ಮತ್ತು ಕುಸುಮೇಶ್ವರ ಹಾಗೂ ಮುಧೋಳದ ಸಿದ್ದೇಶ್ವರ ದೇವಾಲಯಗಳಾಗಿವೆ. ಈ ಮೇಲಿನ ಎಲ್ಲ ಸಂಗತಿಗಳು ರಾಷ್ಟ್ರಕೂಟ ಆಳ್ವಿಕೆಯನ್ನು ಸಮರ್ಥಿಸುತ್ತವೆ.

ಗಂಗರು

ರಾಷ್ಟ್ರಕೂಟ ಆಳ್ವಿಕೆಯಲ್ಲಿ ಗಂಗರ ಪಾತ್ರ ತುಂಬ ಹಿರಿದು ಗಂಗರು ಇವರ ಮಾಂಡಲಿಕರಾಗಿ ಕಾರ್ಯನಿರ್ವಹಿಸಿದ್ದಾರೆ. ಈ ಪ್ರದೇಶದಲ್ಲಿ ಗಂಗರ ಅನೇಕ ಶಾಸನಗಳು ದೊರೆತಿವೆ. ಇಟಗಿಯ ಕ್ರಿ.ಶ.೯೩೯ರ ಶಾಸನದಲ್ಲಿ ರಾಷ್ಟ್ರಕೂಟದ ಮುಮ್ಮಡಿ ಕೃಷ್ಣನು ತುಂಗಭದ್ರ ನದಿಯ ಉತ್ತರ ಭಾಗ ಎಡದೊರೆ-೨೦೦೦, ಬೆಳ್ವೊಲ -೩೦೦, ಮಾಪವಾಡಿ-೧೪೦, ಕುಕನೂರು-೩೦, ಕಳವಾಡಿ-೩೦೦ರ ಪ್ರದೇಶಗಳನ್ನು ಗಂಗರ ಭೂತುಗನಿಗೆ ನೀಡಿದುದಾಗಿ ಹೇಳುತ್ತದೆ. ಇದೇ ಮನೆತನದ ಇಮ್ಮಡಿ ಮಾರಸಿಂಗನ ಕುಕನೂರು ತಾಮ್ರಶಾಸನ ಗಂಗರ ಪಾರಂಪರಿಕ ವಂಶಾವಳಿಯನ್ನು ಬಿಂಬಿಸುತ್ತದೆ (ದೇವರಕೊಂಡಾರೆಡ್ಡಿ, ೧೯೯: ೨೬).

ಈ ಮೇಲಿನ ಶಾಸನಗಳ ಮಾಹಿತಿಯಿಂದ ಯಲಬುರ್ಗಾ ಪ್ರದೇಶವು ಗಂಗರ ಆಳ್ವಿಕೆಗೆ ಒಳಪಟ್ಟಿತ್ತು ಎಂಬ ಸಂಗತಿ ತಿಳಿದು ಬರುತ್ತದೆ.

ಕಲ್ಯಾಣ ಚಾಲುಕ್ಯರು

ಯಲಬುರ್ಗಾ ಪ್ರದೇಶದಲ್ಲಿ ರಾಷ್ಟ್ರಕೂಟರ ನಂತರ ಅಧಿಕಾರದ ಗದ್ದುಗೆ ಏರಿದ ಅರಸು ಮನೆತನ ಕಲ್ಯಾಣ ಚಾಲುಕ್ಯರದು. ಈ ಅವಧಿಯನ್ನು ದೇಗುಲ ನಿರ್ಮಿತಿಯ ಸುವರ್ಣಕಾಲವೆಂದು ಗುರುತಿಸಬಹುದು. ಈ ಕಾಲದಲ್ಲಿ ನಿರ್ಮಾಣಗೊಂಡಷ್ಟು ದೇವಾಲಯಗಳು ಕರ್ನಾಟಕದ ಯಾವ ಅರಸು ಮನೆತನದ ಅವಧಿಯಲ್ಲೂ ರಚನೆಯಾಗಿರುವುದಿಲ್ಲ. ಕಲೆ ಮತ್ತು ವಾಸ್ತುಶಿಲ್ಪಕ್ಕೆ ಇವರು ನೀಡಿದ ಪ್ರೋತ್ಸಾಹ ಅಪರಿಮಿತವಾದದ್ದು. ಇವರ ಆಳ್ವಿಕೆಯ ಕಾಲಾವಧಿಯಲ್ಲಿ ಯಲಬುರ್ಗಾ ಪ್ರದೇಶದ ಸುತ್ತ ಮುತ್ತ ಅನೇಕ ದೇವಾಲಯಗಳು ಕಂಡುಬಂದಿವೆ. ಈ ಕಾಲದ ದೇವಾಲಯಗಳಿಗೆ ಕಪ್ಪು ಮಿಶ್ರಿತ ನೀಲಿ ಛಾಯೆಯ ಬಳಪದ ಕಲ್ಲನ್ನು ಬಳಸಿದ್ದಾರೆ. ಇವರು ಬಾದಾಮಿ ಚಾಲುಕ್ಯ ಹಾಗೂ ರಾಷ್ಟ್ರಕೂಟ ಕಾಲದ ವಾಸ್ತು ಶೈಲಿಯನ್ನು ಅಳವಡಿಸಿಕೊಂಡಿದ್ದರೂ ತಮ್ಮದೇ ಆದ ಸೂಕ್ಷ್ಮ ಕೆತ್ತನೆಯ ಶೈಲಿಯನ್ನು ರೂಪಿಸಿಕೊಂಡರು. ಈ ಕಾಲದ ರಚನೆಗಳಲ್ಲಿ ಏಕಕೂಟ, ದ್ವಿಕೂಟ, ತ್ರಿಕೂಟ ಹಾಗೂ ನವಕೂಟ ದೇಗುಲಗಳು ಯಲಬುರ್ಗಾ ಪ್ರದೇಶದಲ್ಲಿ ಕಂಡುಬಂದಿವೆ. ಕಲ್ಯಾಣ ಚಾಲುಕ್ಯ ದೇಗುಲದ ವೈಶಿಷ್ಟ್ಯಗಳಲ್ಲಿ ಅಲಂಕೃತ ದ್ವಾರಗಳು, ಸೂಕ್ಷ್ಮ ಕೆತ್ತನೆಯ ಕಂಬಗಳು, ನವರಂಗದ ಮೇಲಿನ ಭುವನೇಶ್ವರಿ, ಉಪಾನ, ಜಗತಿ, ಕಂಠ, ಕುಮುದಗಳುಳ್ಳ ಅಧಿಷ್ಠಾನಗಳು ಮುಖ್ಯವಾಗಿವೆ. ದೇಗುಲದ ಗೋಡೆಗಳು ಸರಳವಾಗಿಯೂ ಮತ್ತು ಕೆಲವರಿಗೆ ಅರೆಗಂಬಗಳು, ಕೋಷ್ಠಕಗಳನ್ನೊಳಗೊಂಡಿದ್ದು ಹಿಂಬೆಸೆ-ಮುಂಬೆಸೆಯಲ್ಲಿವೆ. ಗರ್ಭಗಳ ಮೇಲ್ಭಾಗದ ಶಿಖರವು ದ್ರಾವಿಡ ಮತ್ತು ನಾಗರಗಳ ಸಮ್ಮಿಲನವಾದ ವೇಸರ ಮಾದರಿಯವೇ ಹೆಚ್ಚಾಗಿ ಬಳಸಿಕೊಂಡಿವೆ. ಶಿಖರದ ಮುಂದೆ

ಅಂತರಾಳದ ಮೇಲೆ ಗಿಳಿಯ ಕೊಕ್ಕಿನೋಪಾದಿಯಲ್ಲಿ ಮುಂಚಾಚಿದ ಸುಕನಾಸಿಯನ್ನು ಕಾಣಬಹುದು (ಬಡಿಗೇರ, ೨೦೦೧: ೧೩೬).

ಕಲ್ಯಾಣ ಚಾಲುಕ್ಯರ ಹೆಚ್ಚು ದೇವಾಲಯಗಳು ಏಕಕೂಟಗಳಾಗಿವೆ. ಇಟಗಿ, ಕುಕನೂರು, ಮುಧೋಳ, ಸಂಕನೂರು, ಕಲ್ಲೂರು,ತಳಕಲ್ಲು, ದಮ್ಮೂರು, ಬಂಡಿ, ಬಳಗೇರ, ಯಲಬುರ್ಗಾ, ಮಂಡಲಗಿರಿ, ವಜ್ರಬಂಡಿ, ಶಿರೂರು, ಹಿರೇಮ್ಯಾಗೇರಿ ಸ್ಥಳಗಳಲ್ಲಿ ಈ ಮಾದರಿಯ ದೇವಾಲಯಗಳಿವೆ. ಏಕಕೂಟ ದೇವಾಲಯಗಳು ಒಂದು ಗರ್ಭಗೃಹ, ಅಂತರಾಳ ಮತ್ತು ಸಭಾ ಮಂಟಪಗಳನ್ನು ಹೊಂದಿರುತ್ತವೆ. ದ್ವಿಕೂಟ ದೇವಾಲಯಗಳು ಎರಡು ಗರ್ಭಗೃಹಗಳನ್ನು ಹೊಂದಿರುತ್ತವೆ. ಅದರಲ್ಲಿ ಈ ಪ್ರದೇಶದಲ್ಲಿರುವ ಮುಧೋಳದ ಮಲ್ಲಿಕಾರ್ಜುನ ದೇಗುಲ ಮುಖ್ಯವಾಗಿದೆ. ಇವರ ಕಾಲದಲ್ಲಿ ತ್ರಿಕೂಟ ದೇವಾಲಯಗಳು ಹೆಚ್ಚಾಗಿ ನಿರ್ಮಾಣಗೊಂಡಿವೆ. ಅಂಥವುಗಳೆಂದರೆ, ಕುಕನೂರಿನ ಚಳ್ಳೇಶ್ವರ, ಮುಧೋಳದ ತ್ರಿಲಿಂಗೇಶ್ವರ ದೇವಾಲಯಗಳು ಪ್ರಮುಖವಾಗಿವೆ. ಇವರ ಕಾಲದ ಪಂಚಕೂಟ ದೇವಾಲಯಗಳು ಈ ಪ್ರದೇಶದಲ್ಲಿ ಕಂಡುಬರುವುದಿಲ್ಲ. ಆದರೆ ಈ ಕಾಲದಲ್ಲಿ ನಿರ್ಮಿತಿಗೊಂಡ ಕುಕನೂರಿನ ನವಲಿಂಗೇಶ್ವರ ದೇವಾಲಯವು ಈ ಭಾಗದಲ್ಲಿಯೇ ಅಪರೂಪದ ದೇವಾಲಯವಾಗಿದೆ. ಇದು ಒಟ್ಟು ಒಂಭತ್ತು ಗರ್ಭಗೃಹಗಳು ಮತ್ತು ಅವುಗಳ ಮೇಲೆ ಶಿಖರಗಳನ್ನು ಹೊಂದಿದೆ.

ಈ ಮೇಲಿನ ದೇವಾಲಯಗಳ ಜೊತೆ ಈ ಪ್ರದೇಶದಲ್ಲಿರುವ ಕೆಲವು ಶಾಸನಗಳು ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಬಗ್ಗೆ ಬೆಳಕನ್ನು ಚೆಲ್ಲುತ್ತವೆ. ಅವುಗಳೆಂದರೆ, ತಳಕಲ್ಲಿನ ಕ್ರಿ.ಶ.೯೯೧ರ ಶಾಸನದಲ್ಲಿ ಆಹವಮಲ್ಲನ ಸಾಮಂತ ಸೋಭನರಸನು ಎರಡನೂರು ಮತ್ತು ಬನವಾಸಿ-೧೨೦೦೦ನ್ನು ಆಳುತ್ತಿದ್ದಂತೆಯೂ ಅವನ ಮಾಂಡಲಿಕ ಸಾವಿಯಣ್ಣನು ಕುಕ್ಕನೂರು-೩೦ನ್ನು ಆಳುತ್ತಿದ್ದಂತೆಯೂ ಉಲ್ಲೇಖವಿದೆ. ಬಳಗೇರಿ ಮತ್ತು ಕಲ್ಲೂರು ಶಾಸನಗಳ ಕ್ರಿ.ಶ.೧೦೦೨ಕ್ಕೆ ಸೇರಿದ್ದು, ಸೋಲನರಸನು ಸತ್ಯಾಶ್ರಯನ ಸಾಮಂತನಾಗಿ ಮುಂದುವರಿದಿದ್ದನ್ನು ತಿಳಿಸುತ್ತದೆ. ಕುಕ್ಕನೂರಿನ ಕ್ರಿ.ಶ.೧೦೦೫ರ ಶಾಸನದಲ್ಲಿ ಇರಿವೆ ಬೆಡಂಗನ ಉಲ್ಲೇಖವಿದ್ದು, ಕುಕ್ಕನೂರಿನ ಎರಡು ದೇವಾಲಯಗಳ ಕಲಶಗಳನ್ನು ಸ್ಥಾಪಿಸಿದಂತೆ ತಿಳಿಯುತ್ತದೆ. ಕುಕ್ಕನೂರಿನ ಕ್ರಿ.ಶ.೧೧೨೯ರ ಶಾಸನ ಭೂಲೋಕ ಮಲ್ಲನ ಆಳ್ವಿಕೆಯನ್ನು ಹೆಸರಿಸಿದೆ. ಕಲ್ಲೂರಿನ ಕ್ರಿ.ಶ.೧೧೩೨ ಶಾಸನದಲ್ಲಿ ಆಚರಸನ ಮಗ ಪೆರ್ಮಾಡಿಯು ಕುಕ್ಕನೂರು-೩೦ನ್ನು ಆಳುತ್ತಿದ್ದಂತೆ ಹೇಳಿ ಈ ಶಾಸನದಲ್ಲಿ ಬರುವ ವಡ್ಡರಾವುಳದ ಅಧಿಕಾರಿ ಮಹೇಶ್ವರಯ್ಯನನ್ನು ಶಾಸನದಲ್ಲಿ ಬಹುವಾಗಿ ಹೊಗಳಲಾಗಿದೆ. ಕ್ರಿ.ಶ.೧೧೩೬ರ ಶಾಸನ ತ್ರಿಭುವನ ಮಲ್ಲನ ಹೆಂಡತಿ ರಬ್ಬಲದೇವಿಯನ್ನು ಹೆಸರಿಸಿದೆ. ಈಕೆ ಭೂಲೋಕ ಮಲ್ಲನ ತಾಯಿಯಾಗಿರಬಹುದು. ಕುಕ್ಕನೂರಿನ ಕ್ರಿ.ಶ.೧೧೪೦ರ ಶಾಸನವು ತೈಲಪನಿಂದ ಇಮ್ಮಡಿ ಜಗದೇಕ ಮಲ್ಲನವರೆಗೆ ವಂಶಾವಳಿಯನ್ನು ನೀಡಿದೆ. ಬೆಳ್ವಲನಾಡಿನ ಕುಕ್ಕನೂರಿನಲ್ಲಿ ೪೮ ಕೇರಿಗಳಿದ್ದಂತೆ ಇದೇ ಶಾಸನ ತಿಳಿಸುತ್ತದೆ.

ಕಲ್ಲೂರಿನ ಕ್ರಿ.ಶ.೧೧೮೫ರ ಶಾಸನ ಚಾಲುಕ್ಯ ತ್ರಿಭುವನೈಮಲ್ಲನನ್ನು ಹೆಸರಿಸುತ್ತಿದ್ದು ಇವನ ಸಾಮಂತನಾಗಿ ಸಿಂಧವಂಶದ ವೀರಬಿಜ್ಜಳ ಮತ್ತು ವಿಕ್ರಮ ದೇವನಿದ್ದಂತೆ ಉಲ್ಲೇಖ ಬರುತ್ತದೆ. ಈ ಮೇಲಿನ ಶಾಸನ ಹಾಗೂ ದೇವಾಲಯಗಳಿಂದ ಯಲಬುರ್ಗಾ ಪ್ರದೇಶವು ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಕಲ್ಯಾಣದ ಕಲಚೂರಿಗಳು

ಕಲ್ಯಾಣ ಚಾಲುಕ್ಯರ ನಂತರ ಬಂದ ಕಲಚೂರಿಗಳು ಕೆಲ ಅವಧಿಯ ಆಳ್ವಿಕೆಯನ್ನು ಈ ಪ್ರದೇಶದಲ್ಲಿ ನಡೆಸಿದ್ದರು, ಎಂಬುವದನ್ನು ಈ ಪ್ರದೇಶದಲ್ಲಿರುವ ಇಟಗಿ ಮತ್ತು ಕುಕ್ಕನೂರಿನ ಶಾಸನಗಳು ದೃಢಪಡಿಸುತ್ತವೆ. ಕುಕ್ಕನೂರಿನಲ್ಲಿ ಕ್ರಿ.ಶ.೧೧೬೩ರ ಶಾಸನವು ಇಮ್ಮಡಿ ಬಿಜ್ಜಳ ಆಳ್ವಿಕೆಗೆ ಸೇರಿದ್ದು, ಹಂಪೆಯ ವಿರೂಪಾಕ್ಷನ ಸನ್ನಿದಿಯಲ್ಲಿ ಮಾಡಿದ ದಾನದ ಬಗ್ಗೆ ತಿಳಿಸುತ್ತದೆ. ಇದರಿಂದ ಯಲಬುರ್ಗಾ ಪ್ರದೇಶವು ಕಲ್ಯಾಣದ ಕಲಚೂರಿಗಳ ಆಳ್ವಿಕೆಗೆ ಒಳಪಟ್ಟಿತು ಎಂದು ತಿಳಿದುಬರುತ್ತದೆ (ದೇವರಕೊಂಡಾರೆಡ್ಡಿ, ೧೯೯೯: ೨೬).

ದೇವಗಿರಿಯಾದವರು

ಕಲ್ಯಾಣ ಚಾಲುಕ್ಯರ ಅಸಮರ್ಥ ಅರಸರಿಂದ ಕ್ರಿ.ಶ.೧೨೧೫ರಲ್ಲಿ ಯಲಬುರ್ಗಿಯ ಸಿಂದ ಅರಸರ ಸಾಮಂತ ಆಳ್ವಿಕೆಯು ಕೊನೆಗೊಂಡ ಈ ಪ್ರದೇಶವು ದೇವಗಿರಿಯ ಯಾದವರ ವಶವಾಯಿತು (ಶಿರೂರು, ೧೯೭೭: ೫೪). ಮುಂದೆ ಈ ಪ್ರದೇಶದಲ್ಲಿ ಯಾದವ ಅರಸ ಎರಡನೆಯ ಸಿಂಘಣನು ತನ್ನ ಆಳ್ವಿಕೆಯನ್ನು ಕೈಗೊಂಡಿದ್ದನೆಂದು ಕ್ರಿ.ಶ.೧೨೩೮ರ ಸಂಕನೂರ ಶಾಸನದಿಂದ ತಿಳಿದು ಬರುತ್ತದೆ (ಬಡಿಗೇರ, ೨೦೦೦: ೨೯).

ಹೊಸಮಲೆ ದುರ್ಗದ ಅರಸರು

ಯಲಬುರ್ಗಾ ಪ್ರದೇಶವು ಕೆಲವು ವರ್ಷಗಳ ಕಾಲ ಹೊಸ ಮಲೆದುರ್ಗದ ಅರಸರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ತಿಳಿದು ಬರುತ್ತದೆ. ಇವರಲ್ಲಿ ಮುಮ್ಮಡಿ ಸಿಂಘನು ಈ ರಾಜ್ಯದ ಸ್ಥಾಪಕನಾಗಿದ್ದು, ಇವನು ಕ್ರಿ.ಶ.೧೨೬೦-೭೦ರ ಅನಂತರ ಮೊಳಕಾಲ್ಮೂರು ಪ್ರದೇಶದಿಂದ ಹೊಸ ಮಲೆದುರ್ಗಕ್ಕೆ ಬಂದವನಾಗಿರಬೇಕು. ಅರಸನಿಗೆ ಸಂಬಂಧಿಸಿದ ಶಾಸನವು ಯಲಬುರ್ಗಾದಲ್ಲಿ ಸಿಕ್ಕಿದೆ. ಈ ಶಾಸನದಲ್ಲಿ ಮುಮ್ಮಡಿ ಸಿಂಘನು ಎರಂಬರಗೆಯನ್ನು ಹಿಡಿದಾಗ ಅಲ್ಲಿದ್ದ ಜೈನರಿಗೆ ಕಿರುಕುಳ ನೀಡಿ ಅವರ ಬಸದಿಗಳನ್ನು ನಾಶ ಮಾಡಿದನೆಂದು ತಿಳಿದು ಬರುತ್ತದೆ (ದೇವರಕೊಂಡಾರೆಡ್ಡಿ, ೧೯೯೯: ೨೭).

ವಿಜಯನಗರ ಅರಸರು

ದೇವಗಿರಿ ಯಾದವರು ಮತ್ತು ಹೊಸ ಮಲೆದುರ್ಗದ ಅರಸರ ನಂತರ ಈ ಪ್ರದೇಶವು ವಿಜಯನಗರ ಅರಸರ ಆಳ್ವಿಕೆಗೆ ಒಳಪಟ್ಟಿತು ಎಂದು ತಿಳಿದು ಬರುತ್ತದೆ. ಅಂತಹ ಶಾಸನಗಳೆಂದರೆ, ಕುಕ್ಕನೂರು, ಕಲ್ಲೂರು ಮತ್ತು ಬಂಡಿಹಾಳ ಶಾಸನಗಳಾಗಿವೆ. ಕುಕ್ಕನೂರಿನ ಕ್ರಿ.ಶ.೧೩೭೯ರಲ್ಲಿ ಹರಿಹರರಾಯನು ಕ್ರಿಯಾಶಕ್ತಿಯ ಗುರುವಿನ ನಿರೂಪದಿಂದ ಕುಕ್ಕನೂರ ಅಗ್ರಹಾರವನ್ನು ಪುನರ್‌ನಿರ್ಮಿಸಿದ ಉಲ್ಲೇಖವಿದೆ. ಇಲ್ಲಿ ಉಲ್ಲೇಖಿತ ಹರಿಹರನು ಇಮ್ಮಡಿ ಹರಿಹರನಾಗಿರುತ್ತಾನೆ. ಕ್ರಿ.ಶ.೧೫೩೭ರ ಕಲ್ಲೂರು ಮತ್ತು ಬಂಡಿಹಾಳದ ಶಾಸನಗಳಲ್ಲಿ ಅಚ್ಯುತರಾಯನ ಆಳ್ವಿಕೆಯಲ್ಲಿ ಕನಕಗಿರಿಯ ಗುಜ್ಜಲವಂಶದ ಅರಸರು ಇವರ ಮಾಂಡಲೀಕರಾಗಿದ್ದಂತೆ ತಿಳಿಯುತ್ತದೆ (ದೇವರಕೊಂಡಾರೆಡ್ಡಿ, ೧೯೯೯: ೨೭).

ವಿಜಯನಗರ ಅರಸರ ನಂತರ ಕಾಲದಿಂದ ೧೯೯೭ರ ವರೆಗೆ

ವಿಜಯನಗರ ಅರಸರ ಆಳ್ವಿಕೆಯ ನಂತರ ಈ ಪ್ರದೇಶವು ಬಿಜಾಪುರ ಸುಲ್ತಾನರು, ಮರಾಠರು, ಹಾಗೂ ಹೈದರಾಲಿಯ ಆಳ್ವಿಕೆಗೆ ಒಳಪಟ್ಟಿತ್ತು ಎಂದು ತಿಳಿದು ಬರುತ್ತದೆ. ಆದರೆ ೧೮ನೇಯ ಶತಮಾನದ ಕೊನೆಯ ಭಾಗದಲ್ಲಿ ಈ ಪ್ರದೇಶವು ಬ್ರಿಟಿಷರ ವಶವಾದಂತೆ ಕಂಡುಬರುತ್ತದೆ (ಪಾಟೀಲ್, ೧೯೯೮: ೪).

ಕ್ರಿ.ಶ.೧೮೬೧ರಲ್ಲಿ ಬ್ರಿಟಿಷರು ಈ ಭಾಗವನ್ನು ಹೈದರಾಬಾದಿನ 'ನವಾಬ್ ಸಾಲಾರಜಂಗ್ ಅವ್ವಲ್' ಅವರಿಗೆ ಜಹಗೀರಾಗಿ ನೀಡಿದರು ಎಂದು ತಿಳಿದು ಬರುತ್ತದೆ. ಕ್ರಿ.ಶ.೧೮೬೧ರಿಂದ ೧೯೪೮ರವರೆಗೆ ಈ ಪ್ರದೇಶವು ಹೈದರಾಬಾದ ನವಾಬರ ವಶದಲ್ಲಿತ್ತು. ಈ ಅವಧಿಯಲ್ಲಿ ಯಲಬುರ್ಗಾ ಮತ್ತು ಕೊಪ್ಪಳವನ್ನು ಪ್ರತ್ಯೇಕ ಜಹಗೀರ ಜಿಲ್ಲೆಗಳನ್ನಾಗಿ ಮಾಡಲಾಗಿತ್ತು. ೧೯೪೮ ಸೆಪ್ಟಂಬರ್ ೧೮ರ ವರೆಗೆ ಹೈದರಾಬಾದ ನವಾಬನ ಆಳ್ವಿಕೆಯಲ್ಲಿದ್ದವು. ಹೈದರಾಬಾದ್ ನವಾಬನು ೧೯೪೮ ಸೆಪ್ಟಂಬರ್ ೧೮ರಂದು ಭಾರತ ಸರ್ಕಾರಕ್ಕೆ ಶರಣಾದ ಮೇಲೆ ಈ ಜಿಲ್ಲೆಯು ಭಾರತ ಗಣರಾಜ್ಯದಲ್ಲಿ ವಿಲೀನಗೊಂಡಿತು. ನಂತರ ೧೯೪೯ರಲ್ಲಿ ಹೈದರಾಬಾದ್ ರಾಜ್ಯದಲ್ಲಿ ಜಹಗೀರಗಳನ್ನು ರದ್ದುಗೊಳಿಸುವ ಶಾಸನವೊಂದನ್ನು ಜಾರಿಗೆ ತರಲಾಯಿತು. ಇದರ ಪರಿಣಾಮವಾಗಿ ಯಲಬುರ್ಗಾ ಜಹಗೀರ್ ಜಿಲ್ಲೆಯನ್ನು ತಾಲೂಕನ್ನಾಗಿ ಪರಿವರ್ತಿಸಿ ರಾಯಚೂರು ಜಿಲ್ಲೆಗೆ ಸೇರಿಸಲಾಯಿತು. ಈ ಪ್ರದೇಶವು ೧೯೫೬ ರಿಂದ ೧೯೯೭ರವರೆಗೆ ರಾಯಚೂರು ಜಿಲ್ಲೆಯ ತಾಲೂಕುಗಳಲ್ಲಿ ಒಂದಾಗಿತ್ತು. ರಾಯಚೂರು ಜಿಲ್ಲೆಯು ಭೌಗೋಳಿಕವಾಗಿ ದೊಡ್ಡ ಜಿಲ್ಲೆಯಾಗಿದ್ದರಿಂದ ಆಡಳಿತದ ಸುಗಮತೆಗಾಗಿ ಅಂದಿನ ಮುಖ್ಯಮಂತ್ರಿ ದಿ.ಜೆ.ಹೆಚ್.ಪಾಟೀಲರು ೧೯೯೭ರ ಆಗಸ್ಟ್ ೧೫ರಂದು ರಾಯಚೂರು ಜಿಲ್ಲೆಯನ್ನು ವಿಭಜಿಸಿ ಕೊಪ್ಪಳ ಜಿಲ್ಲೆಯನ್ನು ಮಾಡಿದ್ದರ ಪರಿಣಾಮ ಯಲಬುರ್ಗಾ ಪ್ರದೇಶವು ಕೊಪ್ಪಳ ಜಿಲ್ಲೆಯ ವ್ಯಾಪ್ತಿಯಲ್ಲಿ ಸೇರಿತು (ಕರುಗಲ್, ೨೦೦೯: ೭೪).

೧.೨. ಚೆನ್ನದಾಸರ ಮೂಲ ಹಾಗೂ ಐತಿಹಾಸಿಕ ಹಿನ್ನೆಲೆ

ಮೂಲ

ಚೆನ್ನದಾಸರ ಜನ ಸಮುದಾಯವು ಕರ್ನಾಟಕದಲ್ಲಿ ವಾಸವಾಗಿರುವ ಹಲವಾರು ಅಲೆಮಾರಿ ಬುಡಕಟ್ಟು ಸಮುದಾಯಗಳಲ್ಲಿ ಒಂದಾಗಿದೆ. ಇವರು ನೂರಾರು ವರ್ಷಗಳಿಂದ ವೃತ್ತಿಗಾಯಕರಾಗಿ ಭಿಕ್ಷಾಟನೆಯಲ್ಲಿ ತೊಡಗಿರುವದು ಕಂಡುಬರುತ್ತದೆ. ಇಂಥ ದಾಸ ಸಮುದಾಯ ಮೂಲದಲ್ಲಿ ಒಂದೇ ಆದರೂ ಪ್ರಾದೇಶಿಕವಾಗಿ ಇವರನ್ನು ಬೇರೆ ಬೇರೆ ಹೆಸರುಗಳಿಂದ ಕರೆದಿದ್ದಾರೆ. ವೈಷ್ಣವ ಸಂಪ್ರದಾಯದ ಭಿಕ್ಷಾವೃತ್ತಿಯನ್ನು ಪ್ರಧಾನ ಕಸುಬನ್ನಾಗಿಸಿಕೊಂಡಿರುವ ಇವರು ಜನಪದರ ನಾಲಿಗೆಯಲ್ಲಿ ಚೆನ್ನದಾಸರ, ದೊಂಬಿದಾಸರು, ಗಂಡುದಾಸರು, ತಿರುಮಲದಾಸರು, ದಂಗದಾಸರು, ಗೋಪಾಲಬುಟ್ಟಿ ದಾಸರು, ಮಾಲದಾಸರ, ಹೊಲೆಯ ದಾಸರ ಇನ್ನು ಮುಂತಾದ ಹೆಸರುಗಳಿಂದ ಕರೆಯುತ್ತಾರೆ (ಕುಪ್ಪೆ, ೨೦೦೮: ೨). ಚೆನ್ನದಾಸರ ಮತ್ತು ದೊಂಬಿದಾಸರ ಸಮುದಾಯಗಳು ಸೋದರ ಸಂಬಂಧಿಗಳಾಗಿದ್ದರೂ ಸಹ ರಾಜ್ಯದಲ್ಲಿ ಪ್ರತ್ಯೇಕವಾಗಿ ಗುರುತಿಸಿಕೊಂಡಿವೆ. ಚೆನ್ನದಾಸರು ಉತ್ತರ ಕರ್ನಾಟಕದಲ್ಲಿ ನೆಲೆಸಿದರೆ, ದಕ್ಷಿಣ ಕರ್ನಾಟಕದಲ್ಲಿ ದೊಂಬಿದಾಸರು ನೆಲೆಸಿದ್ದಾರೆ. ಇವರ ಸಾಮಾಜಿಕ ಸ್ಥಿತಿಗತಿ, ಆರ್ಥಿಕ ಸ್ಥಿತಿಗತಿ

[illegible]

[illegible]

ಹಾಗೂ ರಾಜಕೀಯ ಸ್ಥಿತಿಗತಿ ಆಧಾರವಾಗಿ ಭಿನ್ನನೆಲೆಯಲ್ಲಿ ಗುರುತಿಸಿಕೊಂಡಿದ್ದಾರೆ. ಇಂಥಹ ಸಂಕೀರ್ಣವಾದ ಸಮುದಾಯದ ಬಗ್ಗೆ ಪರಿಪೂರ್ಣವಾದ ಗ್ರಂಥಗಳು ರಚಿತವಾಗಿದ್ದು ನನ್ನ ಅಧ್ಯಯನದ ಗಮನಕ್ಕೆ ಕಂಡುಬಂದಿಲ್ಲ. ಆದರೆ ಕೆಲವೊಂದು ಲೇಖನಗಳು ಗೆಝೆಟಿಯರ್‌ಗಳು ಹಾಗೂ ಇತ್ತೀಚೆಗೆ ಪ್ರಕಟಗೊಂಡ 'ಚೆನ್ನದಾಸರ' ಎಂಬ ಕೃತಿಗಳನ್ನಾಧರಿಸಿ ಮೂಲವನ್ನು ಸಂಗ್ರಹಿಸಲು ಪ್ರಯತ್ನಿಸಲಾಗಿದೆ. ಎಡ್ಗರ್ ಥರ್ಸ್ಟನ್ ಅವರು ತಮ್ಮ ಕೃತಿಯಲ್ಲಿ ''ದಾಸರಿ''ಗಳ ಕುರಿತು ''ದಾಸರಿಗಳು ಬೇರೆ ಬೇರೆ ಜಾತಿಗಳಿಗೆ ಗುರುಗಳಾಗಿರುವ ವೈಷ್ಣವ ಬ್ರಾಹ್ಮಣರ ಕೈ ಕೆಳಗಿನ ಸೇವಕರು'' ಎಂದಿರುವರು. ದಾಸರಿಗಳ ಕುರಿತ ಈ ಮಾಹಿತಿಯಲ್ಲಿ ಎಚ್.ಎ.ಸ್ಟುವರ್ಟ್, ಡಬ್ಲ್ಯೂ ಫ್ರಾನ್ಸಿಸ್ ಹಾಗೂ ಎಸ್.ಎಂ.ನಟೇಶಾಸ್ತ್ರಿ ಮುಂತಾದವರ ಬರಹಗಳನ್ನು ಬಳಸಿಕೊಂಡಿದ್ದಾರೆ. ಸ್ಟುವರ್ಟ ಎಂಬ ವಿದ್ವಾಂಸ, ದಾಸರು ಸಿರಿವಂತ ಶೂದ್ರನ ಖ್ಯಾತ ವಂಶಜರು. ಅವನಿಗೆ ಮಕ್ಕಳಿಲ್ಲದ್ದರಿಂದ ತನಗೆ ಮಕ್ಕಳಾದರೆ ಅವರಲ್ಲಿ ಒಬ್ಬನನ್ನು ದೇವರ ಸೇವೆಗೆ ಅರ್ಪಿಸುವೆನೆಂದು ಬೇಡಿಕೊಂಡ, ಅನಂತರದಲ್ಲಿ ತನಗೆ ಹುಟ್ಟಿದ ಹಲವು ಮಕ್ಕಳಲ್ಲಿ ಒಬ್ಬನನ್ನು 'ದಾಸನು' (ಸೇವಕ) ಎಂದು ಹೆಸರಿಟ್ಟ ದೇವರ ಸೇವೆಗೆ ಒಪ್ಪಿಸಿದನು. ಅಂದಿನಿಂದ ದಾಸನು ತನ್ನ ತಂದೆಯ ಆಸ್ತಿಯಲ್ಲಿ ತನ್ನ ಪಾಲನ್ನು ಕಳೆದುಕೊಂಡನಲ್ಲದೆ, ಆತನ ಮಕ್ಕಳೂ ಆ ಹಕ್ಕುಗೆ ಎರೆವಾಗಿ ಭಿಕ್ಷುಕರಾದರು. ಅವರೇ ದಾಸರೆಂದೆನಿಸಿದರು. ಎಂದು ಅಭಿಪ್ರಾಯ ಪಟ್ಟಿರುವರು. ಎಂ.ಡಬ್ಲ್ಯೂ ಫ್ರಾನ್ಸಿಸ್ ಎಂಬುವರು ಅನಂತಪುರದ ಭಿಕ್ಷುಕರನ್ನು ಕುರಿತು ಬರೆಯುತ್ತ

> The beggars who are most in evidence are the Dasaris This Community is recruited from several Castes, Such as the kapus, Balijas, Kurubas, Boyas and malas and members of it who belong to the last two of these are not allowed to dine with the others

ಎಂದು ಅಭಿಪ್ರಾಯ ಪಟ್ಟಿದ್ದಾರೆ (Thurston, 1987:113). ೧೯೦೧ರ ಮೈಸೂರು ಖಾನೇ ಸುಮಾರಿ ವರದಿಯಲ್ಲಿ ಮೈಸೂರು ಪ್ರದೇಶದೊಳಗಿನ ದಾಸರಿಗಳನ್ನು ಶೂದ್ರರ ವಿವಿಧ ವರ್ಗಗಳಿಗೆ ಸಂಬಂಧಿಸಿದ ಭಿಕ್ಷುಕರೆಂದು ಬಣ್ಣಿಸಲಾಗಿದೆ. ಯಾವುದೇ ಚಿಂತೆ ಅಥವಾ ಗಂಡಾಂತರ ಪ್ರಸಂಗದಲ್ಲಿ ಮಾಡಿದ ಪ್ರತಿಜ್ಞೆ ಬಲದಿಂದ ತಿರುಪತಿ ದೇವರಿಗೆ ಅರ್ಪಿತವಾದ ದಾಸರು ಸೇವಕರಾಗುತ್ತಾರೆ. ಅವನ ಹೆಸರಿನಿಂದ ಭಿಕ್ಷೆ ಬೇಡಿ ಬದುಕುತ್ತಾರೆ (ಹಿಮ್ಮಡಿ, ೨೦೦೮: ೨).

ಸಯ್ಯದ ಸಿರಾಜ್ ಉಲ್‌ಹಸನ್ ಅವರು ದಾಸರಿ ಎಂದರೆ ವೈಷ್ಣವ ಭಿಕ್ಷುಕರ ವರ್ಗ, ದಾಸ ಅಥವಾ 'ದೇವರ ಸೇವಕ' ಎಂಬುದರಿಂದ ಈ ಹೆಸರು ಬಂದಿದೆ ಎಂದಿರುವರು. ಮೂಲತಃ ತೆಲುಗುನಿಂದ ನಾಮಾಂಕಿತಗೊಂಡ ಇವರಲ್ಲಿ ಬೇರೆ ಬೇರೆ ಸ್ವಗೋತ್ರ ಪಂಗಡಗಳಿರುವುದಾಗಿ ಹೇಳಿರುವ ಅವರು ಹತ್ತು ಒಳಪಂಡಗಳನ್ನು ಹೆಸರಿಸಿದ್ದಾರೆ. ಬುಕ್ಕದಾಸರಿ, ಪಾಗದಾಸರಿ, ದಂಡೆದಾಸರಿ, ಭಗವತ ಅಥವಾ ಭುಟ್ಟಿದಾಸರಿ, ಕುಂಚಲೋಯಿ ಅಥವಾ ತೆಲಗೆದಾಸರಿ, ಚೆನ್ನದಾಸರಿ, ಕಂಗೆದ್ದುಲುದಾಸರಿ, ಮಾಲಾದಾಸರಿ, ಹೊಲೆಯದಾಸರಿ ಮತ್ತು ಚೆಂಚುದಾಸರಿ ಅಲ್ಲದೆ ಈ ದಾಸರಿಗಳಲ್ಲಿ ಹಲವಾರು ಹೊರಬಾಂಧವ್ಯ ವಿಭಾಗಗಳಿರುವುದನ್ನು ಹಸನ ಅವರು ಹೆಸರಿಸಿರುವರು (ಹಸನ, ೧೯೮೯: ೨೪).

ಎಲ್.ಕೆ.ಅನಂತಕೃಷ್ಣ ಅಯ್ಯರ್ ಅವರು ಭಿಕ್ಷೆ ಬೇಡುವ ವೈಷ್ಣವ ಜಾತಿಯೇ ದಾಸರಿಯಾಗಿದೆ. ದಾಸರಿ ಎಂಬುದು ಯಾವುದೇ ನಿರ್ದಿಷ್ಟ ಜಾತಿಯನ್ನು ಸೂಚಿಸುವುದಿಲ್ಲ. ಬ್ರಾಹ್ಮಣೇತರ ಯಾವುದೇ ಜಾತಿಗೆ ಸೇರುವ ಎಲ್ಲಾ ವ್ಯಕ್ತಿಗಳಿಗೆ ಇದು ಅನ್ವಯಿಸುತ್ತದೆ. ಹೊಸದಾಗಿ ಸೇರುವ ಜಾತಿಗಳೆಂದರೆ ಬಣಜಿಗ, ಕುರುಬ, ವಕ್ಕಲಿಗ, ಸಾಲಿತಿಗಳ, ಗೊಲ್ಲ, ಬೇಡ, ಬೆಸ್ತ, ವಡ್ಡ, ಹೊಲೆಯ ಮತ್ತು ಮಾದಿಗ, ೧೯೦೧ರ ಮೈಸೂರು ಜನಗಣತಿ ವರದಿ ಪ್ರಕಾರ ಇವರು ಶೂದ್ರರಿಗೆ ಸೇರಿದ ವಿವಿಧ ವರ್ಗಗಳಲ್ಲಿರುವ ಭಿಕ್ಷುಕರೆಂದು ವಿವರಿಸಿದೆ (ಹಿಮ್ಮಡಿ, ೨೦೦೮: ೨). ಇನ್ನು ಕೆ.ಎಸ್.ಸಿಂಗ್ ಅವರ ಪೀಪಲ್ ಆಫ್ ಇಂಡಿಯಾ ಗ್ರಂಥದಲ್ಲಿ ಸಮುದಾಯಕ್ಕೆ ಸಂಬಂಧಿಸಿದಂತೆ ಪ್ರಮುಖವಾಗಿ ದಂಡಿಗದಾಸ/ಚೆನ್ನದಾಸರ, ದಾಸರಿ ಮತ್ತು ಹೊಲೆಯದಾಸರಿ ಎನ್ನುವ ಲೇಖನಗಳಿವೆ (ಸಿಂಗ್, ೧೯೯೩: ೩೬೫).

ಮುಂಬಯಿ ಇಲಾಖೆಗೆ (ಉತ್ತರ ಕರ್ನಾಟಕದ, ಬೆಳಗಾವಿ, ವಿಜಾಪುರ, ಧಾರವಾಡ ಮತ್ತು ಕಾರವಾರ ಜಿಲ್ಲೆಗಳಿಗೆ ಸಂಬಂಧಿಸಿದೆ) ಸೇರಿದ ಗ್ಯಾಝೆಟಿಯರ್‌ನಲ್ಲಿ ದಾಸರು ಕುರಿತು ದಾಸರು ಕಾನಡಾ ಹೊರತಾಗಿ ಉಳಿದ ಮೂರು ಜಿಲ್ಲೆಗಳಲ್ಲಿ ವಾಸಿಸುತ್ತಾರೆ. ಇವರಲ್ಲಿ ಗೊಲ್ಲದಾಸರು, ತೆಲಗುದಾಸರು, ಗಂಡುದಾಸರು, ತಿರುಮಲದಾಸರು, ಬ್ಯಾಡದಾಸರು, ಹೊಲೆಯ ದಾಸರು ಎಂದು ವರ್ಗಗಳುಂಟೆಂದೂ, ಬ್ಯಾಡದಾಸರು ಬೇಡ ಕುಲದವರು, ಹೊಲೆಯದಾಸರು ಹೊಲೆಯರು, ತೆಲಗುದಾಸರು ತೆಲಗುದೇಶದಿಂದ ಬಂದ ಕಬ್ಬಲಿಗೇರ ಕುಲದವರು, ಉಳಿದ ಕನ್ನಡ ದಾಸರು ಸಹ ಕಬ್ಬಲಗೇರ ಕುಲದವರೇ ಎಂದು ತೋರುತ್ತವೆ. ಇವರೆಲ್ಲರೂ ವಿಷ್ಣು ಹನುಮಂತದೇವರ ಸೇವಕರೆಂದೆನಿಸಿಕೊಳ್ಳುತ್ತಾರೆ. ಎಲ್ಲರೂ ತ್ರಿಪುಂಡ್ರನಾಮ ಹಚ್ಚುವರು, ವೆಂಕಟರಮಣನನ್ನು ಹನುಮಂತನನ್ನು ಮಾತ್ರ ಪೂಜಿಸುವರು ಎಂದು ದಾಖಲಾಗಿದೆ (ಕಟ್ಟೀ, ೧೯೮೪: ೧೧೯).

ಹೀಗೆ ಈ ಮೇಲಿನ ಹಲವು ಲೇಖನಗಳಲ್ಲಿರುವ ಮಾಹಿತಿ ಹಾಗೂ ಭಾಷೆಯನ್ನು ಆಧರಿಸಿ, ಚೆನ್ನದಾಸರ ಸಮುದಾಯವು ಆಂಧ್ರ ಮೂಲದ್ದೆಂಬುದು ನಿರ್ವಿವಾದ. ಕರ್ನಾಟಕದ ಬಹುಪಾಲು ಚೆನ್ನದಾಸರು ತೆಲುಗು ಭಾಷಿಕರಾಗಿದ್ದಾರೆ. ಕನ್ನಡ ಮನೆ ಮಾತಿರುವ ಚೆನ್ನದಾಸರನ್ನು ಕೇಳಿದಾಗ ನಮ್ಮ ಹಿರಿಯರು ಮೊದಲು ತೆಲುಗು ಮಾತನಾಡುತ್ತಿದ್ದರು. ಈಗ ನಾವೆಲ್ಲ ಮರೆತಿದ್ದೇವೆ ಎನ್ನುತ್ತಾ, ತಾವು ಆಂಧ್ರ ಮೂಲದವರೆಂಬುದನ್ನು ಹೇಳುತ್ತಾರೆ.

ಚೆನ್ನದಾಸರ ಸಮುದಾಯಕ್ಕೆ ಪ್ರಾದೇಶಿಕವಾಗಿ ಕರ್ನಾಟದಲ್ಲಿ ಬೇರೆ, ಬೇರೆ ಉಪನಾಮಗಳಿದ್ದರೂ ಈ ಸಮುದಾಯ ತನ್ನನ್ನು 'ಚೆನ್ನದಾಸರು' ಎಂದೇ ಗುರುತಿಸಿಗೊಂಡಿದೆ. ಚೆನ್ನದಾಸರ ಪರ್ಯಾಯ ನಾಮಗಳಾದ ದಂಡಿಗೆದಾಸರ, ಜಂಬೂದಾಸರ, ಚಕ್ರವಾಧ್ಯದಾಸರ, ಹರಿದಾಸರ, ಶಂಖದಾಸರ, ನಾಮದಾಸರ, ಹೊಲೆಯದಾಸರ, ಇತ್ಯಾದಿ ಇದ್ದರೂ ಚೆನ್ನದಾಸರ ಎಂದೇ ಕರ್ನಾಟಕದಾದ್ಯಂತ ಈ ಸಮುದಾಯ ತನನ್ನು ಗುರುತಿಸಿಕೊಳ್ಳುತ್ತ ಬಂದಿದೆ. ಅದಕ್ಕೆ ಕಾರಣ 'ಚೆನ್ನು' ಎನ್ನುವ ವಾದ್ಯ ನುಡಿಸುವುದರಿಂದ 'ಚೆನ್ನದಾಸರ' ಎಂದು ನಾಮ ಬಂದಿರಬಹುದು ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ (ಹಿಮ್ಮಡಿ, ೨೦೦೮: ೧೭).

ಕನ್ನಡ ವಿಶ್ವವಿದ್ಯಾಲಯದ ಹಸ್ತಪ್ರತಿ ವಿಭಾಗದ ಪ್ರವಾಚಕರಾದ ಎಸ್.ಎಸ್.ಅಂಗಡಿ ಅವರು 'ಚೆನ್ನ' ಎಂದರೆ 'ಶ್ರೇಷ್ಠ', ಒಳ್ಳೇಯ ಎಂಬ ಅರ್ಥವನ್ನು ತಿಳಿಸುತ್ತಾರೆ. ಇದರಿಂದ ದಾಸರಲ್ಲಿ ಇರುವ ಹಲವಾರು ದಾಸರ ನಾಮಹೊಂದಿರುವ ಸಮುದಾಯಗಳಲ್ಲಿ ಚೆನ್ನದಾಸರೇ ಶ್ರೇಷ್ಠರು ಎನ್ನಬಹುದು.

ಚೆನ್ನದಾಸರ ಸಮುದಾಯಕ್ಕೆ ಈ ಹೆಸರು ಬರಲು ಈ ಹೆಸರಿನ ವ್ಯಕ್ತಿಯಿಂದಾಗಿ ಎನ್ನುವುದಕ್ಕೆ ಜನಪದ ಪುರಾಣ ಮತ್ತು ಐತಿಹ್ಯಗಳ ಆಧಾರವಿದೆ.

ಮಾದಿಗರ ಐತಿಹ್ಯ ಪ್ರಕಾರ: ಈ ವಿಶ್ವವು ಮತ್ತು ಮನುಕುಲವು ಜಾಂಬವಂತನು ಮತ್ತು ಆತನ ಮಕ್ಕಳಿಂದ ಸೃಷ್ಟಿಯಾಗಿದೆ ಎಂಬ ವಿವರಣೆಯಿದೆ. ಈ 'ಮಾಲಾ'ಗಳು ಶಿವನ ವಾಹನವಾದ ನಂದಿ ಕಾಮಧೇನು ಮತ್ತು ಪಾರ್ವತಿಯ ಮಾಸಿದ ಬಟ್ಟೆಯಿಂದ ಹುಟ್ಟಿ ಬಂದಿರುವ 'ಚೆನ್ನಯ್ಯ' ಅವನ ವಂಶಸ್ಥರೆಂಬ ಉಲ್ಲೇಖವಿದೆ. ಚೆನ್ನಯ್ಯ ಶಿವನ ನಂದಿಯನ್ನು ಕೊಂದ ಅಪರಾಧಕ್ಕಾಗಿ ಶಿವನಿಂದ ಮಾಲಾವಂಶಸ್ಥರು ಆಕಳ ಚರ್ಮ ಸುಲಿಯುವ ಮತ್ತು ಮಾಂಸ ಭಕ್ಷಿಸುವ ಕೀಳು ವೃತ್ತಿಗೆ ಇಳಿಯಬೇಕಾಯಿತು (ಹಿಮ್ಮಡಿ, ೨೦೦೮: ೧೮).

ಹೊಲೆಯರ ಐಹಿತ್ಯ ಪ್ರಕಾರ: ಶಿವ ಪಾರ್ವತಿಯರು ಪ್ರತಿದಿನ ನದಿಗೆ ಸ್ನಾನಕ್ಕೆ ಹೋಗುತ್ತಿದ್ದರು ಒಮ್ಮೆ ಪಾರ್ವತಿಗೆ ಮುಟ್ಟು ಅತಿಯಾಗಲು ಅದನ್ನು ಜೋಪಾನವಾಗಿ ಅರಿವೆಯಲ್ಲಿ ಕಟ್ಟಿ ತೊಡೆಯಲ್ಲಿಯೇ ಇಟ್ಟುಕೊಂಡು ನದಿಗೆ ಹೋಗುವಾಗ ಬಿರುಕಿನಲ್ಲಿ ಆ ಮುಟ್ಟಿನ ಗಂಟು ಬಿದ್ದು ಬಿಟ್ಟಿತು. ಪಾರ್ವತಿ ಇದರ ಕಡೆಗೆ ಲಕ್ಷ್ಯವಹಿಸಲಿಲ್ಲ. ಸ್ನಾನ ಮಾಡಿ ತಿರುಗಿ ಬರುವಷ್ಟರಲ್ಲಿ ಗಂಡು ಮಗುವಾಗಿ ಆಡುತ್ತಲಿತ್ತು. ಚೆಲುವಾದ ಈ ಮಗುವನ್ನು ಮನೆಗೊಯ್ಯಬೇಕೆಂದು ಪಾರ್ವತಿಗೆ ಆಸೆಯಾಗಲು, ಅದನ್ನು ತೆಗೆದುಕೊಂಡು ಹೋಗಿ 'ಚೆನ್ನ' ಎಂದು ನಾಮಕರಣ ಮಾಡಿ, ತನ್ನ ಮನೆಯ ಬಾಗಿಲು ಮತ್ತು ಕಾಮಧೇನುವನ್ನು ಕಾಯಲು ಹೇಳಿದಳು. 'ಚೆನ್ನ'ನಿಗೆ ಯಾವ ಕಾರಣಕ್ಕೂ ಹಾಲಿನ ಕೆನೆ ಮತ್ತು ಬೆಣ್ಣೆ ಕೊಡಬೇಡವೆಂದು ಶಿವ ಪಾರ್ವತಿಗೆ ಆಜ್ಞೆ ಮಾಡಿದ್ದನು. ಒಂದು ದಿನ ಮುಸುರಿ ತೊಳೆದು ಬಾಗಿಲಲ್ಲಿ ಬಿದ್ದ ಹಾಲಿನ ಕೆನೆಯನ್ನು ಆ ಮಗು ತಿಂದಿತ್ತು. ಹಾಲಿನ ಕೆನೆಯೇ ಇಷ್ಟು ರುಚಿಕಟ್ಟಾಗಿರುವಾಗ ಇದನ್ನು ಕೊಡುವ ಕಾಮಧೇನು ಅದೆಷ್ಟು ರುಚಿಯಾಗಿರಬೇಕೆಂದೆನಿಸಿ, ಧನಕಾಯಲು ಹೋದಾಗ 'ಚೆನ್ನ' ಒಂದು ದಿನ ಕಾಮದೇನುವನ್ನು ಕೊಂದು ತಿಂದುಬಿಟ್ಟ, ಈ ವಿಷಯ ಶಿವನಿಗೆ ತಿಳಿಯಲು 'ಚೆನ್ನ'ನಿಗೆ ಚಂಡಾಲನಾಗಿ ಸ್ಮಶಾನದಲ್ಲಿ ಬಿದ್ದಿರು ಎಂದು ಶಾಪ ಕೊಟ್ಟನಂತೆ. ಈ ಕಾರಣವಾಗಿ 'ಚೆನ್ನ' ಸುಡುಗಾಡನ್ನು ಕಾಯುತ್ತ ಅದರ ಒಡೆತನ ಪಡೆದು ಬದುಕಹತ್ತಿದನು. ಅವನ ಸಂತತಿಯವರೇ ನಾವು 'ಹೊಲೆಯರು' ಎಂದು ಹೇಳಿಕೊಳ್ಳುತ್ತಾರೆ (ಗೊಳಸಂಗಿ, ೨೦೦೦: ೧೭).

ಹೊಲೆಯ ಮಾಸ್ಟೀಕರ ಐತಿಹ್ಯದ ಪ್ರಕಾರ

ಲಕ್ಷ್ಮೀಪತಿ ಕೋಲಾರದ ಮಾಸ್ಟಿಕರ ಸಂಸ್ಕೃತಿ ಎಂಬ ಕೃತಿಯಲ್ಲಿ ಹೀಗೆ ದಾಖಲಿಸಲಾಗಿದೆ. ದಕ್ಷಿಣ ದಿಕ್ಕಿನಲ್ಲಿ ಇನಕೊಂಡ, ಬೆಲ್ಲಪುಕೊಂಡ, ಕೊಣತಿ ಕುನಿಯೇಡ ಕೊಂಡಗಳಿದ್ದವು. ಅಲ್ಲಿ ಜಾಂಗಾ ಪೆದ್ದಕ್ಕ ಎಂಬಾಕೆ ಸುತ್ತಲ ಏಳೂರುಗಳಿಗೆ ತೋಟಿ. ಆಕೆಯ ಮಕ್ಕಳಲ್ಲಿ ಕೊನೆಯವನೇ ಚೆನ್ನಯ್ಯದಾಸು ಎಂಬಾತ ಈ ಚೆನ್ನಯ್ಯದಾಸು ರೆಡ್ಡಿ ಭೂಹೊಲೆಯರ ಪಂಗಡದವನು. ಅವನು ಕೂಡ ಎಲ್ಲರಂತೆಯೇ ನೀರಗಂಟಿ ಚಾಕರಿ ಮಾಡುತ್ತಿದ್ದ. ತಿಂಗಳ ಕೆಲಸವನ್ನು ಮೂರು ದಿನದಲ್ಲೆ ಮುಗಿಸಬಲ್ಲಂತಹ ಕೆಲಸಗಾರನವನು.

ಇತ್ತ ಮಾದಿಗ ಕುಲದ ಆದಿ ಜಾಂಬವಂತನು ಹೊಲೆಯ ಕುಲದ ಹೆಣ್ಣುಗಳ ಮಾನ ಹರಣ ದಿನವೂ ಮಾಡುತ್ತಿದ್ದ ಇವನನ್ನು ಪ್ರತಿಭಟಿಸುವುದಾಗಲೀ ಸೋಲಿಸುವುದಾಗಲೀ ಕೊಲ್ಲುವುದಾಗಲೀ ಯಾರಿಂದಲೂ ಆಗಲಿಲ್ಲ. ಅದಕ್ಕಾಗಿ ಆ ದೇಶದ ರಾಜ, ದೇಶದ ಉದ್ದಗಲಕ್ಕೂ ಜಾಬುಬರೆಸಿ ''ಹೊಲೆಯ ಹೆಣ್ಣು ಮಕ್ಕಳ ಮಾನ ಉಳಿಸಬಲ್ಲರು, ಈ

ಕುಲವನ್ನು ಉಳಿಸಬಲ್ಲವರು ಯಾರಾದರೂ ಇದ್ದರೆ ಅಂತಹವನಿಗೆ ಆ ಆದಿ ಜಾಂಬವಂತನ ಮನೆ, ಹೊಲ, ತೋಪುಗಳನ್ನೆಲ್ಲ ಕೊಡಲಾಗುವುದು'' ಅವನನ್ನು ಹೊಲೆಯ ಕುಲದ ಹಿರಿಮಗನೆಂದು ಗೌರವಿಸಿ ಸಲುಹಲಾಗುವುದು ನಮ್ಮ ರಾಜ್ಯದಲ್ಲಿ ಅರ್ಧರಾಜ್ಯವನ್ನು ಕೊಟ್ಟು ನಮ್ಮ ಸಿಂಹಾಸನದ ಮೇಲೆ ಕೂರಿಸಿಕೊಳ್ಳಲಾಗುವುದು. ಅಂಥ ಯಾವನಾದರೂ ಲೋಕ ಪುರುಷನು ಹುಟ್ಟಿದ್ದರೆ ಬರಬಹುದು. ಭೂಮಿ, ಆಕಾಶ, ಈ ಹೊಲೆಯ ಕುಲಗಳು ಇರೋವರೆಗೂ ಅವರು ತಿನ್ನೋ ಊಟ ನಮ್ಮದು ಉಡೋಬಟ್ಟೆ ನಮ್ಮದು' ಅವರ ಇಡೀ ವಂಶವನ್ನೇ ಸಾಕುವ ಭಾರ ನಮ್ಮದು ಎಂದು ಘೋಷಿಸುತ್ತಾನೆ.

ಈ ಜಾಬು ತಿಳಿದ ಚೆನ್ನಯ್ಯ ದಾಸರಿ ಮಾದಿಗ ಕುಲದ ಆದಿ ಜಾಂಬವಂತನಿರುವಲ್ಲಿಗೆ ಹೋಗಿ ರಾಜನ ಮುಂದೆ ಕುಸ್ತಿ ಪಂದ್ಯದಲ್ಲಿ ಸೋಲಿಸಿ ಸಾಯಿಸುತ್ತಾನೆ. ಆಗ ಹೇಳಿದ ಮಾತಿನಂತೆ ರಾಜನು 'ಚೆನ್ನಯ್ಯ ದಾಸ'ನನ್ನು ಆನೆ ಅಂಬಾರಿ ಮೇಲೆ ಕೂರಿಸಿ ಮೆರವಣಿಗೆ ಮಾಡಿದನಂತೆ.

ಒಟ್ಟು ಈ ಮೂರು ಐತಿಹ್ಯಗಳು ಬೇರೆ ವಿವರಣೆಗಳು ಏನೇ ಇದ್ದರೂ 'ಚೆನ್ನಯ್ಯ ದಾಸು' ಹೊಲೆಯ ಕುಲದ ಹಿರಿಯನೆಂಬುದು ಧ್ವನಿತವಾಗುತ್ತದೆ. ಮೊದಲೆರಡು ಐತಿಹ್ಯಗಳು ಶಿವನಿಗೆ ಸಂಬಂಧಿಸಿದ್ದರೆ, ಮೂರನೆಯ ಐತಿಹ್ಯದಲ್ಲಿ ಆತ ವಿಷ್ಣುಮತಾನುಯಾಯಿ ಆಗಿದ್ದಾನೆ. ಮೊದಲೆರಡು ಐತಿಹ್ಯಗಳಲ್ಲಿ ಚೆನ್ನಯ್ಯ. ಚೆನ್ನ ಎನ್ನುವ ಹೆಸರುಗಳಿದ್ದರೆ ಮಾಸ್ಕೀಕರ ಐತಿಹ್ಯದಲ್ಲಿ ಚೆನ್ನಯ್ಯದಾಸು ಅಥವಾ ಚೆನ್ನಯ್ಯ ದಾಸರಿ ಎಂಬ ಹೆಸರಿದೆ. ಮೊದಲೆರಡು ಹೆಸರುಗಳ ಸಾಂಕೇತಿಕ ಅರ್ಥ ಶಿವಮತಾನುಯಾಯಿ ಆಗಿದ್ದಾನೆಂದು ಸೂಚಿಸಿದರೆ, ಮೂರನೆಯ ಐತಿಹ್ಯ ವಿಷ್ಣು ಮತಾನುಯಾಯಿ ಎಂದಿದೆ. ಅಂದರೆ ಹೊಲೆಯ ಕುಲದ ಚೆನ್ನ ಅಥವಾ ಚೆನ್ನಯ್ಯ ಮೊದಲು 'ಶಿವ' ಆರಾಧಕನಾಗಿದ್ದು ನಂತರದಲ್ಲಿ 'ಹರಿ' ಅಥವಾ 'ವಿಷ್ಣು' ಆರಾಧಕನಾಗಿ ವೈಷ್ಣವ ಪಂಥಕ್ಕೆ ಸೇರಿರುವುದಾಗಿ ತಿಳಿದು ಬರುತ್ತದೆ. ಈಗಿನ ಚೆನ್ನದಾಸರು ಆ 'ಚೆನ್ನಯ್ಯದಾಸು'ವಿನ ವಂಶದವರಾಗಿರಬೇಕು ಎಂಬ ಅರ್ಥ ಧ್ವನಿಸುತ್ತದೆ. ಚೆನ್ನಯ್ಯ ಮುಂದೆ ಬರುವ 'ದಾಸು' ತಮಿಳು ಮೂಲವನ್ನು ದಾಸರಿ ತೆಲಗು ಮೂಲವನ್ನು ಸೂಚಿಸಿದರೆ ದಾಸರು ಕನ್ನಡ ಮೂಲವನ್ನು ಸೂಚಿಸುತ್ತದೆ.

ಅಸ್ಪೃಶ್ಯತೆಯ ಕಳಂಕ ಹೊತ್ತ ಹೊಲೆಯ ಸಮುದಾಯದ ಒಂದು ಗುಂಪು ಅಥವಾ ಚೆನ್ನ, ಚಿನ್ನಯ್ಯನ ಗುಂಪು ಹರಿದೀಕ್ಷೆಯನ್ನು ಪಡೆದು ವೈಷ್ಣವ ಧರ್ಮವನ್ನು ಸ್ವೀಕರಿಸಿ ಹರಿದಾಸರಾಗಿರಬೇಕು. ಅದುವೆ ಚೆನ್ನಯ್ಯದಾಸು, ಚೆನ್ನಯ್ಯದಾಸರಿ ಎಂದಾಗಿದೆ. ಈಗಿನ ಚೆನ್ನದಾಸರು ಅಂದಿನ ಚೆನ್ನಯ್ಯ ದಾಸುವಿನ ವಂಶಸ್ಥರು ಎಂದಾಯಿತು. ಆ ಕಾರಣಕ್ಕಾಗಿಯೆ ಚೆನ್ನದಾಸರ ಸಮುದಾಯ ಶ್ರೀಹರಿಯ ಅವತಾರವಾದ ತಿರುಪತಿ ವೆಂಕಟರಮಣನ ಭಕ್ತರೂ ಆರಾಧಕರೂ ಆಗಿದ್ದಾರೆ (ಹಿಮ್ಮಡಿ, ೨೦೦೮:೨೦).

ಪೌರಾಣಕ ಹಿನ್ನಲೆ

ಪ್ರತಿಯೊಂದು ಸಮುದಾಯವು ತನ್ನದೆ ಆದ ಚಾರಿತ್ರಿಕ ಹಿನ್ನೆಲೆಯನ್ನು, ಪರಂಪರೆಯನ್ನು ಕಟ್ಟಿಕೊಳ್ಳುವುದು ನಮ್ಮಲ್ಲಿ ರೂಢಿಗೆ ಬಂದಿದೆ. ಈ ಹಿನ್ನೆಲೆ ಅಥವಾ ಪರಂಪರೆಯು ಧಾರ್ಮಿಕ ಮೂಲ ಪುರುಷನಿಂದಿರಬಹುದು, ಪೌರಾಣಿಕ ವ್ಯಕ್ತಿ ಅಥವಾ ಸಂಗತಿಯಿಂದಿರಬಹುದು. ಇಲ್ಲವೆ ಸಾಮಾಜಿಕ ಸಂಗತಿಯನ್ನವಲಂಬಿಸಿರಬಹುದು. ಇಲ್ಲವೆ

ತನ್ನ ಸಮುದಾಯಕ್ಕೊಂದು ದೀರ್ಘ ಮತ್ತು ಹೆಮ್ಮೆತರುವ ಪರಂಪರೆ ಇರಬೇಕೆಂದು ಪ್ರತಿ ಸಮುದಾಯವು ಇಚ್ಛಿಸುತ್ತದೆ. ಅಂತಹವರಲ್ಲಿ ಚೆನ್ನದಾಸರ ಸಮುದಾಯವು ಒಂದಾಗಿದೆ.

ಪ್ರತಿ ಸಮುದಾಯವು ತಮ್ಮ ವಂಶವು ಒಬ್ಬ ಮಹರ್ಷಿಯಿಂದ ಆರಂಭವಾದ ಗೋತ್ರಕ್ಕೆ ಸಂಬಂಧಿಸಿದ್ದೆಂದು ಸಾಮಾನ್ಯವಾಗಿ ಹೇಳುವ ರೂಢಿ ನಮ್ಮದೇಶದಲ್ಲಿದೆ. ಆದರೆ ದಾಸರ ವಂಶ ಮೂಲಪುರುಷನು ಯಾವ ಋಷಿಯೂ ಆಗಿರದೆ ಸಾಮಾನ್ಯ ಮಾನವನಾಗಿದ್ದಾನೆ. ಆತನೇ ಅಜಮಳನು. ಈತ ಊರ ಹೊರಗೆ ಜೀವಿಸುತ್ತಿದ್ದನು. ಅಂತ್ಯಜ ಕುಲದವನಾಗಿದ್ದನೆಂದು ಹೇಳುವರು. ಆತನು ಸಮೀಪದ ಅರಣ್ಯದಿಂದ ಸೌದೆ ತಂದು ಮಾರಿ ಉಪಜೀವನ ಸಾಗಿಸುತ್ತಿದ್ದನು. ಅದೇ ಹಳ್ಳಿಯ ಇನ್ನೊಂದು ಹೊರಬದಿಯಲ್ಲಿ ಬಹಿಷ್ಕೃತ ಉಚ್ಚಕುಲದ ಸ್ತ್ರೀಯೋರ್ವಳು ರೂಪ ಜೀವಿಯಾಗಿ ಜೀವಿಸುತ್ತಿದ್ದಳು. ಅಜಿಮಿಳನಿಗೂ ಅವಳಿಗೂ ಶರೀರ ಸಂಬಂಧ ಬೆಳೆದು, ಇಬ್ಬರೂ ಕೂಡಿ ಜೀವಿಸಹತ್ತಿದರು, ಕಾಲಾಂತರದಲ್ಲಿ ಅವನಿಗೆ ಅನೇಕ ಗಂಡು ಮತ್ತು ಹೆಣ್ಣು ಮಕ್ಕಳು ಹುಟ್ಟಿದರು. ಅಜಿಮಿಳನು ಅತೀ ಕಾಮುಕ ತನ್ನ ಮಗಳನ್ನೇ ಕೂಡಿ ತನ್ನ ಕಾಮೇಚ್ಛೆಯನ್ನು ತಣಿಸಿಕೊಂಡವ ತನ್ನ ಅವಸಾನ ಕಾಲದಲ್ಲಿ ಅಪ್ರಯತ್ನವಾಗಿ ತನ್ನ ಕೊನೆಯ ಮಗನಾದ ನಾರಾಯಣನನ್ನು ಕೂಗಿದನು. ಪ್ರಾಣ ಹೋಗುವ ಸಮಯದಲ್ಲಿ ಭಗವಂತನ ನಾಮಸ್ಮರಣೆ ಮಾಡಿದ್ದರಿಂದ ಆತನು ಮಾಡಿದ ಪಾಪಗಳೆಲ್ಲಾ ತೊಳೆದು ಹೋಗಿ, ಆತನನ್ನು ವೈಕುಂಠಕ್ಕೆ ಒಯ್ಯಲಾಯಿತು. ಈ ಸಂತತಿಯೇ ಈಗಿನ ''ದಾಸರು'' ಎಂದು ಉಲ್ಲೇಖಿಸಲಾಗಿದೆ. ಈ ಹಿನ್ನೆಲೆಯ ಆಶಯವನ್ನು ಸಮಾಜಶಾಸ್ತ್ರ, ನರಕುಲ ವಿಜ್ಞಾನದ ಅರ್ಥದಲ್ಲಿ ಹೀಗೆ ನಿರೂಪಿಸಿದ್ದಾರೆ. ಬಹಿಷ್ಕಾರ ಹೊಂದಿದ ಸ್ತ್ರೀ ಆರ್ಯಳಾಗಿಯೂ ಪುರುಷನು ದ್ರಾವಿಡನೂ ಇರಬಹುದು. ದಾಸ ಸಮುದಾಯವು ಕ್ಷತ್ರಿಯರೆಂದು, ಮಾರುತಿಯ ಪೂಜಾರಿಗಳೆಂದೂ ತಿಳಿದು ಬಂದಿತು. ಉತ್ತರ ಕರ್ನಾಟಕದ ಪ್ರತಿ ಹಳ್ಳಿಯಲ್ಲಿಯೂ ಹನುಮಂತ, ಮಾರುತಿಯ ದೇವಾಲಯವಿದೆಯೆಂದರೂ ತಪ್ಪಿಲ್ಲ. ಅನೇಕ ಆಂಜನೇಯ ಪೂಜಾರಿಗಳು ಕ್ಷತ್ರಿಯರಾಗಿದ್ದಾರೆ (ಹಿಮ್ಮಡಿ, ೨೦೦೮: ೩೦).

ಅಜಮಿಳನ ಆಖ್ಯಾಯಿಕೆಯ ಪ್ರಕಾರ ದಾಸಕುಲವೆಂಬುದು ಆರ್ಯ ಮತ್ತು ದ್ರಾವಿಡ ಮಿಶ್ರ ಸಂತಾನವನ್ನು ಸೂಚಿಸುವಂತಿದೆ. ಈ ಸಂತಾನಕ್ಕೆ ಚಾತುರ್ವರ್ಣದಲ್ಲಿ ಮತ್ತು ಕಾಲಾನಂತರದ ಸಾಮಾಜಿಕ ವಿಭಜನೆಯ ಜಾತಿ ಪದ್ಧತಿಯಲ್ಲಿ ಹೀನ ಕುಲವೆಂದು ತುಚ್ಛೀಕರಿಸಿರುವ ಸಾಧ್ಯತೆಯಿದೆ. ನಾರಾಯಣ ಎನ್ನುವುದು ವಿಷ್ಣುವಿನ ಅಥವಾ ವೈಷ್ಣವ ಧರ್ಮದ ಪ್ರತೀಕವಾಗಿದ್ದು ಅದನ್ನು ಸೇರಿದ ಇಂಥ ಹೀನ ಕುಲಗಳಿಗೆ ಒಂದು ಸಾಮಾಜಿಕ ಮತ್ತು ಧಾರ್ಮಿಕ ಮನ್ನಣೆ ನೀಡಿ ಗೌರವಿಸಿದುದರ ಪ್ರತೀಕವಾಗಿದೆ. ಅಂದರೆ ತುಚ್ಛೀಕರಣಕ್ಕೊಳಗಾಗಿದ್ದ ದಾಸ ಕುಲವು ವೈಷ್ಣವ ಧರ್ಮವನ್ನು ಸ್ವೀಕರಿಸಿ ಸಾಮಾಜಿಕ ಮತ್ತು ಧಾರ್ಮಿಕ ಮನ್ನಣೆಯನ್ನು ಗಳಿಸಿಕೊಂಡಿದೆ ಎಂದು ಭಾವಿಸಬಹುದಾಗಿದೆ.

ಐತಿಹಾಸಿಕ ಹಿನ್ನೆಲೆ

ಸಮಾಜದಲ್ಲಿರುವ ಪ್ರತಿಯೊಂದು ಸಮುದಾಯಗಳು ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವಂತೆ ಚೆನ್ನದಾಸರ ಸಮುದಾಯಕ್ಕೆ ಈಗ ಲಭ್ಯವಿರುವ ಸಾಹಿತ್ಯದಲ್ಲಿ ಕೆಲವು ಚಾರಿತ್ರಿಕ ಸಂಗತಿಗಳ ಹಿನ್ನೆಲೆಯಿರುವುದನ್ನು ಹಲವಾರು ವಿದ್ವಾಂಸರು ಗುರುತಿಸಿದ್ದಾರೆ. ೧೫, ೧೬ನೇ ಶತಮಾನದಲ್ಲಿ ಹರಿದಾಸ ಪಂಥದ ವೈಷ್ಣವ ಧರ್ಮವನ್ನು ಸ್ವೀಕರಿಸುವ

ಮುಂಚೆಯೇ ಈ ಸಮುದಾಯ ದಾಸ ಅಥವಾ ದಾಸರು ಎನ್ನುವ ಜಾತಿಯಿಂದಲೇ ಹೆಸರಾಗಿತ್ತು ಎನ್ನುವದಕ್ಕೆ ಹಲವಾರು ನಿದರ್ಶನಗಳು ದೊರೆಯುತ್ತವೆ, ಆರ್ಯರನ್ನು ಪ್ರತಿಭಟಿಸಿದ ದ್ರಾವಿಡರೇ ದಸ್ಯುಗಳಾಗಿ, ದಾಸರಾಗಿದ್ದರೆಂದೂ, ಕಲಾ ನಿಪುಣರಾಗಿದ್ದ ಅವರನ್ನು ನಟುವರೆಂದೂ ಕರೆದಿದ್ದಾರೆಂದೂ, ಅವರೇ ಮುಂದೆ ೬ ಮತ್ತು ೭ನೇ ಶತಮಾನದಷ್ಟೊತ್ತಿಗೆ ವೈಷ್ಣವ ಭಿಕ್ಷುಕರಾದರೆಂದೂ ತಿಳಿದುಬರುತ್ತದೆ (ಓಮ್ಮಿ, ೨೦೦೮:೩.೨). ಎಂ.ಟಿ. ಧೂಪದ ಅವರು ದಾಸವೆನ್ನುವುದು ಒಂದು ಸಾಂಸ್ಕೃತಿಕ ಹಿನ್ನೆಲೆಯುಳ್ಳೊಳಗೊಂಡ ಸಮುದಾಯವಾಗಿದೆ. ಆರ್ಯರು ದಕ್ಷಿಣ ಭಾರತಕ್ಕೆ ಬಂದು, ಇಲ್ಲಿಯವರನ್ನು ತಮ್ಮ ದಾಸರನ್ನಾಗಿ ಮಾಡಿಕೊಂಡ ಸಮುದಾಯ ಇದ್ದರೂ ಇರಬಹುದು ಅಥವಾ ಆರ್ಯ ಮತ್ತು ದ್ರಾವಿಡರ ಸಂಗಮದ ಸಂತತಿ ಎಂದು ಭಾವಿಸಲೂ ಸಾಧ್ಯವಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಮುಂದುವರಿದು ಧೂಪದ ಅವರು ಕೆಲವು ಅಭಿಪ್ರಾಯಗಳನ್ನು ಹೀಗೆ ದಾಖಲಿಸಿದ್ದಾರೆ.

ಕೆಲವು ಸಂಸ್ಕೃತ ಗ್ರಂಥದಲ್ಲಿ ದಾಸರನ್ನು ದಸ್ಯುಗಳೆಂದು ವರ್ಣಿಸಿದ್ದಾರೆ. ಆರ್ಯರನ್ನು ಪ್ರತಿಭಟಿಸಿದ ದ್ರಾವಿಡರೇ ದಸ್ಯುಗಳೆಂದು ವಿವರಣೆಯಿದೆ. ನಟುವ ಜನಾಂಗವನ್ನು ಹೋಲುವಂತಹ ಜನರೆಂದು ತಿಳಿಸಲಾಗಿದೆ. ನರಕುಲ ವಿಜ್ಞಾನಿಗಳ ಪ್ರಕಾರ ನಟು ಜನಾಂಗವು ಒಂದು ಅಲೆಮಾರಿ ಜನಾಂಗ, ಕ್ರೂಕರ ಅಭಿಪ್ರಾಯದಂತೆ ಜಿಪ್ಸಿಯಂತಹ ಒಂದು ಜನಾಂಗ ಇವರು ನೃತ್ಯಗಾರರು, ಆಟವಾಡುವ, ರೂಪ ಜೀವಿಗಳಾದ ಒಂದು ಜನಾಂಗ. ಈ ಜನಾಂಗದ ಉಗಮ ಸ್ಥಾನದ ಬಗ್ಗೆ ನರಕುಲ ವಿಜ್ಞಾನಿಗಳು ಇನ್ನೂ ಒಂದು ನಿಶ್ಚಿತ ಅಭಿಪ್ರಾಯವನ್ನು ತಳೆದಿಲ್ಲ. ನಟು ಜನಾಂಗದ ಉಗಮವು ದಾಸ ಜನಾಂಗದ ಉಗಮದಂತಿದೆ ಎಂಬ ಅಭಿಪ್ರಾಯ ಪಟ್ಟಿದ್ದಾರೆ (ಧೂಪದ, ೧೯೭೧: ೨೧೭).

ಮತ್ತೊಂದೆಡೆ ವೇದ ಪುರಾಣದಲ್ಲಿ ಬರುವ ಶುಷ್ಣ ಶಂಬರ ಇತ್ಯಾದಿಗಳು ಭಾರತದಲ್ಲಿ ಅಡಿಯಿಟ್ಟ ಆರ್ಯರ ಆಕ್ರಮಣಗಳನ್ನು ತಡೆಗಟ್ಟುವಲ್ಲಿ ಮಹತ್ವದ ಪಾತ್ರ ವಹಿಸಿದ ಐತಿಹಾಸಿಕ ವ್ಯಕ್ತಿಗಳೇ ಆಗಿದ್ದಾರೆ. ಅವರನ್ನೇ ದಾಸ ಎಂದು ಕರೆದಿರಬಹುದು. ದಾಸ ಎನ್ನುವುದು ಉತ್ತರ ಭಾರತದ ಪಶ್ಚಿಮ ಭಾಗದ ದಾಹ ಎನ್ನುವ ಬುಡಕಟ್ಟಿಗೆ ಸದೃಶ್ಯವಾಗಿದೆ ಎಂದು ಎನ್ನಲಾಗಿದೆ (ಹಕಾರಿ ೧೯೮೭:೧೭).

ಇನ್ನೊಂದೆಡೆ ದಾಸರ ಕುರಿತ ವಿವೇಚನೆಯಲ್ಲಿ ಸಾಮಾನ್ಯವಾಗಿ ಮಾರಾಟ ಮಾಡಿದ ಹೆಣ್ಣಲ್ಲಿ ಹುಟ್ಟಿದ ಮಗು ಆ ಮನೆಗೆ ದಾಸವಾಗಿರುತ್ತಿದ್ದ ಎಂದು ಹೇಳಲು, ಊಹಿಸಲು ಅವಕಾಶವಿದೆ. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಉಲ್ಲೇಖಿತವಾದ ಏಳು ಪ್ರಕಾರದ ದಾಸರಲ್ಲಿ ದಾಸೀಪುತ್ರರದ್ದು ಒಂದು ಗುಂಪು. ನಾರದ ಸ್ಮೃತಿಯಲ್ಲಿ ದಾಸಿ ದಕ್ಷಿಣೆಗಳಿಂದ ಬಂದವರು ಎಂಬ ವಿವರವಿದೆ. ಹಾಗೆ ಕೊಳ್ಳಲ್ಪಟ್ಟವರು ಎಂಬ ಮಾತಿದೆ. ಈ ಮಾತುಗಳೆಲ್ಲ ಮಾರಾಟ ಮಾಡಲ್ಪಟ್ಟ, ಇಲ್ಲವೇ ಹುಟ್ಟುತ್ತಲೇ ದಾಸರಾದ ಜನವರ್ಗವೊಂದನ್ನು ಹೇಳುತ್ತವೆ (ಬಿಳಿಮಲೆ, ೧೯೯೯:೫).

ಈ ಮೇಲಿನ ವಿವಿಧ ಅಭಿಪ್ರಾಯಗಳಲ್ಲಿ ಮೂರು ಪ್ರಮುಖ ಅಂಶಗಳು ಎದ್ದು ಕಾಣುತ್ತವೆ. ಮೊದಲನೇಯದಾಗಿ ದ್ರಾವಿಡರು ಆರ್ಯರನ್ನು ಎದುರಿಸಿ ಹೋರಾಡಿದುದರಿಂದಾಗಿ ಅವರಿಂದ ದಾಸರೆನಿಸಿಕೊಂಡರು. ಹಾಗೂ ಉತ್ತರ ಭಾರತದಿಂದ ದ್ರಾವಿಡರನ್ನು ಸೋಲಿಸಿದ ಆರ್ಯರು ಅವರನ್ನು ದಾಸರನ್ನಾಗಿಸಿಕೊಂಡು ದಾಸ, ದಸ್ಯುಗಳೆಂದು ಕರೆದರು. ಆ ದಾಸರೆ ಅಸುರ, ರಾಕ್ಷಸ, ದಾಸರಾದರು. ಎರಡನೇಯದಾಗಿ, ದಾಸರು, ಮಾರಾಟ ಮಾಡಲ್ಪಟ್ಟ, ಇಲ್ಲವೇ ಹುಟ್ಟುತ್ತಲೇ ದಾಸರಾದ ಜನವರ್ಗವೊಂದನ್ನು ಸೂಚಿಸುತ್ತದೆ. ಮೂರನೆಯದಾಗಿ ದಾಸ ಒಂದು ಸಾಂಸ್ಕೃತಿಕ

ಸಮುದಾಯವಾಗಿದ್ದು, ನಟುವರಂತಿರುವವರು, ಆಟವಾಡುವ ರೂಪ ಜೀವಿಗಳು ಎನ್ನಲಾಗಿದೆ. ಜಾನಪದ ವಿದ್ವಾಂಸರು, ಮಾನವಶಾಸ್ತ್ರಜ್ಞರು ಮತ್ತು ಭಾರತೀಯ ಇತಿಹಾಸಕಾರರ ಬಹುಮುಖ್ಯವಾದ ಅಭಿಪ್ರಾಯ, ಸಂಶೋಧನೆಗಳನ್ನು ಗಮನಿಸಿದರೆ ಈ ಅಭಿಪ್ರಾಯಗಳು ಬಹುತೇಕವಾಗಿ ಒಪ್ಪಲಾಗಿದೆ (ಹಿಮ್ಮಡಿ, ೨೦೦೮:೩೪).

ಇನ್ನು ದಾಸರ ಸಮುದಾಯದ ಪ್ರಾಚೀನ ನೆಲೆಯನ್ನು ಕುರಿತು ಬಿ.ಆರ್. ಅಂಬೇಡ್ಕರ್ ಮತ್ತು ಹಲವಾರು ಮಾನವಶಾಸ್ತ್ರಜ್ಞರು ಹೇಳುವಂತೆ ಈ ದೇಶದ ನಾಗವಂಶದ ದಾಸ ಅಥವಾ ದಸ್ಯುಗಳೇ ಮುಂದೆ ಅನೇಕ ಅಸ್ಪೃಶ್ಯ ಜಾತಿಗಳಾಗಿ ಮಾರ್ಪಟ್ಟಿವೆ. ಅಂಥ ಹಲವು ಸಮುದಾಯಗಳಲ್ಲಿ ಇಂದಿನ ಚೆನ್ನದಾಸರ ಸಮುದಾಯದ ಈ ಉಪನಾಮಗಳ ಗುಂಪು ಕೂಡಾ ಒಂದಾಗಿರುವ ಸಾಧ್ಯತೆಯಿದೆ. ಏಕೆಂದರೆ ಅಂಬೇಡ್ಕರ್ ಹೇಳಿರುವ ನಾಗರು ಆಂಧ್ರಪ್ರದೇಶ ಮತ್ತು ಕರ್ನಾಟಕಗಳ ಮಧ್ಯಭಾಗದಲ್ಲೂ ಇದ್ದರು ಎನ್ನುವುದು ತಿಳಿದುಬರುತ್ತದೆ (ಹಿಮ್ಮಡಿ, ೨೦೦೮:೩೫).

ಸಿಂಧ್ ಪ್ರಾಂತದ ಮೂಲಕ ಭಾರತವನ್ನು ಪ್ರವೇಶಿಸಿರುವ ಆರ್ಯರು ಮೊದಲು ಉತ್ತರದಲ್ಲಿರುವ ನಾಗರನ್ನು (ದ್ರಾವಿಡ ಭಾಷೆಯನ್ನಾಡುವವರು) ಸೋಲಿಸಿದರು. ಸೋತ ಈ ನಾಗಕುಲದ ಕೆಲಸಮುದಾಯಗಳು ಆರ್ಯರ ಆಕ್ರಮಣವನ್ನು ಸಹಿಸದೆ ಅವರ ದಾಸ್ಯತ್ವವನ್ನು ಒಪ್ಪದೆ ದಕ್ಷಿಣ ಭಾರತದೆಡೆಗೆ ಚಲಿಸುತ್ತ ಬಂದಿರಬೇಕು. ವೇದಗಳ ರಚನೆಗಿಂತ ಮೊದಲೇ ಸೋತ ಈ ದಸ್ಯು, ದಾಸರು ಉತ್ತರ ಭಾರತದಿಂದ ದಕ್ಷಿಣಕ್ಕೆ ಬರತೊಡಗಿದರು. ಆಗ ದಕ್ಷಿಣದಲ್ಲಿ ದ್ರಾವಿಡರು ಇನ್ನೂ ಆಳುತ್ತಿದ್ದರು. ದ್ರಾವಿಡ ನಾಗಕುಲದ ದೊರೆಗಳನ್ನು, ಸಮುದಾಯಗಳನ್ನು ಮತ್ತೆ ಮತ್ತೆ ಸೋಲಿಸುತ್ತ ಬಂದ ಆರ್ಯರು ಮತ್ತಷ್ಟು ಕಠಿಣರಾಗಿ ಅವರನ್ನು ಅಂತ್ಯಜರನ್ನಾಗಿ ಪರಿಗಣಿಸಿರಬೇಕು. ಉತ್ತರ ಭಾರತದಿಂದ ಕ್ರಿ.ಶ.ವೇಳೆಗೆ ಅಲೆದಾಡುತ್ತ ಬಂದ ಈ ನಾಗಕುಲದ ಅಂತ್ಯಜರನ್ನು ದಕ್ಷಿಣದಲ್ಲಿ ಇನ್ನೂ ಆಳುತ್ತಿದ್ದ ದ್ರಾವಿಡ ನಾಗಕುಲದ ಸಮಕಾಲೀನ ಸಂದರ್ಭದಲ್ಲಿ 'ದಾಸ' ರೆಂದು ಅರ್ಥ ಬರುವ ರೀತಿಯಲ್ಲಿ ಕರೆದಿರಬೇಕು. ನಂತರದಲ್ಲಿ ಸೋತ ದಕ್ಷಿಣದ ದ್ರಾವಿಡರನ್ನು ಆರ್ಯರು, ಅಸ್ಪೃಶ್ಯರೆಂದು ಪರಿಗಣಿಸಿರಬೇಕು. ಈ ಅಸ್ಪೃಶ್ಯ ಅಥವಾ ಅಂತ್ಯಜ ಸಮುದಾಯದೊಳಗೆ ಈ ದಾಸ ಸಮುದಾಯವೂ ಸೇರಿಕೊಂಡಿದೆ (ಹಿಮ್ಮಡಿ, ೨೦೦೮: ೩೬).

ಹೀಗೆ ಆರ್ಯರಿಂದ ಸೋಲಿಸಲ್ಪಟ್ಟ ಸಮುದಾಯಗಳು, ಆರ್ಯರು ಹೇರಿರುವ ಹೀನ ಕಟ್ಟಳೆಗಳನ್ನು ಧಿಕ್ಕರಿಸುತ್ತ ಬರತೊಡಗಿದವು. ಅವು ತಮ್ಮ ಮೂಲ ಸ್ವಂತಿಕೆಯನ್ನು ಉಳಿಸಿಕೊಳ್ಳಲು ನಿರಂತರ ಹೋರಾಡುತ್ತಿದ್ದವು. ಇಂಥ ಸಂದರ್ಭದಲ್ಲಿಯೇ ಮಾನವೀಯ ಸಂಬಂಧಗಳನ್ನು ಗಟ್ಟಿಗೊಳಿಸುವ ವೈಷ್ಣವ ಮತ್ತು ವೀರಶೈವ ಧರ್ಮಗಳು ಸುಧಾರಣಾವಾದಿ ಪ್ರಯತ್ನಗಳನ್ನು ಕೈಗೆತ್ತಿಕೊಂಡವು. ವೈದಿಕ ವ್ಯವಸ್ಥೆಯ ಶೋಷಣೆಯಿಂದಾಗಿ ಈ ಸಮುದಾಯಗಳು ಇಷ್ಟೊತ್ತಿಗೆ ಜಾತಿಗಳಾಗಿ ಪರಿವರ್ತಿತಗೊಂಡಿದ್ದವು. ಇಂಥ ಹಲವಾರು ಸಮುದಾಯಗಳಲ್ಲಿ ಈ ಚೆನ್ನದಾಸರ ಸಮುದಾಯವೂ ಒಂದು ಎಂದು ಈ ಸಮುದಾಯದ ಐತಿಹಾಸಿಕ ಹಿನ್ನೆಲೆಯಿಂದ ತಿಳಿದು ಬರುತ್ತದೆ.

೧.೩. ಸಾಹಿತ್ಯಿಕ ಆಧಾರಗಳು/ಆಕರಗಳು

ಪ್ರಸ್ತುತ ಅಧ್ಯಯನ ವಿವಿಧ ಆಯಾಮಗಳನ್ನು ಗಂಭೀರವಾಗಿ ಅರ್ಥಮಾಡಿಕೊಳ್ಳಲು ಸಾಹಿತ್ಯಿಕ ಆಕರಗಳು ಸಿಗುವದು ತುಂಬಾ ವಿರಳ ಆದರೂ ಕೆಲವೊಂದು ಆಕರಗಳಾದ ಎಡ್ಗರ್ ಥರ್ಸ್ಟನರ ''ಕ್ಯಾಸ್ಟ್ ಅಂಡ್ ಟ್ರೈಬ್ಸ್

ಆಫ್ ಸದರ್ನ ಇಂಡಿಯಾ'' (೧೯೮೭), ಕೆ.ಎಸ್.ಸಿಂಗರ ''ಪೀಪಲ್ ಆಫ್ ಇಂಡಿಯಾ'' (೧೯೯೩), ಎಲ್.ಕೆ.ಅನಂತಕೃಷ್ಣಯ್ಯರ ''ದಿ ಮೈಸೂರು ಟ್ರೈಬ್ಸ್ ಆಂಡ್ ಕ್ಯಾಸ್ಟ್'' (೧೯೯೮), ಸಯ್ಯದ ಸಿರಾಜ್ ಉಲ್ ಹಸನರ ''ದಿ ಕ್ಯಾಸ್ಟ್ಸ ಆಂಡ್ ಟ್ರೈಬ್ಸ್ ಆಫ್ ಹೆಚ್.ಇ.ಹೆಚ್.ದಿ ನಿಜಾಮ್ ಡೋಮಿನಿಯನ್ಸ್'' (೧೯೮೯), ಪರಮಶಿವಯ್ಯ ಜೀ.ಶಂ ರವರ ''ಜಾನಪದ ಸಮಾವೇಶ'' (೧೯೭೯), ಚಂದ್ರಶೇಖರ ಕಂಬಾರರ ''ಕನ್ನಡ ಜಾನಪದ ವಿಶ್ವಕೋಶ'' (೧೯೮೫), ಯಲ್ಲಪ್ಪ ಬಿ. ಹಿಮ್ಮಡಿಯವರ ''ಚೆನ್ನದಾಸರ'' (೨೦೦೮), ನಾಗರಾಜ ಕುಪ್ಪರ ''ದೊಂಬಿದಾಸ'' (೨೦೦೮), ಪ್ರತಾಪ ರಾ ಬಹುರೂಪಿ ''ಬುಡ್ಗಜಂಗಮ'' (೨೦೦೫), ಎ.ಎಸ್.ಪ್ರಭಾಕರರ 'ಆದಿವಾಸಿ ಆಖ್ಯಾನ'' (೨೦೦೬), ಎಂ.ಎಸ್.ಸುಂಕಾಪುರ ''ಜಾನಪದ ಸಾಹಿತ್ಯ ದರ್ಶನ-೪ (೧೯೭೮) ಮೇತ್ರಿ.ಕೆ.ಎಂ.ರ ''ಬುಡಕಟ್ಟು ಅಧ್ಯಯನ ಮಾಲೆ-೪'' (೨೦೦೨) ಚಿದಾನಂದ ಮೂರ್ತಿ ಎಂ.ರ ''ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ'' (೧೯೮೫), ಎಂ.ಟಿ.ಧೂಪದರ ''ಕರ್ನಾಟಕ ಜಾನಪದ ಜಂಗಭೂಮಿ'' (೧೯೭೧) ಹಿ.ಚಿ.ಬೋರಲಿಂಗಯ್ಯರ ''ದಾಸಪ್ಪ ಜೋಗಪ್ಪ'' (೧೯೮೧) ಬಸವರಾಜ ಮಲಶಟ್ಟರ ''ಉತ್ತರ ಕರ್ನಾಟಕದ ಬಯಲಾಟಗಳು'' (೧೯೮೩) ಇವು ಈ ನಿಟ್ಟಿನಲ್ಲಿ ಹೆಸರಿಸಬಹುದಾದ ಕೆಲವು ಕೃತಿಗಳಾಗಿವೆ. ಮೇಲೆ ವಿವರಿಸಿದ ಕೃತಿಗಳ ಜೊತೆಗೆ ಇನ್ನು ಹಲವಾರು ಆಕರಗಳನ್ನು ಪ್ರಸ್ತುತ ಅಧ್ಯಯನಕ್ಕೆ ಉಪಯೋಗಿಸಿಕೊಳ್ಳಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಬಹುಮುಖ್ಯವಾದ ಆಕರಗಳೆಂದರೆ, ಮೌಖಿಕ ಆಕರಗಳು, ಸಂದರ್ಶನದ ಮೂಲಕ ಈ ಸಮುದಾಯಕ್ಕೆ ಸಂಬಂಧಬಟ್ಟ ಹಲವಾರು ರೀತಿಯ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಯಲಬುರ್ಗಾ ಪ್ರದೇಶದಾದ್ಯಂತ ಕ್ಷೇತ್ರ ಕಾರ್ಯನಡೆಸಿ ಈ ಸಮುದಾಯದ ಕುರಿತು ಸಾಧ್ಯವಾದಷ್ಟು ಮಾಹಿತಿಗಳನ್ನು ಸಂಗ್ರಹಿಸಿ ಈ ಪ್ರಬಂಧದಲ್ಲಿ ಬಳಸಿಕೊಳ್ಳಲಾಗಿದೆ.

೧.೪. ಚರಿತ್ರೆ ರಚನಾಶಾಸ್ತ್ರದ ಆಯಾಮಗಳು

ಯಲಬುರ್ಗಾ ಪ್ರದೇಶದ ಚೆನ್ನದಾಸರ ಸಮುದಾಯದ ಕುರಿತು ಯಾವುದೇ ಚರಿತ್ರೆ ರಚನಾಶಾಸ್ತ್ರದ ಆಯಾಮಗಳು ಕಂಡುಬರುವುದಿಲ್ಲ. ಅದಕ್ಕೆ ಕಾರಣ ಈ ಸಮುದಾಯವು ಚರಿತ್ರೆಕಾರರ ದೃಷ್ಟಿಯಲ್ಲಿ ನಿರ್ಲಕ್ಷ್ಯಕ್ಕೆ ಒಳಪಟ್ಟಿದ್ದು ಎಂದು ಹೇಳಬಹುದು. ಆದರೆ ವೈ.ಬಿ.ಹಿಮ್ಮಡಿಯವರು ೨೦೦೮ರಲ್ಲಿ ರಾಜ್ಯವ್ಯಾಪ್ತಿ ಚೆನ್ನದಾಸರ ಸಮುದಾಯದ ಕುರಿತು ಅಧ್ಯಯನಮಾಡಿ ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು ಇವರ ಸಂಯೋಗದಲ್ಲಿ ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ ಚೆನ್ನದಾಸರ ಎಂಬ ಶೀರ್ಷಿಕೆಯ ಪುಸ್ತಕವನ್ನು ಹೊರತಂದಿದ್ದು ಬಿಟ್ಟರೆ. ಯಾವ ಅಧ್ಯಯನಗಳು ಈ ಸಮುದಾಯದ ಕುರಿತಾಗಿರುವುದು ಕಂಡುಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಲಭ್ಯವಿರುವ ಮಾಹಿತಿಗಳ ಮೂಲಕ ಈ ಸಮುದಾಯದ ಬಗ್ಗೆ ಅಧ್ಯಯನ ಮಾಡಲಾಗುವುದು.

೧.೫. ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಭಾರತವು ಹಲವಾರು ಅಲೆಮಾರಿ ಸಮುದಾಯಗಳನ್ನೊಳಗೊಂಡ ರಾಷ್ಟ್ರವಾಗಿದ್ದು, ಅಂಥ ಅಲೆಮಾರಿ ಸಮುದಾಯಗಳಲ್ಲಿ ಚೆನ್ನದಾಸರ ಸಮುದಾಯವು ಒಂದಾಗಿದೆ. ಚೆನ್ನದಾಸರು ಚರಿತ್ರೆಯುದ್ದಕ್ಕೂ ಶೋಷಣೆಗೆ

[illegible]

ಒಳಪಟ್ಟು ನಿರ್ದಿಷ್ಟ ಬಗೆಯ ಬದುಕನ್ನು ಕಾಣದೆ ಸಮಾಜದಿಂದ ಮತ್ತು ಚರಿತ್ರೆಯಿಂದ ಸಂಪೂರ್ಣವಾಗಿ ನಿರ್ಲಕ್ಷ್ಯಕ್ಕೆ ಒಳಗಾದವರು. ಈ ಸಮುದಾಯ ಅತ್ತ ನಾಗರಿಕತೆಗೂ ಹೊಂದಿಕೊಳ್ಳದೆ ಇತ್ತ ಕಾಡಿಗೂ ಹೊಂದಿಕೊಳ್ಳದೆ ಹೀನಾಯ ಸ್ಥಿತಿಯಲ್ಲಿ ಬದುಕುತ್ತಿರುವುದು. ಜಾತಿ ಆಧಾರಿತ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಚೆನ್ನದಾಸರು ತೀರಾ ಕೆಳಸ್ತರದ ಹಂತವನ್ನು ತಲುಪದೇ ಇರುವಂತವರು ವೈದಿಕ ವರ್ಗದಿಂದ ಧಾರ್ಮಿಕ ದಾಸ್ಯಕ್ಕೆ ಹಾಗೂ ವೈದಿಕೇತರ ಮೇಲುವರ್ಗದ ಜನರ ದಬ್ಬಾಳಿಕೆಗೆ ಒಳಗಾಗಿ ತಮ್ಮತನವನ್ನು ಉಳಿಸಿಕೊಳ್ಳುವಲ್ಲಿ ಹಾಗೂ ಚರಿತ್ರೆಯಲ್ಲಿ ನಿರ್ದಿಷ್ಟ ಸ್ಥಾನವನ್ನು ಪಡೆದುಕೊಳ್ಳುವಲ್ಲಿ ಈ ಸಮುದಾಯ ವಿಫಲವಾಯಿತು. ಚರಿತ್ರೆ ಅಧ್ಯಯನದಲ್ಲಿ ಈ ಸಮುದಾಯದ ಚಾರಿತ್ರಿಕ ವಿವರಗಳು ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಪಟ್ಟಿದೆ.

ಚೆನ್ನದಾಸರ ಸಮುದಾಯವು ಕರ್ನಾಟಕದ ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಪ್ರಸ್ತುತ ಅಧ್ಯಯನ ಕ್ಷೇತ್ರ, ವ್ಯಾಪ್ತಿ ಕೊಪ್ಪಳ ಜಿಲ್ಲೆಯ ಯಲಬುರ್ಗಾ ಪ್ರದೇಶಕ್ಕೆ ಸೇರಿದ್ದಾಗಿದೆ. ಈ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ತುಮ್ಮರಗುದ್ದಿ, ಯಲಬುರ್ಗಾ, ವಟಪರವಿ, ನಿಂಗಲಬಂಡಿ, ಕುಕನೂರ, ರ್‍ಯಾವಣಿಕೆ ಹಳ್ಳಿಗಳಲ್ಲಿ ಕ್ಷೇತ್ರಕಾರ್ಯ ಕೈಗೊಳ್ಳಲಾಗುವುದು. ಕ್ಷೇತ್ರ ಕಾರ್ಯದಲ್ಲಿ ಎಲ್ಲಾ ಬಗೆಯ ಪ್ರಾಥಮಿಕ ಹಾಗೂ ಇತರ ಆಕರಗಳನ್ನು ಬಳಸಿಕೊಳ್ಳಲಾಗುವುದು. ಚೆನ್ನದಾಸರ ಸಮುದಾಯದ ಚಾರಿತ್ರಿಕ ಅಧ್ಯಯನಕ್ಕೆ ಸಂಬಂಧಿಸಿದ ದಾಖಲಾತಿ ಪತ್ರಗಳು, ಪ್ರಶ್ನಾವಳಿ, ಸಂದರ್ಶನ ಇತ್ಯಾದಿಗಳನ್ನು ಬಳಸಿಕೊಳ್ಳುತ್ತದೆ. ಸಂಗ್ರಹಿಸಿದ ಮಾಹಿತಿ ವಿವರಗಳನ್ನು ಚರಿತ್ರೆಯ ಶಿಸ್ತಿನ ವಿಧಿ ವಿಧಾನಗಳ ಮೂಲಕ ವಿಶ್ಲೇಷಿಸುವ ಪ್ರಯತ್ನವೊಂದನ್ನು ಇಲ್ಲಿ ಮಾಡಲಾಗುವುದು. ಕೆಳಸ್ತರದ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿರುವ ಈ ಸಮುದಾಯದ ಕುರಿತು ಅಧ್ಯಯನವನ್ನು ಮಾಡುವ ಪ್ರಯತ್ನವಾಗಿದೆ.

ಯಲಬುರ್ಗಾ ಪ್ರದೇಶದ ಚೆನ್ನದಾಸರ ಬಗ್ಗೆ ಅಧಿಕೃತ ಅಧ್ಯಯನಗಳು ನಡೆದಿದ್ದು ಕಂಡುಬಂದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಯಲಬುರ್ಗಾ ಪ್ರದೇಶದ ಚೆನ್ನದಾಸರ ಬದುಕಿನ ವಿವಿಧ ಮುಖಗಳನ್ನು ಚಾರಿತ್ರಿಕವಾಗಿ ಅಧ್ಯಯನ ಮಾಡುವ ಪ್ರಯತ್ನವೊಂದನ್ನು ಮಾಡಲಾಗುತ್ತದೆ. ಈ ಅಧ್ಯಯನವು ಆರು ಅಧ್ಯಾಯಗಳನ್ನು ಒಳಗೊಂಡಿದೆ. ಮೊದಲನೆಯ ಅಧ್ಯಾಯವು ಪ್ರಸ್ತಾವನೆ, ಯಲಬುರ್ಗಾ ಪ್ರದೇಶದ ಭೌಗೋಳಿಕ ಹಾಗೂ ಐತಿಹಾಸಿಕ ಹಿನ್ನೆಲೆಯೊಂದಿಗೆ ಚೆನ್ನದಾಸರ ಸಮುದಾಯದ ಮೂಲ, ಐತಿಹಾಸಿಕ ಹಿನ್ನೆಲೆ, ಸಾಹಿತ್ಯಿಕ ಆಧಾರಗಳು, ಚರಿತ್ರೆ ರಚನಾಶಾಸ್ತ್ರದ ಆಯಾಮಗಳು ಮತ್ತು ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪಗಳನ್ನು ಒಳಗೊಂಡಿದೆ. ಎರಡನೆಯ ಅಧ್ಯಾಯವು ಚೆನ್ನದಾಸರು ಹಾಡಿರುವ ತತ್ವಪದಗಳಲ್ಲಿ ತತ್ವಪದಗಳ ಪ್ರಕಾರಗಳು, ವಸ್ತು ವಿಷಯ ಮತ್ತು ಚಾರಿತ್ರಿಕತೆ ಮತ್ತು ಚೆನ್ನದಾಸರ ಭಾವನೆಗಳು ಹಾಗೂ ಚೆನ್ನದಾಸರು ಅವುಗಳ ಮೇಲೆ ಇಟ್ಟಿರುವ ನಂಬಿಕೆಗಳ ಜೊತೆಗೆ ಹೋಲಿಕೆಯನ್ನು ಮಾಡಲಾಗಿದೆ. ಅಲ್ಲದೆ ಚೆನ್ನದಾಸರು ವೃತ್ತಿಗಾಯಕರಾಗಿದ್ದು ಯಾವಾಗ ಯಾವ ಪರಿಸ್ಥಿತಿಯು ಅವರನ್ನು ಈ ರಂಗಕ್ಕೆ ತಂದಿದೆ ಎನ್ನುವ ಅಂಶಗಳು ಸೇರಿವೆ.

ಮೂರನೆಯ ಅಧ್ಯಾಯವು ಚೆನ್ನದಾಸರ ಸಮುದಾಯದ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿಯ ಕೌಟುಂಬಿಕ ವ್ಯವಸ್ಥೆಯಲ್ಲಿ ಜನನ, ಋತುಮತಿ, ವಿವಾಹ, ಮರಣ, ಉಡುಗೆ ತೊಡುಗೆ, ಆಹಾರ ಪದ್ಧತಿ ಹಬ್ಬ ಹರಿದಿನಗಳು

ಹಾಗೂ ನ್ಯಾಯಾಂಗ ವ್ಯವಸ್ಥೆ ಇತ್ಯಾದಿ ಅಂಶಗಳನ್ನು ತಿಳಿಸುವದರೊಂದಿಗೆ ಹಿಂದೆ ಹೇಗೆ ಆಚರಿಸಲ್ಪಡುತ್ತಿದ್ದವು ಇಂದು ಆಧುನಿಕ ಪ್ರಭಾವದಿಂದ ಅವುಗಳ ಸ್ಥಿತಿಗತಿ ಹೇಗೆ ಇದೆ ಎನ್ನುವುದನ್ನು ಕುರಿತದ್ದಾಗಿದೆ.

ನಾಲ್ಕನೆಯ ಅಧ್ಯಾಯವು ಚೆನ್ನದಾಸರ ಆರ್ಥಿಕ ಬದುಕಿನ ವಿವಿಧ ಆಯಾಮಗಳನ್ನು ಪರಿಚಯಿಸುವತ್ತ ಸಾಗುತ್ತದೆ. ಈ ದೇಶದ ಎರಡು ಪ್ರಮುಖ ಅರ್ಥವ್ಯವಸ್ಥೆಗಳಾದ ಕೃಷಿ ಮತ್ತು ಕೈಗಾರಿಕೆಗಳೆರಡರಲ್ಲೂ ಈ ಸಮುದಾಯ ನಿರ್ದಿಷ್ಟ ಸ್ಥಾನವನ್ನು ಪರಿಪೂರ್ಣವಾಗಿ ಪಡೆದುಕೊಂಡಿಲ್ಲ. ಹಾಗಿದ್ದರೂ ಅದು ನಿರ್ದಿಷ್ಟ ಬಗೆಯ ಆರ್ಥಿಕ ಬದುಕೊಂದನ್ನು ರೂಪಿಸಿಕೊಂಡಿದೆ. ವಂಶಪಾರಂಪರ್ಯವಾಗಿ ಬಂದ ತತ್ವಪದಗಳ ವೃತ್ತಿಗಾಯನ, ಭಿಕ್ಷಾಟನೆ, ಪಶುಪಾಲನೆ, ಬೇಟೆ ಹಾಗೂ ಇತ್ತೀಚೆಗೆ ವ್ಯಾಪಾರ, ಕೃಷಿಯಲ್ಲಿ ತೊಡಗಿರುವುದು ಮೊದಲಾದ ಆರ್ಥಿಕ ಬದುಕಿಗೆ ಸಂಬಂಧಿಸಿದ ಅಂಶಗಳ ಕುರಿತದ್ದಾಗಿದೆ.

ಐದನೆಯ ಅಧ್ಯಾಯವು ಚೆನ್ನದಾಸರ, ರಾಜಕೀಯ ಪ್ರವೇಶ ಮೀಸಲಾತಿ, ಸರಕಾರಿ ಸೌಲಭ್ಯಗಳು ಮತ್ತು ಶಿಕ್ಷಣದ ಅಂಶಗಳನ್ನು ಇಂದು ಯಾವ ರೀತಿ ಪಡೆದುಕೊಂಡಿದೆ ಎನ್ನುವ ಅವುಗಳ ಸ್ಥಿತಿಗತಿ ಕುರಿತದ್ದಾಗಿದೆ. ಹಾಗೆಯೇ ಕೊನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದಿಂದ ತಳೆದ ನಿಲುವುಗಳನ್ನು ಸಮಾರೋಪದಲ್ಲಿ ವಿವರಿಸಲಾಗಿದೆ.

ಟಿಪ್ಪಣಿಗಳು

೧. ಚೆನ್ನದಾಸರು: ಪರಿಶಿಷ್ಟ ಜಾತಿಯ ಚೆನ್ನದಾಸ ಸಮುದಾಯವನ್ನು ಚಕ್ರವಾದ್ಯದಾಸರು, ದಂಡಿಗೆ ದಾಸರು, ಡಂಗದಾಸರ, ದಶವಂತರು, ದಾಸ ದಾಸರಿ, ದಾಸಯ್ಯ ಹೊಲೆಯದಾಸರು, ಜಂಬುದಾಸರು ಇತ್ಯಾದಿ ಹೆಸರುಗಳಿಂದ ಕರೆಯುವರು. ವೈಷ್ಣವ ಮತಕ್ಕೆ ವಾಲಿದ ಇವರು ಶೈವ ಮೂಲದ ಬೆಡಗು ಮತ್ತು ಆಚರಣೆಗಳನ್ನು ಆಂತರ್ಯದಲ್ಲಿ ಉಳಿಸಿಕೊಂಡಿರುವರು. ಚೆನ್ನು, ದಂಡಿಗೆ, ಗರುಡಗಂಬ, ಗೋಪಾಳಬುಟ್ಟಿ, ಜಾಗಟೆ, ತಂಬೂರಿ, ಶಂಖ ಇವು ಇವರ ಧಾರ್ಮಿಕ ಭಿಕ್ಷಾಟನೆಗೆ ಬಳಸುವ ಸಾಧನಗಳು, ಹನುಮಂತ, ಕೆಂಚಮ್ಮ, ಮಾರಮ್ಮ, ವೆಂಕಟರಮಣ ಇತ್ಯಾದಿ ದೈವಗಳನ್ನು ಇವರು ಆರಾಧಿಸುವರು. ಅಕ್ಕಣವರ್, ಇಮ್ಮಡಿಯೋಳು ಮುಕುಂದೊಳ್ಳು, ಪುಲಿಯೇಳು ಇತ್ಯಾದಿ ನೂರಾರು ಬೆಡಗುಗಳನ್ನು ಇವರು ಹೊಂದಿರುವರು. ಲಕ್ಷಾಂತರ ಸಂಖ್ಯೆಯಲ್ಲಿರುವ ಚೆನ್ನದಾಸರು ಆಂಧ್ರ ಪ್ರದೇಶ, ಗುಜರಾತ, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಹರಡಿರುವರು. ಕರ್ನಾಟಕದ ಬಹುಪಾಲು ಚೆನ್ನದಾಸರು ತೆಲುಗು ಭಾಷಿಕರಾಗಿದ್ದಾರೆ (ಕರ್ನಾಟಕ ಚೆನ್ನದಾಸರ ಕ್ಷೇಮಾಭಿವೃದ್ಧಿ ಸಂಘ (ರಿ) ಬೆಂಗಳೂರು).

೨. ದಾಸರು: ಇವರು ಕಾನಡಾ ಹೊರ್ತಾಗಿ ಉಳಿದ ಮೂರು ಜಿಲ್ಲೆಗಳಲ್ಲಿ ವಾಸಿಸುತ್ತಾರೆ. ಇವರಲ್ಲಿ ಗಲ್ಲದಾಸರು, ತೆಲಗುದಾಸರು, ಗಂಡುದಾಸರು, ತಿರುಮಲದಾಸರು, ಬ್ಯಾಡದಾಸರು, ಹೊಲೆಯದಾಸರುಯೆಂದು ಹಲವು ವರ್ಗಗಳುಂಟು. ಬ್ಯಾಡದಾಸರು ಬೇಡರ ಕುಲದವರು, ಹೊಲೆಯದಾಸರು ಹೊಲಿಯರು; ತೆಲಗುದಾಸರು ತೆಲಗುದೇಶದಿಂದ ಬಂದ ಕಬ್ಬಲಿಗೇರ ಕುಲದವರು ಉಳಿದ ಕನ್ನಡದಾಸರು ಸಹ ಕಬ್ಬಲಿಗೇರ ಕುಲದವರೇಯೆಂದು ತೋರುತ್ತದೆ. ಇವರೆಲ್ಲರು ವಿಷ್ಣು ಹನುಮಂತದೇವರು, ಈ ಎರಡು ದೇವತೆಗಳ ಸೇವಕರೆಂದೆನಿಸಿಕೊಳ್ಳುತ್ತಾರೆ. ಎಲ್ಲರೂ ತ್ರಿಪುಂಡ್ರನಾಮ ಹಚ್ಚುವರು, ವೆಂಕಟರಮಣನನ್ನೂ ಹನುಮಂತನನ್ನೂ ಮಾತ್ರ ಪೂಜಿಸುವರು. ಗಿರಿಯ ಯಾತ್ರೆಗೆ ಹೋಗುವರು ನೆರೆಹೊರೆಯಲ್ಲಿ ಹನುಮಂತ ದೇವರ ಪ್ರಸಿದ್ದ ದೇವಸ್ಥಾನದಲ್ಲಿ ಜಾತ್ರೆಯಾಗುವಾಗ, ವಿಶೇಷವಾಗಿ ಹಂಸನೂರೆಂಬಲ್ಲಿಯ ಹನುಮಂತ ದೇವರ ಜಾತ್ರೆಗೆ

ಹೋಗುವರು. ದಾಸರಲ್ಲಿ ಹಾಗೂ ಒಕ್ಕಲತನ ಮಾಡುವ ಸ್ವಲ್ಪ ಜನರು ಮಾತ್ರವೊಂದೇ ಕಡೆಯಲ್ಲಿ ಮನೆ ಮಾಡಿಕೊಂಡು ವಾಸಿಸುವರು. ಉಳಿದವರೆಲ್ಲರು ಯಾವಾಗಲೂ ಊರೂರು ತಿರುಗುತ್ತಿರುವರು. ಇವರಲ್ಲಿ ತೆಲಗುದಾಸರು ಊರೂರು ತಿರುಗುತ್ತಿರುವರು. ಇವರಲ್ಲಿ ತೆಲಗುದಾಸರು ತಮ್ಮ ಹೆಂಗಸರಿಗೆ ಗಾಯನ ನರ್ತನೆ ಕಲಸಿ, ರಾತ್ರಿಯಲ್ಲಿ ಬೈಲೊಳಗೆ ಆಟ ಮಾಡವರೆಂದು ವಿವರಿಸಲಾಗಿದೆ (ಕರ್ನಾಟಕ ಭಾಗದ ಮುಂಬಯಿ ಗ್ಯಾಝೆಟಿಯರ್ ಪುಟ:೧೯೯).

೩. **ದಾಸರ ಹಿನ್ನೆಲೆ:** ಆಂಧ್ರದ ಮೂಲದವರಾದ ಈ ದಾಸರಿಗೆ ಕಂಚಿ ತಿರುಮಲ ತಾತಾಚಾರ್ಯರು ಇವರ ಪೂರ್ವದ ಗುರುಗಳಾಗಿದ್ದರು. ತಿರುಪತಿಯ ವೆಂಕಟರಮಣನ ಪರಮ ಭಕ್ತರು ಜೊತೆಗೆ ನರಸಿಂಹಸ್ವಾಮಿ, ಚೆಲುರಾಯಸ್ವಾಮಿ ಹಾಗೂ ಶ್ರೀರಂಗನಾಥ ದೇವರು ಇವರ ಮನೆಯ ದೇವರುಗಳು (ತರಂಗ, ಆಗಸ್ಟ್ ೨೪ ೨೦೦೯).

* * *

ಅಧ್ಯಾಯ ಎರಡು

ಚೆನ್ನದಾಸರು ಹಾಡುವ ತತ್ವಪದಗಳು

ಅಧ್ಯಾಯ ಎರಡು

ಚೆನ್ನದಾಸರು ಹಾಡುವ ತತ್ವಪದಗಳು

ಪ್ರಸ್ತಾವನೆ

ನಾಡಿನ ಚರಿತ್ರೆಯಲ್ಲಿ ಸಾಂಸ್ಕೃತಿಕ ಅಂಶಗಳಿಗೆ ಹೆಚ್ಚಿನ ಮಹತ್ವವನ್ನು ಹಿಂದಿನಿಂದಲೂ ರಾಜ ಮಹಾರಾಜರು ಹಾಗೂ ಜನ ಸಾಮಾನ್ಯರು ನೀಡಿರುವುದನ್ನು ನಾವು ನೋಡಬಹುದು. ಅದರಲ್ಲೂ ಸಾಂಸ್ಕೃತಿಕ ಪರಂಪರೆ ಬೆಳೆಯಲು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಆದಿವಾಸಿ ಬುಡಕಟ್ಟು ಸಮುದಾಯವೆಂದರೆ ತಪ್ಪಾಗಲಾರದು ಎಂದು ಹೇಳಬಹುದು. ಅಂತಹ ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಎಲೆಮರೆ ಕಾಯಿಯಂತೆ ಇರುವ ಯಲಬುರ್ಗಾ ಪ್ರದೇಶದ ಚೆನ್ನದಾಸರ ಸಮುದಾಯವೂ ಒಂದಾಗಿದೆ. ಈ ಸಮುದಾಯದವರು ಸುಮಾರು ವರ್ಷಗಳಿಂದ ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿರುವ ಬೊಬಲಾದಿ ಚಿಕ್ಕಯ್ಯ, ಕಡಕೋಳ ಮಡಿವಾಳಜ್ಜ, ಮಹಾಂತ ಶಿವಯೋಗಿ, ಕುಡಲುರೇಶ, ಸರ್ಪಭೂಷಣ ಶಿವಯೋಗಿ, ಶಿಶುನಾಳ ಷರೀಫಸಾಹೇಬರು, ಕೂಡಲೂರು ಬಸವಲಿಂಗ ಶರಣರ ಸ್ವರ ವಚನಗಳು, ಮುದ್ದುವಾಲಿಯವರ ಸಂಕಲನದ ''ಸಿದ್ದಪದಗಳು'' ಮೊದಲಾದವರ ಏಕತಾರಿ ಪದಗಳನ್ನು ಕೇಳುಗರ ಮನಮಿಡಿಯುವಂತೆ ಅರ್ಥ ಹಾಗೂ ಧ್ವನಿ ಪೂರ್ಣವಾಗಿ ಹಾಡಿ ಸಾವಿರಾರು ಜನರ ಮನಗೆದ್ದಿದ್ದಾರೆ.

ಈ ಅಧ್ಯಾಯದ ಮೊದಲನೇ ಭಾಗದಲ್ಲಿ ಚೆನ್ನದಾಸರು ಹಾಡುವ ತತ್ವಪದಗಳ ಪ್ರಕಾರಗಳನ್ನು ತಿಳಿಸಲಾಗಿದೆ. ಎರಡನೇ ಭಾಗದಲ್ಲಿ ಚೆನ್ನದಾಸರ ತತ್ವಪದಗಳ ವಿಷಯ ಮತ್ತು ಚಾರಿತ್ರಿಕತೆಯನ್ನು, ಮೂರನೇಯ ಭಾಗದಲ್ಲಿ ಚೆನ್ನದಾಸರು ತತ್ವಪದಗಳನ್ನು ಪಾಡುವಾಗ ಅವರ ಭಾವನೆಗಳು ಹೇಗೆ ಇರುತ್ತವೆ ಎನ್ನುವದನ್ನು ತಿಳಿಸಲಾಗಿದೆ. ಅಂದರೆ ಎಂಟು ಪ್ರಕಾರಗಳನ್ನು ಸಂಗ್ರಹಿಸಲಾಗಿದೆ. ಅಲ್ಲಿ ಅವುಗಳನ್ನು ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಇನ್ನೂ ನಾಲ್ಕನೇಯ ಭಾಗದಲ್ಲಿ ಚೆನ್ನದಾಸರು ಹಾಗೂ ಜನರು ತತ್ವಪದಗಳನ್ನು ಮೇಲೆ ಇಟ್ಟಿರುವ ನಂಬಿಕೆಗಳನ್ನು ಮತ್ತು ಕೊನೆಯ ಭಾಗದಲ್ಲಿ ಚೆನ್ನದಾಸರು ಹಾಡುವ ತತ್ವಪದಗಳಿಗೂ ವಿತರರು ಹಾಡುವ ತತ್ವಪದಗಳಿಗೆ ಹೋಲಿಕೆಯನ್ನು ಕೈಗೊಳ್ಳಲಾಗಿದೆ.

೨.೧. ಚೆನ್ನದಾಸರು ಹಾಡುವ ತತ್ವಪದಗಳ ಪ್ರಕಾರಗಳು

ಚನ್ನದಾಸರು ಹಾಡುವ ತತ್ವಪದಗಳ ಪ್ರಕಾರಗಳು ಸಮಾಜದಲ್ಲಿರುವ ವಿವಿಧ ಕ್ಷೇತ್ರಗಳನ್ನು ಬಿಂಬಿಸುವಂತಹವುಗಳಾಗಿವೆ. ತತ್ವಪದಗಳ ರಚನೆಕಾರರು ತಾವು ನೆಲೆಸಿದ ಕಾಲದಲ್ಲಿ ಅಂದಿನ ಸಮಾಜದಲ್ಲಿರುವ ಅಂಕುಡೊಂಕುಗಳನ್ನು ತಿದ್ದಲು ಹಾಗೂ ಸಮಾಜವನ್ನು ಸೂಕ್ತವಾದ ದಾರಿಯಲ್ಲಿ ಮುನ್ನಡೆಯುವಂತೆ ಮಾಡಲು ಹಲವಾರು ತತ್ವಪದಗಳನ್ನು ರಚಿಸಿದ್ದಾರೆ. ಅಧ್ಯಯನದ ದೃಷ್ಟಿಯಿಂದ ಅಂಥಹ ತತ್ವಪದಗಳನ್ನು ವಿವಿಧ ಪ್ರಕಾರಗಳಾಗಿ ವಿಂಗಡಿಸಲಾಗಿದೆ.

ಅಂಥಹವುಗಳೆಂದರೆ

೧. ನೈತಿಕತೆಯನ್ನೊಳಗೊಂಡ ತತ್ವಪದಗಳು

೨. ಧಾರ್ಮಿಕತೆಯನ್ನೊಳಗೊಂಡ ತತ್ವಪದಗಳು

೩. ಸಾಮಾಜಿಕತೆಯನ್ನೊಳಗೊಂಡ ತತ್ವಪದಗಳು

೪. ವೈಚಾರಿಕತೆಯನ್ನೊಳಗೊಂಡ ತತ್ವಪದಗಳು

೫. ಸಾಂಸಾರಿಕ ವಿಚಾರಗಳನ್ನೊಳಗೊಂಡ ತತ್ವಪದಗಳು

೬. ಜೀವನ ವ್ಯವಹಾರಗಳನ್ನೊಳಗೊಂಡ ತತ್ವಪದಗಳು

೭. ಗುರುಭಕ್ತಿಯನ್ನೊಳಗೊಂಡ ತತ್ವಪದಗಳು

೮. ಆರ್ಥಿಕತೆಯನ್ನೊಳಗೊಂಡ ತತ್ವಪದಗಳು

ಇನ್ನೂ ಮೊದಲಾದ ತತ್ವಪದಗಳ ಪ್ರಕಾರಗಳನ್ನು ಅಧ್ಯಯನದ ದೃಷ್ಟಿಯಿಂದ ಗುರುತಿಸಬಹುದು.

ಪಠ್ಯ ಒಂದು

ಗುರುಕರುಣವಿಲ್ಲದವನ ಸ್ನೇಹ
ಸಾವುತನಕ ಬೇಡ |
ಸಾಧು-ಸತ್ಪುರುಷರ ಸೇವಾ
ಮಾಡಿರುವುದು ಬಹುಪಾಡ | ||ಪಲ್ಲ||

ಮಾತಿನೊಳಗ ಮಾತಿಲ್ಲದವನ ಸ್ನೇಹ
ಜಾತಿ ಜನ್ಮಕ ಬೇಡ |
ಹೀನ ಮನುಷ್ಯನ ಸ್ನೇಹವ ಮಾಡಿ
ನೀನು ಕೆಡಲಿಬೇಡ | ||೧||

ಅಕ್ಕತಂಗಿಯರೆಂದು ಬಾಯಲಿ ಕರೆದು
ಹೊಕ್ಕು ಬಳಸಲಿ ಬೇಡ |
ನಿತ್ಯ ಕಾಲದಲ್ಲಿ ಅಶನದ ಉಂಡು
ಹೊತ್ತು ಗಳಿಯಲಿ ಬೇಡ | ||೨||

ಹಿರಿದಿಗೆ ಕಿರಿದು ಕಿರಿದಿಗೆ ಹಿರಿದು
ಸರಿಯ ಮಾಡಲಿಬೇಡ |
ಗುರು ಮಹಾಂತೇಶನ ಪಾದವ ಹಿಡಿದು
ಇರುವದು ಬಹು ಪಾಡ (ಕಡಕೋಳ, ೧೯೮೨: ೧೪)

ಈ ಪತ್ಯದ ಭಾವಾರ್ಥವು ಹೀಗಿದೆ:

ತತ್ವ ಪದಕಾರನು ಈ ತತ್ವಪದದಲ್ಲಿ ನುಡಿದಂತೆ ನಡೆಯುವ ಚಂಚಲವೃತ್ತಿ ಸ್ವಭಾವದವರ ಸಹವಾಸ ಬೇಡ, ದುಷ್ಟ, ತಾಮಸಬುದ್ದಿಯುಳ್ಳವ, ದುರಾಲೋಚನೆಯುಳ್ಳ ಕ್ಷುಲಕ ಜನರ ಸಹವಾಸ ಮಾಡಿ ಕೆಡಬಾರದು ಎಂಬ ಸಂದೇಶವನ್ನು ತಿಳಿಸುತ್ತಾ ಸತ್ಯವಂತರ ಒಡನಾಟದಿಂದ ಅಗಲಬಾರದು.

ಪರಸ್ತ್ರೀಯರನ್ನು ಅಕ್ಕ ತಂಗಿಯರೆಂದು ತಿಳಿ. ದಿನನಿತ್ಯ ಊಟಮಾಡಿ ವರ್ಥ ಕಾಲಕಳೆಯದೆ, ನಿತ್ಯಕಾಯಕಯೋಗಿ ಯಾಗಬೇಕೆಂಬ ಹಿತವಚನವನ್ನು ಹೇಳಲಾಗಿದೆ. ಯಾವುದು ಮೇಲಲ್ಲ, ಯಾವುದು ಕೀಳಲ್ಲ ಎಲ್ಲವು ಒಂದೇ ಯಾವುದನ್ನು ಹೆಚ್ಚು ಕಡಿಮೆ ಎಂದು ಭಾವಿಸದೆ ಗುರುಮಹಾಂತೇಶನ ಪಾದ ಹಿಡಿದು ಪಾವನವಾಗಿರು ಎಂದು ಅಂತಹ ಗುರುವಿನ ಆಶ್ರಯದಲ್ಲಿ ಇರುವದು ಲೇಸು.

ಪತ್ಯ ಎರಡು

ಬಿಡು ಬಿಡು ಬಿಡು ಬಿಡು ಮನಸಿನ ಚಿಂತಿ |
ಮಹಾದೇವ ಮಾಡ್ಯಾನ ಇದಕೇನಂತಿ |
ನೀ ಹುಟ್ಟಿ ಬಂದಿ ಕಲಿಯುಗ ಸಂತ |
ಶಿವನ ಭಜನ ಮಾಡದೆ ಕುಂತಿ | ||ಪಲ್ಲ||

ಸಾಧುರ ಸಂಗವ ನೀ ಮಾಡೊ |
ಸ್ವರ್ಗದ ಹಾದಿ ಅದೇ ನೋಡೊ |

ಭವಕೆ ಬರುವದು ಬಹು ಕೇಡೂ
ಭವದ ಬೇರು ಕಿತ್ತುವಂತೆ ಮಾಡೊ ||೧||

ತಾಪ ಕೋಪಕೇನು ಬೇದಿಲ್ಲ |
ನಿದ್ರಿ ಸಾವಿಗೇನು ದೂರಿಲ್ಲ
ಭಕ್ತಿಯೆಂಬುದು ಆಯ್ತೆಲ್ಲ
ಮುಕ್ತಿಯ ತಿಳಿದರೆ ಹಂತೀಲಿ ||೨||

ಹುಟ್ಟುದು ಸಾಯುದು ಸಕಲರಿಗಿ |
ಅದರ ಭೇದ ತಿಳಿದಿಲ್ಲೊ ಯಾರ್‍ಯಾರಗಿ |
ಧರಿಯೊಳುಬಿದನೂರಲ್ಲಿ
ಮಹಾಂತಯೋಗಿ ಇರುವನು ಅಲ್ಲಿ (ಕಡಕೋಳ, ೧೯೮೨: ೧೧)

ಈ ಪದ್ಯದ ಭಾವಾರ್ಥವು ಹೀಗಿದೆ:

ಇಲ್ಲದ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕೊರಗುವುದಕ್ಕಿಂತ ಪರಮಾತ್ಮನ ನೆನಪನ್ನು ಮಾಡಿಕೊಂಡು ಕಲಿಯುಗದಲ್ಲಿ ಜೀವಿಸಬೇಕು ಮತ್ತು ಈ ದೇಹವಿರುವುದರೊಳಗೆ ಏನಾದರೂ ಸಾಧಿಸು, ಸದಾಶಿವನನ್ನು ಸ್ಮರಿಸುತ್ತಲೇ ಇರಬೇಕು. ಅನ್ಯವಿಚಾರಕ್ಕೆ ಅವಕಾಶ ಕೊಡಬಾರದು.

ಆಳವಾಗಿ ಬಿಟ್ಟಿರುವ ಭವಸಾಗರವೆಂಬ ಸಂಸಾರದ ಬೇರುಗಳನ್ನು ಕಿತ್ತೊಗೆದು ಜೀವಿಸು, ಭವಕ್ಕೆ ಬರುವುದು ಶಾಪವೇ ಸರಿ ಅದಕ್ಕಾಗಿ ಸರ್ವವನ್ನು ತಿಳಿದ ಶರಣರ ಸನ್ನಿಧಿಯಲ್ಲಿ ನೆಲೆಸಿದರೆ ಸ್ವರ್ಗವು ಸಿಗುವುದು. ದೂರದ ಹಾದಿಯಲ್ಲ.

ದುಃಖ ದುಮ್ಮಾನಗಳಿಂದ ಕೂಡಿದ ಜೀವನಿಗೆ ಯಾವುದರ ಭೇದವಿಲ್ಲ ನಿದ್ರೆ ಮತ್ತು ಸಾವಿನ ಮಧ್ಯ ಜೀವನು ದೂರವಿಲ್ಲದೆ ಹತ್ತಿರವಾಗಿದ್ದಾನೆ. ಭಕ್ತಿಯಿಂದ ಎಲ್ಲವು ಆಗುತ್ತದೆ. ಮುಕ್ತಿಯ ಮಾರ್ಗವನ್ನು ಗಳಿಸಲು ಭಕ್ತಿಯು ಮೂಲ ಮಾನವಾಗಿದೆ ಎಂಬಂಶವನ್ನು ತಿಳಿಸುವುದು. ಹುಟ್ಟು ಸಾವು ಎಂಬುದು ಇಲ್ಲ. ಇದು ನಮ್ಮ ಭ್ರಮೆಯಾಗಿದೆ. ಹುಟ್ಟು ಸಾವಿನ ರಹಸ್ಯ ಯಾರಿಗೂ ತಿಳಿದಿಲ್ಲ. ಹುಟ್ಟು, ಸಾವು ಎಂಬ ಭೇದವೇ ಇಲ್ಲ. ಈ ಪೃಥ್ವಿಮಂಡಲದಲ್ಲಿರುವ ಬಿದನೂರಿನ ಮಹಾಂತ ಶಿವಯೋಗಿ ನೆಲೆಸುವನು ಅಲ್ಲಿ ಅವನಿಗೆ ಯಾವುದರ ಭೇದವಿಲ್ಲ.

ಪಠ್ಯ ಮೂರು

ಕೆಡಬೇಡ ಎಲೆ ಜೀವಾಕೆಡುವ ಜಗದೊಳು
ಕೊಡವಿ ಬಾರಲೋ ದೇವಾ ಅಡವಿಯಮೃಢದೊಳು ||ಪ||

ಪ್ರಪಂಚದ ವಿಷಯದ ಮದ್ಯದಿ ನಿಂತಿರುವೆ
ಆಪತ್ತು ಬಂದು ವಿಪತ್ತು ಹೊಂದಿರುವೆ
ತಾಪದ ಕೂಪದಿ ವ್ಯಾಪಾರ ಮಾಡಿರುವೆ
ಸೋಪಾನದಿ ಬರುವ ಕಾಪಾಡಿ ತಿಳಿಸುವ ||೧||

ಚೇಳಿಂಗೆ ಬಸುರೋ ಬಾಳಿಗೆ ಫಲವೋ
ಆಳಿದಂಗೆ ಅಳಿತನವುಂಟೋ ಇದು ನಮ್ಮನಿಲುವೋ
ಗಾಳಿಗೆ ತೂರದಿರೋ ಹಾಳುತನ ಮರೆಯದಿರೋ
ನಾಳಿಗೆ ಬೇಕೆಂದು ಇಳೆಯೊಳು ಬೇಡದಿರೋ ||೨||

ಮಾಡೆನೆಂದು ಮನಬಿಚ್ಚಿ ಆಡಬೇಡ
ಕೂಡೆನೆಂದು ಸೆಡವಿಲೆ ನಡೆಯಲುಬೇಡ
ಭಂಡಿವಾಡ ಗ್ರಾಮದೊಳು ಹನುಮನ ಮರೆಯಬೇಡ
ಅಡಿಗಡಿಗೆ ಬರೆದಂತೆ ಮುದ್ದು ಕವಿ ತತ್ವದ ಹಾಡು ||೩||

(ವಾಲಿ, ೨೦೦೪: ೪)

ಈ ಪಠ್ಯದ ಭಾವಾರ್ಥವು ಹೀಗಿದೆ:

ಅಡಿವೆಪ್ಪ ವಾಲಿ ಅವರ ಈ ತತ್ವಪದವು ಸಾಮಾಜಿಕ ವಿಡಂಬನ ಮತ್ತು ವೈಚಾರಿಕತೆಯನ್ನು ಬಿಂಬಿಸುತ್ತದೆ. ಆ ಮೂಲಕ ಮಾನವನ ಬದುಕಿನಲ್ಲಿ ಅಸಮಧಾನ ಶಾಂತಿ ನೀಡಲು ಜ್ಞಾನ ಭಕ್ತಿ ವೈರಾಗ್ಯ ಮುಖ್ಯ ಎಂಬುದನ್ನು ಸೂಚಿಸುತ್ತದೆ. ಇಂತಹ ತತ್ವಪದವನ್ನು ಚೆನ್ನದಾಸರು ಪ್ರತಿಯೊಬ್ಬರ ಮನೆಯ ಮುಂದೆ ಹಾಡುತ್ತಾ ಅದರ ಮಹತ್ವವನ್ನು ಪ್ರಸಾರ ಮಾಡುವವರಾಗಿದ್ದಾರೆ. ಜೀವನದಲ್ಲಿ ಎಷ್ಟೇ ಕಷ್ಟ ಕೋಟಲೆಗಳು ಬರುತ್ತವೆ. ಅದನ್ನು ಸಹಿಸಿಕೊಂಡು ಮೇಲೇಳಬೇಕಾಗಿರುವದು ಮಾನವನ ಪ್ರಮುಖ ಗುಣವಾಗಿರಬೇಕು. ಚೇಳು ಬಸುರಾಗಿ ಮರಿಗಳನ್ನು ಹಾಕಿದಾಗ ಅದಕ್ಕೆ ಜೀವನದ ಮುಕ್ತಿ ಸಿಗುವದು ಹಾಗೆ ಮನುಷ್ಯನ ಜೀವನದಲ್ಲಿ ಕಷ್ಟ ನೋವು ನಲಿವುಗಳನ್ನು

ಅನುಭವಿಸುತ್ತಾ ಜೀವನ ಸಾಗಿಸಿದಾಗ ಅವನಿಗೆ ಮುಕ್ತಿ ಸಿಗುವುದು. ನಾನು ಒಳ್ಳೆಯದು ಮಾಡಿದನೆಂದು ಉಬ್ಬಿಹೋಗಬೇಡ, ಯಾವಾಗಲೂ ಸವಿನಯದಿಂದ ತನ್ನ ಜೀವನವನ್ನು ಸಾಗಿಸಬೇಕೆಂದು ಹೇಳುತ್ತ ತತ್ವಪದಕಾರನು ಭಂಡಿಗ್ರಾಮ ಹನುಮನನ್ನು ಮರೆಯಬೇಡ ಎಂದು ತಿಳಿಸುತ್ತಾನೆ.

ಈ ತತ್ವಪದವು ಸಾಮಾಜಿಕ ವಿಡಂಬನ ಮತ್ತು ವೈಚಾರಿಕೆತಯನ್ನು ಬಿಂಬಿಸುತ್ತದೆ. ಆ ಮೂಲಕ ಮಾನವನ ಬದುಕಿನಲ್ಲಿ ಅಸಮಧಾನ ಶಾಂತಿ ನೀಡಲು ಜ್ಞಾನ ಭಕ್ತಿ ವೈರಾಗ್ಯ ಮುಖ್ಯ ಎಂಬುದನ್ನು ಸೂಚಿಸುತ್ತದೆ. ಇಂತಹ ತತ್ವಪದಗಳನ್ನು ಚೆನ್ನದಾಸರು ಹಾಡುವುದರ ಮೂಲಕ ಜೀವಿಗಳಲ್ಲಿಯೇ ಶ್ರೇಷ್ಠ ಬುದ್ಧಿವಂತದ ಜೀವವೆಂದಿನ್ನಿಸಿಕೊಂಡ ಮಾನವನನ್ನು ಸೂಕ್ತ ದಾರಿಯಲ್ಲಿ ಬದುಕನ್ನು ಸಾಗಿಸಲು ನೆರವಾಗುತ್ತವೆ.

ಪಠ್ಯ ನಾಲ್ಕು

ಏನು ಮಾಡಿದೆ ಕವಿಯ ನೀನು
ನಿನ್ನ ತಿಳಿಯದ ಕೂನವಿಲ್ಲದ ಪದವ ಬರದೆ ||ಪ||
ನಾನು ನೀನೆಂಬ ಭೇದಭಾವದ ಹಿಡಿದು
ಜ್ಞಾನಕ್ಕೆ ಅನ್ಯಾಯ ತಂದ ಬಹಳ ಬೆಂದೆ ||ಅ ಪ||

ಆಚಾರಕೆ ಹೊಡೆದಾಡಿ ಆಡವಿ ಸೇರಿದೆ ಖೋಡಿ
ನೀದೇದೊಹವನು ನಿಜವೆಂದು ನಂಬಿ ನಡೆದೆ
ವಾಬಾಳಶ್ವ ವರಲಿತು ಹಿರಿಯರಿಗೆ ವಾದಿಸಿದೆ
ಗ್ರಾಚಾರ ಸಾಲದು ನಿನಗೆ ತಪ್ಪದು ಭವದ ಬೇಗೆ ||೧||

ವೇದಶಾಸ್ತ್ರ ತರ್ಕಗಳ ಓದಿ ಓದಿ ನೀ ಕವಿಯೆ
ಹಾದಿಕಾಕಾ ಮುಂದೆ ಕುರುಡನಂತೆ ಸಾಗಿ ಹೋದಿ
ನಾದಬಿಂದು ಕಳೆಗಳಿಗೆ ಅತೀತನಾದವನು
ತಾ ದೇವನೆಂದು ತಿಳಿಯೋ ನೀ ಉಳಯೋ ||೨||

ವ್ರತ ನೇಮಗಳ ಮಾಡಿ ಪ್ರತಿಮೆಪೂಜೆಯ ಮಾಡಿ
ಗತಿಯೇನು ಕಂಡೆಯೋ ಕೊನೆಗೆ ನೀನು

ಸುತ್ತಿಗೆ ನಿಲುಕದ ಕೂಡಲೂರೇಶನ ಇನ್ನು
ಮತಿಯಿಂದ ನಂಬು ಜಗದೊಳು ನೀನೆ ಶಂಭು ||೩||

(ಕಡಲೂರು, ೧೯೮೩: ೭೧)

ಈ ಪದ್ಯದ ಭಾವಾರ್ಥವು ಹೀಗಿದೆ:

ವೈಚಾರಿಕ ತತ್ವದ ಅಡಿಯಲ್ಲಿ ಈ ತತ್ವಪದ ರಚನೆಯಾಗಿದೆ. ಕವಿ ಅಥವಾ ತತ್ವಪದಕಾರನು ತನ್ನ ಜೀವನದಲ್ಲಿ ಸ್ವಲ್ಪ ಜಾಗೃತಿ ತಪ್ಪಿದರೆ, ಅದರಿಂದ ಸಮಾಜ ಮೇಲೆ ಉಂಟಾಗುವ ಪರಿಣಾಮದ ಕುರಿತು ಸ್ಥೂಲ ಚಿತ್ರಣ ನೀಡಿದ್ದಾರೆ. ಜ್ಞಾನಿಯಾದವನು. ಸಕಲ ವೇದಶಾಸ್ತ್ರ ಬಲ್ಲವನು ಮೇಲುಕೀಳೆಂಬ ತಾರತಮ್ಯಕ್ಕೆ ತನ್ನ ಮನಸ್ಸನ್ನು ಅರ್ಪಿಸಿದಾಗ ಅವನ ವಿದ್ವತ್ತಿಗೆ, ಪಾಂಡಿತ್ಯಕ್ಕೆ ಬೆಲೆ ಇಲ್ಲದಂತಾಗುತ್ತದೆ. ನೀಚ ಸ್ವಭಾವದ ಮನುಷ್ಯನ ಕೆಲವೊಂದು ಕಟಿಬಂಧಗಳಿಗೆ ಮೇಲು ಕೀಳೆಂಬ ವ್ರತನೇಮಗಳಿಗೆ ಒಳಗಾಗಿ ಕುರುಡನಾಗಿ ಹೋದ.

ಪದ್ಯ ಐದು

ಕನಸಿನ ಪರಿ ಸಂಸಾರಪ್ಪ |
ನಿನ ಮನಸಿಗಿ ಬಂಧನ ಮಾಡಪ್ಪ || ಪ ||

ರೊಕ್ಕ ಗಳಿಸಿದ ಭಾಳಪ್ಪ |
ನಿನ್ನ ಮಕ್ಕಳಿಗಾದಾವು ನಾಳಪ್ಪ |
ಫಕ್ಕನೆ ಬಿದ್ದು ನೀ ಹೋದಪ್ಪ |
ನಿನ್ನ ರೊಕ್ಕ ಮಕ್ಕಳು ಯಾರಪ್ಪ || ೧ ||

ಮಡದಿಯ ಮಾತಿಗೆ ಮೆಚ್ಚಿದಿಯಪ್ಪ |
ಗುರು ನುಡಿ ಕೇಳಂದರ ಎದಿಗಿಚ್ಚಪ್ಪ |
ತೆಲಗಿ ಏರಿತು ಹುಚ್ಚಪ್ಪ |
ಏರಿ ಇಳಿದ ಮೇಲೆ ಕುಂತು ಅತ್ತೆಪ್ಪ

ಅಳದೇ ನಂದರ ಅಳಿಯಪ್ಪ |
ನೀ ತಿಳಿದೇ ನಂದರೆ ತಿಳಿಯಪ್ಪ |
ಗುಡ್ಡದ ತೆಳಿಯಾಕ ಇಳಿಯಪ್ಪ |
ಗುರು ಮಹಾಂತನ ಕೂಡಿ ಮುಕ್ತಿ ಪಡಿಯಪ್ಪ || ೩ ||

(ಕಡಕೋಳ, ೧೯೮೨: ೮)

ಈ ಪದ್ಯದ ಭಾವಾರ್ಥವು ಹೀಗಿದೆ:

ಮನುಷ್ಯ ಬದುಕಿನ ಆಸೆ ಆಕಾಂಕ್ಷೆಗಳ ಕುರಿತಾಗಿ ಈ ತತ್ವಪದ ಸ್ಪಷ್ಟ ಚಿತ್ರಣ ನೀಡುತ್ತದೆ. ಮನುಷ್ಯನ ಮನಸ್ಸು ಚಂಚಲ ಸ್ವಭಾವವುಳ್ಳದ್ದು, ಹೀಗಾಗಿ ಅವನ ಆಸೆಗಳಿಗೆ ಮೇರನೆ ಇಲ್ಲದಂತಾಗಿದೆ. ಬಾಳುತ್ತಿರುವ ಈ ಲೌಕಿಕ

ಪ್ರಪಂಚವನ್ನು 'ಕನಸಿಗೆ' ಹೋಲಿಸಿದ್ದಾರೆ ನಾವು ಏನೆಲ್ಲ ಸಂಪಾದನೆ ಮಾಡಿದರು ಅವೆಲ್ಲ ಕ್ಷಣಿಕ ತೃಪ್ತಿಗೆ ಮಾತ್ರ. ಏಕೆಂದರೆ ಕೊನೆಗೊಮ್ಮೆ ಸಾವನ್ನಪ್ಪಿದ ಮೇಲೆ ಅವು ಯಾವುದು ನಿನ್ನ ಸಂಗಡ ಬರಲಾರವು. ಹೀಗಾಗಿ ನಿನ್ನ ಮನಸ್ಸಿನ ಆಸೆಗಳಿಗೆ ಒಂದು ಲಗಾಮು ಇರಲಿ.

ಪದ್ಯ ಆರು

ಜೋಗೇರು ನಾವು ಜೋಗೇರು
ಸೊಗಸಿನ ವಸ್ತುಗಳ ರಾಗದಿಂಮಾರುವ ||ಪ||
ಬಣ್ಣಬೈಲೊಣಕಿ ಸಣ್ಣ ಭರಣಿ ಗುಳ್ಳಿ
ಭಿನ್ನ ಭಾವಗಳೆಲ್ಲ ಹೊನ್ನಿಲ್ಲದೆ ಮಾರುವ ||೧||

ಷಡ್ವರ್ಗ ಷಣ್ಮುಖಿ ಕಡಗ ಕಂಕಣವನ್ನು
ವಡಬಾಗ್ನಿಯೊಳಗಿನ ಡಬ್ಬಣ ಮಾರುವ ||೨||
ಸಂದ ಬ್ಯಾಳಿಯ ಮಣಿ ನಂದ ಪುರದಲ್ಲಿ ತಂದು
ಒಂದೆ ಬಿಡದೆ ಸೂಜಿ ಕರಿಮಣಿ ಮಾರುವ ||೩||
ಹಾಲುಮಣಿ ಹವಳಸರ ಮೇಲು ಪುಸ್ತಕದ ಕೀಲಿ
ನೆಲೆಯಿಲ್ಲದ ವಸ್ತು ಬೆಲೆಯಿಲ್ಲದೆ ಮಾರುವ ||೪||

ಚಿಲ್ಲರ ಸಾಮಾನು ಎಲ್ಲಾರ ಮಾರಿಕೊಂಡು
ಕೂಡಲೂರೇಶ ಬದುಕಂತ ಹೇಳಿದ ||೫||

(ಕೂಡಲೂರು, ೧೯೮೩: ೭೬)

ಈ ಪದ್ಯದ ಭಾವಾರ್ಥವು ಹೀಗಿದೆ:

ಕೂಡಲೂರು ಬಸವಲಿಂಗ ಶರಣರು ಜೋಗೇರು ನಾವು ಜೋಗೇರು ಎನ್ನುವ ತತ್ವಪದದಲ್ಲಿ ಅಲೌಕಿಕ ಅನುಭೂತಿಯನ್ನು ತುಂಬಿಟ್ಟಿದ್ದಾರೆ. ಜೋಗೇರು ವೃತ್ತಿಯ ಮೂಲಕ ಆಧ್ಯಾತ್ಮಿಕ ಅನುಭವಗಳನ್ನು ಪರಿಚಯ ಮಾಡಿಕೊಡುತ್ತಾರೆ. ಚಿಲ್ಲರ ಸಾಮಾನುಗಳನ್ನು ಮಾರುವಂತಹ ಜೋಗೇರ ವೃತ್ತಿಯನ್ನು ಸಂಕೇತಿಸಿಕೊಂಡು ರೂಪಕವನ್ನಾಗಿ ಬಳಸಿಕೊಂಡು ವ್ಯವಹಾರಿಕ ಮತ್ತು ಪಾರಮಾರ್ಥಿಕ ವಿಚಾರವನ್ನು ಈ ತತ್ವಪದದಲ್ಲಿ ಬಿಚ್ಚಿಡುತ್ತಾರೆ. ಬಣ್ಣ ಬೈಮೋಣಕಿ ಸಣ್ಣ ಬರಣಿ, ಗುಳ್ಳಿ ಭಿನ್ನ ಭಾವಗಳೆಲ್ಲಾ ಹೊನ್ನುಲ್ಲದೆ ಮಾರುವ ಜೋಗೇರು ನಾವು ಜೋಗೇರು ಎನ್ನುತ್ತಾರೆ. ಅಂದರೆ ಯಾವುದೇ ರಾಗದ್ವೇಷಗಳಿಲ್ಲದೆ ಸೋಗಸಿನ ವಸ್ತುಗಳನ್ನು ಮಾರಿ ಪ್ರಪಂಚದೊಡನೆ ವ್ಯವಹಾರಿಸಿ ಪಾರಮಾರ್ಥಿಕ ಸಾಧನೆಯನ್ನು ಗೈಯುತ್ತೇವೆ.

ಷಡ್ವರ್ಗಗಳೆಂದರೆ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಮುಂತಾದ ಷಡ್ ಗುಣಗಳನ್ನು ಮಾರಿ ಷಣ್ಮುಖಿ ಮುದ್ರೆಯನ್ನು ಹಾಕಿ ವಡಬಾಗ್ನಿ ಒಳಗಿನ ಡಬ್ಬಣ ಮಾರುವ ಜೋಗೇರು ನಾವು ಜೋಗೇರು ಎನ್ನುತ್ತಾರೆ. ಮಣಿಪುರ ಕಮಲದಲ್ಲಿ ಇರುವಂತಹ ಕರಿಮಣಿ, ಸೂಜಿ ಒಂದು ಬಿಡದೆ ಮಾರುವಂತಹ ಜೋಗೇರ ನಾವು ಜೋಗೇರು ಹಾಲುಮಣಿ ಹವಳಿಸರ ಮೇಲು ಪುಸ್ತಕದ ಕೀಲ ನೆಲೆಯಿಲ್ಲದ ವಸ್ತು ಬೆಲೆಯಿಲ್ಲದೆ ಮಾರುವ ಜೋಗೇರು ನಾವು ಜೋಗೇರು ಎನ್ನುತ್ತಾರೆ. ಚಿಲ್ಲರೆ ಸಾಮಾನು ಎಲ್ಲಾದರೂ ಮಾರಿಕೊಂಡು ಆಧ್ಯಾತ್ಮಿಕ ಪರಿಶುದ್ಧಿಯನ್ನು ಪಡೆದುಕೊಂಡು ಬದುಕಿ ಬಳ್ಳಾರಿ ಎಂದು ಕೂಡಲರೇಶ ಆಜ್ಞಾಪಿಸುತ್ತಾನೆ.

ಪಠ್ಯ ಏಳು

ಗುರುವಿನ ನೆನಿ ಮನವೆ ನಿರಂತರ |
ಗುರುವಿನ ನೆನಿ ಮನವೆ |
ಗುರುವಿನ ನೆನಿ ನಿನ್ನ ನಿಜವನು ತಿಳಿದು
ಹರುಷದಿಂದ ಬಹು ಜನ್ಮವ ಕಳೆದು ‖ ಪ ‖

ತಿರುದ್ವಾರ ಮುಚ್ಚಿ ಸರಸಿಜ |
ಮಧ್ಯದಿ ಸ್ಥಿರದೃಷ್ಟಿಯನಿಡು |
ಕೋಟಿ ಅರುಣರುಚಿ ಸ್ಥಿರ |
ಚಿತ್ತದಿ ನೋಡು ಇದನು ‖ ೧ ‖

ಆರು ಮೂರು ಚಕ್ರ ಆರು ಮೂರು |
ಲಿಂಗದ ನೆಲೆಯ ಸಾರ ನಾಲ್ಕು ದಳದೊಳು |
ಒಂದು ದಳನಾದ ಚಾರು ತರಣ |
ಸದ್ಗುರುವಿನ ನೆನಿ ಮನವೇ ‖ ೨ ‖

ಜಗನ್ಮಿಥ್ಯವೆಂದು ನಿಜತರ ಬ್ರಹ್ಮ ಸತ್ಯವೆಂದು |
ಝಗ ಝಗಿಸುವ ಮಹಾ |
ಬೆಳಗಿನೊಳಾತ್ಮನ ರಾಗದಿಂದ ತಿಳಿಸಿದ |
ವರಗುರು ಮಹಾಂತನ ನೆನಿ ಮನವೆ ‖ ೩ ‖

(ಕಡಕೋಳ, ೧೯೮೨: ೧೨)

ಈ ಪದ್ಯದ ಭಾವಾರ್ಥವು ಹೀಗಿದೆ:

ತತ್ವಪದಕಾರನು ಈ ತತ್ವಪದದಲ್ಲಿ ಆಧ್ಯಾತ್ಮಿಕ ಸಾಧನೆಗೆ ಏನು ಮುಖ್ಯ ಎಂಬುದನ್ನು ತಿಳಿಸುತ್ತಾ, ಅದು ಗುರುವಿನ ಮೂಲಕ ಸಾಧಿಸಬಹುದೆಂಬುದನ್ನು ತಿಳಿಸುತ್ತಾನೆ. ಪ್ರತಿಯೊಬ್ಬರಿಗೆ ಯಾವುದೇ ಸಾಧನೆ ಮಾಡಬೇಕಾದರೆ ಗುರುವಿನ ಮಾರ್ಗದರ್ಶನ ಅವಶ್ಯಕ. ಅದಕ್ಕಾಗಿ ಮೊದಲು ಗುರುವನ್ನು ನೆನೆಯಬೇಕು, ನಂತರ ನಿನ್ನನು ನೀನು ಯಾರೆಂಬುದನ್ನು ತಿಳಿಸಬೇಕೆಂಬುದನ್ನು ಹೇಳುತ್ತಾನೆ. ಹಾಗೇ ತನ್ನಲ್ಲಿರುವ ಕಲ್ಮಶವನ್ನು ದೂರ ಮಾಡಿ, ಸ್ಥಿರ ಚಿತ್ತದಿಂದ ಏಕಚಿತ್ತದಿಂದ ಗುರುವಿನ ಅಂದರೆ ಆ ಬ್ರಹ್ಮನಲ್ಲಿ ಲೀನವಾಗಬೇಕೆಂದು ತಿಳಿಸುತ್ತಾನೆ. ಏಕಚಿತ್ತದಿಂದ ಗುರುವನ್ನು ನೆನೆದು ಅನುಭವವನ್ನು ಪಡೆಯಬೇಕೆಂಬ ಆಶೆ ಜಗನಿತ್ಯವೆಂದು ತಿಳಿದು ಅದೇ ಸತ್ಯವೆಂದು ತಿಳಿದುಕೊಂಡು ಗುರುಬ್ರಹ್ಮನಲ್ಲಿ ಶರಣಾದಾಗ ಮಾತ್ರ ಯಾವುದೇ ಸಾಧನೆ ಮಾಡಬಹುದು. ಒಟ್ಟಾರೆ ಅಧ್ಯಾತ್ಮ ಸಾಧನೆಗಾಗಿ, ಗುರುವಿನದರ್ಶನ, ಆತನ ಮಾರ್ಗದರ್ಶನ, ಕರುಣೆ ಇದ್ದಾಗ ಯಾವುದೇ ಅಡ್ಡಿ ಆತಂಕಗಳಿಂದ ದೂರನಾಗಿ ತನ್ನ ಜೀವನ ಬೆಳಗುತ್ತದೆ.

ಪದ್ಯ ಎಂಟು

ಧನಗಳಿಸಬೇಕು ಇಂಥಾದ್ದು, ಈ
ಜನರಿಗೆ ತಿಳಿಯದಂಥಾದ್ದು |
ಅನುದಿನ ಅಜಹರಿ ಮನು ಮುನಿಗಳಿಗೆಲ್ಲ
ಹೌದು ಹೌದು ಹೌದೆಂಬಂಥಾದ್ದು ‖ ಪ ‖
ಕೊಟ್ಟರೆ ಹೋಗದಂಥಾದ್ದು | ಅದು.
ಇಟ್ಟರೆ ತೀರದಂಥಾದ್ದು |
ಕಟ್ಟಿದ ಗಂಟು ಬೈಮೊಳಗಿಟ್ಟರೆ |
ಮುಟ್ಟಲಿ ಬಾರದಂಥಾದ್ದು ‖ ೧ ‖
ಕರ್ಮ ಬಾರದಂಥಾದ್ದು | ಅದರ
ಮರ್ಮ ತೋರಾದಂಥಾದ್ದು
ನಿರ್ಮಳವಾದ ಮನಕೆ | ದಾನ
ಧರ್ಮವನು ಮಾಡುವಂಥಾದ್ದು ‖ ೨ ‖
ಮರವಿಗೆ ಬಾರದಂಥಾದ್ದು | ನಿಜ
ಅರುವಿನಲ್ಲಿ ಇರುವಂಥಾದ್ದು |
ಮರವು ಕಳದು ಶ್ರೀಗುರು | ಮಹಾಂತೇಶನ
ಕರುಣದಿಂದ ಕಾಯುವಂಥಾದ್ದು. ‖ ೩ ‖

(ಕಡಕೋಳ, ೧೯೮೨: ೧೨)

ಈ ಪಠ್ಯದ ಭಾವಾರ್ಥವು ಹೀಗಿದೆ:

ಈ ತತ್ವಪದದಲ್ಲಿ ತತ್ವಪದ ರಚನೆಕಾರರಾದ ಕಡಕೋಳ ಮಡವಾಳೇಶ್ವರ ಅವರು ಮಾನವನಿಗೆ ಲೌಕಿಕ ಸಂಪತ್ತಿಗಿಂತ ಅಲೌಕಿಕ ಸಂಪತ್ತು ಶಾಶ್ವತವೆಂಬುದನ್ನು ತಿಳಿಸುತ್ತಾರೆ. ತತ್ವಪದಕಾರರು ತಮ್ಮ ತತ್ವಪದಗಳಿಂದ ಜನರನ್ನು ಎಚ್ಚರಿಸುತ್ತ, ಇಂಥ ಅನೇಕ ತತ್ವಪದಗಳನ್ನು ಜನರಿಗೆ ಅರಿವು ಮೂಡಿಸಲು ಹಾಡಿದಂತವು. ಇಲ್ಲಿ 'ಧನವುಗಳಿಸಬೇಕು' ಎಂದು ಹೇಳುತ್ತಾನೆ, ಅದು ಜನರಿಗೆ ಕಾಣಿಸಲಾರದಂತಹದ್ದು ಎಂದು ಹೇಳುತ್ತಾನೆ. ಶಾಶ್ವತವಾಗಿ ಉಳಿಯುವಂತ ಪ್ರತಿಯೊಬ್ಬರ ಮನದಲ್ಲೆ ಉಳಿಯುವಂತ ಕಾರ್ಯಗಳನ್ನು ಮಾಡಿದಾಗ ಅದು ಶಾಶ್ವತವಾಗಿ ಉಳಿದು ಪ್ರತಿಯೊಬ್ಬರು ನೆನೆದಾಗ ಮಾತ್ರ ಅದು ಸಾರ್ಥಕವಾಗುತ್ತದೆ. ಒಟ್ಟಾರೆ ಮಾನವನು ಜ್ಞಾನ ಸಂಪತ್ತನ್ನು ಗಳಿಸಬೇಕೆಂಬ ಆಶೆ. ಅದು ಯಾರಗೆ ಎಷ್ಟು ದಾರಿಯರದರೂ ಸಹ ಅದು ಬತ್ತಿಹೋಗದಂತಹದ್ದು, ಒಳ್ಳೇ ಸಚ್ಚಾರಿತ್ರ್ಯದ, ಒಳ್ಳೇ ಗುಣದಿಂದ, ಸತ್ಯದಿಂದ ತನ್ನ ಜೀವನವನ್ನು ಸಾಗಿಸುವವನು ಎಂದಿಗೂ ಶಾಶ್ವತವಾಗಿ ಪ್ರತಿಯೊಬ್ಬರ ಮನದಲ್ಲಿ ಉಳಿಯುತ್ತದೆ. ಆದರೆ ತಾನು ಎಷ್ಟೇ ಸಂಪತ್ತು ಗಳಿಸಿದರೂ ಸಹ ಅದು ಇರತನಕ ಮಾತ್ರ ಸ್ಥಾನ ಇರುವುದು. ಆದರೆ ತತ್ವಪದಕಾರರು ಹೇಳಿದ ಸಂಪತ್ತು ಮಾತ್ರ ಶಾಶ್ವತವಾಗಿ ಉಳಿಯುವಂತಾಹದ್ದಾಗಿರುತ್ತದೆ. ಆ ಸಂಪತ್ತನ್ನು ಗಳಿಸಿಕೊಂಡವನು ಶ್ರೀ ಗುರು ಮಹಾಂತೇಶನ ದಯದಿಂದ ಅದು ಮರೆಯಲಾರದೆ ಹಾಗೆ ಉಳಿದು ಕಾಯುವಂತಹದು.

೨.೨. ವಸ್ತು ವಿಷಯ ಮತ್ತು ಚಾರಿತ್ರಿಕತೆ

ಯಲಬುರ್ಗಾ ಪ್ರದೇಶದಲ್ಲಿರುವ ಚೆನ್ನದಾಸರ ಸಮುದಾಯವು ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿರುವ ಸ್ವರವಚನ ಹಾಗೂ ಏಕತಾರಿ ತತ್ವಪದಗಳನ್ನು ತಮ್ಮ ವೃತ್ತಿಬದುಕಿನಲ್ಲಿ ತೊಡಗಿಸಿಕೊಂಡು ವಿವಿಧ ಸಂಗೀತದ ಪರಿಕರಗಳೊಂದಿಗೆ ರಾಗಬದ್ದವಾಗಿ ಹಾಡುತ್ತಾ ಸಮಾಜದಲ್ಲಿರುವ ಅನಿಷ್ಠ ಪದ್ಧತಿಗಳನ್ನು ಹೋಗಲಾಡಿಸಲು ಶ್ರಮಿಸುವಂತಹ ಸಮುದಾಯವಾಗಿದೆ. ಇವರು ಹಾಡುವ ತತ್ವಪದಗಳಲ್ಲಿ ತಾತ್ವಿಕತೆ, ಧಾರ್ಮಿಕತೆ, ನೈತಿಕತೆ, ಸಾಮಾಜಿಕ ವಿಡಂಬನೆ, ವೈಚಾರಿಕತೆ, ಆರ್ಥಿಕತೆ, ಕೌಟುಂಬಿಕತೆ ಹಾಗೂ ಡಾಂಬಿಕ ವಿಚಾರಗಳಿಗೆ ಸಂಬಂಧಿಸಿದಂತಹ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಊರಿನಲ್ಲಿ ಮನೆ ಮನೆಗೆ ತೆರುಳುತ್ತಾ ಭಿಕ್ಷೆ ಬೇಡುತ್ತ ಹಾಡುತ್ತಾರೆ. ಇಂತಹ ಏಕತಾರಿ ತತ್ವಪದಗಳನ್ನು ಹಾಡುವವರು ಈ ಸಮುದಾಯದಲ್ಲಿ ಸಾಕಷ್ಟು ಜನರು ಇದ್ದಾರೆ. ಅಂತಹವರಲ್ಲಿ ಪ್ರಮುಖರೆಂದರೆ ನವೆಂಬರ್ ೧,೨೦೦೪ ರಲ್ಲಿ ರಾಜ್ಯ ಪ್ರಶಸ್ತಿ ವಿಜೇತರಾದ ಮಾರೆಪ್ಪ ದಾಸರ, ಅಂಜನಪ್ಪ ಮಾರೆಪ್ಪ ದಾಸರ, ಯಮನಪ್ಪ ರಾಜಪ್ಪ ಚನ್ನದಾಸರ, ಮಾರೆಪ್ಪ ಹುಸೇನಪ್ಪಗಾರಿ, ಇವರೆಲ್ಲರೂ ಯಲಬುರ್ಗಾ ಪ್ರದೇಶದ ವ್ಯಾಪ್ತಿಯಲ್ಲಿ ಬರುವ ತುಮ್ಮರ ಗುದ್ದಿ ಗ್ರಾಮದವರು ಇವರಲ್ಲಿ ಮಾರೆಪ್ಪ ದಾಸರ ಅಂಜನಪ್ಪ ಮಾರೆಪ್ಪ ದಾಸರವರು ಈಗ ಯಲಬುರ್ಗಾದಲ್ಲಿ ತಮ್ಮ ಕುಟುಂಬದ ನಿರ್ವಹಣೆಯನ್ನು ನಿಭಾಯಿಸುವ ಉದ್ದೇಶದಿಂದ ಸುಮಾರು ಹತ್ತು ವರ್ಷಗಳಿಂದ ಯಲಬುರ್ಗಾದ ಸರಕಾರಿ ಬಸ್ ತಂಗುದಾಣದ ಪಕ್ಕದ ಸ್ಥಳದಲ್ಲಿ ತಮ್ಮ ಸಾಂಪ್ರದಾಯಕ ಗುಡಿಸಲುಗಳನ್ನು ನಿರ್ಮಿಸಿಕೊಂಡು ವಾಸಿಸುತ್ತಿದ್ದಾರೆ. ಈ ಪ್ರದೇಶದ ಇನ್ನಿತರ ತತ್ವಪದಕಾರರೆಂದರೆ ಲಿಂಗನ ಬಂಡಿ ಗ್ರಾಮದಲ್ಲಿ ನೆಲೆಸಿರುವ ದುರಗಪ್ಪ ಭರಮಪ್ಪ ಚೆನ್ನದಾಸರ, ತಿಮ್ಮಣ ಮುದಕಪ್ಪ ಚೆನ್ನದಾಸರ, ಹನುಮಂತಪ್ಪ

[illegible]

ಹನುಮಪ್ಪ ಚೆನ್ನದಾಸರ ಪಟಪರಪಿ ಗ್ರಾಮದಲ್ಲಿರುವ ತತ್ವಪದ ಹಾಡುಗಾರೆಂದರೆ, ದುರಗಪ್ಪ ಹನುಮಂತಪ್ಪ ಗಾರಿ, ಯಲ್ಲಪ್ಪ ಮಾರೆಪ್ಪ ಮಾಡಬೇನು, ಗುಂಡಪ್ಪ ಮಾರೆಪ್ಪ ಮಾಡಬೇನು ಮೊದಲಾದವರು ತತ್ವಪದಗಳನ್ನು ಹಾಡುವಂತವರಾಗಿದ್ದಾರೆ. ಆದರೆ ಚೆನ್ನದಾಸರ ಸಮುದಾಯದವರು ಇಂತಹ ತತ್ವಪದಗಳನ್ನು ಹಾಡುವುದನ್ನು ಎಂದಿನಿಂದ ಪ್ರಾರಂಭಿಸಿದರು ಎಂಬ ಪ್ರಶ್ನೆ ಇಲ್ಲಿ ಬರುತ್ತದೆ?. ಅಂತಹ ಪ್ರಶ್ನೆಗೆ ಉತ್ತರ ಹುಡುಕುವುದು ಕಷ್ಟದಾಯಕವಾದರೂ ಸಹ ಕೆಲವೊಂದು ಆಧಾರಗಳ ಸಹಾಯದಿಂದ ಚಾರಿತ್ರಿಕವಾಗಿ ಚೆನ್ನದಾಸರ ಸಮುದಾಯದವರು ತತ್ವಪದಗಳ ವೃತ್ತಿಗಾಯಕ ವೃತ್ತಿಯನ್ನು ಪ್ರಾರಂಭಿಸಿದ್ದು ಸುಮಾರು ೧೫ ನೇ ಶತಮಾನದ ಕಾಲಾವಧಿಯಲ್ಲಿ ಎಂದು ಹೇಳಲಾಗುತ್ತದೆ. ೧೫ನೇ ಶತಮಾನದ ವಿಜಯನಗರ ಸಾಮ್ರಾಜ್ಯದ ಆಶ್ರಯ ಪಡೆದ ಹರಿದಾಸ ಪರಂಪರೆಯು ಜಾತಿಹೀನ ಸಮುದಾಯಗಳಿಗೆ ಧರ್ಮದೀಕ್ಷೆ ನೀಡಿ ಸಾಂತ್ವನ ನೀಡಿತು. ತುಳಿತಕ್ಕೊಳಗಾದ, ಅಪಮಾನಕ್ಕೊಳಗಾದ ಎಲ್ಲಾ ಸಮುದಾಯಗಳು ವೈಷ್ಣವೀಕರಣಕ್ಕೊಳಗಾಗಿ ಮಾನ್ಯತೆ ಪಡೆದುಕೊಳ್ಳತೊಡಗಿದವು. ಅವುಗಳಂತೆ ಚೆನ್ನದಾಸರ ಮೂಲ ಸಮುದಾಯವೂ ಹರಿದಾಸ ದೀಕ್ಷೆ ಸ್ವೀಕರಿಸಿತು.

ಹರಿದಾಸರಿಗೆ ವೈದಿಕ ಧರ್ಮವನ್ನು ಉಳಿಸಬೇಕಾಗಿತ್ತು. ಹರಿದಾಸ ತತ್ವವಾದಿಗಳ ಪ್ರಮುಖ ಉದ್ದೇಶ ಧರ್ಮಪ್ರಸಾರ, ಹನ್ನೆರಡನೆಯ ಶತಮಾನದ ಶರಣ ಚಳುವಳಿ ಇಡೀ ವೈದಿಕ ವ್ಯವಸ್ಥೆಯ ವಿರುದ್ಧದ ಆಂದೋಲನವಾಗಿತ್ತು. ಇಡೀ ನಾಡನ್ನೇ ತನ್ನ ಉದಾತ್ತ ತತ್ವಗಳಿಂದ ಧಾರ್ಮಿಕ ಪಥದಲ್ಲಿ ಕೊಂಡೊಯ್ದು, ದೇಶ ಭಾಷೆಯಲ್ಲಿ ಭಕ್ತಿ ಪ್ರಸಾರ ಮಾಡುವ ಮೂಲಕ ಸಮಗ್ರ ಕನ್ನಡ ಜನತೆಯನ್ನು ಮುಟ್ಟಿದ ಕರ್ನಾಟಕದ ಮೊಟ್ಟಮೊದಲ ಧಾರ್ಮಿಕ ಪಂಥ ಎಂದು ಹೆಸರಾಗಿತ್ತು. ವೀರಶೈವ ಧರ್ಮ ವೇದ ಪ್ರಾಮಾಣ್ಯವನ್ನು ಧಿಕ್ಕರಿಸಿದ್ದರಿಂದ ಇಕ್ಕಟ್ಟಿನಲ್ಲಿದ್ದ ವೈಧಿಕ ಧರ್ಮಿಯರಿಗೆ ಅದನ್ನು ಅರಿತುಕೊಳ್ಳುವುದು ಕಷ್ಟವಾಯಿತು. ಆದ್ದರಿಂದ ತಮ್ಮ ಧರ್ಮದಲ್ಲೇ ಆಂತರಿಕ ಬದಲಾವಣೆಗಾಗಿ ಕಾದು ಕುಳಿತು ಚಡಪಡಿಸುತ್ತಿದ್ದ ವೈದಿಕ ಧರ್ಮೀಯರಿಗೆ ಬಹುಶಃ ಮಧ್ವಾಚಾರ್ಯರ ದ್ವೈತ ಸಿದ್ಧಾಂತ ಆಲಂಬನೆಯಾಗಿ ದೊರೆತಿರಬೇಕು. ಸ್ವತಃ ಆಚಾರ್ಯರೇ ಮೂವತ್ತೇಳು ಗ್ರಂಥಗಳನ್ನು ರಚಿಸಿ ತಮ್ಮ ತತ್ವವನ್ನು ಬಿತ್ತರಿಸಿದ್ದಾರೆ. ಆದರೆ ಇಡೀ ಕರ್ನಾಟಕದ ಜನಮಾನಸದಲ್ಲಿ ವಚನ ಚಳುವಳಿಯ ತತ್ವಸಿದ್ಧಾಂತ ಮತ್ತು ವಚನ ಸಾಹಿತ್ಯ ಸೂರೆಗೊಂಡಿತ್ತು. ಇಂಥ ಸಂದರ್ಭದಲ್ಲಿ ವೈದಿಕ ಧರ್ಮದ ಪ್ರಚಾರ ಹರಿದಾಸ ಪಂಥಕ್ಕೆ ದೊಡ್ಡಸವಾಲಾಯಿತು. ಜೊತೆಗೆ ಶರಣ ಚಳುವಳಿ ದುಡಿವ ಮತ್ತು ಅಸ್ಪೃಶ್ಯ ಸಮುದಾಯಗಳಿಗೆ ಧ್ವನಿಯಾಗಿ ವೈದಿಕ ವ್ಯವಸ್ಥೆಯ ಕರ್ಮಠತೆಗಳನ್ನೆಲ್ಲ ಬಯಲು ಮಾಡಿತ್ತು. ಸಾಮಾನ್ಯ ಜನತೆ ಬಹುತೇಕ ಅಸ್ಪೃಶ್ಯ ಸಮುದಾಯಗಳೆಲ್ಲ ವೀರಶೈವ ಧರ್ಮದಲ್ಲಿ ವಿಲೀನಗೊಂಡಿದ್ದವು. ಇಂಥ ಸಂದಿಗ್ಧ ಸಂದರ್ಭದಲ್ಲಿ ವೈದಿಕ ಧರ್ಮವು ವೇದೋಪನಿಷತ್ತುಗಳನ್ನು ಹೇಗೆ ಪ್ರಚಾರ ಮಾಡಬೇಕು. ಯಾವ ಸಮುದಾಯಗಳನ್ನು ಬಳಸಿಕೊಳ್ಳಬೇಕು ಎಂಬ ದ್ವಂದ್ವದಲ್ಲಿತ್ತು. ಹಾಗಾಗಿ ವೈದಿಕ ಧರ್ಮವು ಅಂದರೆ ಹರಿದಾಸ ಪಂಥವು ವೇದ ಉಪನಿಷತ್ತುಗಳನ್ನು ರಾಮಾಯಣ, ಮಹಾಭಾರತ, ಪುರಾಣಗಳ ಜೊತೆ ಜೊತೆಗೆ ಜನಗಳ ಮುಂದೆ ಪ್ರಚಾರ ಮಾಡಲು ಮುಂದಾಯಿತು.

ಶ್ರೀ ಮಧ್ವಾಚಾರ್ಯರು ವಿಷ್ಣು ಸರ್ವೋತ್ತಮತ್ವವನ್ನು ಪ್ರತಿಪಾದಿಸುವ ವೇದೋಪನಿಷತ್ತುಗಳೊಂದಿಗೆ ರಾಮಾಯಣ ಮಹಾಭಾರತ ಹಾಗೂ ಇತರ ಪುರಾಣಗಳನ್ನು ಅಂಗೀಕರಿಸಬಹುದಾಗಿ ಭಾರತ ತಾತ್ಪರ್ಯನಿರ್ಣಯದಲ್ಲಿ

[illegible]

ಪ್ರಾರಂಭದಲ್ಲಿಯೇ ಸ್ಪಷ್ಟಪಡಿಸಿರುತ್ತಾರೆ. ಅದಕ್ಕನುಗುಣವಾಗಿ ಹರಿದಾಸರು ವೇದೋಪನಿಷತ್ತುಗಳೊಂದಿಗೆ ರಾಮಾಯಣ, ಮಹಾಭಾರತ, ಭಾಗವತ ಮತ್ತು ಇತರ ಪುರಾಣಗಳನ್ನು ತಮ್ಮ ವಿಷಯ ಸಮರ್ಥನೆಗೆ, ಭಕ್ತಿ ಪ್ರಸಾರಕ್ಕೆ ಮಾಧ್ಯಮಗಳಾಗಿ ಬಳಸಿಕೊಂಡಿದ್ದಾರೆ. ಅಲ್ಲದೆ ಹರಿದಾಸರು ಹರಿಯ ಅವತಾರಗಳನ್ನು ಒಪ್ಪಿಕೊಂಡ ವಿಷ್ಣು ಪಂಥಿಯರು, ಅದರಲ್ಲೂ ಹನಮನಿಗೆ ಗುರುಸ್ಥಾನ ಕೊಟ್ಟಿರುವ ದ್ವೈತಿಗಳು, ಆಚಾರ್ಯರ ಹನುಮ ಭೀಮ ಮಧ್ವ ಅವತಾರತ್ರಯದಲ್ಲಿ ನಂಬಿಕೆಯಿರುವುದರಿಂದ ಹರಿಯ ರಾಮಾವತಾರದ ಕತೆಯೂ, ಹನುಮನ ಸಾಹಸದ ಪ್ರತೀಕವೂ ಆಗಿರುವ ರಾಮಾಯಣವನ್ನು ಹರಿದಾಸರು ಸ್ವೀಕರಿಸಿದ್ದಾರೆ. ಪಾಂಡವರ ಆರಾಧ್ಯ ದೈವವಾದ ಶ್ರೀಕೃಷ್ಣನ ಕತೆ ಹಾಗೂ ಆಚಾರ್ಯರ ದ್ವಿತೀಯ ಅವತಾರವಾದ ಭೀಮನು ಶೌರ್ಯ ಪರಾಕ್ರಮಗಳ ಪ್ರತೀಕವಾಗಿರುವ ಮಹಾಭಾರತ ಪ್ರಸಂಗಗಳು ದಾಸರ ಮನಸೆಳೆದಿವೆ. ಭಾಗವತವಂತೂ ಸಾಕ್ಷಾತ್ ಶ್ರೀ ಹರಿಯ ಲೀಲಾ ಕಥನವೇ ಆಗಿರುವುದರಿಂದ ಹರಿದಾಸರಿಗೆ ಅದರಿಂದ ಅಪಾರವಾದ ಸಾಮಗ್ರಿ ದೊರೆತಿದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಮೊದಲೇ ಪ್ರಸ್ತಾಪಿಸಿರುವಂತೆ ಈ ಅಧ್ಯಾತ್ಮಕ ಕೃತಿಗಳ ಹಿನ್ನೆಲೆಯಲ್ಲಿ ಏನನ್ನು ಹೇಳಿದರೂ ಅದು ಜನಸಾಮಾನ್ಯರನ್ನು ನೇರವಾಗಿ ತಲುಪುತ್ತದೆ. ಹೀಗೆ ಜನತೆಯ ಪುರಾಣಗಳ ಬಗೆಗಿನ ಮಾನಸಿಕ ಸಿದ್ಧತೆಯನ್ನು ಹರಿದಾಸರು ತಮ್ಮ ಪ್ರಸಾರದ ಉಪದೇಶದ ಸಶಕ್ತ ಮಾಧ್ಯಮವನ್ನಾಗಿ ದುಡಿಸಿಕೊಂಡಿದ್ದಾರೆ.

ಈ ಎಲ್ಲ ವಿಷಯಗಳನ್ನು ಜನಸಾಮಾನ್ಯರ ಮುಂದೆ ಹೋಗಿ ಬಿತ್ತರಿಸಲು ಹಲವು ಅಲೆಮಾರಿ ಸಮುದಾಯಗಳ ಕಲಾವಿದರನ್ನೇ ಈ ವೈದಿಕ ಮತವು ಬಳಸಿಕೊಂಡಿತು. ಹಾಡುವ, ಆಟವಾಡುವ, ನರ್ತಿಸುವ ದಾಸ ಸಮುದಾಯವನ್ನು ಈ ಮತವು ಬಳಸಿಕೊಂಡಿತು. ಅಲ್ಲದೆ ಜಾತಿಯ ಅಪಮಾನಕ್ಕೆ ತುತ್ತಾದ ಈ ದಾಸ ಸಮುದಾಯಗಳಿಗೆ ತಮಗೊಂದು ಧರ್ಮದ ನೆಲೆ ಬೇಕಾಗಿತ್ತು. ಹಾಗೆಯೇ ಭಿಕ್ಷೆ ಬೇಡುವುದರ ಬದಲಾಗಿ ಒಂದು ಜನಪ್ರಿಯ ಧರ್ಮದ ಧಾರ್ಮಿಕ ವಿಧಿಯ ಮೂಲಕ ಧರ್ಮ ಸೂಚಿತ ಸಂಕೇತಗಳನ್ನಾಧರಿಸಿ ಭಿಕ್ಷೆ ಬೇಡುವುದರಿಂದ ಅದಕ್ಕೊಂದು ಘನತೆ ಬರುತ್ತದೆ. ದಾನಿಗಳು ಗೌರವದಿಂದ ಕಾಣುತ್ತಾರೆ. ಹಾಗಾಗಿ ಇವರು ವೈಷ್ಣವ ಧರ್ಮ ಸ್ವೀಕರಿಸಿ ಭಿಕ್ಷುಕ ವೃತ್ತಿಗಿಳಿದರು. ಅದಕ್ಕಾಗಿ ಅವರು ವೈಷ್ಣವ ಧರ್ಮ ಸ್ವೀಕರಿಸಿ ಹರಿದಾಸ ಪಂಥ ಸೇರಿ ಹರಿದಾಸರೆನಿಸಿಕೊಂಡರು. (ಹಿಮ್ಮಡಿ, ೨೦೦೮: ೪೭).

ಹೀಗೆ ಚೆನ್ನದಾಸರು ತತ್ವ ಪದಗಳನ್ನು ಧರ್ಮ ಪ್ರಸಾರಕ್ಕಾಗಿ ಉಳಿಸಿಕೊಳ್ಳುವ ಉದ್ದೇಶವಿಟ್ಟುಕೊಂಡು ಹಾಡಲು ಪ್ರಾರಂಭಿಸಿದ್ದರ ಪರಿಣಾಮ ಮುಂದೆ ತತ್ವಪದಗಳನ್ನ ಹಾಡುವದನ್ನು ವೃತ್ತಿಯನ್ನಾಗಿ ಮಾಡಿಕೊಂಡು ತತ್ವಪದಗಳ ವೃತ್ತಿಗಾಯಕರೆನಿಸಿಕೊಂಡರು. ಇಂಥ ಚೆನ್ನದಾಸರ ಸಮುದಾಯದಲ್ಲಿ ಕೆಲವರು ತಂಬೂರಿ (ಏಕತಾರಿ) ಯನ್ನು ಮತ್ತೆ ಕೆಲವರು ದಂಡಿಗೆಯನ್ನು ನುಡಿಸಿ ಇಂಪಾಗಿ ಹಾಡುತ್ತ ಬಿಕ್ಷೆ ಬೇಡುತ್ತಿದ್ದರು. ಜೊತೆಯಲ್ಲಿ ಕಾಲಲ್ಲಿಯ ಗಜ್ಜೆ, ಕೈ ಚಿಟಿಕೆ ಸ್ವರಗಾನಕ್ಕೆ ಮೆರಗು ತರುತ್ತಿತ್ತು. ಇನ್ನು ಕೆಲವರು ನರ್ತನ ಗಾಯನದಿಂದ ಬಯಲಾಟದ ಪ್ರಸಂಗಳನ್ನು ಅಭಿನಯಿಸಿ ಹೊಟ್ಟೆ ಹೊರೆಯುತ್ತಿದ್ದರು. ಕೇಳುಗ ಜನರನ್ನು ಈ ಚೆನ್ನದಾಸರ ಸಮುದಾಯದವು ಮಂತ್ರ ಮುಗ್ದರನ್ನಾಗಿಸುತ್ತಿದ್ದರು. ಇಂಥ ಜನಾನುರಾಗಿ ಕಲೆ ಮತ್ತು ಕಲಾವಿದರನ್ನು ಧರ್ಮ ಪ್ರಸಾರಕ್ಕಾಗಿ ಹರಿದಾಸ ಪಂಥದವರು ಬಳಸಿಕೊಂಡರು. ಅಂದಿನಿಂದ ಪ್ರಾರಂಭವಾದ ಈ ಒಂದು ತತ್ವ ಪದಗಳ ಹಾಡುವಿಕೆಯ ವೃತ್ತಿ ಇಂದು ಸಹ ಈ ಸಮುದಾಯದಲ್ಲಿರುವ ಕೆಲವರು ನಿರಂತರವಾಗಿ ತಮ್ಮ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ.

ಪ್ರಾರಂಭದಲ್ಲಿ ವಿಜಯನಗರ ಅರಸರ ಪ್ರೋತ್ಸಾಹದಿಂದ ಚೆನ್ನದಾಸರು ತಮ್ಮ ಕುಟುಂಬ ನಿರ್ವಹಣೆಯನ್ನು ಮಾಡಿದರು. ಆದರೆ ತದನಂತರ ರಾಜಕೀಯ ಬೆಳವಣಿಗೆಯಲ್ಲಿ ಏರುಪೇರುಗಳಾದರೂ ಸಹ ಎದೆಗುಂದದೆ ಸಮಾಜದಲ್ಲಿರುವ ಅನಿಷ್ಟ ಸಂಪ್ರದಾಯ ಹಾಗೂ ಮೌಢ್ಯಗಳನ್ನು ತತ್ವಪದಗಳನ್ನು ಹಾಡುವದರ ಮೂಲಕ ಹೋಗಲಾಡಿಸಲು ಪ್ರಯತ್ನಿಸಿದರು.

೨.೩. ಚೆನ್ನದಾಸರ ಭಾವನೆಗಳು

೧೫ನೇ ಶತಮಾನದಿಂದ ೨೦ನೇ ಶತಮಾನದವರೆಗೆ ರಚನೆಗೊಂಡ ಬಹಳ ಪ್ರಧಾನವಾದ ಸಾಹಿತ್ಯ ರೂಪಗಳೆಂದರೆ ಈ ತತ್ವಪದ ಹಾಗೂ ಸ್ವರವಚನಗಳಾಗಿವೆ. ಇಂತಹ ಸಾಹಿತ್ಯವನ್ನು ಚೆನ್ನದಾಸರು ಇಂದಿನ ಕಾಲಘಟ್ಟದಲ್ಲಿ ಹಲವು ಸಾಧನಗಳನ್ನು ಬಳಸಿಕೊಂಡು ಭಾವ ಪೂರ್ವಕವಾಗಿ ರಾಗ, ತಾಳ, ಲಯಬದ್ಧವಾಗಿ ಹಾಡುವುದರ ಮೂಲಕ ಇಡೀ ಸಮಾಜದ ಭಾವುಕ ಸಹೃದಯರನ್ನು ಅವರತ್ತ ಸೆಳೆದುಕೊಂಡಿದ್ದಾರೆ.

ಭಾವ ಎಂಬ ಪದವು ಸಂಸ್ಕೃತದ ಮೂಲವಾಗಿದ್ದು, ಭಾವವೆಂದರೆ ಮನಸ್ಸು ಎಂದರ್ಥ. ಮಾನವನ ಜೀವನ ಅನೇಕ ಕಷ್ಟಕೋಟಲೆಗಳ ಸರಮಾಲೆಯಾಗಿದೆ. ಮಾನವ ಈ ಭವದ ಜಂಜಾಟದಲ್ಲಿ ಬಿದ್ದು ತನ್ನ ಮನಸ್ಸಿಗೆ ಕ್ವಚಿತ್ ಶಾಂತಿ ನೆಮ್ಮದಿ ಸಮೃದ್ಧಿ ಇಲ್ಲದಂತೆ ಮಾಡಿಕೊಂಡಿದ್ದಾನೆ. ಇಂತಹ ಮಾನವನ ಅಸ್ಥಿಮಿತತೆಯ ಬದುಕನ್ನು ತಮ್ಮ ಭಾವಪೂರ್ವಕವಾದ ತತ್ವಪದಗಳನ್ನು ಹಾಡುವುದರಿಂದ ಆತ್ಮಶಾಂತಿ, ನೆಮ್ಮದಿಯ ತಾಣವಾಗಿ ಮಾಡಿದ್ದಾರೆ. ಮಾನವನ ಸರ್ವಮನೋರೋಗಗಳಿಗೂ ಮದ್ದೆಂದರೆ ಸಂಗೀತ ಜ್ಞಾನವಾಗಿದೆ. ಅಂತಹ ಮಹತ್ವಪೂರ್ಣ ಭಾವ ಚೆನ್ನದಾಸರವಾಗಿದೆ.

ಇವರು ಸಮಾಜದಲ್ಲಿರುವ ಒಳಿತು ಕೆಡುಕಗಳನ್ನು ತಮ್ಮ ತತ್ವಪದಗಳ ಮೂಲಕ ಜನರ ಮನದಾಳದಲ್ಲಿ ಹೋಗುವಂತಹ ಪ್ರಮುಖ ವಿಚಾರಾಂಶಗಳನ್ನು ತಮ್ಮ ಅಂತರಾಳದ ಮೂಲಕ ಹೊರ ಜಗತ್ತಿಗೆ ಭಾವನೆಗಳನ್ನು ಅಭಿವ್ಯಕ್ತಗೊಳಿಸುತ್ತಾರೆ. ಇವರ ಭಾವನೆಗಳು ಜನಮನದಾಳದಲ್ಲಿ ಸೇರಿ ಜನರು ತಾವು ಅನುಸರಿಸುವ ಕೆಲವೊಂದು ಅಸಂಬದ್ಧ ನಡೆ ನುಡಿಗಳನ್ನು ತ್ಯಜಿಸಿ ಸದ್ಭಾವನೆಗಳನ್ನು ಮೈಗೂಡಿಸಿಕೊಳ್ಳುವುದಕ್ಕೆ ಚೆನ್ನದಾಸರ ತತ್ವಪದಗಳ ಮೂಲಕ ಹೊರಸೂಸುವ ಭಾವನೆಗಳು ಸಹಾಯಕಾರಿಯಾಗುತ್ತವೆ. ಅಲ್ಲದೆ ಇವರು ಶತಮಾನಗಳಿಂದಲೂ ಹಾಡುತ್ತಾ ಹಾಡಿನ ಮೂಲಕ ಭಾವನೆಗಳನ್ನು ಹೊರಹಾಕುತ್ತಾ ಸಮಾಜದ ಪ್ರಗತಿಗೆ ಅಪ್ರತ್ಯಕ್ಷವಾಗಿ ಕಾರಣಿಕರ್ತೃರಾಗಿದ್ದಾರೆ ಎಂದು ಹೇಳಬಹುದು.

೨.೪. ನಂಬಿಕೆಗಳು

ಚೆನ್ನದಾಸರು ತತ್ವಪದಗಳ ಮೇಲಿನ ನಂಬಿಕೆಗಳನ್ನು ೧೫ನೆ ಶತಮಾನದಿಂದ ಇಲ್ಲಿಯವರೆಗೆ ಇಟ್ಟಿದ್ದನ್ನು ಕಾಣಬಹುದು. ಇವರ ನಂಬಿಕೆಗೆ ಕಾರಣ ಮೊದಲು ಈ ಸಮುದಾಯದವರು ಸಮಾಜದಲ್ಲಿ ತುಳಿತಕ್ಕೆ, ಅವಮಾನಕ್ಕೊಳಗಾಗಿ ಬಹಳ ಹೀನವಾದ ಬದುಕನ್ನು ಸಾಗಿಸುತ್ತಿದ್ದರು. ಅಂತಹ ಸಮಯದಲ್ಲಿ ಹರಿದಾಸ ತತ್ವವಾದಿಗಳು ವೈದಿಕ ಧರ್ಮ ಉಳಿಸುವ ಸಲುವಾಗಿ ಮತ್ತು ವೈಧಿಕ ಧರ್ಮದ ಎಲ್ಲ ವಿಷಯಗಳನ್ನು ಜನ ಸಾಮಾನ್ಯರ

[illegible]

ಮುಂದೆ ಹೋಗಿ ಬಿತ್ತರಿಸಲು ಹಲವು ಅಲೆಮಾರಿ ಸಮುದಾಯಗಳ ಕಲಾವಿದರನ್ನೇ ಈ ವೈಧಿಕ ಮತವು ಬಳಸಿಕೊಂಡಿತು. ಹಾಡುವ ಆಟವಾಡುವ ನಟಿಸುವ ದಾಸ ಸಮುದಾಯವನ್ನು ಈ ಮತವು ಬಳಸಿಕೊಂಡಿತು. ಅಲ್ಲದೆ ಜಾತಿಯ ಅಪಮಾನಕ್ಕೆ ತುತ್ತಾದ ಈ ದಾಸ ಸಮುದಾಯಗಳಿಗೆ ತಮಗೊಂದು ಧರ್ಮದ ನೆಲೆ ಬೇಕಾಗಿತ್ತು. ಹಾಗೇ ಭಿಕ್ಷೆ ಬೇಡುವುದರ ಬದಲಾಗಿ ಒಂದು ಜನಪ್ರಿಯ ಧರ್ಮದ ಧಾರ್ಮಿಕ ವಿಧಿಯ ಮೂಲಕ ಧರ್ಮ ಸೂಚಿತ ಸಂಕೇತಗಳನ್ನಾಧರಿಸಿ ಭಿಕ್ಷೆ ಬೇಡುವುದರಿಂದ ಅದಕ್ಕೊಂದು ಘನತೆ ಬರುತ್ತದೆ. ದಾನಿಗಳು ಗೌರವದಿಂದ ಕಾಣುತ್ತಾರೆ ಎಂಬ ನಂಬಿಕೆಯಿಂದ ಚೆನ್ನದಾಸರು ತತ್ವಪದಗಳನ್ನು ಹಾಡುವ ಒಂದು ವೃತ್ತಿಯನ್ನಾಗಿ ಮಾಡಿಕೊಂಡು ವೃತ್ತಿಗಾಯಕರಾಗಿ ಅಲ್ಲಿಂದ ಇಲ್ಲಿಯವರೆಗೆ ತತ್ವಪದಗಳಲ್ಲಿರುವ ಜ್ಞಾನವನ್ನು ಪದಗಳ ರೂಪದಲ್ಲಿ ಜನರ ಮುಂದೆ ಹಾಡುತ್ತಾ ಜನರು ಪರಿವರ್ತನೆಯಾಗುತ್ತಾರೆ. ಅದರ ಜೊತೆಗೆ ತಮ್ಮ ಕುಟುಂಬದ ಸದಸ್ಯರಿಗೆ ಒಂದು ನೆಲೆ ಸಿಗುತ್ತದೆ ಎಂಬ ನಂಬಿಕೆಯಿಂದ ತತ್ವಪದಗಳನ್ನು ಹಾಡಲು ತೊಡಗಿದರು (ಹಿಮ್ಮಡಿ, ೨೦೦೮: ೪೭). ಇಂದಿಗೂ ಈ ಸಮುದಾಯದವರು ತತ್ವಪದಗಳ ಹಾಡುವುದನ್ನು ವೃತ್ತಿಯನ್ನಾಗಿ ಮಾಡಿಕೊಂಡು ತತ್ವಪದಗಳನ್ನು ಜನರು ಮನರಂಜನೆಗಾಗಿ ಆಲಿಸುತ್ತಾರೆ. ಅದರಲ್ಲಿರುವ ಮೌಲ್ಯಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುತ್ತಾರೆ ಎಂಬ ದೃಢವಾದ ನಂಬಿಕೆ ಈ ಸಮುದಾಯದವರಿಗೆ ಇದೆ.

ಅದೇ ರೀತಿಯಾಗಿ ಜನರಲ್ಲಿ ಈ ಸಮುದಾಯದವರು ಹಾಡುವ ತತ್ವಪದಗಳು ಇಂದಿನ ಆಧುನಿಕ ಬದುಕಿಗೆ ಒಗ್ಗುವಂತಹುವುಗಳು ಎಂಬ ನಂಬಿಕೆಯಿಂದ ತತ್ವಪದಗಳನ್ನು ಹಾಡುವ ಚೆನ್ನದಾಸರಿಗೆ ಜನರು ವಿಶೇಷ ಗೌರವಗಳನ್ನು ಸಹ ಕೊಡುತ್ತಾರೆ. ಜನರು ತತ್ವಪದಗಳಲ್ಲಿರುವ ತತ್ವಗಳ ಸಾರವನ್ನು ತಮ್ಮ ಬದುಕಿಗೆ ಅಳವಡಿಸಿಕೊಂಡರೇ ಉತ್ತಮ ಬದುಕನ್ನು ಹೊಂದಬಹುದು ಎಂಬ ನಂಬಿಕೆಯನ್ನು ಅವರು ಹೊಂದಿದ್ದಾರೆ. ಕಾರಣ ಚೆನ್ನದಾಸರು ಹಾಡುವ ತತ್ವಪದಗಳಲ್ಲಿ ವೈಚಾರಿಕ ನೈತಿಕ, ಧಾರ್ಮಿಕ, ಆರ್ಥಿಕ, ಸಾಮಾಜಿಕ ಹಾಗೂ ನಂಬಿಕೆಗಳನ್ನು ಜನರಿಗೆ ಮನಮುಟ್ಟುವಂತೆ ಹಾಡುವುದರಿಂದ ಅಂತಹ ತತ್ವಪದಗಳ ಮೇಲೆ ಜನರ ನಂಬಿಕೆ ಇಂದಿಗೂ ಸಹ ಇದೆ ಎಂದು ಹೇಳಬಹುದು.

ಆದರೆ ಇತ್ತೀಚಿನ ಚೆನ್ನದಾಸರು ತತ್ವಪದಗಳ ಮೇಲಿನ ನಂಬಿಕೆಯನ್ನು ಕಳೆದುಕೊಂಡಿಲ್ಲ ಅದರ ಬದಲು ತತ್ವಪದಗಳನ್ನು ಹಾಡುವಾಗ ಜನರು ಕೊಡುವ ಹಣವು ಕುಟುಂಬದ ನಿರ್ವಹಣೆಗೆ ಸಾಲದ ಪ್ರಯುಕ್ತ ಈ ತತ್ವಪದಗಳ ಹಾಡುವ ವೃತ್ತಿಯ ನಂಬಿಕೆ ಕಡಿಮೆಯಾಗಿದೆ. ಅದೇ ರೀತಿ ಜನಸಮೂಹ ಸಹ ಆಧುನಿಕ ಬದುಕಿನ ಒತ್ತಡಕ್ಕೆ ಸಿಕ್ಕು ತತ್ವಪದಗಳನ್ನು ನಿರ್ಲಕ್ಷಿಸುವುದರ ಜೊತೆಗೆ ನಂಬಿಕೆಯನ್ನು ಸಹ ಕಳೆದುಕೊಂಡಿದ್ದಾರೆ.

೨.೫. ಹೋಲಿಕೆ

ಯಲಬುರ್ಗಾ ಪ್ರದೇಶದ ಚೆನ್ನದಾಸರು ಹಾಡುವ ತತ್ವಪದಗಳಿಗೂ ಹಾಗೂ ಬೇರೆ ಪ್ರದೇಶದಲ್ಲಿರುವ ತತ್ವಪದಕಾರರು ಹಾಡುವ ತತ್ವಪದಗಳಿಗೂ ಹೋಲಿಕೆಯನ್ನು ಈ ಅಧ್ಯಯನದಲ್ಲಿ ಕೈಗೊಳ್ಳಲು ಪ್ರಯತ್ನಿಸಲಾಗಿದೆ. ಯಲಬುರ್ಗಾ ಪ್ರದೇಶದ ಚೆನ್ನದಾಸರು ಹಾಡುವ ತತ್ವಪದಗಳ ಶೈಲಿ, ಬಳಸುವ ಸಾಧನಗಳು ಬೇರೆ ಪ್ರದೇಶದ ತತ್ವಪದಕಾರರಲ್ಲಿ ವ್ಯತ್ಯಾಸಗಳನ್ನು ಕಾಣಬಹುದು ಈ ಪ್ರದೇಶದಲ್ಲಿರುವ ತತ್ವಪದಕಾರರು ಉತ್ತರ ಕರ್ನಾಟಕದಲ್ಲಿ

ಜನಪ್ರಿಯವಾಗಿರುವ ಬೊಬಲಾದಿ ಚಿಕ್ಕಯ್ಯ, ಕಡಕೋಳ ಮಡಿವಾಳಜ್ಜ, ಮಹಾಂತ ಶಿವಯೋಗಿ, ಕೂಡಲುರೇಶ ಮೊದಲಾದವರ ಏಕತಾರಿ ಪದಗಳನ್ನು ಕೇಳುಗರ ಮನಮಿಡಿಯುವಂತೆ ಅರ್ಥ ಹಾಗೂ ಧ್ವನಿ ಪೂರ್ಣವಾಗಿ ಹಾಡಿ ಸಾವಿರಾರು ಜನರ ಮನಗೆದ್ದಿದ್ದಾರೆ. ಇವರು ಹಾಡುವ ಪದಗಳು ಶುದ್ಧ ಜಾನಪದ ಧಾಟಿ ಎನಿಸುವಂತಹವುಗಳಾಗಿವೆ. ಇವರು ಲಾವಣಿಗಳನ್ನು ಸಹ ಹಾಡುವುದುಂಟು ಅಲ್ಲದೆ ಇವರು ಬಳಸುವ ಪರಿಕರಗಳು ಸಹ ವಿಶಿಷ್ಟತೆಯಿಂದ ಕೂಡಿವೆ. ಅಂತಹ ವಿಶಿಷ್ಟ ಪರಿಕರಗಳೆಂದರೆ ಏಕತಾರಿ, ಪಿಟೀಲು ಗೆಜ್ಜೆ, ಚಿಟಿಕೆ, ದಂಬ್ಬಗಳಾಗಿವೆ (ಮೌಖಿಕ ಸಂದರ್ಶನ, ಮಾರೆಪ್ಪ; ೨೦೦೮).

ಸಾಮಾನ್ಯವಾಗಿ ಏಕತಾರಿ ಎಂದರೆ ಒಂದೇ ತಂತಿ ಇರುವ ವಾದ್ಯ ಅದನ್ನು ಮೀಟುತ್ತಾ ಹಾಡುವುದು ವಾಡಿಕೆ. ಆದರೆ ಈ ಪ್ರದೇಶದ ಚೆನ್ನದಾಸರ ಏಕತಾರಿಗೆ ನಾಲ್ಕು ತಂತಿ ಇವೆ. ಅವನ್ನು ಬೆರಳಿಂದ ಮೀಟುವುದರ ಬದಲು ಬಿದಿರಿನ ದಬ್ಬೆಯೊಂದರಿಂದ ಬಡಿಯುತ್ತಾ ಅವರು ಹಾಡುವ ರೀತಿ ತುಂಬ ಮೋಹಕ ತಂತಿಗಳ ಮೇಲೆ ಬಡಿದಾಗ ಯಾವದೋ ಚರ್ಮವಾದ್ಯದ ಮೇಲೆ ಬಡಿದಂತೆ ಅದು ಹೊರಹೊಮ್ಮುತ್ತವೆ. ಕೈಯಲ್ಲಿ ಗಜ್ಜೆ ಜೊತೆಗೆ ಚಿಟಿಕೆಯನ್ನು ಕೂಡ ಬಳಸುತ್ತಾರೆ. ಇವರ ಮತ್ತೊಂದು ವಾದ್ಯ ಪಿಟೀಲು ಇದು ಜನಪದ ವಾದ್ಯವಲ್ಲ ನಿಜ ಆದರೆ ಇದರಿಂದ ಅವರು ಹೊರಡಿಸುವ ಧ್ವನಿ ಮಾತ್ರ ಸಂಪೂರ್ಣವಾಗಿ ಜಾನಪದ ಧಾಟಿಯಲ್ಲಿರುತ್ತದೆ. ಈ ರೀತಿಯ ಪರಿಕರಗಳು ಹಾಗೂ ದಾಟಿ ಬೇರೆ ಪ್ರದೇಶದ ತತ್ವಪದಕಾರರಲ್ಲಿ ಕಂಡು ಬರುವುದಿಲ್ಲ (ಬಾನಂದೂರು, ೧೯೮೫: ಸುಧಾ).

ಚೆನ್ನದಾಸರು ತತ್ವಪದಗಳನ್ನು ಮೊದ ಮೊದಲು ಹೆಚ್ಚಿನ ಮಟ್ಟದಲ್ಲಿ ಸಮಾಜಕ್ಕೆ ಹಾಗೂ ಜನರಿಗೆ ಮುಟ್ಟಿಸಲು ಪ್ರಯತ್ನಿಸಿದರು. ಆದರೆ ಇತ್ತಿಚೀನ ದಿನಮಾನಗಳಲ್ಲಿ ಇವರಿಗೆ ಸರಕಾರ, ಸಂಘ ಸಂಸ್ಥೆಗಳು ಮತ್ತು ಜನರು ಸರಿಯಾದ ಪ್ರೋತ್ಸಾಹ ಕೊಡದೇ ಇರುವುದರಿಂದ ಈ ವೃತ್ತಿಯನ್ನು ಕೈಗೊಂಡು ಚೆನ್ನದಾಸರು ಬದುಕನ್ನು ಸಾಗಿಸುವುದು ದುಸ್ತರವಾದ ಪ್ರಯುಕ್ತ ಬೇರೆ ಉದ್ಯೋಗದಲ್ಲಿ ತೊಡುಗುವುದನ್ನು ಕಾಣಬಹುದು. ಇದರಿಂದ ತತ್ವಪದಗಳು ಇಂದು ಸಮಾಜದ ಮುಖ್ಯವಾಹಿನಿಯಿಂದ ಕಣ್ಮರೆಯಾಗುವ ಹಂತದಲ್ಲಿ ಇವೆ ಎಂದು ಹೇಳಬಹುದು.

ಟಿಪ್ಪಣಿಗಳು

೧. **ಏಕತಾರಿ:** ಶ್ರುತಿವಾದ್ಯಗಳಲ್ಲಿ ಬಹಳ ಪ್ರಸಿದ್ಧಿ ಇರುವುದು ಏಕತಾರಿ ತಂತಿವಾದ್ಯ ಒಂದೇ ತಾರಿ ತಂತಿ ಯವಾದ್ದರಿಂದ ಇದನ್ನು ಏಕತಾರಿ ಎಂದು ಕರೆಯುತ್ತಾರೆ. ಹಸಿಯಾದ ದೊಡ್ಡದಾದ ಸೋರೆಕಾಯಿಯನ್ನು ಚೆನ್ನಾಗಿ ಒಣಗಿಸಿ, ತುಂಬಿನ ಕಡೆಯ ಭಾಗವನ್ನು ವೃತ್ತಾಕಾರವಾಗಿ ಕೊರೆದು ಪೊಳ್ಳು ಮಾಡುತ್ತಾರೆ. ಈ ಭಾಗ ಹಿಂದೆ ಬರುವಂತೆ ಸುಮಾರು ನಾಲ್ಕು ಅಡಿಯ ಬಿದಿರಿನ ಬೊಂಬನ್ನು ಸೋರೆಕಾಯಿಯಲ್ಲಿ ಸೇರಿಸುತ್ತಾರೆ. ಕಾಯಿಯ ಕೆಳಭಾಗದ ಬೊಂಬು ನಾಲ್ಕೈದು ಇಂಚು ಬಂದಿರುತ್ತದೆ. ಕೋಲು ಭದ್ರವಾಗಿ ಅಂಟಿಕೊಳ್ಳಲು ಮೇಣ ಹಚ್ಚಿರುತ್ತಾರೆ. ಕೆಳಭಾಗದ ಬೊಂಬಿನ ತುದಿಗೆ ಸೇರಿಸಲಾಗಿರುತ್ತದೆ. ಹಿಗೆ ತಂತಿ ಸುತ್ತಿ ಬೊಂಬಿನಲ್ಲಿ ಸೇರಿಸುವ ನಾಲ್ಕು ಇಂಚಿನ ಬೆರಳು ಗಾತ್ರದ ಕಟ್ಟಿಗೆಯ ತುಂಡಿಗೆ 'ಬಿರಡಿ' ಎನ್ನುತ್ತಾರೆ. ಇದಕ್ಕೆ ಕೆಲವೆಡೆ 'ಬೆಣಕು' ಎಂದು ಹೆಸರು ಸೋರೆಕಾಯಿಯ ಮೇಲೆ ಹಾಯ್ದಿರುವ ತಂತಿಯನ್ನು ಕಾಯಿಯಿಂದ ಬೇರ್ಪಡಿಸಿ ಮೇಲೆತ್ತಲು ಸುಮಾರು ಎರಡು ಇಂಚಿನ ಕಟ್ಟಿಗೆ ತುಂಡು ಇರುತ್ತದೆ. ಇದಕ್ಕೆ 'ಮೆಟ್ಟು' ಎಂದು ಹೆಸರು. ಬೊಂಬು ಕಾಯಿಯಿಂದ

ಮೇಲೆ ಪಾರಾಗಿ ಹೊರಟ ಭಾಗವನ್ನು ಬಲ ಅಂಗೈಯಲ್ಲಿ ಹಿಡಿದುಕೊಂಡು ತೋರುಬೆರಳು ಅಥವಾ ಮಧ್ಯ ಬೆರಳನ್ನು ಮೇಲೆ ಕೆಳಗೆ ಮಾಡಿ ತಂತಿಯನ್ನ ಹಾಡಿನ ಲಯಕ್ಕೆ ತಕ್ಕಂತೆ ಮೀಟಿ ನಾದ ಹೊರಡಿಸುತ್ತಾರೆ. ಎಡಗೈ ತೋರು ಬೆರಳನ್ನು ಸೋರೆ ಕಾಯಿಯ ಮೇಲೆ ಲಘುವಾಗಿ ಬಡಿಯುತ್ತ ಹಾಡಿನ ಲಯ ನಿರ್ವಹಿಸುತ್ತಾರೆ. ಕರ್ನಾಟಕದಲ್ಲಿ ಏಕತಾರಿ ಮಧ್ಯಯುಗದಿಂದೀಚೆ ರೂಢಿಗೆ ಬಂದಿದೆಯೆಂದೂ ಸೂಫಿ ಸಂತರೊಂದಿಗೆ ಇದು ಕರ್ನಾಟಕ ಪ್ರವೇಶಿಸಿ ಕೂಡಲೇ ಇಲ್ಲಿಯ ಜನಸಮುದಾಯವನ್ನು ಆಕಷ್ಮಿತೆಂದೂ ಹೇಳಲಾಗುತ್ತದೆ (ಬೀಚನಹಳ್ಳಿ, ೨೦೦೦, ೩೪೪).

೨. ತಂಬೂರಿ ಮತ್ತು ದಂಡಿಗೆ : ಏಕತಾರಿಯ ''ಒಂದೇ ತಂತಿಯ ಆಧಾರ ಸ್ವರದನಾದ ಇನ್ನಷ್ಟು ವ್ಯಾಪಕವಾಗಿರಬೇಕು ಮತ್ತು ನಡುವೆ ಪಂಚಮ ಸ್ವರದ ನೆರವು ಬೆರೆತುಕೊಳ್ಳಬೇಕೆಂಬ ವಿಚಾರ ಮೂಡಿದಾಗ ನಾಲ್ಕು ತಂತಿಯ ತಂಬೂರಿಯ ಆವಿಷ್ಕಾರವಾಯಿತು''. ಎನ್ನಲಾಗಿದೆ. ಶಾಸ್ತ್ರೀಯ ಸಂಗೀತದ ತಂಬೂರಿಗಿಂತ ಜನಪದ ಗಾಯಕರಾದ ದಾಸರು ಬಳಸುವ ತಂಬೂರಿ ವಿಶಿಷ್ಟವಾದುದು. ಎರಡು ಮೊಳ ಉದ್ದದ ಇದನ್ನು ಹಲಸಿನ ಮರದಲ್ಲಿ ಕಡೆಯಲಾಗುವುದು. ಇದರ ಒಂದು ತುದಿಯಲ್ಲಿ ನಾಗರ ಹೆಡೆ ಅಥವಾ ಸಿಂಹದ ಮುಖವನ್ನು ಬಿಡಿಸುವರು. ಹಲಸಿನ ಮರದ ಅರೆಗೋಲಾಕಾರದ ಕಟ್ಟಿಗೆಯ ಪಡಗದ ಮೇಲೆ ಕಟ್ಟಿಗೆಯದೇ ದಂಡಿಗೆಯನ್ನು ಜೋಡಿಸಿರುತ್ತಾರೆ. ಕೆಳಭಾಗದಲ್ಲಿ ವೃತ್ತಾಕಾರ, ಮೇಲ್ಭಾಗದಲ್ಲಿ ಚಪ್ಪಟೆಯಾಗಿರುವ ಹಂಡಿಗೆಯ ಉದ್ದ ಸುಮಾರು ನಾಲ್ಕು ಅಡಿ, ತಂತಿಗಳನ್ನು 'ಮೆಟ್ಟು' ಎಂಬ ಕಲೆಯ ತುಂಡಿಗೆ ಬಿಗಿದು ದಂಡಿಗೆಯ ಮೇಲೆ ಹಾಯಿಸಿ ಮೇಲ್ಗಡೆಯ ಬಿರಡೆಗಳಿಗೆ ಸುತ್ತಿರುತ್ತಾರೆ. ದಂಡಿಗೆಯ ಮೇಲಿನ ತುದಿ ಅಲಂಕಾರಯುತವಾಗಿದ್ದು ನಾಗರ ಹೆಡೆಯಂತೆ ಬಾಗಿರುತ್ತದೆ. ಈ ತಂಬೂರಿಗೆ ಸಾಸಾಪಾಸಾ ಸ್ವರಗಳ ನಾಲ್ಕು ತಂತಿಗಳಿರುತ್ತವೆ. ಬಾರಿಸುವ ಕಲಾವಿದನು ಇದನ್ನು ಕೊರಳಲ್ಲಿ ಜೋತು ಬಿಟ್ಟುಕೊಂಡಿರುತ್ತಾನೆ. ಬಲಗೈ ಬೆರಳಗಳಿಂದ ಎಲ್ಲ ತಂತಿಗಳನ್ನು ಏಕಕಾಲಕ್ಕೆ ನುಡಿಸುವನು. ಒಂದೇ ಆಘಾತಕ್ಕೆ ನಾಲ್ಕೂ ತಂತಿಗಳನ್ನು ನುಡಿಸುವ ಕ್ರಮವಿದೆ. ಈ ತಂಬೂರಿಗೆ 'ಸರಸ್ವತಿ ವಾದ್ಯ'ವೆಂಬ ಹೆಸರೂ ಇದೆ. ತಂಬೂರಿಯನ್ನೂ ದಂಡಿಗೆ (ಕಟ್ಟಿಗೆದಂಡ)ಯಿಂದ ಮಾಡಿರುವುದರಿಂದ ಇದನ್ನು ದಂಡಿಗೆ ಎಂದೂ ಕರೆಯಲಾಗುತ್ತದೆ. (ಹಿಮ್ಮಡಿ, ೨೦೦೮, ೧೬೧).

೩. ತತ್ವಪದಗಳ ಹಾಡುಗಾರ ಮಾರೆಪ್ಪ ಚೆನ್ನದಾಸರ: ಆಕಾಶವಾಣಿ, ದೂರದರ್ಶನದಲ್ಲಿ ತತ್ವಪದಗಳನ್ನು ಹಾಡುವ ೨೦೦೩-೦೪ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಪಡೆದ ಯಲಬುರ್ಗಾದ ನಿವಾಸಿಯಾದ ಮಾರೆಪ್ಪ ಚೆನ್ನದಾಸರ ಕೊಪ್ಪಳ ಜಿಲ್ಲೆಯ ಬಹುದೊಡ್ಡ ಹೆಸರು, ಶ್ರೀ ಹೆಚ್.ಎಲ್.ನಾಗೇಗೌಡರು ಜಾನಪದ ಲೋಕದ ಕ್ಯಾಸೆಟ್ ಸಂಗ್ರಹಗಳಲ್ಲಿ ಇವರ ತತ್ವಪದಗಳ ಆಡಿಯೋ ಕ್ಯಾಸೆಟ್ ರಾಜ್ಯಾದ್ಯಂತ ಒಳ್ಳೆಯ ಹೆಸರನ್ನು ಹಣಗಳಿಕೆಯನ್ನು ಮಾಡಿರುವುದು ಉಲ್ಲೇಖಾರ್ಹ (ಬೆಟದೂರು, ೨೦೦೫: ೨೪೯).

೪. ತತ್ವಪದ: ತತ್ವಗಳನ್ನು ಪ್ರತಿಪಾದಿಸುವ ಹಾಡು: ತಾತ್ವಿಕ ವಿಚಾರಗಳುಳ್ಳಹಾಡು (ಸಂಕ್ಷಿಪ್ತ ಕನ್ನಡ ನಿಘಂಟು, ೨೦೦೧, ೫೧೩)

೫. ಭವ: ಹುಟ್ಟಿನಿಂದ ಸಾವಿನಿವರೆಗಿರುವ ಅವಧಿ; ಜೀವಿತ ಕಾಲ.

* * *

ಅಧ್ಯಯ ಮೂರು

ಚೆನ್ನದಾಸರ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿ

ಪ್ರಸ್ತಾವನೆ

೩.೧. ಕೌಟುಂಬಿಕ ವ್ಯವಸ್ಥೆ

೩.೧.೧. ಜನನ

೩.೧.೨. ಋತುಮತಿ

೩.೧.೩. ವಿವಾಹ

೩.೧.೪. ಮರಣ

೩.೧.೫. ಉಡುಗೆ ತೊಡುಗೆ

೩.೧.೬. ಆಹಾರ ಪದ್ಧತಿ

೩.೧.೭. ವಸತಿ ವ್ಯವಸ್ಥೆ

೩.೧.೮. ಕೌಟುಂಬಿಕ ಕಟ್ಟುಪಾಡುಗಳು ಮತ್ತು ನ್ಯಾಯ ಪಂಚಾಯತಿ

೩.೧.೯. ಆರಾಧನೆ ಮತ್ತು ಹಬ್ಬಗಳು

ಉಪಸಂಹಾರ

ಅಧ್ಯಾಯ ಮೂರು

ಚೆನ್ನದಾಸರ ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಗತಿ

ಪ್ರಸ್ತಾವನೆ

ಪ್ರಸ್ತುತ ಅಧ್ಯಯನದ ಮೊದಲನೇ ಭಾಗದಲ್ಲಿ ಕೌಂಟುಂಬಿಕ ವ್ಯವಸ್ಥೆಯಲ್ಲಿನ ಜನನಕ್ಕೆ ಸಂಬಂಧಿಸಿದ ಆಚರಣೆಗಳನ್ನು, ಎರಡನೇ ಭಾಗದಲ್ಲಿ ಈ ಸಮುದಾಯದ ಹೆಣ್ಣು ಮಕ್ಕಳು ಋತುಮತಿಯಾದಾಗ ಹಿಂದಿನಿಂದ ಪಾಲಿಸಿಕೊಂಡು ಬಂದ ಸಾಮಾಜಿಕ ನಿಯಮಗಳನ್ನು, ಮೂರನೇ ಭಾಗದಲ್ಲಿ ಸಮುದಾಯದ ವಿವಾಹ ಕಾರ್ಯ ವೈಖರಿಗಳ ಬಗ್ಗೆ ತಿಳಿಸಲಾಗಿದೆ. ನಾಲ್ಕನೇಯ ಭಾಗದಲ್ಲಿ ಮರಣ ಸಂಸ್ಕಾರದ ವಿಧಿ-ವಿಧಾನಗಳ ಬಗ್ಗೆ, ಐದನೇಯ ಭಾಗದಲ್ಲಿ ಚೆನ್ನದಾಸರ ಉಡುಗೆ ತೊಡುಗೆಗಳ ಬಗ್ಗೆ ಮತ್ತು ಆರನೆಯ ಭಾಗದಲ್ಲಿ ಈ ಸಮುದಾಯದವರು ಅಳವಡಿಸಿಕೊಂಡಿರುವ ಆಹಾರ ಪದ್ಧತಿಯ ಕ್ರಮದ ಬಗ್ಗೆ ಚರ್ಚಿಸಲಾಗಿದೆ. ಅಧ್ಯಾಯದ ಏಳನೇಭಾಗದಲ್ಲಿ ವಸತಿ ವ್ಯವಸ್ಥೆಯನ್ನು ಹೇಗೆ ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ ಎನ್ನುವುದನ್ನು ತಿಳಿಯಲಾಗಿದೆ. ಎಂಟನೇಯ ಭಾಗದಲ್ಲಿ ವ್ಯವಸ್ಥೆ ಬಗ್ಗೆ, ಒಂಭತ್ತನೇ ಭಾಗದಲ್ಲಿ ಧಾರ್ಮಿಕ ಆಚರಣೆಗಳ ಮತ್ತು ಹಬ್ಬ-ಹರಿದಿನಗಳನ್ನು ಕುರಿತಾದ ಅಂಶಗಳನ್ನು ಅಧ್ಯಯನದಲ್ಲಿ ಅಳವಡಿಸಲಾಗಿದೆ. ಚೆನ್ನದಾಸರ ಕೌಟುಂಬಿಕ ವ್ಯವಸ್ಥೆ, ನ್ಯಾಯಾಂಗ ವ್ಯವಸ್ಥೆ, ದೇವತಾರಾಧನೆ ಮುಂತಾದ ವಿಷಯಗಳ ಕುರಿತು ಚರ್ಚಿಸಲಾಗಿದೆ.

೩.೧. ಕೌಟುಂಬಿಕ ವ್ಯವಸ್ಥೆ

ಚೆನ್ನದಾಸರ ಸಮುದಾಯದ ಕೌಟುಂಬಿಕ ವ್ಯವಸ್ಥೆ ಮೂಲತಃ ಪಿತೃಪ್ರಧಾನ ಕುಟುಂಬ ವ್ಯವಸ್ಥೆ ಆಭಾವಿಸಲಾಗಿದೆ. ಕುಟುಂಬದ ಯಜಮಾನಿಕೆಯನ್ನು ತಂದೆ ವಹಿಸಿರುತ್ತಾನೆ. ಈತನು ಕುಟುಂಬದ ಜವಾಬ್ದಾರಿಯನ್ನು ಹೊತ್ತಿರುತ್ತಾನೆ. ಕೆಲವು ಕುಟುಂಬಗಳಲ್ಲಿ ತಂದೆಯು ಅನಾರೋಗ್ಯ ಪೀಡಿತನಾಗಿದ್ದರೆ ಅಂತಹ ಕುಟುಂಬದ ನಿರ್ವಹಣೆಯನ್ನು ತಾಯಿಯು ನಿರ್ವಹಿಸುತ್ತಾಳೆ. ಕುಟುಂಬದ ನಿರ್ವಹಣೆ ಅಥವಾ ಯಜಮಾನಿಕೆಯನ್ನು ಹೊಂದಿದ ತಂದೆಯು ಕುಟುಂಬಕ್ಕೆ ಬೇಕಾದ ಗುಡಿಸಲುಗಳನ್ನು ತಾನು ನೆಲೆಸಿದ ಊರು ಮುಂದೆ ಬಯಲು ಜಾಗದಲ್ಲಿ

ನಿರ್ಮಿಸಿಕೊಂಡಿರುತ್ತಾನೆ. ಅವಿಭಕ್ತ ಮತ್ತು ವಿಭಕ್ತ ಕುಟುಂಬಗಳು ಈ ಸಮುದಾಯದಲ್ಲಿ ಕಂಡುಬರುತ್ತವೆ. ಇತ್ತೀಚಿನ ದಿನಗಳಲ್ಲಿ ಅವಿಭಕ್ತ ಕುಟುಂಬಗಳು ಮಾಯವಾಗಿ ವಿಭಕ್ತ ಕುಟುಂಬಗಳೇ ಜಾಸ್ತಿ ಇರುವುದು ಕಂಡುಬರುತ್ತದೆ. ಕಾರಣ ಅಲೆಮಾರಿ ಸಮುದಾಯದವರಾಗಿದ್ದರಿಂದ ಕೌಟುಂಬಿಕ ನಿರ್ವಹಣೆಗಾಗಿ ಬೇರೆ ಬೇರೆ ಊರಲ್ಲಿ ವಾಸಿಸುತ್ತಿದ್ದರಿಂದ ವಿಭಕ್ತ ಕುಟುಂಬಗಳು ಹೆಚ್ಚಾಗಿವೆ. ಇಂತಹ ಕುಟುಂಬಕ್ಕೆ ಬೇಕಾದ ದೈನಂದಿನ ಅವಶ್ಯಕತೆಗಳನ್ನು ಪೂರೈಸುವುದು ಮನೆಯ ಮುಖ್ಯಸ್ಥನ ಜವಾಬ್ದಾರಿ.

ಈತನು ತನ್ನ ಕುಟುಂಬದ ಕಾರ್ಯ ಚಟುವಟಿಕೆಗಳು ಇದ್ದಾಗ ಇತರೆ ಕುಟುಂಬಗಳಿಗೆ ಸಂದೇಶವನ್ನು ತಿಳಿಸುತ್ತಾನೆ. ಅವರು ಬಂದು ಈತನ ಕುಟುಂಬದ ಚಟುವಟಿಕೆಯನ್ನು ಪೂರೈಸುತ್ತಾರೆ. ಈ ಸಂದರ್ಭದಲ್ಲಿ ಈತನು ಬಂದಂತಹ ಕುಲಸ್ಥರಿಗೆ ಹೆಂಡ ಸರಾಯಿಗಳನ್ನು ಕುಡಿಸಿ ಅವರಿಗೆ ಬೀಳ್ಕೊಡುತ್ತಾನೆ. ಜನಸಮುದಾಯದಲ್ಲಿ ನಡೆಯುವ ನ್ಯಾಯ ವ್ಯವಸ್ಥೆಗೆ ಹಾಗೂ ಇತರ ಕಾರ್ಯಕ್ರಮಗಳಿಗೆ ತನ್ನ ಕುಟುಂಬದ ಪರವಾಗಿ ಭಾಗವಹಿಸುತ್ತಾನೆ. ಹೆಣ್ಣು ಮಕ್ಕಳ ಮದುವೆ ಮೂಹೂರ್ತಗಳನ್ನು ಈತನು ನೆರವೇರಿಸಿಕೊಡುತ್ತಾನೆ. ಜೊತೆಗೆ ಗಂಡು ಮಕ್ಕಳಿಗೆ ತಾನೆ ಜವಾಬ್ದಾರಿಯನ್ನು ತೆಗೆದುಕೊಂಡು ಮದುವೆ ಮಾಡಲು ಇತರೆ ಕುಟುಂಬದ ಮುಖಂಡರನ್ನು ಕರೆದುಕೊಂಡು ಕನ್ಯಾಗಳನ್ನು ಹುಡುಕಿ ನಿರ್ದಿಷ್ಟ ಅವಧಿಯಲ್ಲಿ ಮದುವೆ ಮಾಡಿಸುತ್ತಾನೆ. ಆದರೆ ತಂದೆ, ತಾಯಿ ಇಬ್ಬರು ಒಪ್ಪಿದ ಕನ್ಯೆಯನ್ನು ಹಾಗೂ ವರನನ್ನು ಪ್ರಶ್ನಿಸದೆ ಮದುವೆಯಾಗುತ್ತಾರೆ. ಮದುವೆ ಮಾಡಿದ ನಂತರ ಅವರು ತನ್ನ ಕುಟುಂಬದ ಜೊತೆಗೆ ಇರಲು ಇಷ್ಟ ಪಟ್ಟರೆ ಅವರನ್ನು ತನ್ನ ಕುಟುಂಬದಲ್ಲಿ ಸೇರಿಸಿಕೊಳ್ಳುತ್ತಾನೆ. ಅವರು ಬೇರೆ ಇರಲು ಇಷ್ಟಪಟ್ಟರೆ ಅವರಿಗೆ ತನ್ನ ಗುಡಾರದ ಅಕ್ಕ-ಪಕ್ಕ ಬೇರೆ ಸಣ್ಣಗಾತ್ರದ ಗುಡಾರವನ್ನು ಹಾಕಿ ಕೊಡುತ್ತಾನೆ. ಇಲ್ಲವಾದರೆ ಅವರು ಬೇರೆ ಬೇರೆ ಊರಗಳಿಗೆ ವ್ಯಾಪಾರ ಮಾಡಲು ಹೋಗುವದಕ್ಕೆ ಇಷ್ಟಪಟ್ಟರೆ ಅವರನ್ನು ಮನಸಾರೆ ಸ್ವಇಚ್ಛೆಯಿಂದ ಕಳಿಸಿಕೊಡುತ್ತಾನೆ.

ಇತ್ತೀಚಿಗೆ ಯಲಬುರ್ಗಾ ಪ್ರದೇಶದ ವ್ಯಾಪ್ತಿಯಲ್ಲಿ ಇರುವ ಗ್ರಾಮಗಳಲ್ಲಿ ನೆಲೆಸಿರುವ ಚೆನ್ನದಾಸರ ಕುಟುಂಬಗಳನ್ನು ಅಧ್ಯಯನ ಮಾಡಿದಾಗ ಹೆಚ್ಚಾಗಿ ವಿಭಕ್ತ ಕುಟುಂಬಗಳು ಹಾಗೂ ಪಿತೃಪ್ರಧಾನ ವ್ಯವಸ್ಥೆಯನ್ನು ಕಾಣಬಹುದು. ಆಧುನಿಕತೆಯ ಪ್ರಭಾವದಿಂದಾಗಿ ಚೆನ್ನದಾಸ ಕೌಟುಂಬಿಕ ವ್ಯವಸ್ಥೆ ದಿನದಿಂದ ದಿನಕ್ಕೆ ವ್ಯತ್ಯಾಸವಾಗುತಿದೆ. ಈ ಪ್ರಕ್ರಿಯೆಯನ್ನು ಗಮನಿಸಿದರೆ ಈ ಸಮುದಾಯವು ಬೇರೆ ಸಮುದಾಯಗಳ ಅನುಕರಣೆಯಿಂದ ಹಾಗೂ ಮಾಧ್ಯಮಗಳ ಪ್ರಭಾವದಿಂದ ಪ್ರಭಾವಕ್ಕೆ ಒಳಗಾಗಿರುವುದನ್ನು ಲಿಂಗನಬಂಡಿ, ವಟಪರವಿ ಗ್ರಾಮದಲ್ಲಿನ ಕುಟುಂಬಗಳ ಕುರಿತು ಮಾಡಿದ ಕ್ಷೇತ್ರ ಅಧ್ಯಯನವು ಆ ಗ್ರಾಮಗಳ ಬದಲಾವಣೆಯತ್ತ ಹೆಜ್ಜೆ ಹಾಕುತ್ತಿರುವುದಕ್ಕೆ ಸಾಕ್ಷಿಯಾಗಿವೆ.

೩.೧.೧.ಜನನ

ಚೆನ್ನದಾಸರ ಸಮುದಾಯದಲ್ಲಿ ಜನನಕ್ಕೆ ಸಂಬಂಧಿಸಿದ ಕೆಲವೊಂದು ಆಚರಣೆಗಳನ್ನು ಕೈಗೊಳ್ಳುತ್ತಾರೆ. ಹಿಂದೂ ಸಂಪ್ರದಾಯಗಳಂತೆ ಚೆನ್ನದಾಸರ ಸಮುದಯಲ್ಲಿ ಕೂಡ ಮೊದಲ ಬಾಣಾಂತನ ಹೆಣ್ಣಿನ ತವರು ಮನೆಯಲ್ಲಿ ಆಗುವುದು. ಗರ್ಭಿಣಿಯಾದ ಹೆಂಗಸಿಗೆ ಹೆರಿಗೆ ನೋವು ಕಾಣಿಸಿಕೊಂಡ ಕೂಡಲೇ ಸಮುದಾಯದಲ್ಲಿನ ಅನುಭವಿ

ಸೂಲಗಿತ್ತಿಯರು ಹೆರಿಗೆಯನ್ನು ಮಾಡಿಸಿಕೊಳ್ಳುತ್ತಾರೆ. ಹೆರಿಗೆ ಆದ ತಕ್ಷಣ ಸೂಲಗಿತ್ತಿಯು ಹೊಕ್ಕಳು ಬಳ್ಳಿಯನ್ನು ಕುಡಗೋಲು ಅಥವಾ ಬ್ಲೇಡ್‌ನಿಂದ ಕೊಯ್ದು ಅದಕ್ಕೆ ಅರಿಶಿಣ ಹರಳೆಣ್ಣೆಯನ್ನು ಕಲಸಿ ಹಚ್ಚುತ್ತಾರೆ. ನಂತರ ಮಗು ಹಾಗೂ ತಾಯಿಗೆ ಬಿಸಿ ನೀರಿನ ಮೂಲಕ ಮೈಯನ್ನು ತೊಳೆಯುತ್ತಾಳೆ. ಹೆರಿಗೆಯ ಸಮಯದಲ್ಲಿ ಬಿದ್ದ ಮಾಸವನ್ನು ತಗ್ಗು ತೋಡಿ ಹೂಳಿಡುವುದು ಮಾಡಿಕೆ. ಈ ಒಂದು ಕಾರ್ಯ ಬೇರೆ ಬೇರೆ ಸ್ಥಳದಲ್ಲಿ ಬೇರೆ ರೀತಿಯಾಗಿ ಕೈಗೊಳ್ಳುತ್ತಾರೆ.

ಬೆಳಗಾವಿ ವಿಭಾಗದಲ್ಲಿ ಕೂಸಿನ ಮಾಸವನ್ನು ಮಣ್ಣಿನ ಒಂದು ಸಣ್ಣ ಮಡಿಕೆಯಲ್ಲಿ ತುಂಬಿ ಮೂರು ದಿನಗಳವರೆಗೆ ಇಡುತ್ತಾರೆ. ಮೂರನೇ ದಿನಕ್ಕೆ ಮನೆಯ ಹಿತ್ತಲಲ್ಲಿ ನಾಲ್ಕು ಜನ ಕೌದಿಯನ್ನು ಎತ್ತಿ ಹಿಡಿದು ಅದರ ಕೆಳಗೆ ತಾಯಿ ಮತ್ತು ಮಗುವನ್ನು ಸ್ನಾನ ಮಾಡಿಸುತ್ತಾರೆ. ಮಾಸವನ್ನು ಅಲ್ಲಿಯೇ ಅಗೆದು ಮುಚ್ಚುತ್ತಾರೆ. ನಂತರ ಕೂಸಿಗೆ ನಾಮಕರಣ ಮಾಡಿ ಬಂಧು ಬಳಗದವರಿಗೆ ಗುಗ್ಗರಿ ಹಂಚಿ ಊಟ ಹಾಕುತ್ತಾರೆ. ನಂತರ ಐದನೇ ದಿನಕ್ಕೆ ಹಗ್ಗದ ತೊಟ್ಟಿಲು ಕಟ್ಟಿ ಅದರಲ್ಲಿ ಕೂಸನ್ನು ಹಾಕಿ ಐದೇಶಿ ಮಾಡುತ್ತಾರೆ. ಇಲ್ಲಿಗೆ ಜನನದ ಸೂತಕ ಕಳೆಯುತ್ತಾರೆ. ಕೆಲವು ಭಾಗದಲ್ಲಿ ಕೂಸು ಹುಟ್ಟಿದ ನಂತರ ಅದೇ ದಿನ ಮಾಸನ್ನು ಮಡಿಕೆಯಲ್ಲಿ ಹಾಕಿ ತಾಯಿಗೆ ನೀರು ಹಾಕುವ ಸ್ಥಳದಲ್ಲಿಯೇ ಹೂಳುವುದು ವಾಡಿಕೆಯಲ್ಲಿದೆ. ಇನ್ನು ಕೆಲವು ಕಡೆ ಮಾಸನ್ನು ಮೂರು ದಿನಗಳಲ್ಲಿ ಸೂಲಗಿತ್ತಿಯರಿಗೆ ಎಲೆ, ಅಡಿಕೆ, ಕುಂಕುಮ, ಕೊಬ್ಬರಿ, ಉತ್ತುತ್ತಿ ಇತ್ಯಾದಿ ವಸ್ತುಗಳಿಂದ ಉಡಿ ಸ್ವಲ್ಪ ಸ್ಥಿತಿವಂತರಾಗಿದ್ದರೆ ಸೂಲಗಿತ್ತಿಗೆ ಹೊಸ ಸೀರೆ ಉಡಿಸಿದ ನಂತರ ಗುಡಿಸಲಿನ ಎದುರಿಗೆ ತಗ್ಗು ತೆಗೆದು ಮಾಸನ್ನು ಅದರಲ್ಲಿ ಮುಚ್ಚಿ ಅದರ ಮೇಲೊಂದು ಬಂಡೆ ಕಲ್ಲು ಇಟ್ಟು ಪೂಜೆ ಮಾಡುವುದು ಕೂಡ ವಾಡಿಕೆಯಲ್ಲಿದೆ. (ಹಿಮ್ಮಡಿ, ೨೦೦೮: ೧೦೬).

ಆದರೆ ಯಲಬುರ್ಗಾ ಪ್ರದೇಶದಲ್ಲಿ ಕೂಸು ಹುಟ್ಟಿದೆ ತಕ್ಷಣ ಮಾಸನ್ನು ಒಂದು ಮಡಿಕೆಯಲ್ಲಿ ಹಾಕಿ ಗುಡಿಸಲು ಬಾಗಿಲಿಗೆ ಅಥವಾ ಮನೆಯ ಬಾಗಿಲಿಗೆ ಹೂಳುವುದು ವಾಡಿಕೆ (ಸಂದರ್ಶನ: ವೆಂಕಟೇಶ ವಟಪರವಿ). ಜನನದ ಮೂರನೇ ದಿನ ಮಾಸನ್ನು ಹುಗಿದ ಸ್ಥಳದ ಮೇಲೆ ಪೂಜೆಯನ್ನು ಕೈಗೊಳ್ಳುತ್ತಾರೆ. ಹಾಗೇ ಹೆರಿಗೆಯಾದ ಸ್ಥಳದಲ್ಲಿ ಒಂದು ಕೋಳಿಯನ್ನು ತಂದು ಚೂರಿ ಹಾಕಿ ಎಲ್ಲ ಕುಟುಂಬದವರಿಗೂ ಊಟ ಮಾಡಿಸುತ್ತಾರೆ. ಶ್ರೀಮಂತರಿದ್ದರೆ ಸಮುದಾಯದ ಕುಟುಂಬದಲ್ಲಿರುವ ಎಲ್ಲರಿಗೂ ಊಟ ಮಾಡಿಸುತ್ತಾರೆ. ಈ ಪದ್ಧತಿಯು ಚೆನ್ನದಾಸರ ಸಮುದಾಯದಲ್ಲಿ ಹಿಂದಿನಿಂದಲೂ ನಡೆದುಕೊಂಡು ಬಂದಿರುವಂತಹದ್ದಾಗಿದೆ. ಇದನ್ನು ''ಈರ್ಲ''ಮಾಡುವುದು ಎಂದು ಕರೆಯುತ್ತಾರೆ (ಮೌಖಿಕ ಸಂದರ್ಶನ, ವೆಂಕಟೇಶ; ೨೦೦೯).

ಈರ್ಲ ದಿನದಂದು ಮಗುವಿಗೆ ಸೂಲಗಿತ್ತಿಯು ಸೂಜಿಯನ್ನು ಕಾಯಿಸಿ ಮಗುವಿನ ಹೊಟ್ಟೆಯ ಮೇಲೆ ಬರೆಯನ್ನು ಹಾಕುತ್ತಾಳೆ. ಇದರ ಉದ್ದೇಶ ಮಗುವಿಗೆ ಮುಂದೆ ಯಾವುದೇ ರೋಗಾದಿಗಳು ಬರಬಾರದು ಎಂಬ ಉದ್ದೇಶ ಇರಬಹುದು. ಈ ಕಾರ್ಯ ಮುಗಿದ ಮೇಲೆ ಮಗುವಿನ ತಾಯಿ ಒಂಭತ್ತು ಗಂಗಾಪೂಜೆ ಅಥವಾ ಗಂಗಾದೇವಿ ಪೂಜೆ ಮಾಡುತ್ತಾರೆ. ಈ ಕಾರ್ಯವನ್ನು ಮಗುವಿನ ತಾಯಿಯು ಕೈಗೊಳ್ಳುತ್ತಾಳೆ. ಗಂಗಾ ಪೂಜೆ ಮಾಡಿ ನೀರು ಮುಟ್ಟಿಸಿದ ತಕ್ಷಣ ಆಕೆ ಎಂದಿನಂತೆ ಎಲ್ಲರ ಸಂಪರ್ಕಕ್ಕೆ ಬರುತ್ತಾಳೆ. ''ಮುಟ್ಟಿರಿಯಿತು, ಮುಡಚಟ್ಟು ಹೋಯಿತು''

[illegible]

[illegible]

[illegible]

[illegible]

[illegible]

ಎಂದು ತಿಳಿಯುತ್ತಾರೆ. ಇತ್ತೀಚಿನ ದಿನಗಳಲ್ಲಿ ಈ ಸಮುದಾಯದಲ್ಲಿ ಹೆರಿಗೆ ಆದ ಒಂದು ತಿಂಗಳವರಗೆ ಬಾಣಂತಿಗೆ ಬಿಸಿನೀರನ್ನು ಹಾಕುತ್ತಾರೆ. ಮಗುವಿಗೆ ಮೂರು ತಿಂಗಳು ಕಡ್ಡಾಯವಾಗಿ ನೀರು ಹಾಕುತ್ತಾರೆ. ಮೊದಲು ಈ ಸಮುದಾಯದಲ್ಲಿ ಬಾಣಂತಿಗೆ ಮತ್ತು ಮಗುವಿಗೆ ಐದು ದಿನಗಳವರಿಗೆ ಬಿಸಿನೀರಿಗೆ ಬೇವಿನ ತಪ್ಪಲು ಹಾಕಿ, ಮೈಗೆ ಅರಿಷಿಣ ಹಚ್ಚಿ ಸ್ನಾನ ಮಾಡಿಸುವರು. ಕೆಲವು ಕಡೆ ಲಕ್ಕಿ ತಪ್ಪಲನ್ನು ಬಿಸಿನೀರಿನಲ್ಲಿ ಬೆರೆಸಿ ಬಾಣಂತಿಗೆ ಕುಲದ ಹೆಣ್ಣು ಮಕ್ಕಳೆಲ್ಲ ಸೇರಿ ಸ್ನಾನ ಮಾಡಿಸುತ್ತಾರೆ. ಎಕ್ಕೆಗಿಡದ ತಪ್ಪಲನ್ನು ಮಕ್ಕಳ ಮೂತ್ರದಲ್ಲಿ ಸೇರಿಸಿ ಕುಟ್ಟಿದ ಚೂರ್ಣದಿಂದ ಸಣ್ಣ ಸಣ್ಣ ಗುಳಿಗೆಗಳನ್ನು ತಯಾರಿಸಿ ಊಟಕ್ಕಿಂತ ಮುಂಚೆ ಬಾಣಂತಿಗೆ ಮಾಡುತ್ತಾರೆ. ಆದರೆ ಹೆಚ್ಚಾಗಿ ಈ ಪದ್ಧತಿಯನ್ನು ಕೈಬಿಟ್ಟಿದ್ದಾರೆ. ಕೆಲವು ಕಡೆ ಕೂಸು ಹುಟ್ಟಿದ ಐದನೇ ದಿನಕ್ಕೆ ಮಂಚದ ಕಾಲಿಗೆ ಹಗ್ಗದಿಂದ ತೊಟ್ಟಿಲುಮಾಡಿ ಕೂಸನ್ನು ಹಾಕಿ ತೂಗುತ್ತಾರೆ. ಇದನ್ನು ''ಐದೇಶಿ'' ಎಂದು ಕೂಡ ಕರೆಯುತ್ತಾರೆ (ಹಿಮ್ಮಡಿ, ೨೦೦೮: ೬೨). ಇಲ್ಲಿಗೆ ಜನನದ ಸೂತಕ ಕಳೆಯುತ್ತದೆ. ಸೂತಕದ ನಂತರ ಮಗುವಿಗೆ ನಾಮಕರಣ ನಡೆಯುವ ಪದ್ಧತಿ ಇವರಲ್ಲಿದೆ. ಮೊದಲು ಈ ಕಾರ್ಯವನ್ನು ಮಗು ಜನಿಸಿದ ಐದನೇದಿನದಲ್ಲಿ ಮಾಡಲಾಗುತ್ತಿತ್ತು. ಆದರೆ ಈಗ ಐದನೇ ದಿನದ ಬದಲು ಹೆಣ್ಣು ಕೂಸಿಗೆ ೧೨ನೇ ದಿನಕ್ಕೆ ಗಂಡಾಗಿದ್ದರೆ ೧೩ನೇ ದಿನಕ್ಕೆ ನಾಮಕರಣ ಮಾಡುವ ಸಂಪ್ರದಾಯವಿದೆ. ನಾಮಕರಣದ ಸಮಯದಲ್ಲಿ ಕಡ್ಡಾಯವಾಗಿ ಇಂದಿಗೂ ಈ ಸಮುದಾಯದಲ್ಲಿ ಬಟ್ಟೆಯ ತೊಟ್ಟಿಲನ್ನು ಕಟ್ಟುತ್ತಾರೆ. ಈ ಸಂದರ್ಭದಲ್ಲಿ ಎಕ್ಕೆ ಹೂವಿನಿಂದ ತೆಗದ ದಾರವನ್ನು ಮಗುವಿಗೆ ಉಡುದಾರವನ್ನಾಗಿ ತೊಡಿಸುತ್ತಾರೆ. ಮೂರು ದಿನಗಳವರಿಗೆ ಅದು ಮಿಂಚುತ್ತಿರುತ್ತದೆ. ನಂತರ ಅದನ್ನು ಬಿಚ್ಚಿ ಅದಕ್ಕೆ ಬದಲಾಗಿ ಕಾಶಿದಾರವನ್ನು ಉಡಿಸುತ್ತಾರೆ. ನಾಮಕರಣಕ್ಕೆ ಬಂಧುಗಳೆಲ್ಲರನ್ನು ಕರೆದು ತರುತ್ತಾರೆ. ತೊಟ್ಟಿಲಿಗೆ ಪೂಜೆ ಮಾಡಿ ನಾಲ್ಕು ಜೋಗುಳ ಪದಹಾಡಿ ಸೋದರ ಮಾವನಿಂದ ಕೂಸಿಗೆ ಹೆಸರನ್ನು ಇಡಿಸುತ್ತಾರೆ. ಸೋದರ ಮಾವ ಇಲ್ಲದಿದ್ದರೆ ಮಾವ ಆಗುವವರಲ್ಲಿ ಒಬ್ಬರು ಹೆಸರಿಡಲು ಅರ್ಹರಾಗುತ್ತಾರೆ. ಹೆಣ್ಣು ಮಗುವಾದರೆ ಮಾರಮ್ಮ, ದುರಗಮ್ಮ, ದ್ಯಾಮಮ್ಮ, ಲಕ್ಷ್ಮಮ್ಮ, ಶಂಕ್ರಮ್ಮ ಮುಂತಾದ ಹೆಣ್ಣು ದೇವರುಗಳ ಹೆಸರನ್ನು ಇಡುತ್ತಾರೆ. ಅದರಲ್ಲೂ ಕೂಸು ಮಂಗಳವಾರ ಜನಿಸಿದರೆ ದುರ್ಗಾದೇವಿಯ ಹೆಸರನ್ನು ನಾಮಕರಣಗೊಳಿಸುತ್ತಾರೆ. ಗಂಡು ಮಗುವಾದರೆ ದುರಗಪ್ಪ ಎಂದು ಹೆಸರನ್ನು ಇಡುತ್ತಾರೆ. ಗಂಡು ಮಕ್ಕಳಿಗೆ ಮಾರೆಪ್ಪ, ಅಂಜಿನಪ್ಪ, ದುರಗಪ್ಪ, ತಿಮ್ಮಣ್ಣ, ವೆಂಕಟೇಶ ಮುಂತಾದ ಹೆಸರನ್ನು ಇಡುತ್ತಾರೆ. ಮಗುವಿನ ಹೆಸರನ್ನು ಕೂಗುವುದಕ್ಕೆ ಮುಂಚೆ ತಮ್ಮ ಮನೆದೇವರ ಹೆಸರನ್ನು ಕೂಗಿ ನಂತರ ನಿಜನಾಮವನ್ನು ಹೇಳುವ ಹೆಸರೆ ನಿಜವಾದದ್ದು, ಅದನ್ನು ಮಾವನಾದವನು ಹೇಳುವಾಗಿ ಮಗುವಿನ ಕಿವಿಯಲ್ಲಿ ನಿಧಾನವಾಗಿ ಕೂಗುವನು. ಮಗುವಿನ ಹೆಸರನ್ನು ಎರಡು ಸಲ ಹೇಳಿ ಕೊನೆಗೆ ಕುರ್್ರ ಎನ್ನುವರು. ಎಲ್ಲರಿಗೂ ಕೇಳುವಂತೆ ಬಾಗಿ ಮಗುವಿನ ಕಿವಿಯಲ್ಲಿ ಹೇಳುವಾಗಿ ಬಾಗಿದ ಆತನ ಬೆನ್ನಿಗೆ ಮಕ್ಕಳಾದಿಯಾಗಿ ಎಲ್ಲರೂ ಗುದ್ದುವರು. ಹೀಗೆ ಮೂರು ಸಲವೂ ನಡೆಯುತ್ತದೆ. ನಾಮಕರಣದ ನಂತರ ತೊಟ್ಟಿಲಲ್ಲಿ ಮಗುವಿನ ಪಕ್ಕದಲ್ಲಿನ ಗಂಟು ಅಂದರೆ ಸೋದರ ಮಾವನು ಚಾಜು, ಗುಗ್ರಿಕಾಳು, ಮಂಡಾಳು ಮತ್ತು ಚಿಲ್ಲರೆ ಹಣ ಬಿಳಿ ಬಟ್ಟೆಯಲ್ಲಿ ಕಟ್ಟಿ ಇಟ್ಟಿದನ್ನು ತೆಗೆದುಕೊಂಡು ಹೋಗುವನು. ಅದನ್ನು ''ಸೋದರಮಾವನ ಗಂಟು'' ಎಂದು ಕರೆಯುತ್ತಾರೆ (ಹಿಮ್ಮಡಿ, ೨೦೦೮: ೬೩).

ನಾಮಕರಣ ಪ್ರಕ್ರಿಯೆ ಮುಗಿದ ನಂತರ ಬಂದ ಎಲ್ಲ ಬಂಧುಗಳಿಗೆ ಗುಗ್ರಿಕಾಳು ಮಂಡಾಳು ಕೊಡುತ್ತಾರೆ. ಇನ್ನು ಕೆಲವು ಸ್ಥಿತಿವಂತರು ಎಲ್ಲರಿಗೂ ಊಟ ಹಾಕುತ್ತಾರೆ. ಹಾಗೆಯೇ ನಾಮಕರಣಕ್ಕೆ ಬಂದ ಬಂಧುಬಾಂಧವರು ಈ ಸಂದರ್ಭದಲ್ಲಿ ಮುಯ್ಯಿ ಅಂದರೆ ಆಯಾರ ಮಾಡುತ್ತಾರೆ. ಕೂಸು ಹುಟ್ಟಿದ ಮೂರು ತಿಂಗಳೊಳಗೆ ಮನೇದೇವರಿಗೆ ಎಲೆ ಕತ್ತರಿ ಕೊಟ್ಟು ಬಂದು ಸೋದರ ಮಾವನನ್ನು ಕರೆಯಿಸಿ ಕೂದಲನ್ನು ಹೊಳೆಯಲ್ಲಿ ಚೆಲ್ಲಿ ಬರುತ್ತಾರೆ. ಈ ಸಂದರ್ಭದಲ್ಲಿ ಸೋದರ ಮಾವನಿಗೆ ಬಟ್ಟೆ ಆಯಾರ ಮಾಡುತ್ತಾರೆ. ಹಿಂದೆ ಆಯಾರ ಮಾಡುತ್ತಿರಲಿಲ್ಲ ಕಾರಣ ಬಡತನ ಎಂದು ಹೇಳಬಹುದು. ಇದಾದನಂತರ ಮಗುವಿಗೆ ೫ ತಿಂಗಳೊಳಗೆ ಅಥವಾ ಹನ್ನೊಂದು ತಿಂಗಳೊಳಗೆ ಕಿವಿ ಚುಚ್ಚುವ ಕಾರ್ಯ ನಡೆಯುತ್ತದೆ.

ಇತ್ತೀಚಿಗೆ ಆಧುನಿಕತೆಯ ಪ್ರಭಾವದಿಂದ ಬಂಗಾರದಿಂದ ಮಾಡಿದ ಮುರವನ್ನು ಚುಚ್ಚುತ್ತಾರೆ. ಹಾಗೆ ಮಗುವಿಗೆ ಮುರವನ್ನು ಚುಚ್ಚುತ್ತಾರೆ. ಹಾಗೆ ಮಗುವಿಗೆ ತವರು ಮನೆಯವರು ಕಬ್ಬಿಣ ಅಥವಾ ಕಟ್ಟಿಗೆ ತೊಟ್ಟಿಲು ಮತ್ತು ಇದಕ್ಕೆ ಸಂಬಂಧಿಸಿದ ಇತರ ಸಾಮಾಗ್ರಿಗಳನ್ನು ಕೊಡುವದನ್ನು ಸಹ ನೋಡಬಹುದು. ಮೊದಲು ಈ ಪದ್ಧತಿ ಇರಲಿಲ್ಲಾ ಎಂದು ಕ್ಷೇತ್ರ ಕಾರ್ಯಕೈಗೊಂಡಾಗ ಈ ಸಮುದಾಯದ ಹಿರಿಯರು ಹೇಳುತ್ತಾರೆ.

೩.೧.೨. ಋತುಮತಿ

ಹೆಣ್ಣಿನ ಜೀವನದಲ್ಲಿ ಸಹಜವಾಗಿ ನಡೆಯುವ ಕ್ರಿಯೆ ಇದಾಗಿದೆ. ಈ ಘಟ್ಟ ತಲುಪಿದಾಗಲೂ ಕೆಲವೊಂದು ಆಚರಣೆಗಳನ್ನು ಮಾಡುವುದು ಪ್ರತಿಯೊಂದು ಸಮುದಾಯದಲ್ಲಿಯೂ ಕಾಣಬಹುದು. ಚೆನ್ನದಾಸರು ಸಹ ಇದಕ್ಕೆ ಹೊರತಾಗಿಲ್ಲ. ಹೆಣ್ಣು ಋತುಮತಿಯಾದರೆ ಐದು ದಿನಗಳವರಿಗೆ ಆಕೆಯನ್ನು ಮುಟ್ಟದಂತೆ ಬೇರೆ ಚಪ್ಪರದಲ್ಲಿ ಕೂಡಿಸುವರು. ಆದರೆ ದೊಂಬಿದಾಸರು ಮನೆಯ ಒಳಗೆ ಒಂದು ಮೂಲೆಯಲ್ಲಿ ತೆಂಗಿನಗರಿ, ಲಕ್ಕಿಸೊಪ್ಪು, ಹತ್ತಿಸೊಪ್ಪು ಮತ್ತು ಹಲಸಿನ ಸೊಪ್ಪನ್ನು ಬಳಸಿ ಗುಡಿಸಲು ನಿರ್ಮಾಣಮಾಡಿ ೧೬ ದಿನದವರೆಗೆ ಕೂಡಿಸುತ್ತಾರೆ (ಕುಪ್ಪ, ೨೦೦೮ ಪು.೩೮). ಅಲೆಮಾರಿ ಸಮುದಾಯಗಳಲ್ಲಿಯೇ ಬೇರೆ ಬೇರೆ ಸಂಪ್ರದಾಯಗಳನ್ನು ಕಾಣಬಹುದು.

ಋತುಮತಿಯಾದಾಗ ಹೆಣ್ಣು ಮಗಳಿಗೆ ಸೋದರ ಅತ್ತಿಗೆ ಋತುಮತಿಯಾದ ದಿನದಂದು ಮುಟ್ಟು ತೊಳೆಯುತ್ತಾಳೆ. ನಂತರ ಋತುಮತಿಯಾದ ಹೆಣ್ಣು ಮಗಳಿಗೆ ಊಟವನ್ನು ದೂರದಿಂದಲೇ ಎಡೆಮಾಡಿ ಕೊಡುವುದು ಮತ್ತು ಏನೇ ಕೊಟ್ಟರೂ ಎತ್ತಿ ಹಾಕುವುದು ಇಲ್ಲಿ ಕಂಡುಬರುತ್ತದೆ. ೫ ದಿನ ಆಕೆ ಮೇಲು ಮುಸುಕು ಹಾಕಿಕೊಂಡು ಹೋಗುವುದು ಹಾಗೂ ಕೈಯಲ್ಲಿ ಕುಡುಗೋಲು, ಬೇವಿನ ತಪ್ಪಲು, ನಿಂಬೆಕಾಯಿ ಹಿಡಿದುಕೊಂಡು ಹೊರ ಹೋಗಬೇಕು. ಆಕೆಯ ಮೇಲೆ ಯಾವುದೇ ದೃಷ್ಟಿ ತಾಕದಂತೆ ಮಾಡಲು ಈ ಪದ್ಧತಿ ಅನುಸರಿಸುವರು.

ಋತುಮತಿಯಾದ ದಿನ ಸೋದರಮಾವನು ಆಕೆಯ ತಲೆ ಮೇಲೆ ಕೊಬ್ಬರಿ ಬಟ್ಟಲನ್ನು ಮುರಿಯುವನು. ನಂತರ ಆಕೆಗೆ ಕೊಬ್ಬರಿ, ಬೆಲ್ಲ, ಉತ್ತತ್ತಿ ಮತ್ತು ತುಪ್ಪ ಇನ್ನಿತರೆ ಪೌಷ್ಠಿಕ ಆಹಾರವನ್ನು ಒಂಭತ್ತು ದಿನಗಳವರಿಗೆ ಕೊಡುವರು. ಸ್ಥಳದ ಅಭಾವದಿಂದಾಗಿ ಋತುಮತಿ ಹೆಣ್ಣನ್ನು ಪ್ರತ್ಯೇಕ ಗುಡಾರ ಹಾಕಿ ಕೂಡಿಸಲಾಗುವುದು. ನಂತರ ಆಕೆಯನ್ನು ಎಬ್ಬಿಸುವಾಗ ಉಡಿ ತುಂಬಿ, ಸೇಸೆಹಾಕಿ ಕೂಡಿಸಿ ಸೋದರ ಮಾವನಿಂದ ಉಡಿಯನ್ನು ತುಂಬಿಸಿ ನಂತರ ಐದುಮಂದಿ ಮುತ್ತೈದೆಯರಿಂದ ಎಬ್ಬಿಸಲಾಗುವುದು. ತರುವಾಯ ನಾಲ್ಕು ಜನ ಹೆಣ್ಣು ಮಕ್ಕಳೊಂದಿಗೆ ಊರಲ್ಲಿರುವ

ಹನುಮಂತನ ಗುಡಿಗೆ ಹೋಗಿ ನಮಸ್ಕರಿಸಿಕೊಂಡು ಬರುವದು ಈ ಪ್ರದೇಶದಲ್ಲಿ ಕಾಣಬಹುದು. ಅಂದು ಮನೆಯವರು ಬ್ಯಾಟಿಯ ಊಟವನ್ನು ಎಲ್ಲ ದೈವದವರಿಗೆ ಹಾಕುವದರೊಂದಿಗೆ ಮೈನೆರೆದ ಸೂತಕ ಕಳೆಯುತ್ತದೆಂದು ನಂಬಿಕೆ ಇದೆ. ಆದರೆ ಋತುಮತಿಯಾದ ೬ ತಿಂಗಳವರೆಗೆ ವಿವಾಹ ಮಾಡುವುದಿಲ್ಲ ಎಂದು ಯಲಬುರ್ಗಾದಲ್ಲಿ ನೆಲೆಸಿರುವ ಮಾರೆಪ್ಪ ಚೆನ್ನದಾಸರ ಹೇಳುತ್ತಾರೆ. ಇದು ಹೆಣ್ಣು ಮಗು ದೈಹಿಕವಾಗಿ ಬಲಿಷ್ಠಗೊಳ್ಳುವುದರೊಂದಿಗೆ ಮುಂದೆ ಗರ್ಭಿಣಿಯಾದ ಮೇಲೆ ಹೆರಿಗೆ ಸರಿಯಾಗಿ ಆಗುವ ಸಲುವಾಗಿ ಇರಬಹುದು (ಹಿಮ್ಮಡಿ, ೨೦೦೮: ೯೩).

೩.೧.೩. ವಿವಾಹ

ಪ್ರತಿಯೊಂದು ಗಂಡು ಮತ್ತು ಹೆಣ್ಣಿನ ನಡುವೆ ಸಂಬಂಧ ಬೆಳೆಸುವ ಪ್ರಮುಖ ಘಟ್ಟ ವಿವಾಹ. ಚೆನ್ನದಾಸರ ಸಮುದಾಯದಲ್ಲಿ ಮದುವೆಯಂಥ ಕಾರ್ಯವನ್ನು ಜಾತಿ ಸಂಪ್ರದಾಯದನ್ವಯ ಮಾಡುವುದು ಸಾಮಾನ್ಯ ಮೊದಲು ಈ ಸಮುದಾಯದಲ್ಲಿ ಬಾಲ್ಯ ವಿವಾಹಗಳು ಹೆಚ್ಚಾಗಿ ನಡೆಯಲ್ಪಡುತ್ತಿದ್ದವು. ಆದರೆ ನಾಗರಿಕತೆಯ ಬದುಕಿನಲ್ಲಿ ಮುಂದೆ ಸಾಗುತ್ತಿರುವ ಈ ಸಮುದಾಯದಲ್ಲಿ ಇಂದು ಬಾಲ್ಯ ವಿವಾಹಗಳು ಕೆಲವೊಂದು ಕುಟುಂಬಗಳಲ್ಲಿ ಮಾತ್ರ ಕಂಡುಬರುತ್ತವೆ. ಇತ್ತೀಚಿನ ಈ ಸಮುದಾಯದಲ್ಲಿ ಹೆಚ್ಚಾಗಿ ಪ್ರಾಪ್ತವಯಸ್ಸಿನ ಹುಡುಗರಿಗೆ ವಿವಾಹವಾಗುವುದನ್ನು ಕಾಣಬಹುದು. ಈ ಸಮುದಾಯದಲ್ಲಿ ವಿಶೇಷವಾಗಿ ಸೋದರತ್ತೆಯ ಅಥವಾ ಅಕ್ಕನ ಮಗಳೊಂದಿಗೆ ಮದುವೆ ಸಂಬಂಧ ಬೆಳೆಸುವುದು ರೂಢಿಯಲ್ಲಿದೆ. ಆದರೆ ಅಂತರ ಜಾತಿ ವಿವಾಹಕ್ಕೆ ತೀವ್ರವಾದ ವಿರೋಧವಿದೆ. ಮಕ್ಕಳು ಆಗಲಿಲ್ಲವೆಂದರೆ ಬಹುಪತ್ನಿತ್ವ ಹೊಂದಬಹುದು ವಿಧವಾ ವಿವಾಹಕ್ಕೆ ಅನುಮತಿ ಇರುವದರೊಂದಿಗಿ ಉಡುಕಿ ಮದುವೆಗಳು ಸಹ ನಡೆಯುತ್ತವೆ. ವಿವಾಹಗಳು ಸಮುದಾಯದಲ್ಲಿರುವ ಬೆಡಗುಗಳ ತಳಹದಿಯ ಮೇಲೆ ಆಗುತ್ತವೆ. ಈ ಪ್ರದೇಶದಲ್ಲಿರುವ ಬೆಡಗಗಳೆಂದರೆ ಕುರಪಟ್ಟಿ, ಕುಂದರ್, ಪಾಯಲರ್, ಗಾದಿಯರ್ ಮಾಡಿಬೈನ್, ಸಿಂತಲರ್, ಮಗಸಾಲರ್, ಕೋನಪಾಗಲ್, ಪಿನ್ನಮರ್, ವಾಜಮ್ಮರ್, ಆನೆಗೊಂದುವಾಲ ಇತ್ಯಾದಿ

ಬೆಡಗ ಎಂದರೆ ಒಂದು ಸಮುದಾಯದ ಒಳಗೆ ಇರುವ ಬೇರೆ ಬೇರೆ ಗುಂಪುಗಳನ್ನು ಬೆಡಗುಗಳ ಹಸರಿನಿಂದ ಗುರುತಿಸುತ್ತಾರೆ. ಈ ಗುರುತಿಸುವಿಕೆಯಿಂದ ಒಂದೇ ರಕ್ತ ಸಂಬಂಧದಲ್ಲಿ ವಿವಾಹವಾಗುವುದನ್ನು ತಪ್ಪಿಸುವ ಉದ್ದೇಶವಿದೆ (ಹಿಮ್ಮಡಿ, ೨೦೦೮: ೮೬). ವಧು ವರನ ಬೆಡಗುಗಳು ಒಂದೇ ಆಗಿದ್ದರೆ ವಿವಾಹವಾಗುವುದಿಲ್ಲ. ಕಾರಣ ಒಂದೇ ಹೆಸರಿನ ಬೆಡಗನ್ನು ಹೊಂದಿದ್ದಾರೆ. ಅಂತಹ ಕುಟುಂಬದ ಸದಸ್ಯರ ಸೋದರ ಸಂಬಂಧಿಗಳು ಎಂಬ ಜಾತಿ ನಿಯಮದ ಉದ್ದೇಶದಿಂದ ವಿವಾಹ ನಡೆಯುವುದಿಲ್ಲ. (ವಧುವಿನ) ಬೆಡಗ ಬೇರೆ ಬೇರೆಯಾಗಿದ್ದರೆ ಮಾತ್ರ ವಿವಾಹ ಕಾರ್ಯವನ್ನು ಕೈಗೊಳ್ಳುತ್ತಾರೆ. ಒಟ್ಟಿನಲ್ಲಿ ಬೆಡಗು ನೋಡಿಯೇ ಹೆಣ್ಣು ತರುವುದು ಸಂಪ್ರದಾಯವಾಗಿದೆ. ಮೊದಲ ಬಾರಿಗೆ ಮದುವೆಯಾಗುವ ಪುರುಷನಿಗೆ ತರುವ ಹೆಣ್ಣು ''ಶೀಲಗೆಟ್ಟಿರಬಾರದು''. ಬೇರೆಯವರೊಂದಿಗೆ ದೈಹಿಕ ಸಂಬಂಧ ಬೆಳಸಿರಬಾರದು. ಬಿಳುಪು ಅಥವಾ ಇನ್ನಾವುದೇ ರೋಗ ಇರಬಾರದು. ''ಸುಳಿ'' ಉತ್ತಮವಾಗಿರಬೇಕು. ಇತ್ಯಾದಿ ನಿಬಂಧನೆಗಳನ್ನು ಅನುಸರಿಸಿ ಹೆಣ್ಣನ್ನು ತರುವ ರೂಢಿಯಿದೆ. ಹೆಣ್ಣನ್ನು ನೋಡಲು ಹೋಗುವ ಮುಂಚೆ ಆಕೆಯ ಬಗ್ಗೆ ಈ ಮೇಲಿನಂತೆ ವಿಚಾರಿಸುತ್ತಾರೆ. ಹೆಣ್ಣು ನೋಡಲು ಗಂಡಿನ ಕಡೆಯವರು ಮೊದಲು ತಾವು ಬರುವ ಸುದ್ದಿಯನ್ನು ಹೆಣ್ಣಿನ ಮನೆಯವರಿಗೆ ಮೊದಲೇ ತಿಳಿಸಿರುತ್ತಾರೆ. ಹೆಣ್ಣನ್ನು ನೋಡಲು

ಹೋಗುವ ಮುಂಚೆ ಆಕೆಯ ಬಗ್ಗೆ ಈ ಮೇಲಿನಂತೆ ವಿಚಾರಿಸುತ್ತಾರೆ. ಹೆಣ್ಣು ನೋಡಲು ಗಂಡಿನ ಕಡೆಯವರು ಮೊದಲು ತಾವು ಬರುವ ಸುದ್ದಿಯನ್ನು ಹೆಣ್ಣಿನ ಮನೆಯವರಿಗೆ ಮೊದಲೇ ತಿಳಿಸಿರುತ್ತಾರೆ ಹೆಣ್ಣಿನ ಕಡೆಯವರು ತಮಗೆ ಬೇಕಾದವರನ್ನು ಮತ್ತು ತಮ್ಮ ಗುಂಪಿನ ಗುಡೇ ಗಾಡವನ್ನು ಕರೆಸಿಕೊಳ್ಳುತ್ತಾರೆ. ಕನ್ಯಾ ನಿಶ್ಚಯ ಮಾಡಲು ಗಂಡಿನ ಕಡೆಯವರು ಹೆಣ್ಣಿನ ಮನೆಗೆ ಬರುತ್ತಾರೆ. ಕೂಡಿದ ದೈವದ ನಡುವೆ ಗಂಡಿನ ಕಡೆಯವರು ಹೆಣ್ಣಿನ ಮನೆಯ ಮುಖ್ಯಸ್ಥನನ್ನು ಉದ್ದೇಶಿಸಿ ''ನಾವು ನಿಮ್ಮ ಮನೆಗೆ ಬೇಳೆ ಅನ್ನವನ್ನು (ಪಪ್ಪು ವಂಡಕಮು) ಕೇಳಲು ಬಂದಿದ್ದೇವೆ'' ಎನ್ನುತ್ತಾನೆ. ಹುಡುಗಿಯನ್ನು ಕೊಂಡು ಮನಸ್ಸು ಇದ್ದರೆ ಆತ ''ಕೊಡುತ್ತೇವೆ ತೆಗೆದುಕೊಳ್ಳಿರಿ'' ಎನ್ನುವನು. ಆಗ ಹೆಣ್ಣಿಗೆ ಜಾಲಿ-ಕೂಲಿ ತೆರವು ಮತ್ತು ಖರ್ಚು ಕೊಡುವುದರ ಕುರಿತು ಮಾತುಕತೆ ನಡೆಯುತ್ತದೆ. ಹೆಣ್ಣಿಗೆ ತೆರವು ೫೦ ರೂಪಾಯಿ ಕುಲಸ್ಥನ ತೆರವು ೭೫ ರೂಪಾಯಿ ಕೊಡಬೇಕೆಂದು ಅಲ್ಲದೆ ಕೂಲಿಯಾಗಿ ಸೀರೆ, ಕುಪ್ಪಸ ಕೊಡಿಸಲು ಹಣ ಕೊಡಬೇಕೆಂದು ಮಾತು ಕತೆ ಮಾಡುತ್ತಾರೆ. ಇದಲ್ಲದೆ ದೈವದ ಖುಷಿಗಾಗಿ ಗಂಡಿನವರು ಹಣ ಕೊಡಬೇಕು. ಅವರ ಅರ್ಧದಷ್ಟು ಹೆಣ್ಣಿನವರು ಕೊಡಬೇಕು ಎಂದು ನಿಶ್ಚಯಿಸುತ್ತಾರೆ. ಆಗ ಗಂಡಿನ ಕಡೆಯಿಂದ ಬಂದ ಮುತ್ತೈದೆಯರು ವಧುವಿಗೆ ಹಸಿರು ಸೀರೆ ಉಡಿಸಿ, ಕೂಡಿಸಿ ಉಡಿಯೊಳಗೆ ಉಡಿಯಕ್ಕಿ ಹಾಕಿ ಎಲೆ, ಅಡಿಕೆ ಮತ್ತು ಬಾಳೆಹಣ್ಣು ಇಟ್ಟು ಉಡಿ ತುಂಬುತ್ತಾರೆ. ಇದು ಶರೀರ ಸಂಬಂಧ ಹೊಂದಿತು ಎನ್ನುವುದಕ್ಕೆ ಸಾಕ್ಷಿ ಇದಕ್ಕೆ ಸಾಕಲು ಶಾಸ್ತ್ರ ಎನ್ನುತ್ತಾರೆ (ಹಿಮ್ಮಡಿ, ೨೦೦೮: ೮೮).

ಇತ್ತೀಚೆಗೆ ಈ ಪ್ರದೇಶದಲ್ಲಿರುವ ಸಮುದಾಯದಲ್ಲಿ ಹೆಣ್ಣಿನ ತಂದೆ ಅಥವಾ ಚಿಕ್ಕಪ್ಪನ ಬಾಯಲ್ಲಿ ವರನ ತಂದೆ ಅಥವಾ ಚಿಕ್ಕಪ್ಪ ಪರಸ್ಪರ ಬಾಯಲ್ಲಿ ಸಕ್ಕರೆಯನ್ನು ಹಾಕುತ್ತಾರೆ. ಆ ಮೂಲಕ ಬೀಗುತನ ಮಾಡುವ ದಿನವನ್ನು ಮತ್ತು ಇತರ ಒಪ್ಪಂದಗಳ ಗಂಡಿನವರು ೧೫ ಬಳೆಗಳಿಗೆ ೫೦ ರೂಪಾಯಿಗಳನ್ನು ಕೊಡುವುದು ರೂಢಿ. ನಂತರ ಗುಂಪಿನ ಮುತ್ತೈದೆಯರಿಂದ ಸೋಬಾನೆ ಪದ ಹಾಡಿಸುತ್ತಾರೆ. ಬಳಿಕ ಕುಲಸ್ಥರಿಗೆ ಮತ್ತು ಹಿರಿಯರಿಗೆ ಸರಾಯಿ ಕುಡಿಸಿ ಮಾಂಸದ ಊಟ ಹಾಕುತ್ತಾರೆ. ಇತ್ತೀಚಿಗೆ ಸಿಹಿ ಊಟವನ್ನು ಹಾಕುತ್ತಾರೆ. ನಿಶ್ಚಯ ದಿನದಂದು ತೀರ್ಮಾನಿಸಿದ ದಿನದಲ್ಲಿ ಮದುವೆಯ ಕಾರ್ಯವನ್ನು ಪ್ರಾರಂಭಿಸುತ್ತಾರೆ.

ಈ ಸಮುದಾಯದಲ್ಲಿ ಐದು ದಿನಗಳವರೆಗೆ ಮದುವೆ ಕಾರ್ಯಕ್ರಮಗಳು ನಡೆಯುತ್ತವೆ. ಇನ್ನು ಕೆಲವು ಕಡೆಗಳಲ್ಲಿ ಮೂರು ದಿನಗಳ ಕಾಲ ಮದುವೆ ನಡೆಯುತ್ತದೆ. ಐದು ದಿನಗಳ ಮದುವೆ ಕಾರ್ಯದಲ್ಲಿ ಒಂದನೇ ದಿನ ಶಕ್ತಿ ಪೂಜೆ ಮಾಡುವರು. ಯಲ್ಲಮ್ಮ, ದುರುಗಮ್ಮ, ಲಕ್ಕಮ್ಮ ಇತ್ಯಾದಿ ಮನೆ ದೇವರ ಪೂಜೆಯನ್ನು ಬ್ಯಾಟಿ ಕೊಯ್ದು ಅಡುಗೆ ಮಾಡಿ ಬಂಧುಗಳೊಂದಿಗೆ ಊಟ ಮಾಡುವ ಮೂಲಕ ಮದುವೆಯ ಮೊದಲ ದಿನದ ಕಾರ್ಯಕ್ಕೆ ಮುಕ್ತಾಯ ಹಾಡುತ್ತಾರೆ. ಎರಡನೇ ದಿನ ಮಣ್ಣಿನಿಂದ ಮೂರ್ತಿಮಾಡಿ ಬೆಳ್ಳಿಯ ಅಥವಾ ಕಂಚಿನ ರೂಪಾಯಿಗಳನ್ನಿಟ್ಟು ಹಿರಿಯರ ಪೂಜೆ ಎಂದು ಮಾಡುತ್ತಾರೆ. ಮೂರನೇ ದಿನ ಹಂದರ ಹಾಕುವ ಕಾರ್ಯ ನಡೆಯುತ್ತದೆ. ಈ ಕಾರ್ಯವನ್ನು ಮನೆಯ ಮುಂದೆ ಕೈಗೊಳ್ಳಲಾಗುತ್ತದೆ. ಹಂದರ ಮೇಲೆ ಬಸರೆ ತಪ್ಪಲು (ಹುಲಗೊಲಿ ತಪ್ಪಲು) ಹಂದರ ತಪ್ಪಲು ಹಾಕಿ ಚಪ್ಪರ ತಯಾರಿ ಮಾಡುವರು. ಈ ಹಂದರದ ಹಾಕಿದ ದಿನ ಮಾಂಸಹಾರ ಇರುವುದಿಲ್ಲ. ಎಲ್ಲರು ಶುಚಿ ಭೂತರಾಗಿ, ಹುತ್ತಿನ ಮಣ್ಣು ತಂದು ಹಂದರದ ಕೆಳಗೆ ಹುತ್ತಿನ ಮಣ್ಣಿನಿಂದ ಒಂಭತ್ತು ಕಾಲುಗಳಿರುವಂತೆ ''ಶಾಸಿ

ಕಟ್ಟೆ''ಯನ್ನು ರಚಿಸುತ್ತಾರೆ. ಬೇರೆ ಬೇರೆ ಬಣ್ಣದ ಎಲೆ, ಹೂ, ಹಣ್ಣು ಕಾಯಿಗಳ ಒಣಗಿದ ಪುಡಿಯಿಂದ ತಯಾರಿಸಿದ ರಂಗೋಲಿಯ ಪುಡಿಯನ್ನು ಉಪಯೋಗಿಸಿ ಹಂದರದ ಶಾಸಿ ಕಟ್ಟೆ ಮೇಲೆ ರಂಗೋಲಿಯಿಂದ ಚಿತ್ತಾರಗಳನ್ನು ರಚಿಸಿ, ಮಾವಿನ ಎಲೆಗಳಿಂದ ತಳಿರು, ತೋರಣ ಕಟ್ಟುತ್ತಾರೆ.

ನಾಲ್ಕನೇ ದಿನ ಮುಂಜಾನೆ ಐರಾಣಿ ಕೊಡ ತರುವುದು, ಅಂದರೆ ಐರಾಣಿ ಕೊಡದಿಂದ ನೀರು ತರಲು ಹೋಗುವ ಪೂರ್ವದಲ್ಲಿ ಕುಂಬಾರನ ಗಡಿಗೆ ಮಾರಾಟದ ಅಣುಕು ಪ್ರದರ್ಶನವನ್ನು ಪೂರ್ತಿಗೊಳಿಸಿ, ಮಧುಮಕ್ಕಳು ಸೇರಿ ಎಲ್ಲರೂ ಗಂಗಾ ಮಾತೆಗೆ ಪೂಜೆ ಮಾಡಿ ನೀರು ತರುವರು. ನಾಲ್ಕು ದೊಡ್ಡಗಡಿಗೆ, ನಾಲ್ಕು ಚಿಕ್ಕ ಮಗಿಳು ಒಂದು ತಂಬಿಗೆ ಒಟ್ಟು ಒಂಭತ್ತು ಕೊಡಗಳಂತೆ ನೀರು ತುಂಬಿಟ್ಟು ಪೂಜೆ ಸಲ್ಲಿಸಿ ಅಲ್ಲಿಂದ ಲಗ್ನದ ಮನೆಗೆ ಬಂದು ಅಲ್ಲಿ ಐರಾಣಿಕೊಡವನ್ನು ಸ್ಥಾಪಿಸುತ್ತಾರೆ. ಅದೇ ದಿನ ಮಾಂಗಲ್ಯ ಕಾರ್ಯಕ್ರಮವಿರುತ್ತದೆ. ಮದುಮಕ್ಕಳಿಗೆ ಹಂದರ ಮುಂದೆ ಒನಕೆಯನ್ನಿಟ್ಟು ಅದರ ಮೇಲೆ ಪೂರ್ವಾಭಿಮುಖವಾಗಿ ಕೂಡಿಸಿ, ನೀರನ್ನು ಹಾಕಿ ಮತ್ತೆ ವಸ್ತ್ರ ಕಟ್ಟೆಯ ಮೇಲೆ ಕೂಡಿಸುತ್ತಾರೆ. ಸಮುದಾಯದ ಬಲ್ಲ ಹಿರಿಯರು ಹಿಂದಿನ ಸಂಪ್ರದಾಯದಂತೆ ಮಾಂಗಲ್ಯಧಾರಣೆ ಮಾಡಿಸುವರು. ಮಾಂಗಲ್ಯ ಧಾರಣೆಯ ನಂತರ ಮದುಮಕ್ಕಳು ಹಾಲಿನಲ್ಲಿ ಇಲ್ಲವೆ ನೀರಿನಲ್ಲಿ ಮುತ್ತು ಹುಡುಕುವ ಶಾಸ್ತ್ರ ಮಾಡುತ್ತಾರೆ. ಆ ಮೇಲೆ ಸಭಾಶ್ಯಾಸಿ, ಅಂದರೆ ಮುಯ್ಯಿ ಇಡುವುದು. ಮೆರವಣಿಗೆ, ಗ್ರಾಮದೇವರ ಪೂಜೆ, ಹನುಮಂತ ದೇವರ ಪೂಜೆಯನ್ನು ಮುದುಮಕ್ಕಳು ಮಾಡುತ್ತಾರೆ.

ಕೊನೆಯ ದಿನ ಅಂದರೆ ಐದನೆಯ ದಿನ 'ನಾಗೋಲಿ' ಎಂದು ಮಾಡುತ್ತಾರೆ. ಬೀಗರು ಒಂದು ಬೇಟೆಯನ್ನು ಹಿಡಿದು ತರುತ್ತಾರೆ. ಹಂದರದ ಕೆಳಗೆ ಶಾಸಿಕಟ್ಟೆಯ ಮೇಲೆ ಕೊಯ್ಯುತ್ತಾರೆ. ಮದುವೆಗೆ ಬಂದವರೆಲ್ಲಾ ರಕ್ತವನ್ನು ನೋಡಲೇಬೇಕು ಎಂಬುದು ಈ ಸಮುದಾಯದ ಆಚರಣೆಗಳಲ್ಲಿ ಒಂದು. ರಕ್ತ ನೋಡಿದ ನಂತರ ಮದುಮಕ್ಕಳಿಂದ ಹಂದರದ ತಪ್ಪಲನ್ನು ತೆಗೆಯಲು ಹೇಳಿ ನಂತರ ಉಳಿದದ್ದನ್ನು ಬೇರೆಯವರು ತೆಗೆಯುತ್ತಾರೆ. ಸಂಜೆ ಮಾಂಸದ ಅಡುಗೆಯ ಊಟವನ್ನು ಎರಡೂ ಕಡೆಯವರು ಮಾಡುತ್ತಾರೆ. ಇಂದಿಗೆ ಐದು ದಿನಗಳ ಮದುವೆಯ ಎಲ್ಲ ಸಂಪ್ರದಾಯಗಳು ಮುಗಿದು ಮಾರನೆಯ ದಿನ ತಮ್ಮ ನೆಲೆಗಳಿಗೆ ಪ್ರಯಾಣಿಸುತ್ತಾರೆ (ಹಿಮ್ಮಡಿ, ೨೦೦೮: ೮೯).

ಈ ಸಮುದಾಯದಲ್ಲಿ ಹಿಂದೆ ಐದು ದಿನಗಳ ಮದುವೆಯ ಕಾರ್ಯ ನಡೆಯುತ್ತಿತ್ತು. ಆದರೆ ಆಧುನಿಕತೆಯ ಪ್ರಭಾವದ ಪರಿಣಾಮದಿಂದ ಐದು ದಿನಗಳ ಕಾರ್ಯವನ್ನು ಒಟ್ಟು ಒಂದೇ ದಿನದಲ್ಲಿ ಮಾಡುವ ಸಂಪ್ರದಾಯಕ್ಕೆ ನಿಂತಿದ್ದಾರೆ. ಹಾಗೇ ಈ ಸಮುದಾಯದಲ್ಲಿ ಮೊದಲು ವರದಕ್ಷಿಣೆ ತೆಗೆದುಕೊಳ್ಳುತ್ತಿರಲಿಲ್ಲ, ಈಗ ತೆಗೆದುಕೊಳ್ಳುತ್ತಾರೆ. ಹಾಗೆ ವಧುವರರಿಗೆ ಬಂಗಾರದ ಆಭರಣಗಳನ್ನು ಹಾಕುವುದನ್ನು ಈ ಪ್ರದೇಶದಲ್ಲಿರುವ ಕೆಲವೊಂದು ಕುಟುಂಬಗಳಲ್ಲಿ ಕಾಣಬಹುದು.

೩.೧.೪. ಮರಣ

ಮರಣ ಸಂಸ್ಕಾರಕ್ಕೆ ಸಂಬಂಧಿಸಿದಂತೆ ಚೆನ್ನದಾಸರು ಕೆಲವೊಂದು ಆಚರಣೆಗಳನ್ನು ಅಳವಡಿಸಿಕೊಂಡಿರುವುದು ಕಂಡುಬರುತ್ತದೆ. ಈ ಸಮುದಾಯ ಅಲೆಮಾರಿ ಸಮುದಾಯವಾಗಿದ್ದರಿಂದ ಮರಣ ಹೊಂದಿದ ಊರಲ್ಲಿ ಶವ

ಸಂಸ್ಕಾರ ಮಾಡುವದು ಸಂಪ್ರದಾಯವಾಗಿದೆ. ಮರಣ ಹೊಂದಿದ ನಂತರ ಸತ್ತ ವ್ಯಕ್ತಿಯ ಸಂಬಂಧಿಕರಿಗೆ ವಿಷಯ ತಿಳಿಸಿ ಮಣ್ಣು ಮಾಡುವ ಕಾರ್ಯಕ್ಕೆ ಬರಹೇಳುತ್ತಾರೆ. ''ಮೊದಲು ಈ ಸಮುದಾಯದಲ್ಲಿ ಸತ್ತ ವ್ಯಕ್ತಿಯನ್ನು ಗುಡಿಸಲುಗಳಲ್ಲಿ ಅಂಗಾತ ಮಲಗಿಸಿ ಸ್ಮಶಾನಕ್ಕೆ ಒಯ್ಯುವಾಗ ಸ್ನಾನ ಮಾಡಿಸಿಕೊಂಡು ಒಯ್ಯುತ್ತಿದ್ದರು. ಈಗ ಮೊದಲೇ ಜಳಕ ಮಾಡಿಸಿ ಗೂಟಕ್ಕೆ ಬಡಿಯುತ್ತಾರೆ. ಮರಣ ಹೊಂದಿದವರನ್ನು ಸುಡುವ ಮತ್ತು ಹೂಳುವ ಪದ್ಧತಿಗಳಿವೆ. ಆದರೆ ಸಾಮಾನ್ಯವಾಗಿ ಸತ್ತವರನ್ನು ಹೂಳುತ್ತಾರೆ. ತೊನ್ನು ಅಥವಾ ಇನ್ನಿತರ ಭಯಂಕರ ವಾಸಿಯಾಗದ ರೋಗದಿಂದ ಮರಣ ಹೊಂದಿದರೆ ಅಥವಾ ಬಾಣಂತಿ ತೀರಿಕೊಂಡರೆ ಅವರ ಶವವನ್ನು ಸುಡಲಾಗುತ್ತದೆ. ಕಾರಣ ತೊನ್ನು ಇದ್ದವರನ್ನು ಹೂಳಿದರೆ ಮಳೆಯಾಗುವುದಿಲ್ಲ ಹಾಗೂ ಬಾಣಂತಿಯನ್ನು ಹೂಳಿದರೆ ಮಂತ್ರವಾದಿಗಳು ಅವಳ ಕೈ ಬೆರಳಗಳನ್ನು ಕಡಿದು ಮಾಂತ್ರಿಕತೆಗೆ ಉಪಯೋಗಿಸಬಹುದೆಂಬ ನಂಬಿಕೆಯಿಂದ ಅವರನ್ನು ಸುಡುತ್ತಾರೆ. ಕೌವುದಿ, ಕಳ್ಳಿಕಟ್ಟಿಗೆ ಚಟ್ಟಕಟ್ಟಿ ಶವಯಾತ್ರೆ ನಡೆಸುತ್ತಾರೆ. ಶವಯಾತ್ರೆ ನಡೆಯುವ ಹಾದಿಯಲ್ಲಿ ಕೋಳಿ ತತ್ತಿ ಒಯ್ಯುತ್ತಾರೆ. ಶವದ ಕಂಕುಳದಲ್ಲಿ ಇಡುತ್ತಾರೆ. ಹೋಗುವಾಗ ನೀರು ತುಂಬಿದ ಗಡಿಗೆಯನ್ನು ಒಯ್ಯುತ್ತಾರೆ. ಐದು ಸುತ್ತು ಸುತ್ತಿ ಪೂರ್ವ ಎತ್ತರದ ದಂಡ ಮೇಲೆ ಶವವನ್ನು ಕೆಳಗೆ ಇಳಿಸಿ ಕುಣಿಯಲ್ಲಿ ಹಾಕಿ ಅಂತಿಮ ದರ್ಶನ ಪಡೆದು ಎಲ್ಲರೂ ಕೈಕೂಡಿಸಿ ಮಣ್ಣು ಮಾಡಿದ ಬಳಿಕ ಎರಡು ಕಲ್ಲುಗಳನ್ನು ತಂದು ಒಂದು ಶವದ ಮಧ್ಯಭಾಗದಲ್ಲಿ ಮತ್ತು ಕಾಲು ಕಡೆಗೆ ಒಂದು ಇಟ್ಟು ಸಂಬಂಧಪಟ್ಟ ಹಿರಿಯ ಮಗ ತಲೆಗೋರಿ ಕೊಡುತ್ತಾನೆ'' (ಹಿಮ್ಮಡಿ, ೨೦೦೮: ೯೪).

ಶವಸಂಸ್ಕಾರ ಮುಗಿದ ನಂತರ ಸತ್ತವನ ಮನೆಯಲ್ಲಿ ದೀಪ ನೋಡಿ ಅವರವರ ಮನೆಗೆ ತೆರಳಿ, ಮುಂಚೆ ಮನೆಯಲ್ಲಿ ಇದ್ದ ನೀರು ಚೆಲ್ಲಿ ಹೊಸ ನೀರು ತಂದು ಎಲ್ಲರೂ ಸ್ನಾನ ಮಾಡುತ್ತಾರೆ. ಮರಣ ಹೊಂದಿದವರ ಮನೆಯಲ್ಲಿ ದೈವದ ಆಳು, ಆಹಾರಕ್ಕಾಗಿ ಮನೆ ಮನೆಗೆ ತಿರುಗಾಡಿ ಸಮಾಜದ ಎಲ್ಲರಿಂದ ತಂದು ಕೊಡುತ್ತಾರೆ. ಅಂದೇ ಬೀಗರು ವಿಷದ ಬಾಯಿ ಬೆಲ್ಲದ ನೀರಿನಿಂದ ತೊಳಿಸುತ್ತಾರೆ.

ಸತ್ತ ವ್ಯಕ್ತಿಯನ್ನು ಮಣ್ಣು ಮಾಡಿದ ನಂತರದ ಮೂರು ದಿನದಲ್ಲಿ ಸತ್ತ ಜಾಗದಲ್ಲಿ ಕೋಳಿ ಕೊಯಿದು ದೀಪ ಹಚ್ಚಿ ಯಡಿ ಇಡುತ್ತಾರೆ. ನಂತರ ಸಂಜೆ ೭.೩೦ ಸುಮಾರಿಗೆ ಸ್ಮಶಾನಕ್ಕೆ ಹೋಗಿ ಯಡಿ ಕೊಟ್ಟು ಬರುತ್ತಾರೆ. ಅಂದು ಸಮುದಾಯದವರಿಗೆ ಊಟ ಮಾಡಿಸುತ್ತಾರೆ. ಇನ್ನೂ ಒಂಭತ್ತು ಅಥವಾ ಹನ್ನೊಂದನೇ ದಿನದಲ್ಲಿ ತಿಥಿಯ ಕಾರ್ಯವನ್ನು ಮಾಡುತ್ತಾರೆ. ಈ ಕಾರ್ಯಕ್ಕೆ ಸಮುದಾಯದವರನ್ನು ಆಹ್ವಾನಿಸುತ್ತಾರೆ. ಆ ದಿನ ಸಮಾಧಿಯ ಹತ್ತಿರ ಹೋಗಿ ಪೂಜೆಯನ್ನು ಮಾಡಿಕೊಂಡು ಬರುತ್ತಾರೆ. ಮನೆಯಲ್ಲಿ ಪೂಜೆಗೆ ಬೆಳ್ಳಿಮುಖ ಹಾಗೂ ಹೊಸ ಬಟ್ಟೆಯನ್ನು ತಂದು ಪೂಜೆಯನ್ನು ಮಾಡುವುದರ ಜೊತೆಗೆ ತಿಥಿ ಕಾರ್ಯಕ್ಕೆ ಬಂದ ಸಮುದಾಯದವರಿಗೆ ಸಿಹಿ ಊಟವನ್ನು ಮಾಡಿಸುತ್ತಾರೆ. ಹಿರಿಯ ಮಗನಿಗೆ ಪೂಜೆಗೆ ತಂದಿದ್ದ ರುಮಾಲನ್ನು ಸುತ್ತಿ ಇನ್ನುಮುಂದೆ ಕುಟುಂಬದ ಜವಾಬ್ದಾರಿ ನಿನ್ನದು ಎಂದು ಹೇಳುವುದರ ಮೂಲಕ ಮರಣ ಸಂಸ್ಕಾರ ಮುಗಿಸುವರು (ಮೌಖಿಕ ಸಂದರ್ಶನ, ಸಣ್ಣರಾಣಪ್ಪ; ೨೦೦೯).

[illegible]

[illegible]

[illegible]

[illegible]

೩.೧.೫ ಉಡುಗೆ ತೊಡುಗೆಗಳು

ಮನುಷ್ಯನು ಪ್ರಾರಂಭಿಕ ಹಂತದಲ್ಲಿ ಮಳೆ ಚಳಿಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಮರದ ತೊಗಟೆಗಳನ್ನು ಸುತ್ತಿಕೊಳ್ಳುತ್ತಿದ್ದ. ನಂತರ ನಾರು ಬಟ್ಟೆಗಳ ಮೊರೆಹೊಕ್ಕ ದಿನಗಳು ಉರುಳಿದಂತೆ ಬಟ್ಟೆಯು ಆವಿಷ್ಕಾರಗೊಂಡಿತು. ಇದರೊಂದಿಗೆ ಉಡುಗೆ ತೊಡುಗೆಗಳಲ್ಲಿ ವೈವಿಧ್ಯಮಯವಾದ ಬದಲಾವಣೆಗಳುಂಟಾದವು. ಉಡುಪಿನ ಅಂದ ಚಂದಕ್ಕೆ ಮನಸೋತ ಮನುಷ್ಯನಿಗೆ ಕ್ರಮೇಣ ಆಭರಣಗಳ ಪ್ರಜ್ಞೆ ಮೂಡಿ ಅದರಲ್ಲೂ ವೈವಿಧ್ಯತೆ ಬೆಳೆಸಿಕೊಂಡ.

ಅದರಂತೆ ಚೆನ್ನದಾಸರ ಸಮುದಾಯದ ಜನರು ಸಹ ಉಡುಗೆ ತೊಡುಗೆಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದನ್ನು ಗುರುತಿಸಬಹುದು. ಈ ಸಮುದಾಯದ ಜನರು ಅಂತಹದ್ದೇನು ವಿಶೇಷವಾದ ಉಡುಗೆಯನ್ನೇನೂ ತೊಡುತ್ತಿದ್ದಿಲ್ಲ. ಅವರ ಉಡುಗೆ ಅತ್ಯಂತ ಸರಳವಾದದ್ದು. ತತ್ವಪದಗಳನ್ನು ಹಾಡಲು ಹೊದೆ ಊರಲ್ಲಿ ಮನೆ ಮನೆಗೆ ಹೋದಾಗ ಆ ಮನೆಯವರು ಕೆಲವೊಂದು ಹಳೆಯ ಬಟ್ಟೆಗಳನ್ನು ಕೋಟುಗಳನ್ನು ಕೊಡುತ್ತಿದ್ದರು. ಆದರೆ ಇತ್ತೀಚಿನ ಆಧುನಿಕತೆಯ ಪ್ರಭಾವದಿಂದ ತಾವೇ ಖರೀದಿಸಿ ಬಟ್ಟೆಗಳನ್ನು ಹಾಕಿಕೊಳ್ಳುವರು. ಪುರುಷರು ದೋತಿಯನ್ನು ತೊಡುವುದರ ಜೊತೆಗೆ ತಲೆಗೆ ರುಮಾಲನ್ನು ಸುತ್ತಿಕೊಳ್ಳುವರು. ಯುವಕರು ಸಹ ಇವುಗಳನ್ನೇ ಬಳಸುತ್ತಿದರು. ಇತ್ತೀಚಿಗೆ ಯುವಕರು ಲುಂಗಿ ಮತ್ತು ಅಂಗಿಯನ್ನು ಧರಿಸುತ್ತಾರೆ. ಪುರುಷರು ಕೈಯಲ್ಲಿ ಕಾಶಿಯದಾರ, ಕೊರಳಲ್ಲಿ ಲೋಹದ ತಾಯಿತ, ಸೊಂಟಕ್ಕೆ ಉಡುದಾರ, ಬೆರಳಲ್ಲಿ ವಿವಿಧ ಲೋಹದ ಉಂಗುರಗಳು, ಕಿವಿಯಲ್ಲಿ ಮುರುವು, ಕೈಗೆ ಗಡಿಯಾರ ಮುಂತಾದವುಗಳನ್ನು ಹಾಕಿಕೊಳ್ಳುವರು. ಸ್ನಾನ ಮಾಡಿದ ನಂತರ ಹಣೆಯ ಮೇಲೆ ಮೂರು ನಾಮವನ್ನು ಹಚ್ಚಿಕೊಳ್ಳುವುದು ಈ ಸಮುದಾಯದ ಜನರಲ್ಲಿ ವಿಶೇಷವಾಗಿದೆ. ಮೊದಲು ಪುರುಷರು ಪಾದರಕ್ಷೆಗಳನ್ನು ಬಳಸುತಿದ್ದಿಲ್ಲಾ, ಆದರೆ ಇಂದು ಆಧುನಿಕತೆಯ ಪ್ರಭಾವದಿಂದ ಪಾದರಕ್ಷೆಗಳನ್ನು ಬಳಸುತ್ತಾರೆ. ಹೆಣ್ಣುಮಕ್ಕಳು ಸೀರೆಯನ್ನು ಮೇಲೆ ರವಿಕೆಯನ್ನು ಧರಿಸುತ್ತಾರೆ. ಇತ್ತೀಚಿಗೆ ಇವರು ಸಹ ಆಧುನಿಕ ಉಡುಪುಗಳನ್ನು ಹಾಕಿಕೊಳ್ಳುತ್ತಾರೆ. ಆದರೆ ಇಂದಿಗೂ ಸಹ ಪಾದರಕ್ಷೆಗಳನ್ನು ತೊಡುವರು ತುಂಬಾ ಕಡಿಮೆ, ಸಾಮಾನ್ಯವಾಗಿ ಹೆಣ್ಣು ಮಕ್ಕಳು ಧರಿಸುವ ಒಡವೆ ವಸ್ತುಗಳೆಂದರೆ ಕಿವಿಗೆ ಓಲೆ, ಬೆಂಡೋಲೆ, ಮೂಗುತಿ, ಕೈಗೆ ಕಡಗಗಳು ತೋಳಬಂದಿ, ಕಾಲಲ್ಲಿ ಚೈನು, ಕೈಉಂಗುರ, ಕಾಲುಂಗುರ, ಡಾಬನ್ನು ಟೊಂಕಕ್ಕೆ ಧರಿಸುತ್ತಾರೆ. ಇವು ಹೆಚ್ಚಾಗಿ ಬೆಳ್ಳಿ ಬಂಗಾರದವುಗಳಾಗಿರುತ್ತವೆ. ಬಹುಪಾಲು ಒಡವೆಗಳು ಬೆಳ್ಳಿಯವಾಗಿರುತ್ತವೆ. ಮಕ್ಕಳಿಗೆ ಕೈಗೆ ಕರಿಮಣಿ ಸರ ಟೊಂಕಕ್ಕೆ ಬೆಳ್ಳಿ ಉಡದಾರ, ಕಾಲಲ್ಲಿ ಕಡಗ ಕಿವಿಯಲ್ಲಿ ರಿಂಗು ಮುಂತಾದವುಗಳನ್ನು ಹಾಕುತ್ತಾರೆ. ಚೆನ್ನದಾಸರಲ್ಲಿ ಅಚ್ಚೆ ಹಾಕಿಸಿಕೊಳ್ಳುವ ಸಂಪ್ರದಾಯವಿದೆ. ಆದರೆ ಹಣೆಯ ಮೇಲೆ ಮಾತ್ರ (ಮೌಖಿಕ ಸಂದರ್ಶನ, ಮಾರೆಪ್ಪ: ೨೦೦೯).

ಅಲ್ಲದೆ ಹಗಲುವೇಷಗಾರರಲ್ಲಿಯೂ ಸಹ ಈ ರೀತಿಯ ತೊಡುಗೆಗಳ ಧರಿಸುವುದನ್ನು ಕಾಣಬಹುದು. (ನಲಾರಡ್ಡಿ, ೨೦೦೪: ೪೧). ಒಟ್ಟಿನಲ್ಲಿ ಹೇಳುವುದಾದರೆ ಚೆನ್ನದಾಸರ ಸಮುದಾಯದ ಇನ್ನೂ ಕೆಲವು ಪುರುಷರು ಹಾಗೂ ಮಹಿಳೆಯರ ಉಡುಗೆ ತೊಡುಗೆಗಳು ಸಾಮಾನ್ಯವಾಗಿವೆ. ಆದರೆ ಹೊಸ ತಲೆಮಾರು ಆಧುನಿಕತೆಯತ್ತ ಹೆಜ್ಜೆ ಹಾಕಿದರ ಪರಿಣಾಮ ಇವುಗಳ ಮಹತ್ತರ ಬದಲಾವಣೆಗಳು ಆಗಿವೆ.

೩.೧.೬. ಆಹಾರ ಪದ್ಧತಿ

ಹುಟ್ಟಿದ ಪ್ರತಿಯೊಂದು ಜೀವಿಗೂ ಆಹಾರ ಅವಶ್ಯಕ. ಮನುಷ್ಯ ತನ್ನ ಹಸಿವೆಯನ್ನು ನೀಗಿಸಿಕೊಳ್ಳಲು ಆಹಾರ ಸೇವಿಸುತ್ತಾನೆ. ಪ್ರಾಚೀನ ಕಾಲದಲ್ಲಿ ಮನುಷ್ಯ ಹಸಿಯಾದ ಆಹಾರ ಪದಾರ್ಥಗಳನ್ನೇ ಸೇವಿಸುತ್ತಿದ್ದ. ಬೆಂಕಿಯ ಅವಿಷ್ಕಾರವಾದ ಮೇಲೆ ಆಹಾರ ಪದಾರ್ಥಗಳನ್ನು ಬೇಯಿಸಿ ತಿನ್ನಲು ಪ್ರಾರಂಭಿಸಿದ. ತದನಂತರ ಮಾನವನ ಪ್ರಗತಿಯಿಂದ ಪ್ರತಿಯೊಂದು ಸಮುದಾಯದವರು ತಮ್ಮದೇ ಆದ ಆಹಾರ ಪದ್ಧತಿಯನ್ನು ಅಳವಡಿಸಿಕೊಂಡರು. ಅಂತಹ ಸಮುದಾಯಗಳಲ್ಲಿ ಚೆನ್ನದಾಸರ ಸಮುದಾಯವು ಒಂದು. ಈ ಸಮುದಾಯದವರು ಸಸ್ಯಾಹಾರ ಮತ್ತು ಮಾಂಸಹಾರ ಸೇವಿಸುವಂತಹವರಾಗಿದ್ದಾರೆ. ಅದರಲ್ಲೂ ಇವರಿಗೆ ಮಾಂಸಹಾರ ಹೆಚ್ಚು ಪ್ರಿಯವಾದುದ್ದು. ಈ ಪ್ರದೇಶದಲ್ಲಿರುವ ಚೆನ್ನದಾಸರು ಸೇವಿಸುವ ಆಹಾರ ಪದಾರ್ಥಗಳೆಂದರೆ ಜೋಳದಿಂದ ತಯಾರಿಸಿದ ರೊಟ್ಟಿ, ಅನ್ನ, ಜೋಳದ ಮುದ್ದೆ ಇತ್ಯಾದಿ ದ್ವಿದಳ ಧಾನ್ಯಗಳಿಂದ ತಯಾರಿಸಿದ ಸಾಂಬಾರ ಹಾಗೂ ಹಲವು ಬಗೆಯ ತರಕಾರಿಗಳನ್ನು ಈ ಪದಾರ್ಥಗಳೊಂದಿಗೆ ಆಹಾರದಲ್ಲಿ ಬಳಸುತ್ತಾರೆ. ಹಬ್ಬ ಹರಿದಿನಗಳಲ್ಲಿ ಸಿಹಿ ಊಟದ ಪದಾರ್ಥಗಳಾದ ಹೋಳಿಗೆ, ಕಡಬು, ಹುಗ್ಗಿ ಮೊದಲಾದವುಗಳನ್ನು ಸೇವಿಸುತ್ತಾರೆ. ಬೇಟೆಯನ್ನು ಆಡುವುದರಿಂದ ಮಾಂಸಹಾರ ಸೇವನೆಯು ಹೆಚ್ಚಾಗಿ ಕಂಡುಬರುತ್ತದೆ. ಶನಿವಾರ ಹೊರತುಪಡಿಸಿ (ಅಂದು ಹನುಮಪ್ಪನವಾರವಾದ್ದರಿಂದ ಮಾಂಸಹಾರ ನಿಷೇಧ) ಉಳಿದ ದಿನಗಳಲ್ಲಿ ಮಾಂಸಹಾರ ಸೇವನೆಯನ್ನು ಮಾಡುತ್ತಾರೆ. ಮಾಂಸಹಾರ ಸೇವನೆಯನ್ನು ಸಾಮಾನ್ಯವಾಗಿ ಮೊಲ, ಉಡ, ಮುಂಗೂಸಿ, ಅಡವಿಬೆಕ್ಕು, ಜಿಂಕೆ, ಮೇಕೆ, ಕುರಿ, ಮುಳ್ಳುಹಂದಿ, ಆಮೆ, ಏಡಿ, ಮೀನು ಮತ್ತು ಪಕ್ಷಿಗಳಲ್ಲಿ ಕೌಜುಗ, ಪಾರಿವಾಳ, ಕೋಳಿ, ನೀರುಕೋಳಿ, ಬುರ್ಲಿ ಮುಂತಾದವುಗಳನ್ನು ತಿನ್ನುತ್ತಾರೆ. ಆದರೆ ಹಂದಿ ಮತ್ತು ದನದ ಮಾಂಸವನ್ನು ಅವರು ತಿನ್ನುವುದಿಲ್ಲ. ವಿಷ್ಣು, ಬ್ರಹ್ಮ, ಹನುಮಂತ, ಲಕ್ಷ್ಮಿ ಸರಸ್ವತಿ ಮೊದಲಾದ ದೇವತೆಗಳನ್ನು ಪೂಜಿಸುವುದರಿಂದ ತಿನ್ನಬಾರದು ಎನ್ನುವುದು ಅವರ ನಂಬಿಕೆ. ಮಾಂಸದ ಜೊತೆಗೆ ಮಧ್ಯಪಾನ ಸೇವನೆ ಇರುತ್ತದೆ. ಸಾಮಾನ್ಯವಾಗಿ ಎಲ್ಲ ಗಂಡಸರು ಮತ್ತು ಹಲವು ಹೆಂಗಸರು ಮಧ್ಯಪಾನವನ್ನು ಸೇವಿಸುತ್ತಾರೆ. ವಯಸ್ಸಾದವರು ಭಂಗಿಯನ್ನು ಸೇದುತ್ತಾರೆ. ಉಳಿದ ಗಂಡಸರು ಬೀಡಿ, ಸಿಗರೇಟ, ಸೇದುತ್ತಾರೆ. ಅಲೆಮಾರಿಗಳಾಗಿದ್ದ ಸಂದರ್ಭದಲ್ಲಿ ಆಹಾರ ತಯಾರಿಸಲಿಕ್ಕೆ ಅಲ್ಯುಮಿನಿಯಂ ಬೋಗಾಣಿಗಳನ್ನು ಬಳಸುತ್ತಿದ್ದರು. ಸ್ಥಿರವಾಗಿ ಮತ್ತು ಅರೆ ಅಲೆಮಾರಿಗಳಾಗಿ ಪರಿವರ್ತಿತವಾದ ನಂತರ ಕೆಲವು ಮಣ್ಣಿನ ಗಡಿಗೆ, ಹರವಿ ಬಿಂದಿಗೆ, ಚಟಗಿ, ಹರಿವಾಣಗಳನ್ನು ಸಂಗ್ರಹಿಸಿ, ಕೆಲವನ್ನು ಕಾಳು-ಕಡಿ ಕೂಡಿಡಲು, ಕೆಲವನ್ನು ಅಡುಗೆ ಮಾಡಲು ಮತ್ತೆ ಕೆಲವನ್ನು ನೀರಿಗಾಗಿ ಬಳಸಿಕೊಳ್ಳುತ್ತಾರೆ. ಆಧುನಿಕತೆಯ ಪ್ರಭಾವದಿಂದ ಕೆಲವೊಂದು ಕುಟುಂಬದವರು ತಾಮ್ರ, ಸ್ಟೀಲ್ ಹಾಗೂ ಗ್ಯಾಸ್ ಸಿಲಿಂಡರ ಬಳಸಿಕೊಂಡರು ಸಹ ಇನ್ನೂ ಹಲವಾರು ಕುಟುಂಬಗಳು ಗುಡಿಸಲುಗಳಲ್ಲಿಯೇ ನೆಲೆಸಿರುವುದರಿಂದ ಅವರ ಆಹಾರ ಪದ್ಧತಿಯಲ್ಲಿ ತಯಾರಿಸುವ ಆಹಾರ ಪದಾರ್ಥಗಳಾಗಲಿ, ತಯಾರಿಸುವ ಪಾತ್ರೆಗಳಾಗಲಿ ಯಾವುದೇ ಬದಲಾವಣೆಯಾಗದೆ ಮೂಲ ಆಹಾರ ಮತ್ತು ಸಾಮಗ್ರಿಗಳನ್ನೇ ಬಳಸುವುದು ಕಂಡುಬರುತ್ತದೆ (ಮೌಖಿಕ ಸಂದರ್ಶನ, ವೆಂಕಟೇಶ: ೨೦೦೯).

[illegible]

೩.೧.೭. ವಸತಿ ವ್ಯವಸ್ಥೆ

ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗೆ ಜೀವನ ಸಾಗಿಸಲು ಆಹಾರ ಎಷ್ಟು ಮುಖ್ಯವೋ ವಸತಿ ಸಹ ಅಷ್ಟೇ ಮುಖ್ಯವಾಗಿರುತ್ತದೆ. ಅದಕ್ಕೆ ಚೆನ್ನದಾಸರ ಸಮುದಾಯವು ಹೊರತಾಗಿಲ್ಲ. ಈ ಸಮುದಾಯದ ಜನರು ಪಟ್ಟಣಗಳಲ್ಲಿರಲಿ ಇಲ್ಲವೆ ಹಳ್ಳಿಯಲ್ಲಿರಲಿ ಪ್ರತ್ಯೇಕವಾಗಿ ವಾಸ ಮಾಡುವುದು ಸರ್ವೇಸಾಮಾನ್ಯ. ಮೂಲತಃ ಅಲೆಮಾರಿಗಳಾಗಿದ್ದ ಇವರಿಗೆ ಪ್ರತ್ಯೇಕ ನೆಲೆಯೆಂಬುದೇ ಇರಲಿಲ್ಲ. ಉಪಜೀವನಕ್ಕೆ ಅನುಕೂಲವನ್ನರಸಿ ಅಲೆದಾಡುತ್ತಿದ್ದ ಇವರು ಈ ಮೊದಲು ಆಯಾ ಊರಿನ ಪಾಳುಗುಡಿ, ಊರ ಹೊರಗಿನ ಬಯಲು, ಸಮಾಜ ಮಂದಿರ, ಕೆಳವರ್ಗದವರ ದೇವಸ್ಥಾನಗಳ ಮುಂಭಾಗದ ಬಯಲು, ಊರಿನ ಪ್ರಮುಖರ ಹೊರ ಬಯಲು ಜಾಗ ಹೀಗೆ ನೀರು ಅನುಕೂಲವಿರುವ ಇಂಥ ಯಾವುದೇ ಸ್ಥಳಗಳಲ್ಲಿ ಗುಡಾರ ಹಾಕಿಕೊಂಡು ಇರುತ್ತಿದ್ದರು. ತದನಂತರದಲ್ಲಿ ಊರ ಹೊರಗಿನ ಅರಣ್ಯ ಇಲ್ಲವೇ ಸರಕಾರದ ಬರಕಾಸ್ತು ಜಾಗಗಳಲ್ಲಿ ಬಹಳ ದಿನಗಳವರೆಗೆ ಸುಗ್ಗಿ ಅಥವಾ ತಿರುಪೆಗೆ ಹೋಗಿ ಮತ್ತೇ ಅಲ್ಲಿಗೆ ಬಂದು ವಾಸಮಾಡುವುದು ರೂಢಿಯಾಯಿತು. ಕೆಲವು ಕಡೆ ಊರ ಪ್ರಮುಖರು ತಮ್ಮಲ್ಲಿನ ಕೆಲಸ ಕಾರ್ಯಗಳಿಗೆ ಇವರನ್ನು ಬಳಸಿಕೊಳ್ಳುವ ದೆಸೆಯಿಂದ ಪ್ರತ್ಯೇಕ ಜಾಗಮಾಡಿಕೊಟ್ಟು, ವಾಸಕ್ಕೆ ಅನುಕೂಲ ಕಲ್ಪಸಿರುವುದಿದೆ. ಈ ಸಮುದಾಯದಲ್ಲಿ ಅಲೆಮಾರಿ, ಅರೆಅಲೆಮಾರಿ ಮತ್ತು ಸ್ಥಿರವಾಸಿಗಳು ಹೀಗೆ ಮೂರು ಬಗೆಯ ಜೀವನವಿಧಾನದವರಿದ್ದಾರೆ.

ಅಲೆಮಾರಿ ಮತ್ತು ಅರೆಅಲೆಮಾರಿ ಜನರು ಗುಡಾರ ಹಾಗೂ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಗುಡಾರ ಹಾಕಿಕೊಳ್ಳುವುದು ಸರಳಸಾಧನವಾಗಿದೆ. ಹಿಂದೆಮುಂದೆ ಎರಡು ಮೇಟಿಗಳನ್ನು ಮಣ್ಣಿನಲ್ಲಿ ಕುಣಿತೆಗೆದು ಗಟ್ಟಿಯಾಗಿ ನಿಲ್ಲಿಸುತ್ತಾರೆ. ಅವುಗಳೆರಡರ ಕವಲಿಗೆ ಉದ್ದವಾಗಿ ಬಿದಿರಿನ ಗಳ ಹಾಕುವ ಅಥವಾ ಗಟ್ಟಿ ಹಗ್ಗವನ್ನು ಆಧಾರವಾಗಿ ಕಟ್ಟುತ್ತಾರೆ. ನಂತರದಲ್ಲಿ ನಾರಿನಿಂದ ಇಲ್ಲವೆ ಕೌದಿ ಹೋಲಿಯುವ ದೋತರ ಇಲ್ಲವೆ ಸೀರೆ ದಡಿಯಿಂದ ನೇಯ್ದು ಹಗ್ಗಗಳನ್ನು ಮೇಲಿನ ಬಿದಿರಿನ ಗಳ ಅಥವಾ ಹಗ್ಗಕ್ಕೆ ಕಟ್ಟಿ ಎರಡೂ ಬದಿಗೆ ಇಂಗ್ಲೀಷ A ಆಕಾರದಲ್ಲಿ ಕಟ್ಟಿಗೆ ಇಲ್ಲವೆ ಕಬ್ಬಿಣದ ಗೂಟಗಳಿಗೆ ಬಿಗಿದು ಕಟ್ಟುತ್ತಾರೆ. ಅದರ ಮೇಲೆ ಹರಿದದೋತರ ಮತ್ತು ಸೀರೆಯಿಂದ ಮಾಡಿದ ಗುಡಾರವನ್ನು ಹೊದಿಸಿ ಬಿಗಿದ ಹಗ್ಗಗಳಿಗೆ ಹೊಂದಿಸಿ ಹೊಲಿದು ಕಟ್ಟುತ್ತಾರೆ. ಸಾಮಾನ್ಯವಾಗಿ ಈ ಗುಡಾರಗಳು ೨ ರಿಂದ ೫ ಅಡಿ ಎತ್ತರ, ೫ ರಿಂದ ೭ ಅಡಿಗಳ ಉದ್ದದಲ್ಲಿ ಹಾಗೂ ೨ ರಿಂದ ೫ ಅಡಿಗಳ ಉದ್ದದಲ್ಲಿ ಹಾಗೂ ೨ ರಿಂದ ೫ ಅಡಿಗಳಷ್ಟು ಅಗಲ ಇರುತ್ತವೆ. ಗುಡಿಸಲುಗಳಾದರೆ ಇವುಗಳ ಎರಡು ಪಟ್ಟು ಎತ್ತರ, ಉದ್ದ ಮತ್ತು ಅಗಲ ಇರುತ್ತವೆ. ಗುಡಿಸಲು ಹೊದಿಕೆಗೆ ಕಬ್ಬಿನ ರವದಿ, ಹಳ್ಳದಲ್ಲಿನ ಆಪು, ಇಲ್ಲವೆ ಭತ್ತದ, ಇತರ ಹುಲ್ಲನ್ನು ಮೇಲೆ ಬಿಗಿದಿರುತ್ತಾರೆ. ಸರ್ವೆ ಸಮಾನ್ಯವಾಗಿ ಗುಡಾರ ಅಥವಾ ಗುಡಿಸಲಿನ ಬಾಗಿಲುಗಳು ಉತ್ತರ ಮತ್ತು ಪೂರ್ವಮುಖವಾಗಿರುತ್ತವೆ. ದಕ್ಷಿಣ ದಿಕ್ಕಿಗೆ ಮುಖ ಮಾಡಿರುವುದಿಲ್ಲ. ಆ ದಿಕ್ಕನ್ನು ರಾಕ್ಷಸರ ದಿಕ್ಕು ಎಂದು ಕರೆಯುತ್ತಾರೆ. ಗುಡಾರಗಳಲ್ಲಿ ಅಡುಗೆ ಮತ್ತು ಸ್ನಾನವನ್ನು ಮಾಡಲು ಸಾಧ್ಯವಾಗುವುದಿಲ್ಲವಾದ್ದರಿಂದ ಒಲೆಯನ್ನು ಗುಡಾರದ ಮುಂದೆ, ಸ್ನಾನವನ್ನು ಗುಡಾರದ ಎಡಬದಿಗೆ ತೆಂಗಿನ ಗರಿ, ಗೋಣಿ ಚೀಲ ಇತ್ಯಾದಿ ಬಳಸಿ ಮರೆಮಾಡಿರುತ್ತಾರೆ. ಸಾಮಾನ್ಯವಾಗಿ ಹೆಣ್ಣು ಮಕ್ಕಳು ಮರೆಮಾಡಿದ ಜಾಗದಲ್ಲಿ ಸ್ನಾನ ಮಾಡುತ್ತಾರೆ. ಗಂಡಸರು

ಬಯಲು ಜಾಗದಲ್ಲಿ ಸ್ನಾನ ಮಾಡುತ್ತಾರೆ. ದೇವರಿಗೆಂದು ಪ್ರತ್ಯೇಕ ಸ್ಥಳವಿರುವುದಿಲ್ಲವಾದ್ದರಿಂದ ದೇವರ, ಹಿರಿಯರ ಚಿಕ್ಕ ಚಿಕ್ಕ ಮೂರ್ತಿಗಳನ್ನು ಒಂದು ಕೈಚೀಲ ಇಲ್ಲವೆ ಪವಿತ್ರವಾದ ಬಟ್ಟೆಯಲ್ಲಿ ಕಟ್ಟಿ ಗುಡಾರದ ಒಳಭಾಗದಲ್ಲಿ ಮೇಟಿಯ ಕಂಬಕ್ಕೆ ನೇತು ಹಾಕುತ್ತಾರೆ. ಜಾತ್ರೆ ಹಬ್ಬಗಳ ಸಂದರ್ಭದಲ್ಲಿ ಮಾತ್ರ ತೆಗೆದು ನೆಲಸಾರಿಸಿ ಪೂಜಾವಿಧಿಗಳನ್ನು ನೆರವೇರಿಸಿ ಚೀಲದಲ್ಲಿ ತುಂಬಿ ಮತ್ತೆ ಅಲ್ಲಿಯೇ ನೇತು ಹಾಕುತ್ತಾರೆ.

ಗುಡಿಸಲುಗಳಲ್ಲಿ ಅಡುಗೆಗೆ ಮತ್ತು ಸ್ನಾನಕ್ಕೆ ಜಾಗ ಮಾಡಿಟ್ಟುಕೊಂಡಿರುತ್ತಾರೆ. ಗುಡಿಸಲಿನಲ್ಲಿ ಎರಡು ಭಾಗಗಳಿರುತ್ತವೆ. ಬಾಗಿಲ ಬಳಿಯ ಅರ್ಧಭಾಗ ಮಲಗಲು ಮತ್ತು ಆಡು, ಕುರಿ ಇದ್ದರೆ ಒಳಗೆ ಕಟ್ಟಲು ಭಾಗ ಬಿಟ್ಟಿದ್ದರೆ, ಒಳಗಡೆಯ ಅರ್ಧದಲ್ಲಿ ಪೂರ್ವಭಾಗದ ಮಧ್ಯದಲ್ಲಿ ಒಲೆ ಇದ್ದರೆ, ಗುಡಿಸಲು ಹಿಂಬದಿಯ ಅದೇ ಮೂಲೆಗೆ ಬಚ್ಚಲಿರುತ್ತದೆ. ಅದರ ವಿರುದ್ಧ ದಿಕ್ಕಿನಲ್ಲಿ ದೇವರನ್ನಿಡಲು ಮಣ್ಣಿನ ಕಟ್ಟೆ ಇರುತ್ತದೆ. ಅದರ ಮಗ್ಗಲು ಪಾತ್ರೆ ಕಾಳುಕಡಿ ಇಡಲು ಜಾಗ ಬಳಸಿಕೊಳ್ಳುತ್ತಾರೆ. ಗುಡಿಸಲುಗಳ ಬಾಗಿಲು ಪೂರ್ವ ಅಥವಾ ಉತ್ತರ ದಿಕ್ಕಿಗಿದ್ದರೂ ಎಡಗಡೆಯ ಭಾಗದಲ್ಲಿಯೇ ಹೆಚ್ಚಾಗಿ ಬಾಗಿಲಿರುತ್ತದೆ. ಬಾಗಿಲಿಗೆ ಕಟ್ಟಿಗೆಯ ಹೊಸಿಲು ಇದ್ದು ಅದನ್ನು ಮಂಗಳವಾರ ಮತ್ತು ಶುಕ್ರವಾರ ದೇವತೆಗಳ ಹೆಸರಲ್ಲಿ ಕುಂಕುಮ ಭಂಡಾರ ಹಚ್ಚಿ ಪೂಜಿಸುತ್ತಾರೆ. ಹೊಸಿಲನ್ನು ತುಳಿಯಲು ನಿಷೇದವಿದೆ. ತಾವು ಸಾಕಿದ ಪ್ರಾಣಿಗಳನ್ನು ಮನೆಯ ಎದುರಿಗೆ ಗೂಟ ಬಡಿದು ಕಟ್ಟುತ್ತಾರೆ. ಅನುಕೂಲವಿದ್ದವರು ಪ್ರಾಣಿಗಳಿಗೆ ನೆರಳು ಮಾಡಲು ಚಪ್ಪರ ಹಾಕಿರುತ್ತಾರೆ (ಹಿಮ್ಮಡಿ, ೨೦೦೮: ೭೬).

ಈ ಪ್ರದೇಶದಲ್ಲಿ ಅಲೆಮಾರಿ, ಅರೆಅಲೆಮಾರಿ ವಾಸಿಗಳ ಜೊತೆಗೆ ಸ್ಥಿರವಾಸಿಗಳು ಸಹ ಇದ್ದಾರೆ. ಇವರ ಮನೆಯ ವಾಸ್ತು ಕೂಡ ಇದಕ್ಕಿಂತ ಭಿನ್ನವೇನಲ್ಲ. ಆದರೆ ಶಿಸ್ತು ಬದ್ಧವಾಗಿರುತ್ತದೆ. ಅಡುಗೆ ಕೋಣೆ ಮತ್ತು ಬಚ್ಚಲು ವಿಶೇಷವಾಗಿ ಮನೆಯ ಬಲಗಡೆಯ ಹಿಂಬಾಗದೊಳಗಡೆಯೇ ಇರುತ್ತವೆ. ಗುಡಿಸಲುಗಳಿರುವ ಒಳರಚನೆಯೇ ಮನೆಗಿರುತ್ತದೆ. ದೇವರ ಪೂಜೆಗೆ ಕಟ್ಟೆಯ ಬದಲಿಗೆ ಮಾಡುಗಳನ್ನು ಮಾಡಲಾಗಿರುತ್ತದೆ. ಆ ಮಾಡಿಗೆ ಹೊಂದಿಕೊಂಡು ಎರಡೂ ಕಡೆಗೆ ಗೂಟಗಳಿರುತ್ತವೆ. ದೇವರಿಗೆ ಸಂಬಂಧಿಸಿದ ವಸ್ತುಗಳನ್ನು ಆ ಗೂಟಗಳಿಗೆ ತೂಗು ಹಾಕಲಾಗುತ್ತದೆ. ಅನುಕೂಲವಿದ್ದವರಲ್ಲಿ ಬೀಸುವ ಕಲ್ಲು, ಕುಟ್ಟುವ ಒಳಕಲ್ಲನ್ನು ಮುಂಬಾಗಿಲ ಬಳಿಯ ಕೋಣೆಯಲ್ಲಿರುತ್ತವೆ. ತಾವು ಬಳಸುವುದಲ್ಲದೆ ಇತರರು ಬಂದರೆ ಅವನ್ನು ಬಳಕೆಗೆ ಕೊಡಬೇಕಾಗುತ್ತದೆ. ಆದುದರಿಂದ ಬಾಗಿಲು ಸಮೀಪ ಒಳಗಡೆ ಅವುಗಳ ನೆಲದಲ್ಲಿ ಕೂಡ್ರಿಸಿರುತ್ತಾರೆ. ತಮ್ಮ ಆದಾಯಕ್ಕಾಗಿ ಕೋಳಿ, ಆಡು, ಕುರಿ, ಎಮ್ಮೆ ಆಕಳು, ಸಾಕುವುದು ಸಾಮಾನ್ಯ. ಇಂತಹ ಪ್ರಾಣಿಗಳನ್ನು ಕಟ್ಟಲು ಕೊಟ್ಟಿಗೆಯನ್ನು ಸಹ ಮಾಡಿಕೊಂಡಿರುತ್ತಾರೆ. ಕೊಟ್ಟಿಗೆಯು ತಾವು ನೆಲೆಸಿರುವ ಮನೆಯ ಮುಂದೆಯೇ ಇರುತ್ತವೆ. ಕಾರಣ ಅವುಗಳನ್ನು ಸಂರಕ್ಷಿಸುವುದರ ಜೊತೆಗೆ ಸರಿಯಾದ ಕಾಳಜಿಯನ್ನು ನಿರ್ವಹಿಸಲು ಮಾಡಿಕೊಂಡಿರುತ್ತಾರೆ.

ಇವರ ಗುಡಾರ ಹಾಗೂ ಗುಡಿಸಲುಗಳಿಗೆ ಯಾವುದೇ ವಿದ್ಯುತ್ ವ್ಯವಸ್ಥೆ ಇರುವುದಿಲ್ಲ. ಕಂದಿಲಗಳನ್ನು ಬಳಸುವುದನ್ನು ಕಾಣಬಹುದು. ಸ್ಥಿರವಾಸಿಗಳ ಮನೆಯಲ್ಲಿ ಇತ್ತೀಚೆಗೆ ಭಾಗ್ಯಜ್ಯೋತಿ ಯೋಜನೆಯ ಅಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಆದರೆ ಗುಡಾರ ಗುಡಿಸಲಗಳಲ್ಲಿ ವಾಸಿಸುವವರಿಗೆ ಈ ಸಂಪರ್ಕ ಕಲ್ಪಿಸಲಾಗಿಲ್ಲ.

[illegible]

[illegible]

[illegible]

[illegible]

ಒಟ್ಟಿನಲ್ಲಿ ಚೆನ್ನದಾಸರ ವಸತಿ ವ್ಯವಸ್ಥೆ ತೀರಾ ಹದಗೆಟ್ಟಿದ್ದು, ಕಷ್ಟದ ಬದುಕನ್ನು ಸಾಗಿಸುವಂತೆ ಮಾಡಿದೆ. ಇವರು ವಾಸಿಸುವ ಪ್ರದೇಶಗಳ ಸುತ್ತಮುತ್ತ ಸರಿಯಾದ ಶೌಚಾಲಯದ ವ್ಯವಸ್ಥೆಯಾಗಲಿ, ಆರೋಗ್ಯಕರ ವಾತಾವರಣವಾಗಲಿ ಇಲ್ಲ ಚೆನ್ನದಾಸರ ಸಮುದಾಯಕ್ಕೆ ಸೇರಿದ ವ್ಯಕ್ತಿಯೊಬ್ಬರನ್ನು ಸಂದರ್ಶಿಸಿದಾಗ ಅವರು ಪ್ರತಿಕ್ರಿಯಿಸಿದ್ದು ಹೀಗೆ,

''ಏನು ಮಾಡುವುದು ಸ್ವಾಮಿ, ಹಲವಾರು ವರ್ಷಗಳಿಂದ ಗುಡಾರ-ಗುಡಿಸಲುಗಳಲ್ಲಿ ವಾಸಿಸುತ್ತಿದ್ದೇವೆ. ಸರಕಾರವು ನಮ್ಮ ಕಡೆ ಗಮನ ನೀಡುತ್ತಿಲ್ಲ ನಮ್ಮ ನೆಲೆಯನ್ನು ಒಂದು ಸ್ಥಳದಲ್ಲಿ ಶಾಶ್ವತವಾಗಿ ಮಾಡಿಕೊಳ್ಳಲು ಸ್ವಂತದ್ದು ಎನ್ನುವ ಮನೆಯಿಲ್ಲ, ತುಂಡು ಭೂಮಿ ಇಲ್ಲ, ನಮ್ಮ ಜನಸಂಖ್ಯೆಯೂ ಹೆಚ್ಚಾಗಿದೆ. ಜನಪ್ರತಿನಿಧಿಗಳು ನಮ್ಮನ್ನು ಕೇವಲ ಓಟಿನ ಗೊಂಬೆಗಳನ್ನಾಗಿ ಮಾಡಿಕೊಂಡಿದ್ದಾರೆ. ಓಟು ಕೇಳುವ ಸಂದರ್ಭದಲ್ಲಿ ನಿಮಗೆ ಮನೆಗಳನ್ನು ಕಟ್ಟಿಸಿಕೊಡುತ್ತೇವೆ ನಮಗೆ ಓಟು ಹಾಕಿ ಎಂದು ಓಟು ಹಾಕಿಸಿಕೊಂಡು ಗೆದ್ದ ನಂತರ ನಮ್ಮ ಕಡೆ ತಿರುಗಿ ನೋಡುವುದಿಲ್ಲ. ಹೀಗಾದರೆ ನಾವು ಹೇಗೆ ಬದುಕುವುದು. ನೆಲೆ ಇಲ್ಲವೆಂದ ಮೇಲೆ ಕಾಲ ಕಳೆಯುವುದು ಹೇಗೆ ಗುಡಾರಗಳೇ ನಮ್ಮ ಪಾಲಿಗೆ ವಾಸದ ಅರಮನೆಗಳು'' (ಮೌಖಿಕ ಸಂದರ್ಶನ, ಮಾರೆಪ್ಪ: ೨೦೦೯).

ಸರಕಾರ ಈ ಸಮುದಾಯವನ್ನು ೧೯೭೭ರಲ್ಲಿ ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿದ. ತರುವಾಯ ಮೀಸಲಾತಿ ಆಧಾರದ ಮೇಲೆ ಸರಕಾರದಿಂದ ದೊರೆಯುವ ಆಶ್ರಯ ಯೋಜನೆಯ ಅಡಿಯಲ್ಲಿ ಯಲಬುರ್ಗಾ ಪ್ರದೇಶದ ಹಲವು ಹಳ್ಳಿಗಳಲ್ಲಿ ವಾಸಮಾಡುವ ಚೆನ್ನದಾಸ ಸಮುದಾಯದ ಜನರಿಗೆ ಸರಕಾರವು ವಸತಿ ವ್ಯವಸ್ಥೆಯನ್ನು ನಿರ್ಮಿಸಿಕೊಡುವ ಪ್ರಯತ್ನವನ್ನು ಮಾಡುತ್ತಿದೆ. ಈ ಜನಾಂಗವು ತಮ್ಮ ಅಲೆಮಾರಿ ಜೀವನವನ್ನು ಬಿಟ್ಟು ಒಂದು ನಿರ್ದಿಷ್ಟವಾದ ಊರಿನಲ್ಲಿ ಖಾಯಂ ನೆಲೆಯನ್ನು ಕಂಡುಕೊಂಡರೆ ಸರಕಾರ ಇವರಿಗೆ ಎಲ್ಲ ರೀತಿಯ ವ್ಯವಸ್ಥೆಯನ್ನು ಒದಗಿಸಿಕೊಡುವುದು ಸುಲಭವಾಗುತ್ತದೆ. ಈ ಜನಾಂಗವು ಊರಿಂದ ಊರಿಗೆ ಸಂಚರಿಸುವುದರಿಂದ ಸರಕಾರದ ಸೌಲಭ್ಯಗಳನ್ನು ತಾವೆ ಕಳೆದುಕೊಂಡಂತೆ ಆಗುತ್ತದೆ. ಇದರಿಂದ ಸರಕಾರಕ್ಕೆ ಈ ಜನಾಂಗದ ಬದುಕಿನ ಸ್ಥಿತಿಯನ್ನು ಗುರುತಿಸುವುದು ಕಷ್ಟವಾಗುತ್ತದೆ. ಒಂದೇ ಕಡೆಗೆ ನೆಲೆ ನಿಂತರೆ ಸರಕಾರ ವಸತಿ ವ್ಯಸ್ಥೆಯನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಬಹುದಾಗಿದೆ. ಅಲ್ಲದೇ ಸ್ಥಿರ ನಿವಾಸಿಗಳ ಮನೆಗಳಿಗೆ ಶೌಚಾಲಯ ಬೆಳಕಿನ ವ್ಯವಸ್ಥೆಯನ್ನು ಕೈಗೊಂಡರೆ ಸಮಾಜದಲ್ಲಿರುವ ಇನ್ನಿತರ ಸಮುದಾಯದಂತೆ ಬದುಕು ಸಾಗಿಸಬಲ್ಲರು. ಇಂತಹ ಮೂಲಭೂತ ಸೌಕರ್ಯಗಳನ್ನು ಪಡೆಯಲು ಈ ಸಮುದಾಯದ ಜನರು ಅಧಿಕಾರಿಗಳೊಂದಿಗೆ ಜನ ಪ್ರತಿನಿಧಿಗಳೊಂದಿಗೆ ಸಂಪರ್ಕದಲ್ಲಿ ಇದ್ದಾಗ ಮಾತ್ರ ಸಾಧ್ಯ ಎಂದು ಹೇಳಬಹುದು.

೩.೧.೮. ಕೌಂಟುಂಬಕ ಕಟ್ಟುಪಾಡುಗಳು ಮತ್ತು ನ್ಯಾಯ ಪಂಚಾಯಿತಿ

ಚರಿತ್ರೆಯಲ್ಲಿ ಬುಡಕಟ್ಟು ಮತ್ತು ಅಲೆಮಾರಿ ಸಮುದಾಯಗಳು ತಮ್ಮ ಜೀವನದ ವಿಧಾನದಲ್ಲಿ ತಮ್ಮದೇ ಆದ ಪ್ರತ್ಯೇಕತೆಯನ್ನು ಬಳಸಿಕೊಂಡಿರುತ್ತಾರೆ. ಆಚರಣೆ, ಸಂಪ್ರದಾಯಗಳನ್ನಿಡಿದು ಒಳಾಡಳಿತದವರೆಗೂ ತಮ್ಮದೇ ಆದ ನಂಬಿಕೆ, ನಿಬಂಧನೆ, ಕಟ್ಟಳೆಗಳನ್ನು ಹೊಂದಿರುತ್ತಾರೆ. ಚೆನ್ನದಾಸರ ಸಮುದಾಯವೂ ಇದಕ್ಕೆ ಹೊರತಲ್ಲ. ಈ ಜನಸಮುದಾಯವು ಅತ್ಯಂತ ಕಟ್ಟು ನಿಟ್ಟಾದ ಕೌಟುಂಬಿಕ ಕಟ್ಟುಪಾಡುಗಳನ್ನು ಹೊಂದಿದೆ. ಚೆನ್ನದಾಸರು ತಮ್ಮ

[illegible]

ಸಮುದಾಯದಲ್ಲಿ ಅನ್ಯಾಯ, ಅಸಮಾನತೆಗಳು, ಕಟ್ಟುಪಾಡುಗಳು ಎಲ್ಲವು ಮತ್ತೊಬ್ಬರ ಮೇಲಿನ ದೌರ್ಜನ್ಯ ಇತ್ಯಾದಿಗಳನ್ನು ನಿಯಂತ್ರಿಸಲು ಈ ಸಮುದಾಯ ಮೊದಲಿನಿಂದಲು ನ್ಯಾಯ ಪಂಚಾಯತಿಯನ್ನು ರಚಿಸಿಕೊಂಡು ಬಂದಿದೆ. ಕೆ.ಎಸ್. ಸಿಂಗ್ ಅವರ ಗ್ರಂಥದಲ್ಲಿ ''ಸಾಂಪ್ರದಾಯಿಕ ಜಾತಿ ಸಮಿತಿ ಅವರಲ್ಲಿದ್ದು, ಅದನ್ನು ಕಟ್ಟೆಮನೆ ಎಂದು ಕರೆಯುತ್ತಾರೆ. ೧೫ ರಿಂದ ೨೦ ಸದಸ್ಯರ ಮುಖ್ಯಸ್ಥನನ್ನು ದೊಡ್ಡ ಯಜಮಾನ ಎಂದು ಕರೆಯುತ್ತಾರೆ. ಈ ದೊಡ್ಡ ಯಜಮಾನನನ್ನು ಧ್ವನಿ ಮತದಿಂದ ಆಯ್ಕೆ ಮಾಡುತ್ತಾರೆ. ಸಮುದಾಯದ ಸಾಮಾಜಿಕ ನಿಯಂತ್ರಣ ಮಾಡುವ ಹಾಗೂ ಕಲಹಗಳ ವಿಚಾರಣೆ ಈ ಸಮಿತಿಯ ವ್ಯಾಪ್ತಿಗೆ ಒಳಪಡುತ್ತವೆ. ಅಪರಾಧ ಮಾಡಿದವರಿಗೆ ದಂಡ ಹಾಕುವ, ಶಿಕ್ಷೆವಿಧಿಸುವ ಮತ್ತು ಸಾಮಾಜಿಕ ಬಹಿಷ್ಕಾರ ಹಾಕುವ ಅಧಿಕಾರ ಈ ಪಂಚಾಯತಿಗಿರುತ್ತದೆ.'' ಎಂದು ಹೇಳಿದರೆ, ಅನಂತಕೃಷ್ಣ ಅಯ್ಯರ ಅವರು ''ದಾಸರಿಗಳು ಕಟ್ಟೆಮನೆ ಎಂಬ ಕುಲಸಭೆಯನ್ನು ಹೊಂದಿದ್ದಾರೆ. ಈ ಪ್ರತಿಸಭಾ ಮನೆಗಳನ್ನು ಪಿನ್ನಪೆದ್ದನು ಗುಡಿಗಾಡನ್ನು ಅಲಂಕರಿಸುತ್ತಾರೆ. ಗುಡಿಗಾಡು ದೇವಸ್ಥಾನದ ಸೇವಕರು ಕುಲಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಅವಲೋಕನ ಮಾಡುತ್ತಾರೆ. ಅಲ್ಲದೆ ಇವರ ಸಹೋದ್ಯೋಗಿಯಾದ ಪಿನ್ನಪೆದ್ದ ವರದಿಯನ್ನು ನೀಡುತ್ತಾನೆ. ಪಿನ್ನಪೆದ್ದನು ಜನರನ್ನು ಒಂದೆಡೆ ಸೇರಿಸಿ, ವಿವಾದವನ್ನೊಳಗೊಂಡ ವಿಷಯಗಳನ್ನು ಮತಗಳ ಸಂಖ್ಯೆಯಿಂದ ನಿರ್ಧರಿಸುತ್ತಾರೆ. ಮತಗಳು ಸಮವಾಗಿದ್ದರೆ, ತಮ್ಮ ಸಭೆಯಲ್ಲಿ ವಿಷಯವನ್ನು ನಿರ್ಧರಿಸಲು ಪ್ರಮಾಣದ ಅವಧಿಯಲ್ಲಿ ಗುರುವಿಗೆ ಬಿಡುತ್ತಾರೆ. ಗುರುವು ಕಟ್ಟೆಮನೆಯನ್ನು ವಿಚಾರಿಸಿ ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳುತ್ತಾನೆ'' ಎಂದು ವಿವರಿಸಿದ್ದಾರೆ (ಹಿಮ್ಮಡಿ, ೨೦೦೮: ೧೦೬).

ಈಗಲೂ ಈ 'ನ್ಯಾಯ ಪಂಚಾಯತಿ' ರಚನೆ ಸಮುದಾಯದಲ್ಲಿ ಉಳಿದುಕೊಂಡು ಬಂದಿದೆ. ಸಮುದಾಯದಲ್ಲಿ ಅನುಭವಸ್ಥನಾದ, ಬುದ್ಧಿವಂತನಾದ ಹಿರಿಯನನ್ನು ಕುಲಸ್ಥರೆಲ್ಲ ಸೇರಿ ಆಯ್ಕೆ ಮಾಡುತ್ತಾರೆ. ಕೆಲವು ಕಡೆ ಇದು ವಂಶಪಾರಂಪರ್ಯವಾಗಿ ಮುಂದುವರೆದಿರುತ್ತದೆ. ಈ ಕುಲಸಭೆಯ ಮುಖ್ಯಸ್ಥನನ್ನು ಪ್ರಾದೇಶಿಕವಾಗಿ ಗುಡೇಗಾಡು, ಕಟ್ಟೆಮನೆ, ಪಿನ್ನಪೆದ, ಕೊಂಡಿಕೋಲ, ಗುರಿಕಾರ, ಸಮೀಲು ಎಂದು ಕರೆಯುವ ವಾಡಿಕೆಯಿದೆ. ಮುಖ್ಯಸ್ಥನಿಗೆ ಸಹಕಾರಿಯಾಗಿ ಕೆಲಸ ನಿರ್ವಹಿಸಲು ತಳವಾರನನ್ನು ಓಲೇಕಾರ ನೇಮಿಸಲಾಗುತ್ತದೆ. ಈತ ಪಂಚಾಯಿತಿಯ ಆದೇಶದಿಂದ ಸಭೆ ಕೂಡಿಸುವ ಸಂದೇಶ ತಲುಪಿಸುವ ಕೆಲಸ ಮಾಡುತ್ತಾರೆ. ಇಲ್ಲದೆ ಒಂದೊಂದು ಬೆಡಗಿನ ಹಿರಿಯರ ಸಲಹಾ ಸಮಿತಿಯದ್ದು ಪಂಚಾಯಿತಿಯ ತೀರ್ಮಾನಗಳನ್ನು ಜಾರಿಗೆ ತರಲು ಅದು ಕಾರ್ಯ ನಿರ್ವಹಿಸುತ್ತದೆ.

ನ್ಯಾಯ ಪಂಚಾಯತಿಗೆ ಸಮುದಾಯದ ಸಾಮಾಜಿಕ ನಿಯಂತ್ರಣ ಮಾಡುವ ಬಹುದೊಡ್ಡ ಜವಾಬ್ದಾರಿಯನ್ನು ವಹಿಸಲಾಗಿರುತ್ತದೆ. ಸಮುದಾಯದ ಯಾರೇ ಆಗಿರಲಿ ನ್ಯಾಯಪಂಚಾಯತಿ ಅಥವಾ ಕುಲಸಭೆಗಿಂತ ದೊಡ್ಡವರೆನಿಸಿಕೊಳ್ಳುವುದಿಲ್ಲ. ನ್ಯಾಯ ಪಂಚಾಯತಿಯು ಚೆನ್ನದಾಸರ ಇರುವ ಊರಲ್ಲಿ ಇಲ್ಲವೆ ಅನುಕೂಲವಿರುವ ಸ್ಥಳದಲ್ಲಿ ನಡೆಯುತ್ತದೆ. ನ್ಯಾಯ ಪಂಚಾಯತಿ ನಡೆಯುವ ಪೂರ್ವದಲ್ಲಿ ತಳವಾರ ಅಥವಾ ಓಲೇಕಾರನು ತಮ್ಮ ಸಮುದಾಯವಿರುವ ಊರಲ್ಲಿ ಹೋಗಿ ನ್ಯಾಯಹಾಕಿದವರು, ನ್ಯಾಯ ಪಂಚಾಯಿತಿ ನಡೆಯುವ ಸ್ಥಳವನ್ನು ತಿಳಿಸಿ ಬರುತ್ತಾನೆ. ಆ ಪ್ರಕಾರ ನ್ಯಾಯ ಪಂಚಾಯತಿಯು ಸೇರುತ್ತದೆ. ನ್ಯಾಯ ಪಂಚಾಯಿತಿಯಲ್ಲಿ ಸಹೋದರರ ಅಥವಾ ಇತರರ ಆಸ್ತಿಯ ಜಗಳ, ಕಳ್ಳತನ, ಕೊಲೆ, ಅತ್ಯಾಚಾರ, ಮತ್ತೊಬ್ಬನ ಹೆಣ್ಣನ್ನು ಸಮಾಜದ ಮತ್ತೋರ್ವ ಪುರುಷ

ಎತ್ತಿಕೊಂಡು ಹೋದದ್ದು, ಮದುವೆಯಾಗದ ಕನ್ಯೆಯೊಂದಿಗೆ ಮದುವೆಯಾದ ಪುರುಷ ಸಂಪರ್ಕ ಹೊಂದಿದ್ದು, ಕುಡಿದ ಅಮಲಿನಲ್ಲಿ ಅವಾಚ್ಯ ಶಬ್ದದಿಂದ ನಿಂದಿಸಿದ್ದು, ಗಂಡ ಹೆಂಡಿರ ಜಗಳ ಇತ್ಯಾದಿ ಪ್ರಕರಣಗಳ ಕುರಿತು ಇದರಲ್ಲಿ ನಡೆಯುತ್ತದೆ. ಇಂತಹ ಪ್ರಕರಣಗಳು ಯಾವುದೇ ಕಾರಣಕ್ಕೂ ಪೊಲೀಸ್‌ಸ್ಟೇಷನ್ ಅಥವಾ ಕೋರ್ಟ್‌ಗಳ ಮೆಟ್ಟಿಲನ್ನು ಹತ್ತುವದಿಲ್ಲ. ಒಂದು ವೇಳೆ ಕೋರ್ಟು ಮೆಟ್ಟಿಲನ್ನು ಹತ್ತಿದರೆ ಯಾರು ಸಾಕ್ಷಿ ಹೇಳುವುದಿಲ್ಲ. ಈ ಸಮುದಾಯದವರು ನ್ಯಾಯ ಪಂಚಾಯಿತಿ ಮೇಲೆ ಇಟ್ಟಿರುವ ಅಚಲವಾದ ನಂಬಿಕೆಯನ್ನು ತೋರಿಸುತ್ತದೆ.

ಸಾಮಾನ್ಯವಾಗಿ ಯಾವುದೇ ತಪ್ಪುಗಳು ಈ ಜನಾಂಗದಲ್ಲಿ ಸಂಭವಿಸಿದಾಗ ಮೊದಲಿಗೆ ಕುಲಸಭೆಯವರಿಗೆ ತಲುಪುತ್ತದೆ. ನಿಗದಿಪಡಿಸಿದ ದಿನ ಹಾಗೂ ಸ್ಥಳದಲ್ಲಿ ಎಲ್ಲಾ ಕುಲಸ್ಥರ ಮುಖಂಡರನ್ನು ಒಂದುಗೂಡಿಸಿ ನ್ಯಾಯ ಪಂಚಾಯತಿಯನ್ನು ಪ್ರಾರಂಭಿಸುತ್ತಾರೆ. ಸಂಬಂಧಿಸಿದವರಿಂದ ಹೇಳಿಕೆ ಪಡೆದು ನ್ಯಾಯನಿರ್ಣಯ ಮಾಡುತ್ತಾರೆ. ಒಂದೊಂದು ಸಾರಿ ಪಂಚಾಯಿತಿ ಸಭೆ ಒಂದೇ ದಿನದಲ್ಲಿ ಮುಗಿಯದೆ ವಾರದವರೆಗೂ ಮುಂದುವರಿದಿರುವ ಪ್ರಸಂಗಗಳಿವೆ. ಈ ಸಮಯದಲ್ಲಿ ನ್ಯಾಯ ಪಂಚಾಯಿತಿ ಸ್ಥಳವನ್ನು ಸ್ಥಳಾಂತರಿಸುತ್ತಾರೆ. ಇದಕ್ಕೆ ಕಾರಣ ಅಪರಾಧಿಗೆ ಕುಲಸಭೆಯಲ್ಲಿ ಸೇರಿದ ಜನರ ಖರ್ಚುವೆಚ್ಚಗಳು ಹೆಚ್ಚಾಗಿ ಇನ್ನೊಮ್ಮೆ ಅಪರಾಧ ಮಾಡಬಾರದು ಎಂಬ ಉದ್ದೇಶವಿರುತ್ತದೆ.

ಕುಲಸಭೆಯ ನ್ಯಾಯ ನಿರ್ಣಯಗಳು ವಿವಿಧ ಹಂತಗಳನ್ನೊಳಗೊಂಡಿವೆ. ಸಮುದಾಯದ ಜನಗಳ ನಡುವೆ ಕಲಹಗಳಾದಾಗ ಮತ್ತು ವ್ಯಕ್ತಿ ಸಣ್ಣ ಪುಟ್ಟ ತಪ್ಪು ಮಾಡಿದಾಗ ಹಿರಿಯರು ಕಲಹವನ್ನು ಬಗೆಹರಿಸುವ ಸಣ್ಣ ಪುಟ್ಟ ತಪ್ಪುಗಳನ್ನು ಇನ್ನೊಮ್ಮೆ ಮಾಡದಂತೆ ತಾಕೀತು ಮಾಡುವ ಸರಳ ನಿರ್ಣಯವನ್ನು ಕೊಡುತ್ತದೆ. ಅಣ್ಣ ತಮ್ಮಂದಿರ ಮತ್ತು ತಂದೆ ಮಕ್ಕಳ ಆಸ್ತಿಯಲ್ಲಿ ಪಾಲನ್ನು ಸಹ ಇದೇ ನಿರ್ಣಯದಂತೆ ಮಾಡಲಾಗುತ್ತದೆ. ಪಂಚಾಯತಿ ಸೇರಿದ್ದಕ್ಕೆ ಕಾರಣರಾದವರು ಸಭೆಗೆ ಕುಲಸಭೆಯ ಖರ್ಚುಕೊಡಬೇಕು.

ಹಿರಿಯರಿಗೆ, ಹೆಂಗಸರಿಗೆ ಅವಮಾನ ಮಾಡಿದ್ದರೆ, ಕಳ್ಳತನದ ಅಪರಾಧ ಮಾಡಿದ್ದರೆ, ಅಂಥವರಿಗೆ ದಂಡ ವಿಧಿಸುವ ನಿರ್ಣಯ ಕೈಗೊಳ್ಳಲಾಗುತ್ತದೆ. ದಂಡ ಹಣದ ರೂಪದ್ದಿರುತ್ತದೆ. ಅಪರಾಧದ ಪ್ರಮಾಣದ ಮೇಲೆ ದಂಡದ ಪ್ರಮಾಣ ಹೆಚ್ಚು ಕಡಿಮೆಯಾಗುತ್ತಿರುತ್ತದೆ. ಕೊಲೆ ಮಾಡಿದ್ದರೆ, ಹೆಂಗಸರ ಮೇಲೆ ಅತ್ಯಾಚಾರ ಮಾಡಿದ್ದರೆ, ಬೇರೊಬ್ಬನ ಅಥವಾ ಬೇರೊಬ್ಬಳ ಜೊತೆ ಓಡಿಹೋದರೆ, ಧಾರ್ಮಿಕ ಕಾರ್ಯಗಳಲ್ಲಿ ತಪ್ಪೆಸಗಿದ್ದರೆ ಅವರನ್ನು ಕುಲದಿಂದ ಬಹಿಷ್ಕಾರ ಹಾಕುವ ಕಠಿಣ ನಿರ್ಣಯವನ್ನು ಸಭೆಯ ನಡಾವಳಿಯನ್ನಾಧರಿಸಿ ನೀಡಲಾಗುತ್ತದೆ. ನ್ಯಾಯ ನಿರ್ಣಯ ಕುಲಸಭೆಯಲ್ಲಿ ಬೇಗ ತೀರ್ಮಾನವಾಗದಿದ್ದರೆ ಕುಲಸಭೆಯ ಮುಖ್ಯಸ್ಥನು 'ಕಡ್ಡಿಮುರಿಯುವ' ಮೂಲಕ ಕೊನೆಯ ತೀರ್ಮಾನದ ತೀರ್ಪನ್ನು ಕೊಡುವ ನ್ಯಾಯ ಪದ್ಧತಿಯಿದೆ.

''ವ್ಯಕ್ತಿ ಮಾಡುವ ಅಪರಾಧದ ಪ್ರಮಾಣದ ಮೇಲೆ ಕುಲಸಭೆಯು ವಿವಿಧ ಹಂತದ ಶಿಕ್ಷೆಗಳನ್ನು ವಿಧಿಸುತ್ತದೆ. ಅಪರಾಧ ಸಾಧಾರಣವಾಗಿದ್ದರೆ ಅಪರಾಧಿಯು ಕುಲಸಭೆಯ ಕ್ಷಮೆಕೋರಿ, ತಪ್ಪಾಯಿತೆಂದು ಹಿರಿಯರ ಕಾಲು ಹಿಡಿಯಬೇಕು. ಸಭೆಗೆ ಕುಲಸಭೆಯ ಖರ್ಚು ಕೊಡಬೇಕು. ಸಮುದಾಯದ ಗುಂಪಿನಲ್ಲಿ ಮಾರಕಾಸ್ತ್ರಗಳಿಂದ ಹೊಡೆದಾಡಿದರೆ, ಚಪ್ಪಲಿಯಿಂದ ಹೊಡೆದಿದ್ದರೆ, ಹಿರಿಯರಿಗೆ ಹೆಂಗಸರಿಗೆ ಅವಮಾನ ಮಾಡಿದ್ದರೆ ಅನ್ಯಾಯಕ್ಕೆ

[illegible]

[illegible]

[illegible]

[illegible]

ಒಳಗಾದವರು ತಕ್ಷಣ ಒಂದು ಕುಲಸಭೆ ಸೇರಿಸಿದರೆ ಅದಕ್ಕೆ ಕಾರಣರಾದವರಿಗೆ ತಕ್ಷಣಕ್ಕೆ ನ್ಯಾಯ ನಿರ್ಣಯಕ್ಕಿಂತ ಮುಂಚೆಯೇ ೪೮ ಆಣೆಯಿಂದ ೫೦ ರೂಪಾಯಿಗಳವರೆಗೆ ದಂಡ ವಿಧಿಸಲಾಗುತ್ತದೆ. ಆ ಬಳಿಕ ಪಂಚಾಯತಿಯ ತೀರ್ಮಾನದಂತೆ ತಪ್ಪು ಸಾಭೀತಾದರೆ ಅದರ ಎರಡು ಪಟ್ಟು ದಂಡ ವಿಧಿಸಲಾಗುತ್ತದೆ. ಆ ದಂಡದ ಹಣವನ್ನು ಅರ್ಧಭಾಗ ಮಾಡಿ ಅನ್ಯಾಯವಾದವರಿಗೆ ಕೊಟ್ಟರೆ ಉಳಿದರ್ಧ ಭಾಗವನ್ನು ಕುಲಸಭೆಗೆ ಇಟ್ಟುಕೊಳ್ಳಲಾಗುತ್ತದೆ" (ಹಿಮ್ಮಡಿ, ೨೦೦೮: ೧೦೮).

ಮದುವೆಯಾದ ಹೆಣ್ಣು ಮಗಳ ಮೇಲೆ ಅತ್ಯಾಚಾರ ಮಾಡಿದರೆ, ಮತ್ತೊಬ್ಬನ ಪತ್ನಿಯನ್ನು ಓಡಿಸಿಕೊಂಡು ಹೋಗಿದ್ದರೆ ಅದಕ್ಕೆ ಕೊಡುವ ಶಿಕ್ಷೆಗೆ ''ಮೋಗಿನಾಲುಧರ್ಮ''ಎಂದು ಕರೆಯುತ್ತಾರೆ. ಇದು ಮೊದಲಿನಿಂದ ನಡೆದುಕೊಂಡು ಬಂದಿದೆ. ಒಬ್ಬಾತ ಇನ್ನೊಬ್ಬನ ಪತ್ನಿಯನ್ನು ಬಲಾತ್ಕರಿಸಿದ್ದರೆ, ಓಡಿಸಿಕೊಂಡು ಹೋಗಿದ್ದರೆ ಅವನನ್ನು ಕುಲದಿಂದ ಹೊರಹಾಕಲಾಗುತ್ತದೆ. ಮಾನಭಂಗ ಮಾಡಿದವನು ಸಮುದಾಯದೊಳಗೆ ಪುನಃ ಪ್ರವೇಶ ಪಡೆಯಬೇಕಾದರೆ ನಾಲ್ವತ್ತೆಂಟು ರೂಪಾಯಿಗಳ ದಂಡ ಕಟ್ಟಬೇಕು. ಇದರಲ್ಲಿನ ಅರ್ಧ ಅನ್ಯಾಯಕ್ಕೆ ಒಳಗಾದ ಪತಿಗೆ, ಇನ್ನರ್ಧ ಕುಲಸ್ಥನಿಗೂ ಉಳಿದಹಣ ಗುರುವಿಗೂ ತಲುಪುತ್ತದೆ.

ಸಮುದಾಯದ ಹೆಂಗಸು ಬೇರೆ ಸಮುದಾಯದವನೊಂದಿಗೆ ಓಡಿ ಹೋಗಿದ್ದರೆ, ಬೇರೆ ಸಮುದಾಯದ ಹೆಂಗಸನ್ನು ಮದುವೆಯಾಗಿ ಕರೆದುಕೊಂಡು ಬಂದರೆ ಅಂಥವರನ್ನು ಸಮುದಾಯದಿಂದ ಬಹಿಷ್ಕಾರ ಹಾಕಲಾಗುತ್ತದೆ. ಅಂಥವರು ಪುನಃ ಸಮುದಾಯದೊಳಗೆ ಬರಲು ಇಚ್ಚಿಸಿದರೆ, ಕುಲಸಭೆಯ ತೀರ್ಮಾನದಂತೆ ದಂಡ ಕಟ್ಟಲಾಗುತ್ತದೆ. ಮತ್ತು ಅಂಥವರಿಗೆ ಕಾಯಿಸಿದ ಬಂಗಾರದ ಉಂಗುರ ಅಥವಾ ತಾಮ್ರದ ನಾಣ್ಯನಿಂದ ನಾಲಿಗೆ ಸುಡಿಸಿ ಬಳಿಕ ಕುಲದೊಳಗೆ ಸೇರಿಸಿಕೊಳ್ಳಲಾಗುತ್ತದೆ.

ಹೀಗೆ ಈ ಸಮುದಾಯದ ಜನರು ತಮ್ಮದೇ ಆದ ನ್ಯಾಯ ಪಂಚಾಯಿತಿಯನ್ನು ಮಾಡಿಕೊಂಡು ಸರಕಾರದ ಅಧಿಕೃತ ಸಂಸ್ಥೆಗಳೆಂದೆನಿಸಿಕೊಂಡ ಕೋರ್ಟ್ ಕಛೇರಿಗಳಿಗೆ ಹೋಗದೆ ಸಮುದಾಯದ ನ್ಯಾಯ ಪಂಚಾಯತಿಯಿಂದ ನ್ಯಾಯ ತೀರ್ಮಾನಿಸಿಕೊಳ್ಳುವುದು ಹಲವಾರು ವರ್ಷಗಳಿಂದ ಚೆನ್ನದಾಸರಲ್ಲಿ ಬೆಳೆದುಕೊಂಡು ಬಂದಿದೆ.

೩.೧.೯. ಆರಾಧನೆ ಮತ್ತು ಹಬ್ಬಗಳು

ಪ್ರಾಚೀನ ಕಾಲದಿಂದಲೂ ಪ್ರತಿಯೊಂದು ಸಮುದಾಯ ತನ್ನದೇ ಆದ ಧಾರ್ಮಿಕ ವಿಧಿವಿಧಾನಗಳನ್ನು ಅಳವಡಿಸಿಕೊಂಡಿರುವುದು ಸಾಮಾನ್ಯ ಅದರಂತೆ ಚೆನ್ನದಾಸರ ಸಮುದಾಯವು ಸಹ ಆರಾಧನೆ ಮತ್ತು ಹಬ್ಬಗಳನ್ನು ತಮ್ಮ ಬದುಕಿನಲ್ಲಿ ಅನುಸರಿಸುತ್ತಾ ಬಂದಿದೆ. ಈ ಸಮುದಾಯದವರು ವೈಷ್ಣವ ಸಂಪ್ರದಾಯಕ್ಕೆ ಸೇರಿದವರು. ಈ ಸಂಪ್ರದಾಯಕ್ಕೆ ಸೇರಿದ ದೈವಗಳಾದ ವೆಂಕಟರಮಣಸ್ವಾಮಿ, ನರಸಿಂಹಸ್ವಾಮಿ, ಆಂಜನೇಯ ಮುಂತಾದ ದೇವರುಗಳನ್ನು ಆರಾಧನೆ ಮಾಡುತ್ತಾರೆ. ಇದರಲ್ಲಿ ಕುಲದೇವರನ್ನಾಗಿ ತಿರುಪತಿಯ ವೆಂಕಟರಮಣನಿಗೆ ನಡೆದುಕೊಳ್ಳುತ್ತಾರೆ. ದೊಂಬಿದಾಸರು ಸಹ ಇವೇ ದೇವರುಗಳನ್ನು ತಮ್ಮ ಕುಲದೇವರನ್ನಾಗಿ ಆರಾಧಿಸುತ್ತಾರೆ (ಕುಪ್ಪೆ, ೨೦೦೮: ೪೪). ಈ ಪ್ರದೇಶದಲ್ಲಿರುವ ಚೆನ್ನದಾಸರು ಪ್ರತಿ ವರ್ಷ ತಿರುಪತಿಗೆ ಹೋಗಿ ಬರುವುದು ವಾಡಿಕೆಯಾಗಿದೆ. ವಿಶೇಷವಾಗಿ ಕಾರ್ತಿಕ ಮಾಸದಲ್ಲಿ ಈ ದೇವರ ಹರಕೆ ತೀರಿಸುತ್ತಾರೆ. ಆ ಕಾರಣಕ್ಕಾಗಿ ಪ್ರತಿ

ಶನಿವಾರ ವ್ರತ ಮಾಡುತ್ತಾರೆ. ಶನಿವಾರದಂದೇ ಗೋಪಾಳ ಬುಟ್ಟಿಯನ್ನು ಹೊತ್ತು ಬಿಕ್ಷೆಗೆ ಹೋಗುತ್ತಾರೆ. ಪ್ರತಿ ಶನಿವಾರದಂದು ಮಾಂಸಹಾರ ನಿಷೇಧ ಮಾಡುತ್ತಾರೆ. ಇವರು ಮಾಂಸ ಸೇವನೆ ಮಾಡಿದ ಯಾವುದೇ ದಿನ ಹನುಮಂತನ ದೇವಸ್ಥಾನ ಪ್ರವೇಶಿಸುವುದಿಲ್ಲ. ''ತಿರುಪತಿಗೆ ಹೋಗದ ಬಹುತೇಕರು ತಮ್ಮ ಸಮೀಪದ ಪ್ರಸಿದ್ಧ ಹನುಮಂತ ದೇವರಿಗೆ ಹನುಮಂತನನ್ನು ಸಮುದಾಯದವರು ತಿಮ್ಮಪ್ಪ ಅಥವಾ ವೆಂಕಟರಮಣನ ಅವತಾರವೆಂದು ನಂಬುತ್ತಾರೆ'' (ಹಿಮ್ಮಡಿ, ೨೦೦೮: ೯೫). ಇತ್ತೀಚೆಗೆ ಈ ಸಮುದಾಯದವರು ೨೦೦೨ರಲ್ಲಿ ತುಮ್ಮರಗುದ್ದಿ ಗ್ರಾಮದಲ್ಲಿ ಕುಲಸ್ಥರು ಸೇರಿಕೊಂಡು ವೆಂಕಟರಮಣ ದೇವಸ್ಥಾನವನ್ನು ಕಟ್ಟಿಕೊಂಡು ಅಲ್ಲಿಯೇ ತಮ್ಮ ಕುಲದೇವರನ್ನು ಆರಾಧಿಸುತ್ತಾರೆ. ಪ್ರತಿ ಸೋಮವಾರ, ಮಂಗಳವಾರ, ಶನಿವಾರ ದೇವರಿಗೆ ತುಪ್ಪದ ಇಲ್ಲವೆ ಎಣ್ಣೆಯ ದೀಪಗಳನ್ನು ಹಚ್ಚಿ ಹರಕೆ ತೀರಿಸುತ್ತಾರೆ. ಅಲ್ಲದೆ ಜನಿಸುವ ಗಂಡು ಮಕ್ಕಳಿಗೆ ವೆಂಕಪ್ಪ, ಬಾಲಾಪ್ಪ, ಹನುಮಂತ, ಆಂಜನೇಯ ಮಾರೆಪ್ಪ, ತಿಮ್ಮಪ್ಪ ಹೆಸರುಗಳನ್ನಿಡುತ್ತಾರೆ. ಇನ್ನು ಕೆಲವರು ಈ ಹೆಸರುಗಳ ಮುಂದೆ ದಾಸ, ದಾಸ್, ದಾಸಯ್ಯ ಎಂದು ಇಟ್ಟಿರುತ್ತಾರೆ. ಹೆಣ್ಣು ಮಕ್ಕಳಿಗೂ ಕೂಡ ಹನುಮವ್ವ, ಯಂಕವ್ವ, ತಿಮ್ಮವ್ವ, ವೆಂಕಮ್ಮ ಎಂದು ಹೆಸರಿಡುವರು. ಇತ್ತೀಚೆಗೆ ಮಂಜುನಾಥ, ಶಂಕರ, ಬಸವರಾಜ, ಶಿಲ್ಪಾ, ನೇತ್ರಾವತಿ ಇತ್ಯಾದಿ ಹೆಸರುಗಳನ್ನಿಡುತ್ತಾರೆ.

ಕುಲದೇವರ ಜೊತೆಗೆ ಮನೆ ದೇವರನ್ನಾಗಿ ಹೆಣ್ಣು ದೇವರನ್ನು ಆರಾಧಿಸುತ್ತಾರೆ. ಯಲ್ಲಮ್ಮ, ದುರಗಮ್ಮ, ಮಾರೆಮ್ಮ, ತಾಯಮ್ಮ ಮತ್ತು ಹುಲಿಗೆಮ್ಮ ಇವು ಪ್ರಮುಖ ಮಾತೃದೇವತೆಗಳು, ಈ ದೇವರುಗಳ ಆಚರಣೆಯ ದಿನಗಳನ್ನಾಗಿ ಮಂಗಳವಾರ ಮತ್ತು ಶುಕ್ರವಾರಗಳನ್ನು ಮಾಡುತ್ತಾರೆ. ಗೌರಿ, ಹೊಸ್ತಿಲ ಮತ್ತು ಭರತ ಹುಣ್ಣಿಮೆ ದೇವರುಗಳ ಜಾತ್ರೆ ನೆರವೇರಿಸುವ ವಿಶೇಷ ಹುಣ್ಣಿಮೆಗಳಾಗಿವೆ.

ಈ ದೇವತೆಗಳಿಗೆ ಪ್ರಾಣಿ ಬಲಿಕೊಡುತ್ತಾರೆ. ಈ ಪ್ರದೇಶದಲ್ಲಿರುವ ಡೊಣ್ಣೆಗುಡ್ಡದ ದುರ್ಗಾದೇವಿಗೆ ಪ್ರತಿ ಮೂರು ವರ್ಷಗಳಿಗೊಮ್ಮೆ ಈ ಸಮುದಾಯದವರು ಕುರಿ, ಟಗರು ಬಲಿಯನ್ನು ಕೊಟ್ಟು ಹರಕೆಯನ್ನು ಮುಟ್ಟಿಸುತ್ತಾರೆ. ಈ ಹರಕೆಯಿಂದ ಹುಟ್ಟುವ ಮಕ್ಕಳಿಗೆ ಈ ದೇವತೆಯ ಹೆಸರುನ್ನಿಡುತ್ತಾರೆ. ಈ ಸಮುದಾಯದವರು ವಿವಿಧ ದೇವರುಗಳ ಆರಾಧನೆಯೊಂದಿಗೆ ಹಲವು ಪ್ರಮುಖ ಹಬ್ಬಗಳನ್ನು ಆಚರಿಸುತ್ತಾರೆ. ಅಂತಹ ಹಬ್ಬಗಳೆಂದರೆ, ಪ್ರಮುಖವಾಗಿ ಮಹಾನವಮಿ ಹಬ್ಬ ಮತ್ತು ಯುಗಾದಿ ಹಬ್ಬಗಳಾಗಿವೆ.

ಮಹಾನವಮಿ

ನಾಡಿನ ಮೂಲೆ ಮೂಲೆಗಳಲ್ಲಿ ಸಂಚರಿಸುವ ಇವರು ಪ್ರತಿ ವರ್ಷಕ್ಕೊಮ್ಮೆ ಮಹಾನವಮಿ ಹಬ್ಬದ ಆಚರಣೆಗೆ ಊರಿಗೆ ಬರುತ್ತಾರೆ. ಇದು ದೊಡ್ಡ ಹಬ್ಬವಾಗಿರುವುದರಿಂದ ಹಬ್ಬಕ್ಕೆ ನಾಲ್ಕಾರು ದಿನ ಮುಂಗಡವಾಗಿಯೇ ಆಗಮಿಸಿ ತಮ್ಮ ಹಳೆ ಗುಡಿಸಲುಗಳಿಗೆ ಹೊಸ ಹೊದಿಕೆ ಹಾಕಿ ದುರಸ್ಥಿ ಮಾಡಿಕೊಳ್ಳುತ್ತಾರೆ. ಸ್ಥಿರವಾಸಿಗಳು ಮನೆಗೆ ಸುಣ್ಣ ಬಣ್ಣ ಹಚ್ಚಿ ಶುಭ್ರಗೊಳಿಸುವುದರೊಂದಿಗೆ ಹಬ್ಬಕ್ಕೆಂದು ಹೊಸ ಬಟ್ಟೆಯನ್ನು ತಂದಿರುತ್ತಾರೆ. ಹಬ್ಬದ ದಿನ ತಮ್ಮಲ್ಲಿರುವ ಆಯುಧಗಳನ್ನೆಲ್ಲ ಸೇರಿಸಿ ಪೂಜೆ ಮಾಡುತ್ತಾರೆ. ಪೂಜೆಗೆ ಕೋಳಿಯ ಬಲಿ ಕೊಟ್ಟು ಅಡುಗೆ ಮಾಡಿ ನೈವೇದ್ಯ ತೋರಿಸಿ ಊಟ ಮಾಡುತ್ತಾರೆ. ಮರುದಿನ ಸಂಜೆ ಹೋಗಿ ಬನ್ನಿಯ ಗಿಡಕ್ಕೆ ಪೂಜೆ ಸಲ್ಲಿಸಿ ಬನ್ನಿಯ ಎಲೆಗಳಿರುವ ಚಿಕ್ಕ ಚಿಕ್ಕ ಟೊಂಗೆಗಳನ್ನು ಕಡಿದು ದೇವರಿಗೆ ಬನ್ನಿ ಏರಿಸುತ್ತಾರೆ. ಬಳಿಕ ಸಮುದಾಯದ ಎಲ್ಲರೂ ತಮ್ಮ ತಮ್ಮವರಿಗೆ ನಾವು ನೀವು ಬಂಗಾರದಂತೆ ಇರೋಣ ಎಂದು ಹೇಳಿ ಒಬ್ಬರಿಗೊಬ್ಬರು ಬನ್ನಿಕೊಟ್ಟು ಕಾಲಿಗೆ

ನಮಸ್ಕರಿಸುವುದು, ಕೈಮುಗಿದು ಆಶೀರ್ವಾದ ಬೇಡುವುದು ಮಾಡುತ್ತಾರೆ. ಮೊದಲು ಈ ದಿನದಲ್ಲಿ ಮಾಂಸಹಾರ ಸೇವಿಸುತ್ತಿದ್ದರು. ಆದರೆ ಇತ್ತೀಚಿನ ಸಹ ಊಟವನ್ನು ಮಾಡುತ್ತಾರೆ. ಮರುದಿನ ಕೌಟುಂಬಿಕ ಅಥವಾ ಇನ್ನಿತರ ಸಮಸ್ಯೆಗಳಿಗೆ ಪರಿಹಾರ ಹುಡುಕಿಕೊಳ್ಳುವುದರೊಂದಿಗೆ, ಮಕ್ಕಳು ಮದುವೆ ವಯಸ್ಸಿಗೆ ಬಂದಿದ್ದರೆ ಅಂತಹ ವಿಷಯಗಳನ್ನು ತಮ್ಮ ಸಂಬಂಧಿಕರೊಂದಿಗೆ ಮಾತನಾಡಿ ಆದನಂತರ ಮತ್ತೆ ತಮ್ಮ ವೃತ್ತಿಯಲ್ಲಿ ತೊಡುಗುತ್ತಾರೆ.

ಯುಗಾದಿ

ಯುಗಾದಿ ಈ ಸಮುದಾಯದ ದೊಡ್ಡ ಹಬ್ಬ. ಗಂಡನ ಮನೆಯಲ್ಲಿರುವ ತಮ್ಮ ಹೆಣ್ಣು ಮಕ್ಕಳನ್ನು ಕರೆಯಿಸಿಕೊಳ್ಳುತ್ತಾರೆ. ಯುಗಾದಿ ಪಾಡ್ಯದ ಮೊದಲ ರಾತ್ರಿ ಕಡಲೆ ಬೇಳೆಯನ್ನು ನೆನೆಯಿಡುತ್ತಾರೆ. ಬೆಳಿಗ್ಗೆ ಎದ್ದು ಸಮುದ್ರ ಕಾಗೆಯ ಮುಖ ನೋಡುತ್ತಾರೆ. ಅಂದು ಆ ಪಕ್ಷಿ (ರತ್ನಪಕ್ಷಿ) ಕಂಡರೆ ಶುಭವೆಂದು ನಂಬುತ್ತಾರೆ. ಬಳಿಕ ಬೇವಿನ ಗಿಡದ ಎಲೆ ಹೂವುಗಳನ್ನು ನೀರಿನಲ್ಲಿ ಹಾಕಿ ಎಲ್ಲರೂ ಸ್ನಾನ ಮಾಡುತ್ತಾರೆ. ಬಳಿಕ ರಾತ್ರಿ ನೆನೆಯಿಟ್ಟ ಬೇಳೆಯನ್ನು ಬೇವಿನ ಎಲೆ ಮತ್ತು ಹೂವಿನಿಂದ ಬೆಲ್ಲದೊಂದಿಗೆ ಮಿಶ್ರಣ ಮಾಡಿ ಎಲ್ಲರಿಗೂ ಹಂಚಿ ಕಷ್ಟ ಸುಖ ಎರಡನ್ನು ಸಮನಾಗಿ ಹಂಚಿಕೊಳ್ಳುವ ಹಿರಿಮೆ ನಿನ್ನದಾಗಲಿ ಎಂದು ಹರಸುತ್ತಾರೆ. ಅಂದು ಮುಂಜಾನೆ ಮನೆದೇವರಿಗೆ ಹೋಳಿಗೆ ಎಡೆ ಮಾಡುತ್ತಾರೆ. ಮಧ್ಯಾಹ್ನ ಬಲಿ ಕೊಡುವ ಮೂಲಕ ಹಿರಿಯರ ಪೂಜೆ ಮಾಡುತ್ತಾರೆ.

ಚೆನ್ನದಾಸರ ಧಾರ್ಮಿಕ ಪೂಜೆಯಲ್ಲಿ ಕುಲದೇವರ ಹಿರಿಯರ ಪೂಜೆಯು ಪ್ರಮುಖವಾಗಿದೆ. ಈ ಜನರು ಸತ್ತ ಹಿರಿಯರನ್ನು ದೈವದಲ್ಲಿ ಸೇರಿಸಿಕೊಂಡು ದೇವರೆಂದು ಭಾವಿಸಿ ಬೆಳ್ಳಿಯ ಲೋಹದ ಪದಕಗಳನ್ನು ಮಾಡಿಸಿ, ದೇವರೆಂದು ನಂಬಿ, ಕುಲದೇವರ ನಂತರ ಹಿರಿಯರೇ ದೇವರೆಂದು ವಿಶೇಷ ಕಾರ್ಯಕ್ರಮವನ್ನು ವರ್ಷಕ್ಕೆ ಒಂದು ಸಾರಿ ಮೂರು ವರ್ಷಕ್ಕೆ ಒಂದು ಸಾರಿ, ಹಿರಿಯರ ಮಣ್ಣಿನ ಮೂರ್ತಿಯನ್ನು ಮಾಡಿ ಪೂಜಿಸಿ ಪ್ರಾಣಿಬಲಿ (ಆಡು, ಕುರಿ, ಕೋಳಿ) ಯ ಮುಖಾಂತರ ಭಕ್ತಿಯನ್ನು ಸಮರ್ಪಿಸುತ್ತಾರೆ. ಹಿರಿಯರೆಂಬ ಪದಕಗಳು ಸಮುದಾಯದ ಪ್ರತಿಯೊಬ್ಬರ ಮನೆಗಳಲ್ಲಿವೆ (ಮೌಖಿಕ ಸಂದರ್ಶನ, ಯಮನಪ್ಪ: ೨೦೦೯).

ಹೀಗೆ ಈ ಎರಡು ಪ್ರಮುಖ ಹಬ್ಬಗಳನ್ನು ಆಚರಿಸುತ್ತಾರೆ. ಇತ್ತೀಚೆಗೆ ಹಿಂದೂ ಸಂಪ್ರದಾಯದಲ್ಲಿರುವ ಎಲ್ಲಾ ಹಬ್ಬಗಳನ್ನು ಆಚರಿಸಲು ಪ್ರಾರಂಭಿಸಿದ್ದಾರೆ. ಇದಕ್ಕೆ ಕಾರಣ ಸ್ಥಿರವಾಸಿಗಳಾದ ಮೇಲೆ ಊರಿನಲ್ಲಿರುವ ಬೇರೆ ಸಮುದಾಯದವರು ಆಚರಿಸುವ ಹಬ್ಬಗಳ ಪ್ರಭಾವ ಈ ಸಮುದಾಯದ ಮೇಲೆ ಬೀರಿದೆ. ಒಟ್ಟಾರೆ ಇವರ ಆರಾಧನೆ ಮತ್ತು ಹಬ್ಬಗಳ ಆಚರಣೆಯು ಸಮುದಾಯದ ಧಾರ್ಮಿಕ ಪರಂಪರೆಯನ್ನು ತೋರಿಸುವುದು ಒಂದು ಮುಖವಾದರೆ, ಆರಾಧನೆ ಮತ್ತು ಹಬ್ಬಗಳ ಆಚರಣೆಯಲ್ಲಿ ಸ್ಥಿತ್ಯಂತರ ಹೊಂದುವುದು ಇನ್ನೊಂದು ಮುಖವಾಗಿದೆ.

ಟಿಪ್ಪಣಿಗಳು

೧. **ಈರಲು:** ಹೆರಿಗೆಯ ಹನ್ನೊಂದು ಅಥವಾ ಹನ್ನೆರಡನೆಯ ದಿನ ಮಾಡಿಸುವ ಮಂಗಳಸ್ನಾನ.

೨. **ಲೆಕ್ಕಿತಪ್ಪಲ:** ಒಂದು ಬಗೆಯ ಔಷಧಿಯ ಸಸ್ಯ.

೩. **ಸೂತಕ:** ಜನನ, ಮರಣಗಳಿಂದುಂಟಾಗುವ ಮೈಲಿಗೆ.

೪. ಶಾಸೆ: ವಿವಾಹ ಸಂದರ್ಭದಲ್ಲಿ ವಧು ವರರನ್ನು ಕೂಡಿಸಲು ಕರಿ ಕಂಬಳಿಯ ಮೇಲೆ ಮಂಗಳಾಕ್ಷತೆ ಹಾಕುವ ವಿಧಾನ.

೫. ಐರಾಣಿ: ಮದುವೆಯಲ್ಲಿ ಸುಣ್ಣದಿಂದ ಚಿತ್ರ ಬರೆದಿಡುವ ಗಡಿಗೆ ಮತ್ತು ಅದನ್ನು ಪೂಜಿಸುವ ವ್ರತ.

೬. ನಾಗೋಲಿ: ವಿವಾಹದ ಮುಕ್ತಾಯದ ಶಾಸ್ತ್ರ ಮದುವೆಯಲ್ಲಿ ಮಾಡುವ ಕೊನೆಯ ಒಂದು ಸಾಂಪ್ರದಾಯಿಕ ವಿಧಿ.

೭. ಉಡಕಿ ಮದುವೆ: ಈ ಸಮುದಾಯದಲ್ಲಿ ವಿಧವೆಗೆ ಮರುವಿವಾಹವಾಗಲು ಅವಕಾಶವಿದೆ. ಆದರೆ ಅದಕ್ಕೆ ಕೆಲವೊಂದು ನಿಯಮಗಳಿವೆ.

* ವಿವಾಹವಾಗುವ ಗಂಡಸು ವಿಧುರನಾಗಿರಬೇಕು.
* ಗೃಹಸ್ತನಾಗಿದ್ದರೆ ಪಂಚಾಯತಿ ಕಟ್ಟೆಯಲ್ಲಿ ದಂಡ ಕಟ್ಟಿ ಸಮಾಜದ ನ್ಯಾಯಾಧೀಶರಿಂದ ಅನುಮತಿ ಪಡೆಯಬೇಕು.
* ಹುಡುಗಿಯ ಸಂಪೂರ್ಣ ಒಪ್ಪಿಗೆ ಇರಬೇಕು
* ಮದುವೆಯ ನಂತರ ಪ್ರತ್ಯೇಕ ಗುಡಿಸಲು ಹಾಕಿ ಇಡಬೇಕು
* ಸಮಾಜದ ಎಲ್ಲ ಮುಖಂಡರಿಗೆ ಸಕತ್ತಾಗಿ ಮಧ್ಯ ಮಾಂಸದೂಟ ಮಾಡಿಸಲು ಅವನು ಅರ್ಹನಾಗಿರಬೇಕು. ಅಂದಾಗ ಮಾತ್ರ ಇಂತಹ ಮದುವೆಗೆ ಸಮಾಜ ಒಪ್ಪಿಗೆ ಸೂಚಿಸುತ್ತದೆ.

ಪಂಚಾಯತಿ ಕಟ್ಟೆಯಲ್ಲಿ ಅನುಮತಿ ಪಡೆದುಕೊಂಡ ನಂತರ ಒಂದು ದಿನ ಗೊತ್ತುಮಾಡಿ ರಾತ್ರಿ ಪಂಚಾಯತಿ ಕಟ್ಟೆಯಲ್ಲಿ ಅನುಮತಿ ಪಡೆದುಕೊಂಡ ನಂತರ ಒಂದು ದಿನ ಗೊತ್ತು ಮಾಡಿ ರಾತ್ರಿ ಸಮಯದಲ್ಲಿ ಗುಡಿಯ ಮುಂದಿನ ಆವರಣದಲ್ಲಿ ಮದುವೆ ನಡೆಯುತ್ತದೆ. ಇಂತಹ ಮದುವೆಗಳನ್ನು ಸುಮಂಗಲೆಯರು ಮತ್ತು ಮಕ್ಕಳು ನೋಡಬಾರದು ಎಂಬ ಸಮಾಜದ ಕಟ್ಟಪ್ಪಣೆ ಇರುವುದರಿಂದ ಬೆಳದಿಂಗಳದ ಮಸುಕು ಬೆಳಕಿನಲ್ಲಿ ಇಬ್ಬರಿಗೂ ಕಂಬಳಿ ಹೊದಿಸಿ ಕಂಬಳಿಯ ಮುಸುಕಿನಲ್ಲಿಯೇ ಗಂಡು ಇಂತಹ ಮಹಿಳೆಗೆ ತಾಳಿ ಕಟ್ಟುತ್ತಾನೆ. ಉಡಿಕಿ ಮದುವೆಯಿಂದ ಆ ಹೆಂಗಳೆ ಪುನಃ ಸುಮಂಗಲೆಯಾದರೂ ಸಮಾಜದ ಮದುವೆಯಂತಹ ಇತರ ಕಾರಣಗಳಲ್ಲಿ ಭಾಗವಹಿಸುವಂತೆ ಇಲ್ಲ (ತರಂಗ, ಆಗಸ್ಟ್ ೪: ೨೦೦೮).

೮. ಕೌದಿ: ಹಳೆಯ ಬಟ್ಟೆಗಳಿಂದ ತಯಾರಿಸಿದ ಹೊದಿಕೆ.

* * *

ಅಧ್ಯಾಯ ನಾಲ್ಕು

ಚೆನ್ನದಾಸರ ಆರ್ಥಿಕ ಸ್ಥಿತಿಗತಿ

ಪ್ರಸ್ತಾವನೆ

೪.೧. ಭಿಕ್ಷಾಟನೆ

೪.೨. ಬೇಟೆ

೪.೩. ಪಶುಪಾಲನೆ

೪.೪. ಕೂಲಿಕೆಲಸ

೪.೫. ವ್ಯವಸಾಯ

೪.೬. ವ್ಯಾಪಾರ

೪.೭. ನೌಕರಿ

ಅಧ್ಯಾಯ ನಾಲ್ಕು

ಚೆನ್ನದಾಸರ ಆರ್ಥಿಕ ಸ್ಥಿತಿಗತಿ

ಪ್ರಸ್ತಾವನೆ

ವೃತ್ತಿಗಾಯಕರಾದ ಚೆನ್ನದಾಸರ ಮೊದಲು ಸಾಮಂತಶಾಹಿ ಮತ್ತು ರಾಜಶಾಹಿಯನ್ನು ಅವಲಂಬಿಸಿಯೇ ಬದುಕಬೇಕಿತ್ತು. ಅವರ ದತ್ತಿ ದಾನಗಳನ್ನು ಸದಾ ನಿರೀಕ್ಷಿಸುತ್ತಲೇ ಇರಬೇಕಿತ್ತು. ಶ್ರೀಮಂತರು, ಭೂಮಾಲಿಕರು ಕೆಲವು ವಿಶೇಷ ಸಂದರ್ಭಗಳಲ್ಲಿ ಇವರನ್ನು ಕರೆಸಿ ಹಾಡಿಸಿ ಆನಂದಿಸುತ್ತಿದ್ದರು. ಇದಕ್ಕೆ ಪ್ರತಿಯಾಗಿ ಕಾಣಿಕೆಗಳನ್ನು ಕೊಡುತ್ತಿದ್ದರು. ಜೊತೆಗೆ ಹಳ್ಳಿಗಳಲ್ಲಿ 'ಆಯ'ಕೊಟ್ಟು ಇವರನ್ನು ಪೋಷಿಸುತ್ತಿದ್ದರು. ''ಇಂತಹ ಅವಕಾಶಗಳನ್ನು ಈ ಸಮುದಾಯ ಎದುರು ನೋಡುತ್ತಾ ಬದುಕಬೇಕಿತ್ತು''(ಪ್ರಭಾಕರ, ೨೦೦೬: ೪೨೨). ತದನಂತರ ರಾಜಕೀಯ ಏರುಪೇರುಗಳಿಂದಾಗಿ ಸರಿಯಾದ ಆಶ್ರಯ ಸಿಗದೇ ಇದ್ದಾಗ ಬದುಕು ಸಾಗಿಸಲು ಭಿಕ್ಷೆ ಬೇಡುವುದನ್ನು ಮೂಲ ಕಸಬನ್ನಾಗಿ ಮಾಡಿಕೊಂಡರು.

ಸಯ್ಯದ್ ಸಿರಾಜ್ ಉಲೇಹಸನ್ ಅವರು ಈ ಸಮುದಾಯ ಭಿಕ್ಷೆಯನ್ನು ಸಂಗ್ರಹಿಸುವುದರೊಂದಿಗೆ ಮೀನು, ಪಾರಿವಾಳ ಇತ್ಯಾದಿ ಹಕ್ಕಿಗಳನ್ನು ಹಿಡಿದು ಮಾರುವವರು ಮತ್ತು ಕೆಲವು ಜನ ಕೃಷಿ ಹಾಗೂ ಪತ್ತೇದಾರಿ ಮಾಡುವವರು ಎಂದಿರುವರು (ಹಿಮ್ಮಡಿ, ೨೦೦೮: ೧೧೧). ಭಿಕ್ಷೆಯೊಂದಿಗೆ ಉಪ ಕಸುಬುಗಳಾದ ಬೇಟೆ ಮತ್ತು ಪಶುಪಾಲನೆಯನ್ನು ಕೈಗೊಳ್ಳುತ್ತಿದ್ದರು. ತದನಂತರದಲ್ಲಿ ಬದಲಾದ ಆರ್ಥಿಕ ಪರಿಸ್ಥಿತಿಯೊಂದಿಗೆ ಇವರ ಜೀವನ ಕ್ರಮವೂ ಬದಲಾವಣೆಯತ್ತ ಸಾಗಿದೆ. ಹಿಂದೆ ಭಿಕ್ಷೆ ಬೇಡುತ್ತಾ ಜೀವನ ಸಾಗಿಸುತ್ತಿದ್ದ ಚೆನ್ನದಾಸರಿಗೆ ಇಂದು ಭಿಕ್ಷೆಯ ಜೊತೆಗೆ ವ್ಯಾಪಾರ, ಕೃಷಿ ಇನ್ನಿತರ ಉದ್ಯೋಗಗಳು ಸೇರಿಕೊಂಡಿವೆ. ಆರ್ಥಿಕವಾಗಿ ದುರ್ಬಲವಾಗಿರುವ ಇವರಿಗೆ ಸರ್ಕಾರದ ಯೋಜನೆಗಳು ಸಮರ್ಪಕವಾಗಿ ಲಭ್ಯವಾಗದೇ ಬಹಳ ನಿಕೃಷ್ಟವಾದ ಬದುಕನ್ನು ಸಾಗಿಸುತ್ತಾರೆ. ಇಂತಹ ಸ್ಥಿತಿಗತಿ ಕುರಿತಾದ ವಿಚಾರಗಳನ್ನು ಈ ಅಧ್ಯಾಯದ ಮೊದಲನೆಭಾಗದಲ್ಲಿ ತಿಳಿಸಲಾಗುವುದು ಈ ಅಧ್ಯಾಯದ ಎರಡನೇ ಭಾಗದಲ್ಲಿ ಈ ಸಮುದಾಯದವರು ಹಿಂದಿನ ಕಾಲದಿಂದಲೂ ಕೈಗೊಳ್ಳುತ್ತಿರುವ ಪ್ರಮುಖ ಉಪವೃತ್ತಿಯಾದ

ಬೇಟೆಯ ಪ್ರಕಾರಗಳು ಮತ್ತು ವಿಧಾನಗಳನ್ನು ಗುರುತಿಸಲಾಗಿದೆ. ಪ್ರಸ್ತುತ ಅಧ್ಯಾಯದ ಮೂರನೇಯ ಭಾಗದಲ್ಲಿ ಪಶುಪಾಲನೆಗೆ ಸಂಬಂಧಿಸಿದಂತೆ ತಿಳಿಸಲಾಗಿದೆ. ನಾಲ್ಕನೇಯ ಭಾಗದಲ್ಲಿ ಕೂಲಿಕೆಲಸ ಹಾಗೂ ಐದನೇಯ ಭಾಗದಲ್ಲಿ ಪ್ರಸ್ತುತ ಸಂದರ್ಭದಲ್ಲಿ ಈ ಸಮುದಾಯದವರು ವ್ಯವಸಾಯಕ್ಕೆ ಸಂಬಂಧಿಸಿದಂತೆ ಉದ್ಯೋಗಗಳನ್ನು ಅರಿಸುತ್ತಿರುವ ಅಂಶಗಳನ್ನು ಗುರುತಿಸಲಾಗಿದೆ.

೪.೧. ಭಿಕ್ಷಾಟನೆ

ಪ್ರಾಚೀನ ಕಾಲದಿಂದಲೂ ದಾನ ಪ್ರವೃತ್ತಿಯನ್ನು ಮಾನವನ ಶ್ರೇಷ್ಟಗುಣಗಳಲ್ಲಿ ಒಂದೆಂದು ಭಾವಿಸಲಾದ ಸಮುದಾಯಗಳಲ್ಲಿ ಚನ್ನದಾಸರ ಸಮುದಾಯವೂ ಒಂದು. ಪ್ರತಿಯೊಂದು ಧಾರ್ಮಿಕ ಕಾರ್ಯಗಳಲ್ಲಿ ದಾನವು ಪ್ರಮುಖ ಪಾತ್ರ ವಹಿಸುತ್ತದೆ. ದಾನ ಮಾಡಿದರೆ ಮುಂದೆ ತಮಗೆ ಪುಣ್ಯ ಪ್ರಾಪ್ತಿಯಾಗುವುದೆಂಬ ನಂಬಿಕೆ ಬಹುತೇಕ ಇಂದಿನ ಎಲ್ಲಾ ಸಮುದಾಯಗಳಲ್ಲಿದೆ. ಅಷ್ಟೇ ಅಲ್ಲ ದಾನ ಪಡೆಯುವುದು ಸಹ ಅಷ್ಟೇ ಪುಣ್ಯದ ಕೆಲಸವೆಂದು ಬಗೆದು ಈ ಬಗೆಯ ಸಮುದಾಯಗಳು ಧಾರ್ಮಿಕ ಭಿಕ್ಷುಕರಾಗಿರುವುದು ಕಂಡುಬರುತ್ತದೆ.

ಈ ಧಾರ್ಮಿಕ ಭಿಕ್ಷೆ ಬೇಡುವುದು ವಿಜಯನಗರ ಅರಸರ ಕಾಲದಿಂದಲೂ ಇದೆ ಎನ್ನುವ ನಂಬಿಕೆಯಿದೆ. ಈ ಸಮುದಾಯ ಮೊದಲು ಹಾಡುವ, ಆಟವಾಡುವ, ನರ್ತಿಸುವುದರೊಂದಿಗೆ ಜೀವನೋಪಾಯಕ್ಕಾಗಿ ಭಿಕ್ಷೆಯನ್ನು ಬೇಡುತ್ತಿದ್ದರು. ಆದರೆ ಅದಕ್ಕೆ ಸರಿಯಾದ ಮನ್ನಣೆ ಇರಲಿಲ್ಲ. ಹರಿದಾಸ ಪಂಥದವರು ಇವರನ್ನು ವೈದಿಕ ಧರ್ಮದ ಪ್ರಸಾರಕ್ಕೆ ಬಳಸಿಕೊಂಡಾಗಿನಿಂದ ಈ ಸಮುದಾಯ ಭಿಕ್ಷೆಯನ್ನು ಒಂದು ಪ್ರಮುಖ ಮೂಲ ಕಸುಬನ್ನಾಗಿ ಮಾಡಿಕೊಂಡರು. ಭಿಕ್ಷೆಯಲ್ಲಿ ಎರಡು ವಿಧ ಉಂಟು. ಒಂದು ಏಕತಾರಿ ತಂಬೂರಿಗಳನ್ನು ಬಳಸಿ ತತ್ವಪದಗಳನ್ನು ಹಾಡುತ್ತ ಬಯಲಾಟಗಳನ್ನು ಪ್ರದರ್ಶಿಸುತ್ತ, ದಮ್ಮಡಿ ಬಳಸಿ ಗಂಗೆ-ಗೌರಿ ಪದಗಳನ್ನು ಹಾಡುತ್ತಾ ಬೇಡುವುದು. ಎರಡನೆಯದು ಬರೀ ವಾದ್ಯಗಳನ್ನು ಬಾರಿಸುತ್ತ ಗೋಪಾಳ ಬುಟ್ಟಿಯೊಂದಿಗೆ ಬೇಡುವುದು. ಗಂಟೆ, ಜಾಗಟೆ ಮತ್ತು ಶಂಖಗಳನ್ನು ಬಳಸುವ ಇವರು ಹಾಡು ಹೇಳುವುದಿಲ್ಲ. ಬದಲಿಗೆ, 'ಶ್ರೀಮದ್ ವೆಂಕಟರಮಣ ಗೋವಿಂದಾ ಗೋವಿಂದ' ಎಂದು ಉಗ್ಘಡಿಸುವರು.

ಈ ರೀತಿಯ ಭಿಕ್ಷೆ ಬೇಡುವವರು ಪ್ರಮುಖವಾಗಿ ಗೋಪಾಳ ಬುಟ್ಟಿಯನ್ನು ಅದನ್ನು ಒಯ್ಯುವರು. ವಿಶೇಷವಾಗಿ ಗಂಗೆ-ಗೌರಿ ಹಾಡು ಹೇಳುವ ಸ್ತ್ರೀ ಗುಂಪಿನವರು. ಜೋಳಿಗೆಯನ್ನು ಧಾನ್ಯ ಸಂಗ್ರಹಕ್ಕಾಗಿ ಒಯ್ಯುತ್ತಾರೆ. ಇವರು ಬಳಸುವ ಪ್ರಮುಖ ವಾದ್ಯ ಪರಿಕರಗಳಲ್ಲಿ ಏಕತಾರಿ, ತಂಬೂರಿ, ಜಾಗಟೆ ಮತ್ತು ಶಂಖ ಪ್ರಮುಖವಾದವುಗಳು. ಜೊತೆಯಲ್ಲಿ ಗರುಡುಗಂಬ ಅಥವಾ ದೀಪಸ್ತಂಭ ಒಯ್ಯುತ್ತಾರೆ.

ಈ ಸಮುದಾಯದ ಬಯಲಾಟದವರು ಊರವರಿಂದ ಒಪ್ಪಂದದ ಮೇಲೆ ಮುಂಗಡ ಹಣ ಪಡೆದು ನಿಶ್ಚಿತ ದಿನದಂದು ಹೋಗಿ ಬಯಲಾಟ ಆಡಿ ಬರುವವರಲ್ಲ. ತಾವಾಗಿಯೇ ಊರೂರು, ಓಣಿ-ಓಣಿ ತಿರುಗಿ ಬಯಲಾಟ ಪ್ರದರ್ಶಿಸಿ ಕೊಟ್ಟಷ್ಟು, ಕಾಳು-ಕಡಿ ಇಲ್ಲವೇ ಹಣ-ವಸ್ತು ಪಡೆದು ಬರುವರು. ಇವರು ಹೆಚ್ಚಾಗಿ ಹಣವನ್ನೇ ಪಡೆಯುವರು. ಕಾಳು ಕಡಿಗೆ ಗೋಣಿ ಚೀಲಗಳನ್ನು ಬಳಸುತ್ತಾರೆ (ಹಿಮ್ಮಡಿ, ೨೦೦೮: ೧೧೩). ಇವರ ವಾದ್ಯಗಳಲ್ಲಿ

ಪೇಟಿ, ಮೃದಂಗ, ದಮ್ಮಡಿ, ವಯೋಲಿನ್ ಮತ್ತು ಕೈತಾಳ ಇತ್ತೀಚೆಗೆ ಹಾರ್ಮೋನಿಯಮ್ ಬಳಸುತ್ತಾರೆ. ಬಾದಾಮಿಯ ಬನಶಂಕರಿ ಜಾತ್ರೆ, ಕೊಪ್ಪಳದ ಗವಿಶಿದ್ದೇಶ್ವರ ಜಾತ್ರೆ, ಕುಕನೂರಿನ ಮಹಾಮಾಯಾ ಮತ್ತು ಗುರ್ನಪ್ಪನ ಜಾತ್ರೆಗಳಲ್ಲಿ ಈ ಸಮದಾಯದ ಸ್ತ್ರೀ ಪುರುಷರು ಮಕ್ಕಳು ವೇಷಧರಿಸಿ ಕುಣಿಯುತ್ತ ಹಾಡುವುದನ್ನು ಇಂದಿಗೂ ಕಾಣಬಹುದು (ಸುಂಕಾಪುರ, ೧೯೭೮: ೧೪೩). ಇತ್ತೀಚೆಗೆ ಇದು ವಿರಳವಾಗಿದೆ. ಆಧುನಿಕತೆಯ ಪ್ರಭಾವಕ್ಕೆ ಸಿಲುಕಿದ ಸಮಾಜದಲ್ಲಿ ಈ ಸಮುದಾಯ ಅಳವಡಿಸಿಕೊಂಡು ಬಂದ ಭಿಕ್ಷಾಟನೆಯು ದಿನಗಳೆದಂತೆ ಕಣ್ಮರೆಯಾಗುತ್ತಿದೆ. ಇದಕ್ಕೆ ಸಮೂಹ ಮಾಧ್ಯಮ ಮತ್ತು ಸರಕಾರ ಕೈಗೊಂಡ ಯೋಜನೆಗಳು ಇವರ ಬದುಕಿನ ಮೇಲೆ ಪ್ರಭಾವ ಬೀರಿವೆ.

ಈ ಸಂಗತಿಯನ್ನು ಕುರಿತು ಯಲಬುರ್ಗಾದಲ್ಲಿರುವ ಸಮುದಾಯದ ಮುಖ್ಯಸ್ಥನಾದ ಮಾರಪ್ಪ ಚೆನ್ನದಾಸರನನ್ನು ಸಂದರ್ಶಿಸಿದಾಗ, ''ಏನು ಮಾಡದು ಸ್ವಾಮಿ ತಲಾತಲಾಂತರದಿಂದ ಹಾಡು ಹಾಡುತ್ತಾ ಭಿಕ್ಷೆಯನ್ನು ಬೇಡುತ್ತಾ ಬಂದ ನಮಗೆ ಸಮಾಜದಲ್ಲಿರುವ ಜನರು ಸರಿಯಾದ ಭಿಕ್ಷೆಯನ್ನು ಕೊಡುವುದಿಲ್ಲ. ಇದರಿಂದ ಮನಸ್ಸಿಗೆ ಬೇಜರಾಗಿ ಭಿಕ್ಷೆ ಬೇಡುವದನ್ನು ಬಿಟ್ಟಿದ್ದೇವೆ. ಆದರೆ ಮೊದಲಿನಿಂದ ಬಂದಂತಹ ಈ ಭಿಕ್ಷಾಟನೆಯನ್ನು ಕೆಲವು ಸಣ್ಣ ಮಕ್ಕಳು ಮಾಡುತ್ತಾರೆ ಎಂದು ಹೇಳುತ್ತಾರೆ. ಈ ಸಮುದಾಯ ಇಂದಿನ ದಿನ ಮಾನಗಳಲ್ಲಿ ಭಿಕ್ಷಾಟನೆಯ ಜೊತೆಗೆ ಬೇರೆ ವೃತ್ತಿಯಲ್ಲಿ ತೊಡಗಿ ತಮ್ಮ ಆರ್ಥಿಕ ಬದುಕನ್ನು ಸುಧಾರಿಸುವ ಪ್ರಯತ್ನ ಮಾಡುವದು ಕಂಡುಬರುತ್ತದೆ. ಅಲ್ಲದೆ ಈ ರೀತಿಯ ಭಿಕ್ಷಾಟನೆಯು ಇತರ ಅಲೆಮಾರಿ ಸಮುದಾಯಗಳಾದ ಹಗಲುವೇಷಗಾರರು, ದೊಂಬಿದಾಸ, ಸಿಂಧೊಳ್ಳಿ ಜನಾಂಗದಲ್ಲಿಯು ಸಹ ಕಂಡುಬರುತ್ತದೆ.

೪.೨. ಬೇಟೆ

ಪ್ರಾಚೀನ ಕಾಲದಲ್ಲಿ ಬೇಟೆಯು ಆದಿವಾಸಿಗಳ ವೃತ್ತಿಯಾಗಿತ್ತು. ಈ ವೃತ್ತಿ ಮುಖ್ಯವಾಗಿ ಎರಡು ಕಾರಣಗಳಿಗಾಗಿ ರೂಪಗೊಂಡಿರಬೇಕು. ಒಂದು ಕಾಡು ಪ್ರಾಣಿಗಳ ದಾಳಿಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಮತ್ತೊಂದು ಬೇಟೆಯಾಡಿದ ಪ್ರಾಣಿಗಳಲ್ಲಿ ಆಹಾರಕ್ಕೆ ಯೋಗ್ಯವಾದವುಗಳನ್ನು ಬಳಸುವುದು. ಹೀಗೆ ತಮ್ಮ ರಕ್ಷಣೆ ಹಾಗೂ ಆಹಾರಕ್ಕಾಗಿ ಪ್ರಾರಂಭಿಸಿದ ಈ ಬೇಟೆ ವೃತ್ತಿ ಇಂದು ಒಂದು ಸಂಪ್ರದಾಯವಾಗಿ ಮಾತ್ರ ಉಳಿದು ಕೊಂಡಿದೆ. ಸ್ವಾತಂತ್ರ್ಯೋತ್ತರ ಸರಕಾರ ಬೇಟೆಮಾಡುವುದನ್ನು ಅರಣ್ಯ ಸಂರಕ್ಷಣಾ ಕಾಯಿದೆಯಡಿಯಲ್ಲಿ ನಿಯಂತ್ರಣಕ್ಕೊಳಪಡಿಸಿದ್ದರಿಂದ ಅಲೆಮಾರಿ ಸಮುದಾಯಗಳ ಹಿಂದಿನ ನಿರಂತರ ಬೇಟೆ ಇಂದು ನಿಯಂತ್ರಣಗೊಂಡು ಕೇವಲ ಹಬ್ಬ ಹರಿದಿನಗಳಲ್ಲಿ ಮಾತ್ರ ಉಳಿದುಕೊಂಡು ಬಂದಿದೆ. ಬೇಟೆಯು ಈ ಸಮುದಾಯದ ಪರಂಪರೆಯ ಕಸುಬಾಗಿದೆ (ಹಿಮ್ಮಡಿ, ೨೦೦೮: ೧೧೩). ಇದನ್ನು ಇವರು ಮೈಗೂಡಿಸಿಕೊಂಡಿದ್ದಾರೆ. ಬೇಟೆಯನ್ನು ದಿನದ ಮಧ್ಯಾಹ್ನದ ನಂತರ ಹಾಗೂ ರಾತ್ರಿ ಸಮಯದಲ್ಲಿ ಕೈಗೊಳ್ಳುತ್ತಾರೆ. ಏಕೆಂದರೆ ಮುಂಜಾನೆ ತತ್ವ ಪದಗಳನ್ನು ಹಾಡುತ್ತಾ ಭಿಕ್ಷೆಯನ್ನು ಪಡೆಯುವದರಿಂದ ಬೇಟೆಗೆ ಹೋಗಲು ಆಗುವುದಿಲ್ಲ. ಇವರು ಎಲ್ಲಾ ರೀತಿಯ ಪ್ರಾಣಿ ಪಕ್ಷಿಗಳ ಬೇಟೆಯಾಡುತ್ತಾರೆ. ಬೇಟೆ ಎಂದರೆ ಈ ಜನತೆಗೆ ತುಂಬಾ ಇಷ್ಟ, ತಮ್ಮ ಉಪವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ. ಇವರು ಹಬ್ಬ ಹರಿದಿನಗಳಲ್ಲಿಯು ಸಹ ಮಾಂಸದ ಊಟವನ್ನು ಮಾಡುವುದರಿಂದ ಮಾಂಸದ ಊಟಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ. ಇಂದಿಗೂ

[illegible]

ಮಾಂಸದ ಊಟ ಇಲ್ಲದಿದ್ದರೆ ಸಂತೃಪ್ತಿಕರ ಊಟವಾಗುವದಿಲ್ಲವೆಂದು ಹೇಳುತ್ತಾರೆ. ಇವರು ಬೇಟೆಯನ್ನು ವ್ಯಾಪಾರ ದೃಷ್ಟಿಯಿಂದ ಕೈಗೊಳ್ಳುವುದಿಲ್ಲ. ಕೆಲವೊಂದು ವಿಶೇಷ ಸಂದರ್ಭದಲ್ಲಿ ಬೇಟೆ ಹೆಚ್ಚು ಸಿಕ್ಕಾಗ ಅಥವಾ ಬೇರೆ ಜಾತಿಯವರು ತಿನ್ನುವ ಕೆಲವು ಪ್ರಾಣಿ ಪಕ್ಷಿಗಳನ್ನು ಹಿಡಿದು ತಂದು ಮಾರುತ್ತಾರೆ (ಹಿಮ್ಮಡಿ, ೨೦೦೮: ೧೧೪). ಅವುಗಳಲ್ಲಿ ಕೆಲವು ಮುಖ್ಯವಾದ ಪ್ರಾಣಿ ಪಕ್ಷಿಗಳ ಬೇಟೆ ವಿಧಾನಗಳನ್ನು ವಿವರಿಸಲಾಗಿದೆ.

೪.೨.೧. ಮುಳ್ಳಂದಿ ಬೇಟೆ

೪.೨.೨. ಅಡವಿ ಬೆಕ್ಕು

೪.೨.೩. ಮೊಲ

೪.೨.೪. ಕೌಜು ಬೇಟೆ

೪.೨.೫. ಅಳಿಲು

೪.೨.೬. ಉಡ

೪.೨.೭. ಮೀನ

೪.೨.೮. ಪಾರಿವಾಳ

೪.೨.೧. ಮುಳ್ಳಂದಿ ಬೇಟೆ

ಚೆನ್ನದಾಸರು ಕೈಗೊಳ್ಳುವ ಬೇಟೆಗಳಲ್ಲಿ ಇದು ಒಂದಾಗಿದೆ. ಈ ಪ್ರದೇಶದಲ್ಲಿ ಇದನ್ನು 'ಏದು' ಎಂದು ಕರೆಯುತ್ತಾರೆ. ರೈತರ ಶೇಂಗಾ ಹಾಗೂ ಇತರ ಬೆಳೆಗಳನ್ನು ಹಾಳು ಮಾಡುತ್ತಿರುವಾಗ ರೈತರು ಮುಳ್ಳಂದಿ ಬೇಟೆಗೆ ಆಹ್ವಾನಿಸುತ್ತಾರೆ. ಆಹ್ವಾನವನ್ನು ಸ್ವೀಕರಿಸಿ ಬೇಟೆಗೆ ತಯಾರಾಗುತ್ತಾರೆ. ಇದನ್ನು ಹೆಚ್ಚಾಗಿ ರಾತ್ರಿ ಹೊತ್ತು ನಾಯಿಗಳ ಸಹಾಯದೊಂದಿಗೆ ಆಡುತ್ತಾರೆ. ಇದು ಅಪಾಯಕಾರಿ ಬೇಟೆಯಾಗಿದ್ದರಿಂದ ಒಬ್ಬರೇ ಬೇಟೆಯನ್ನು ಕೈಗೊಳ್ಳದೇ ಸಾಮೂಹಿಕ ತಂಡದೊಂದಿಗೆ ಬೇಟೆಯನ್ನು ಕೈಗೊಳ್ಳುತ್ತಾರೆ. ಇದು ತನ್ನ ಪ್ರಾಣ ರಕ್ಷಣೆಗೆ ಮೈಯನ್ನು ಸಡಿಲಗೊಳಿಸಿದರೆ ಮುಳ್ಳು ಸುಮಾರು, ಆರ ರಿಂದ ಏಳು ಅಡಿ ಚಿಮ್ಮುತ್ತದೆ. ಇದನ್ನರಿತು ಬೇಟೆಗಾರರು ವಿಶೇಷ ಜಾಗೃತ ವಹಿಸುತ್ತಾರೆ. ಬೇಟೆಯ ಆಯುಧಗಳೆಂದರೆ ಬಲೆ, ಕಬ್ಬಿಣದ ಚಡಿ, ಅನುಕೂಲಕ್ಕೆ ತಕ್ಕಂತೆ ಬಡಿಗೆಗಳನ್ನು ಬಳಸುತ್ತಾರೆ. ಈ ಪ್ರಾಣಿಗೆ ಬೆನ್ನಿಗೆ ಬಡಿದರೆ ಸಾಯುವುದಿಲ್ಲ. ಅದನ್ನರಿತು ಬೇಟೆಗಾರರು ಪ್ರಾಣಿಯ ಮೂಗಿಗೆ ಬಡಿಯುತ್ತಾರೆ. ಆಗ ಪ್ರಾಣಿಯು ಕ್ಷಣಾರ್ಧದಲ್ಲಿಯೇ ಸಾಯುತ್ತದೆ.

೪.೨.೨. ಅಡವಿ ಬೆಕ್ಕು

ಅಡವಿ ಬೆಕ್ಕು ಇದು ಊರು ಬಿಟ್ಟು ಅಡವಿಯಲ್ಲಿ ವಾಸಿಸುತ್ತದೆ. ಊರಿನ ಬೆಕ್ಕುಗಿಂತ ಗಾತ್ರದಲ್ಲಿ ಸ್ವಲ್ಪ ದೊಡ್ಡದಾಗಿದ್ದು ಇದನ್ನು ಈ ಸಮುದಾಯದವರು ಬೇಟೆಯನ್ನಾಡುತ್ತಾರೆ. ಈ ಪ್ರಾಣಿಯ ಬೇಟೆಗೆ ಭರ್ಚಿ, ಬಲೆ, ಬಡಿಗೆ, ಆಯುಧಗಳನ್ನು ಬಳಸುತ್ತಾರೆ. ಮೊದಲು ಇದು ಇರುವ ಸ್ಥಳವನ್ನು ಗುರ್ತಿಸಿಕೊಂಡು ಸ್ವಲ್ಪ ಅಂತರದಲ್ಲಿ

ಬಲಿಯನ್ನು ಕಟ್ಟಿರುತ್ತಾರೆ. ಹಿಂದಿನಿಂದ ಹೋಗಿ ಬಡಿಗೆಯ ಮೂಲಕ ಸಪ್ಪಳ ಮಾಡುತ್ತಾರೆ. ಅಗ ಈ ಪ್ರಾಣಿಯು ಎದ್ದು ನೇರವಾಗಿ ಬಲಿಗೆ ಬೀಳುತ್ತದೆ. ಆಗ ಭರ್ಚಿ, ಇತರ ಆಯುಧಗಳ ಮೂಲಕ ತಿವಿದು ಕೊಲ್ಲುತ್ತಾರೆ (ಮೌಖಿಕ ಸಂದರ್ಶನ, ವೆಂಕಟೇಶ: ೨೦೦೯).

೪.೨.೩. ಮೊಲ

ಚೆನ್ನದಾಸರು ಆಡುವ ಬೇಟೆಗಳಲ್ಲಿ ಮೊಲದ ಬೇಟೆಯು ಒಂದಾಗಿದೆ. ಈ ಬೇಟೆಗೆ ಒಂದು ಸಾಮೂಹಿಕ ತಂಡವು ಅಗತ್ಯವಾಗಿದೆ. ಈ ಬೇಟೆಗೆ ಮುಖ್ಯವಾಗಿ ಬಲೆ, ಶ್ವಾನದಳ, ಬಡಿಗೆಗಳು, ಇತ್ತೀಚೆಗೆ ಬ್ಯಾಟ್ರಿಯನ್ನು ಬಳಸುವದುಂಟು. ಕಾಡಿನ ಅಂಚಿನಲ್ಲಿ, ಗುಡ್ಡ, ಗಿಡ, ಪೊದರು, ಗಿಡದ ಪೊಟರೆಗಳಲ್ಲಿ ಹೆಚ್ಚು ವಾಸಿಸುವ ಮೊಲ ಆಹಾರಕ್ಕಾಗಿ ಹೊರ ಬರುವ ಹಾದಿ ಮತ್ತು ಓಡಾಡುವ ಜಾಗದಲ್ಲಿ ಬಲೆಯ ಎರಡೂ ತುದಿಗಳಿಗೆ ಕೋಲನ್ನು ಸಿಕ್ಕಿಸಿ ಮಧ್ಯೆ ಅಲ್ಲಲ್ಲಿ ಒಂದೊಂದು ಕೋಲುಗಳನ್ನ ಇಟ್ಟಿರುತ್ತಾರೆ. ಬಲೆಯು ಸುಮಾರು ೧೫-೨೦ ಅಡಿಗಳಷ್ಟು ಉದ್ದವಿದ್ದು ೨½-೩ ಅಡಿಗಳಷ್ಟು ಅಗಲವಿರುತ್ತದೆ. ಬಲೆಯನ್ನು ಕೋಲಿನ ಆಧಾರದಲ್ಲಿ ಸ್ವಲ್ಪ ತಗುಲಿದರೂ ಸಾಕು, ಕೆಳಕ್ಕೆ ಬೀಳುವಂತೆ ನಿಲ್ಲಿಸಲಾಗಿರುತ್ತದೆ. ಬಲೆಯ ಅಕ್ಕ ಪಕ್ಕದಲ್ಲಿ ಗಿಡಗಂಟೆಗಳನ್ನು ಹಾಕಿ ಅದು ಓಡಿ ಹೋಗದಂತೆ ಮಾಡಲಾಗಿರುತ್ತದೆ. ಮೊಲವಿರುವ ಜಾಗವನ್ನು ನಾಯಿ ಗುರುತಿಸುತ್ತದೆ. ಇಲ್ಲವೇ ಮೊಲ ಓಡಾಡಿರುವ ಜಾಗದಲ್ಲಿ ಅದರ ಕುರುಹುಗಳು, ಹಿಕ್ಕೆ ಮೊಲದ ಇರುವನ್ನೆ ಖಚಿತಪಡಿಸುತ್ತದೆ. ಮೊಲವು ಎಂದಿನಂತೆ ತನ್ನ ಆಹಾರ ಹುಡುಕಾಟ, ಓಡಾಟಕ್ಕೆ ಬಂದುದನ್ನು ಕಂಡುಕೊಂಡ ಬೇಟೆಗಾರ ಹಿಂತಿರುಗಲು ಸಾಧ್ಯವಾಗದಂತೆ ಅಡ್ಡಗಟ್ಟುತ್ತಾನೆ. ಮೊಲವು ಬೆದರಿ ಓಡಿ ಹೋಗಲು ಮುಂದಾಗುತ್ತದೆ. ಅಡ್ಡವಿರುವ ಬಲೆಗೆ ತಾಗಿದೊಡನೆ ಮೊಲ ನುಗ್ಗಿದ ರಭಸಕ್ಕೆ ಬಲೆಯು ಸುತ್ತಿಕೊಂಡು ಉಂಡೆಯಾಗುತ್ತದೆ. ಕೆಲವೊಮ್ಮೆ ನಾಯಿ ಮೊಲವಿರುವ ಜಾಗವನ್ನು ಗುರುತಿಸಿದಾಗ ಆಯಕಟ್ಟಿನಲ್ಲಿ ಬಲೆಯನ್ನು ಒಡ್ಡಿ, ಕೇಕೆ ಹಾಕಿ ಅಥವಾ ತಮಟೆ ಬಡಿದು ಶಬ್ದ ಮಾಡುತ್ತಾರೆ. ನಾಯಿ ಬೊಗಳುತ್ತಾ ಮೊಲದ ಮೇಲೆ ಎರಗಲು ಮುಂದಾಗುತ್ತದೆ. ಹೆದರಿದ ಮೊಲವು ತಾನಿರುವ ಜಾಗ ಸುರಕ್ಷಿತವಲ್ಲವೆಂದು, ತಪ್ಪಿಸಿಕೊಂಡು ಓಡಿಹೋಗಲು ಮುಂದಾಗುತ್ತದೆ. ಆದರೆ ಅಡ್ಡಲಾಗಿ ಹಾಕಲಾಗಿರುವ ಬಲೆಯೊಳಗೆ ಸಿಕ್ಕಿಕೊಳ್ಳುತ್ತದೆ. ಬಲೆಯ ಕಾವಲಿಗೆ ಇರುವವನು ತಡಮಾಡದೆ ಮೊಲವನ್ನು ಜೀವಂತವಾಗಿ ಹಿಡಿಯಲು ಪ್ರಯತ್ನಿಸುತ್ತಾನೆ. ಮೊಲವು ಬಲೆಯಲ್ಲಿ ಪೂರ್ಣವಾಗಿ ಸುತ್ತಿಕೊಂಡು ಬಂದಿಯಾಗಿದ್ದರೆ ಮಾತ್ರ ಜೀವಂತವಾಗಿ ಹಿಡಿಯಲು ಸಾಧ್ಯ. ಇಲ್ಲವಾದರೆ ತಪ್ಪಿಸಿಕೊಂಡು ಓಡಿ ಹೋಗುತ್ತದೆ. ಸಂದರ್ಭಕ್ಕನುಗುಣವಾಗಿ ಕಾವಲಿದ್ದವನು ಹಿಡಿಯುವ ಅಥವಾ ದೊಣ್ಣೆಯಿಂದ ಹೊಡೆದು ಹಿಡಿಯುವ ನಿರ್ಣಯ ಕೈಗೊಳ್ಳುತ್ತಾನೆ. ನಾಯಿ ಸಹ ಮೊಲ ತಪ್ಪಿಸಿಕೊಳ್ಳಲು ಸಾಧ್ಯವಾಗದಂತೆ ಎಚ್ಚರ ವಹಿಸುತ್ತದೆ (ಹಕಾರಿ, ೨೦೦೦: ೬).

ಹೀಗೆ ಮೊಲವನ್ನು ಈ ಸಮುದಾಯದವರು ಬೇಟೆಯನ್ನು ಆಡುತ್ತಾರೆ. ಮೊಲದ ಮಾಂಸ ಬಹು ರುಚಿಕರವಾದ, ಪುಷ್ಟದಾಯಕ ಮಾಂಸ, ಅಲ್ಲದೆ ಬೇಟೆಯ ಸಮಯದಲ್ಲಿ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸುವುದನ್ನು ಬಿಟ್ಟು ಯಾವುದೇ ರೀತಿಯ ಅಪಾಯ ಬೇಟೆಗಾರನಿಗೆ ಇರುವುದಿಲ್ಲ. ಹೀಗಾಗೆ ಈ ಸಮುದಾಯದವರು ಹೆಚ್ಚಾಗಿ ಮೊಲದ ಬೇಟೆಯನ್ನು ಆಡುತ್ತಾರೆ.

[illegible]

[illegible]

[illegible]

೪.೨.೪. ಕೌಜುಗ ಬೇಟೆ

ಕೋಳಿ ಜಾತಿಗೆ ಸೇರಿದ ಈ ಪಕ್ಷಿಯನ್ನು 'ಚಿತ್ರಪಕ್ಷಿ' ಎಂದು ಸಹ ಕರೆಯುವರು. ಕೌಜನ್ನು ಬೇಟೆ ಮಾಡಲು ಬಹುತೇಕ ಎಲ್ಲಾ ಬೇಟೆಗಾರರು ಬಳಸುವಂತಹ ಸಾಧನ ವಿಧಾನಗಳನ್ನೇ ಚೆನ್ನದಾಸರು ಬಳಸುವರು. ಸಣ್ಣ ಸಣ್ಣ ಬಿದಿರಿನ ಕಡ್ಡಿಗಳಿಂದ ಪಂಜರವನ್ನು ತಯಾರಿಸಿಕೊಂಡು ಕೌಜುಗ ಇರುವ ಪ್ರದೇಶದಲ್ಲಿ ಬೇಟೆಯನ್ನು ಆಡಲು ಹೋಗುತ್ತಾರೆ. ಕೌಜುಗ ಇದ್ದ ಸ್ಥಳವನ್ನು ಗುರುತಿಸಿದ ಮೇಲೆ ಪಳಗಿಸಿದ ಕೌಜನ್ನು ಪಂಜರದಲ್ಲಿಟ್ಟು ಮೇಲೆ ಪಂಜರಕ್ಕೆ ಸ್ವಲ್ಪ ಹಸಿರು ಸೊಪ್ಪಿನಿಂದ ಮರೆಮಾಡಿ ಬೇಟೆಗಾರ ಸೀಟಿಹೊಡೆದು ಕೌಜುವ ಹೋಗುವಂತೆ ಪ್ರೇರೇಪಿಸುವರು. ಈ ಧ್ವನಿಯನ್ನು ಕೇಳಿದ ಇತರೆ ಕೌಜುಗಳು ಓಡಿ ಬಂದು ಒಡ್ಡಿದ ಬಲೆಯೊಳಗೆ ಬೀಳುತ್ತವೆ. ಕೌಜುಗ ಬಹಳ ಸಿಕ್ಕರೆ ಅವರಿಗೆ ಬೇಕಾದಷ್ಟು ಉಳಿಸಿಕೊಂಡು ಉಳಿದ ಕೌಜುಗಳನ್ನು ಒಂದಕ್ಕೆ ೧೦ ರಿಂದ ೨೦ ರೂಪಾಯಿಗಳವರಿಗೆ ಮಾರಾಟ ಮಾಡಿ ಹಣ ಸಂಪಾದಿಸುವರು. ತರಬೇತಿ ಹೊಂದಿದ ಕೌಜುಕ್ಕೆ ಹೆಚ್ಚಿಗೆ ಬೆಲೆಯಿರುತ್ತದೆ. ಹೀಗೆ ಕೌಜುಗಳನ್ನು ಹಿಡಿದು ಅಡುಗೆ ಮಾಡಿ ಉಣ್ಣುವರು. ಈ ಸಮುದಾಯದ ಜನರಿಗೆ ಪ್ರಿಯವಾದ ಮಾಂಸಹಾರಗಳಲ್ಲಿ ಇದು ಒಂದು.

೪.೨.೫. ಅಳಿಲು ಬೇಟೆ

ಚೆನ್ನದಾಸರು ಆಡುವ ಬೇಟೆಗಳಲ್ಲಿ ಅಳಿಲು ಬೇಟೆಯು ಒಂದಾಗಿದೆ. ಇದನ್ನು ಆಹಾರ ಮತ್ತು ಔಷಧಿಗಾಗಿ ಬೇಟೆಯಾಡುತ್ತಾರೆ. ಹಿಂದೂ ಧರ್ಮದಲ್ಲಿ ಇದಕ್ಕೆ ಪೂಜ್ಯನೀಯ ಸ್ಥಾನ ಕೊಟ್ಟಿದ್ದಾರೆ. ಇದು ಶ್ರೀರಾಮಚಂದ್ರನಿಗೆ ಸಹಕರಿಸಿದುದರಿಂದಲೇ ಇದರ ಬೆನ್ನಿನ ಮೇಲೆ ಮೂರು ನಾಮಗಳಿವೆ ಎನ್ನುತ್ತಾರೆ. ಕೆಮ್ಮು ಜಾಸ್ತಿ ಇದ್ದವರು, ರೋಗಿಗಳು ಈ ಅಳಿಲಿನ ಮಾಂಸ ತಿಂದರೆ ರೋಗವಾಸಿಯಾಗುತ್ತೆಂಬ ನಂಬಿಕೆ ಇದೆ. ಅಳಿಲು ಮರದಲ್ಲಿ ಕುಳಿತಾಗ ಮರದ ಬುಡದ ಸುತ್ತ ಬಲೆಯನ್ನು ಹಾಕುತ್ತಾರೆ. ಒಬ್ಬನು ಗಿಡದ ಮರೆಯಲ್ಲಿ ಕುಳಿತುಕೊಳ್ಳುತ್ತಾನೆ. ಮತ್ತೊಬ್ಬನು ಗಿಡದಲ್ಲಿ ಕುಳಿತು ಅಳಿಲನ್ನು ಕೆಳಗಿಳಿಯುವಂತೆ ಕಲ್ಲಿನಿಂದ ಹೊಡೆಯುತ್ತಾನೆ. ಮರದ ಮೇಲಿಂದ ಕೆಳಗಿಳಿದು ತಪ್ಪಿಸಿಕೊಳ್ಳಲು ಬರುತ್ತದೆ. ಮರದ ಬುಡದಲ್ಲಿ ಹಾಕಿದ ಬಲೆಗೆ ಸಿಕ್ಕಿಕೊಳ್ಳುತ್ತದೆ. ಸೋಲಿಗರು ಈ ಬೇಟೆಯಲ್ಲಿ ನಿಸ್ಸೀಮರು (ಪೂಜಾರಹಳ್ಳಿ, ೨೦೦೭: ೨೮೧). ಅಲೆಮಾರಿ ಸಮುದಾಯಗಳಾದ ಹಗಲುವೇಷಗಾರರು, ಸಿಂಧೋಳ್ಳಿ, ಪಾರ್ಧಿ, ಜಂಗಾಲಿ ಮೊದಲಾದ ಸಮುದಾಯಗಳಲ್ಲಿ ಅಳಿಲು ಬೇಟೆಯನ್ನು ಆಡುವದನ್ನು ನೋಡಬಹುದು.

೪.೨.೬. ಉಡದ ಬೇಟೆ

ಉಡವು ಸರೀಸೃಪ ಜಾತಿಗೆ ಸೇರಿದ್ದು ಆಕಾರದಿಂದ 'ಓತಿಕಾಟ'ದಂತೆ ಇರುತ್ತದೆ. ಚೆನ್ನದಾಸರು ಇದನ್ನು ಅತಿ ಚಾಣಾಕ್ಷತನದಿಂದ ಬೇಟೆಯನ್ನಾಡುತ್ತಾರೆ. ದಟ್ಟಕಾಡು, ಸರೋವರ, ದೊಡ್ಡಗಾತ್ರದ ಸೇತುವೆ, ಬಂಡೆ ಸೋರಕೆ, ಕೆರೆ-ಕಟ್ಟೆ, ಹಳ್ಳ-ಕೊಳ್ಳಗಳಲ್ಲಿ ಇದು ಕಂಡುಬರುತ್ತದೆ. ದಟ್ಟ ಕಾಡು, ಸರೋವರ, ದೊಡ್ಡಗಾತ್ರದ ಸೇತುವೆ, ಬಂಡೆ ಸೋರಕೆ, ಕರೆ ಕಟ್ಟೆ, ಹಳ್ಳ-ಕೊಳ್ಳಗಳಲ್ಲಿ ಇದು ಕಂಡುಬರುತ್ತದೆ. ಇದು ವಿಶೇಷವಾಗಿ ಮಳೆ ಬಂದಾಗ ಮಾತ್ರ ಹಸೆ ಮಣ್ಣು, ಕೀಟಗಳನ್ನು ತಿನ್ನಲು ಹೊರಬರುತ್ತದೆ. ಅಂತಹ ಸಮಯವನ್ನು ನೋಡಿ ಚನ್ನದಾಸರು ನಾಯಿ ಸಹಾಯದಿಂದ

[illegible]

ಪತ್ತೆ ಹಚ್ಚಿ ಹಿಡಿದುಕೊಳ್ಳಲು ಅವಕಾಶ ಸಿಕ್ಕರೆ ಜೀವಂತವಾಗಿ ಹಿಡಿಯುತ್ತಾರೆ. ಇಲ್ಲವಾದರೆ ಕಬ್ಬಿಣ ಚಡಿ ಇಲ್ಲವೆ ಬಡಿಗೆಯ ಮೂಲಕ ಅದರ ತಲೆಗೆ ಹೊಡೆದು ಸಾಯಿಸಿ ಹಿಡಿಯುತ್ತಾರೆ. ಇದನ್ನು ಕೇವಲ ಆಹಾರಕ್ಕಾಗಿಯೇ ಅಷ್ಟೇ ಅಲ್ಲ ಆಯುರ್ವೇದ ಔಷಧಿಯನ್ನು ಇದರಿಂದ ಉತ್ಪಾದಿಸುತ್ತಾರೆ (ಪೂಜಾರಹಳ್ಳಿ, ೨೦೦೭: ೨೭೯). ಅಂತಹ ಔಷಧಿಯನ್ನು ಈ ಸಮುದಾಯದಲ್ಲಿ ಬಳಸಿಕೊಳ್ಳುತ್ತಾರೆ.

೪.೨.೬. ಮೀನ

ಚೆನ್ನದಾಸರು ಕೈಗೊಳ್ಳುವ ಮೀನದ ಬೇಟೆಯನ್ನು ಹೆಳವರ ದಾಖಲೆಯ ಪ್ರಕಾರ ೧೫,೧೬ನೇ ಶತಮಾನದಲ್ಲಿ ಮೀನು, ಏಡಿ, ಹಿಡಿದು ಮಾರುತ್ತಿದ್ದರೆಂದು ತಿಳಿದು ಬರುತ್ತದೆ. ಮೀನು ಹಿಡಿಯಲು ಮೂರು ರೀತಿಯ ಬಲೆಗಳನ್ನು ಉಪಯೋಗಿಸುತ್ತಾನೆ (ಹಿಮ್ಮಡಿ, ೨೦೦೮: ೧೧೩). ಚಕ್ರಬಲೆ, ಮೂಲೆಯ ಬಲೆ ಮತ್ತು ಅಡ್ಡ ಬಲೆ, ಇವರು ತಮ್ಮ ಮುಕ್ತಿ, ನೈಪುಣ್ಯತೆಯನ್ನು ಉಪಯೋಗಿಸಿ ಕೆರೆ ಹಳ್ಳ-ಕೊಳ್ಳ, ಬಾವಿ, ಸರೋವರ ಮುಂತಾದ ನೀರು ನಿಂತಿರುವ ಪ್ರದೇಶದಲ್ಲಿ ಮೀನು ಹಿಡಿಯುವದನ್ನು ಮಾಡುತ್ತಾರೆ. ಈ ಬೇಟೆಯಲ್ಲಿ ಹೆಚ್ಚಿನ ದೈಹಿಕ ಶ್ರಮ ಇರದೇಯಿದ್ದರಿಂದ ಹೆಚ್ಚು ಇಷ್ಟಪಡುತ್ತಾರೆ. ಕಾಡಿನ ಬೇಟೆ ಖಗ-ಮೃಗಗಳ ಉಪಟಳವನ್ನು ತಡೆಯುವ ಒಂದು ಭಾಗವಾದರೆ, ಮೀನ ಬೇಟೆ ಆಹಾರದ ಅನಿವಾರ್ಯತೆಯೂ ಆಗಿದೆ (ದೇರ್ಲ, ೨೦೦೭: ೧೯). ಇಂದು ಸರಕಾರ ಬೇಟೆಯನ್ನು ನಿಷೇಧಗೊಳಿಸಿದ್ದರಿಂದ ಈ ಸಮುದಾಯ ಮೀನದ ಬೇಟೆಯನ್ನು ಹೆಚ್ಚು ಅವಲಂಬಿಸಿದ್ದಾರೆ. ಚೆನ್ನದಾಸ ಸಮುದಾಯದವರು ತಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಬೇಟೆಯನ್ನು ಆಹಾರ ಸಂಗ್ರಹಣೆ ದೃಷ್ಟಿಯಿಂದ ಹೆಚ್ಚು ತಮ್ಮ ಕುಲಕಸಬುಗಳಲ್ಲಿ ಅಳವಡಿಸಿಕೊಂಡಿದ್ದಾರೆ.

೪.೩ ಪಶುಪಾಲನೆ

ಪ್ರಾಚೀನ ಕಾಲದಲ್ಲಿ ಮಾನವ ಬೇಟೆ ಮತ್ತು ಆಹಾರ ಸಂಗ್ರಹಣೆಯನ್ನು ಪ್ರಮುಖ ವೃತ್ತಿಯನ್ನಾಗಿಸಿಕೊಂಡಿದ್ದನು. ದಿನವಿಡೀ ಪ್ರಾಣಿಗಳ ಹಿಂದೆ ಅಲೆಯುತ್ತ ಬೇಟೆಯಾಡಿ ಹಸಿಮಾಂಸವನ್ನು ಸೇವಿಸುತ್ತಿದ್ದನು. ಕೆಲವೊಮ್ಮೆ ಬೇಟೆಯು ಲಭ್ಯವಿಲ್ಲದಿದ್ದಾಗ ಬದುಕು ಬರಡಾಗುವುದು ಸಹಜವಾಗಿತ್ತು (ಮೇತ್ರಿ, ೨೦೦೨: ೧೪). ಅದರಿಂದ ಬೇಸತ್ತ ಮಾನವ ಮೇಷ, ಮೇಕೆಯಂತಹ ಸಾಧು ಪ್ರಾಣಿಗಳನ್ನು ಸಾಕಲು ಪ್ರಾರಂಭಿಸಿದನು. ಅವು ಅವನಿಗೆ ನೆಮ್ಮದಿಯನ್ನು ನೀಡಿದವು. ಮಾನವ ಈ ಪ್ರಾಣಿಗಳನ್ನು ಸಲಹುತ್ತಾ, ತಿನ್ನುತ್ತಾ ಅವುಗಳೊಂದಿಗೆ ಇರುತ್ತ ಅಲೆಯುತ್ತ ಪಶುಪಾಲಕನಾದ.

ಮುಂದೆ ಪಶುಪಾಲನೆಯು ಒಂದು ಪ್ರಮುಖ ವೃತ್ತಿಯಾಗಿ ಬೆಳೆದುಕೊಂಡು ಬಂತು ಚೆನ್ನದಾಸ ಸಮುದಾಯ ಇದಕ್ಕೆ ಹೊರತಾಗಿಲ್ಲ. ಮೂಲತಃ ಅಲೆಮಾರಿಗಳಾಗಿದ್ದ ಈ ಸಮುದಾಯ ತನ್ನ ಅಲೆಮಾರಿ ಜೀವನಕ್ಕೆ ಪಶುಗಳನ್ನು ಬಳಸಿಕೊಳ್ಳುತ್ತಿತ್ತು. ತಮ್ಮ ದಿನನಿತ್ಯದ ಅಗತ್ಯದ ವಸ್ತುಗಳನ್ನು ತಾವು ಸಾಕಿದ ಪ್ರಾಣಿಗಳ ಮೇಲೆ ಹೇರಿಕೊಂಡು, ಚಿಕ್ಕ ಮಕ್ಕಳನ್ನು, ವಯಸ್ಸಾದವರನ್ನು, ಅವುಗಳ ಮೇಲೆ ಕೂಡಿಸಿಕೊಂಡು ಸಾಗುತ್ತಿದ್ದರು. ಆ ಪ್ರಾಣಿಗಳು ತಮ್ಮ ಸಾರಿಗೆಗೂ ಬೇಕು. ಹೈನಕ್ಕೂ ಬೇಕು. ಅಂಥ ಪ್ರಾಣಿಗಳಲ್ಲಿ ಹಸು, ಎಮ್ಮೆ ಆಡು ಪ್ರಮುಖವಾದವುಗಳು ಕೆಲವರು ಸಾರಿಗಾಗಿ ಕತ್ತೆ, ಕುದುರೆಗಳನ್ನು ಬಳಸುತ್ತಿದ್ದುದೂ ಉಂಟು. ಆದರೆ ಸರ್ವೇಸಾಮಾನ್ಯವಾಗಿ ಹಸು, ಎಮ್ಮೆ ಆಡು ಜೊತೆಯಲ್ಲಿ ಕೋಳಿಗಳನ್ನು ಸಾಕುವನು (ಹಿಮ್ಮಡಿ, ೨೦೦೮: ೧೧೬).

[illegible]

ಇತ್ತೀಚಿನ ದಿನಮಾನಗಳಲ್ಲಿ ಈ ಸಮುದಾಯದ ಬಹುತೇಕರ ವೃತ್ತಿ ಪಶುಪಾಲನೆಯಾಗಿದೆ. ಜೊತೆಗೆ ಕೆಲವರು ಕೃಷಿಕರಾಗಿರುವುದರಿಂದ ಕೃಷಿ ಕಾರ್ಯ ಚಟುವಟಿಕೆಗಳಗೆ ಪಶುಪಾಲನೆ ಗೊಬ್ಬರ, ಉಳುಮೆ ಇತ್ಯಾದಿ ಕಾರ್ಯಕ್ಕೆ ಸಹಾಯಕವಾಗಿರುವುದರಿಂದ, ಎತ್ತು, ಹೋರಿ, ಆಕಳು, ಕರು, ಎಮ್ಮೆ, ಕುರಿ, ಮೇಕೆ, ಕೋಳಿ ಇತ್ಯಾದಿ ಪ್ರಾಣಿಗಳನ್ನು ತಮ್ಮ ಪಶುಪಾಲನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕೆಲವೊಬ್ಬರು ಸ್ವಂತ ಗುಡಿಸಲುಗಳಿದ್ದರೆ ಗುಡಿಸಲು ಮುಂದೆ ಇವುಗಳನ್ನು ಸಾಕುತ್ತಾರೆ. ಸ್ವಂತ ಗುಡಿಸಲುಗಳು ಇಲ್ಲವಾದರೆ ಬೇರೆ ಸಮುದಾಯದವರ ಮನೆಯ ಸ್ಥಳದಲ್ಲಿ ಕಟ್ಟುತ್ತಾರೆ. ಹಣಕಾಸಿನ ಅವಶ್ಯಕತೆಯಾದಾಗ ಮಾರಿಕೊಂಡು ಜೀವನವನ್ನು ಸಾಗಿಸುತ್ತಾರೆ. ಈ ಸಮುದಾಯದಲ್ಲಿ ದೇವತೆಗಳಿಗೆ ಬಲಿಯನ್ನು ಕೊಡುವ ಉದ್ದೇಶದಿಂದಲೂ ಪಶುಪಾಲನೆಯನ್ನು ಕೈಗೊಳುತ್ತಿದ್ದುದು ಕಂಡುಬರುತ್ತದೆ. ಜೊತೆಗೆ ಈ ಪ್ರಾಣಿಗಳಿಂದ ಬರುವ ಗೊಬ್ಬರವನ್ನು ನೆಲೆಸಿರುವ ಊರಲ್ಲಿರುವ ಬೇರೆ ಜನರಿಗೆ ಮಾರಾಟ ಮಾಡುತ್ತಾರೆ. ಇಲ್ಲವಾದರೆ ಸ್ವಂತ ಭೂಮಿಯುಳ್ಳವರು ಭೂಮಿಗೆ ಬಳಸಿಕೊಳ್ಳುತ್ತಾರೆ.

ಒಟ್ಟಾರೆ ಪಶುಪಾಲನೆಯು ಈ ಸಮುದಾಯದ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಒಂದು ಪ್ರಮುಖ ಆರ್ಥಿಕ ಮೂಲವಾಗಿದ್ದು ಜನರು ಹೆಚ್ಚಾಗಿ ತಮ್ಮ ಬದುಕಿನಲ್ಲಿ ಈ ಪಶುಪಾಲನೆ ಕೈಗೊಳ್ಳುವುದನ್ನು ನೋಡಬಹುದು. ಸರಕಾರ ಹಲವು ಯೋಜನೆಗಳನ್ನು ಅಲೆಮಾರಿ ಸಮುದಾಯಗಳಿಗೆ ರೂಪಿಸಿದ್ದರ ಫಲವಾಗಿ ಅಂತಹ ಯೊಜನೆಗಳ ಮೂಲಕ ಹಣಕಾಸಿನ ನೆರವನ್ನು ಕೆಲವು ಸ್ಥಿರವಾಸಿಗಳು ಪಡೆದು ಪಶುಪಾಲನೆಯನ್ನು ಅಭಿವೃದ್ಧಿಗೊಳಿಸಿದ್ದನ್ನು ಕಾಣಬಹುದು, ಈ ರೀತಿಯ ಪಶುಪಾಲನೆಯು ವಟಪರವಿ, ತುಮ್ಮರಗುದ್ದಿ ಗ್ರಾಮದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಉಳಿದ ಕಡೆ ಕೆಲವೇ ಕುಟುಂಬಗಳಲ್ಲಿ ಇದನ್ನು ನೋಡಬಹುದು ಏನೇ ಇರಲಿ ಈ ಸಮುದಾಯದವರು ತಮ್ಮ ವೃತ್ತಿಯಲ್ಲಿ ಈ ಪಶುಪಾಲನೆಯನ್ನು ಅಳವಡಿಸಿಕೊಂಡು ಆರ್ಥಿಕ ಪ್ರಗತಿಯುತ್ತಸಾಗಿದ್ದನ್ನು ಕಾಣಬಹುದು.

೪.೪. ಕೂಲಿ ಕೆಲಸ

ಮಾನವನು ಪ್ರಾರಂಭದಲ್ಲಿ ಬೇಟೆ ಮತ್ತು ಆಹಾರ ಸಂಗ್ರಹಣೆ ಮಾಡುತ್ತಿದ್ದನು. ತದನಂತರ ತನ್ನ ವೃತ್ತಿಯನ್ನು ಮಾರ್ಪಾಡಿಸಿಕೊಂಡು ಪಶುಪಾಲನೆಯಲ್ಲಿ ತೊಡಗಿ ಹಲವಾರು ಪ್ರಾಣಿಗಳನ್ನು ಪಳಗಿಸುವುದರ ಜೊತೆಗೆ ಅವುಗಳನ್ನು ಯಾವ ಯಾವ ಕೆಲಸಕ್ಕೆ ಉಪಯೋಗಿಸಬಹುದು ಎಂಬ ಬೌದ್ಧಿಕ ಅಲೋಚನೆಯೊಂದಿಗೆ ಗೊತ್ತಾಗಿದ್ದು ಕೃಷಿ. ಕೃಷಿಯು ಪಶುಪಾಲನೆಯ ಮುಂದುವರಿದ ಭಾಗವಾಗಿದೆ. ಮೊದಲು ಬೇಟೆಗಾರಿಕೆ, ಪಶುಪಾಲನೆ ಸಾರ್ವಜನಿಕ ಆಸ್ತಿಯಾಗಿದ್ದ ಭೂಮಿಯ ಮೇಲೆ ಸ್ವಚ್ಛಂದವಾಗಿ ಸಾಗುತ್ತಿತ್ತು. ಯಾವಾಗ ಉಳುಮೆ ಆರಂಭವಾಯಿತೋ ಆವಾಗ ಹಿರಿಯರು ಕುಟುಂಬವಾರು ಭೂಮಿಯನ್ನು ಹಂಚಿದರು. ಕುಟುಂಬವೂ ಒಂದು ಘಟಕವಾಯಿತು. ಸ್ವಕುಲದ ಕುಟುಂಬಗಳ ಕೂಟವು ಸಮುದಾಯವಾಯಿತು.

ಪ್ರತಿಯೊಂದು ಕುಟುಂಬವು ತನಗೆ ಸಂಬಂಧಿಸಿದ ಭೂಮಿಯಲ್ಲಿ ತನ್ನದೆಯಾದ ಸಾಧನ ಸಾಮಾಗ್ರಿಗಳೊಂದಿಗೆ ಉಳುಮೆ ಮುಂದುವರಿಸಿತು. ಸಮುದಾಯದ ಆರ್ಥಿಕ ಶಕ್ತಿಯು ಸ್ವಕುಲದ ಕುಟುಂಬಗಳನ್ನು ಅವಲಂಬಿಸಿತು. ಸಮುದಾಯದ ಮೂಲ ರಚನಾ ಸ್ವರೂಪವು ಬದಲಾಯಿತು. ನೆರೆಹೊರೆಯ ಸ್ವಕುಲದವರ ಸಹಾಯವೂ ಕೃಷಿಯಲ್ಲಿ ಪಡೆಯುತ್ತಿದ್ದರು (ಮೇತ್ರಿ, ೨೦೦೨: ೧೪).

ಹೀಗೆ ಕಾಲಗತಿಸಿದಂತೆ ಭೂಮಿ ಇಲ್ಲದವರು ಜೀವನ ನಿರ್ವಹಣೆಗಾಗಿ ಭೂಮಿ ಇದ್ದವರಲ್ಲ. ಕೂಲಿ ಕೆಲಸವನ್ನು ಪ್ರಾರಂಭಿಸಿದರು. ಮುಂದೆ ಇದು ಚರಿತ್ರೆಯಲ್ಲಿ ಭೂಮಿ ಇದ್ದವರು. ಇಲ್ಲದವರು, ಶ್ರೀಮಂತರು, ಬಡವರು ಎಂಬ ಶ್ರೇಣೀಕೃತ ಸಮಾಜಕ್ಕೆ ಕಾರಣವಾಯಿತು ಎಂದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಅಂತಹ ಕೂಲಿ ಕೆಲಸವನ್ನು ಚೆನ್ನದಾಸರ ಕಾರಣ ಕಲಾವಿದರಾಗಿದ್ದರಿಂದ ಸಮಾಜ ಇವರಿಗೆ ದಾನ ದತ್ತಿಗಳನ್ನು ಕೊಟ್ಟು ಪೋಷಿಸುತ್ತಿತ್ತು. ಆದರೆ ಆಧುನಿಕ ಬದುಕಿನಲ್ಲಿ ಇವರು ಕೈಗೊಳ್ಳುತ್ತಿದ್ದ ವೃತ್ತಿಗಳು ನೆಲೆ ಕಳೆದುಕೊಂಡ ಮೇಲೆ ಅನಿವಾರ್ಯವಾಗಿ ಜೀವನ ಸಾಗಿಸಲು ಕೂಲಿ ಕೆಲಸಕ್ಕೆ ಹೋಗುವ ಪರಿಸ್ಥಿತಿ ಒದಗಿಬಂದಿತು. ಆದರೆ ಹೆಚ್ಚಾಗಿ ಈ ಸಮುದಾಯ ಇಂದಿಗೂ ಕೂಲಿ ಕೆಲಸಕ್ಕೆ ಹೋಗುವುದಿಲ್ಲ. ಆದರೆ ಕೃಷಿ ಕಾರ್ಯಗಳಲ್ಲಿ ತೊಡಗಿದವರು, ಸ್ಥಿರವಾಸಿಗಳು ತಮ್ಮ ತಮ್ಮ ಊರಲ್ಲಿ ಕೂಲಿಕೆಲಸಕ್ಕೆ ಹೋಗುವದನ್ನು ನಿಂಗಲಬಂಡಿ, ವಟಪರವಿ ಗ್ರಾಮಗಳಲ್ಲಿ ಕಾಣಬಹುದು. ಈ ಮಾಹಿತಿಯನ್ನು ನಿಂಗಲಬಂಡಿ ಗ್ರಾಮದ ನಿವಾಸಿಯಾದ ಹನುಮಪ್ಪ ಚೆನ್ನದಾಸರ ಇವರ ಮೂಲಕ ತಿಳಿದುಕೊಳ್ಳಲಾಗಿದೆ.

೪.೫. ವ್ಯವಸಾಯ

ಪ್ರಾಚೀನ ಕಾಲದಲ್ಲಿ ಮಾನವ ಬೇಟೆ ಮತ್ತು ಆಹಾರ ಸಂಗ್ರಹಣೆಯನ್ನು ಪ್ರಮುಖ ವೃತ್ತಿಯನ್ನಾಗಿಸಿಕೊಂಡಿದ್ದನು. ದಿನವಿಡೀ ಪ್ರಾಣಿಗಳ ಹಿಂದೆ ಅಲೆಯುತ್ತ ಬೇಟೆಯಾಡಿ ಹಸಿಮಾಂಸವನ್ನು ಸೇವಿಸುತ್ತಿದ್ದನು. ಅದರಿಂದ ಬೇಸತ್ತ ಮಾನವ ಪ್ರಾಣಿಗಳನ್ನು ಸಾಕಲಾರಂಭಿಸಿದನು. ಬೇಟೆ ವೃತ್ತಿಯಿಂದ ಕವಲೊಡೆದು ಪಶುಪಾಲಕನಾಗಿ ನಂತರ ಕೃಷಿಯನ್ನು ಅವಲಂಬಿಸಿದನು. ಕೃಷಿಯನ್ನು ಅವಲಂಬಿಸಿದ ಮೇಲೆ ಒಂದೆಡೆ ನಿಲ್ಲುವುದು ಸಾಧ್ಯವಾಯಿತು. ಒಂದೆಡೆ ನೆಲೆನಿಂತ ಮೇಲೆ ಗ್ರಾಮಗಳು ಸೃಷ್ಟಿಗೊಂಡವು ಅದರೊಂದಿಗೆ ಅನೇಕ ಬಗೆಯ ವೃತ್ತಿಗಳು ಹುಟ್ಟಿಕೊಂಡವು. ಕಾಲ ಬದಲಾದಂತೆ ಮಾನವನ ಆರ್ಥಿಕ ಜೀವನದಲ್ಲಿ ಸಾಕಷ್ಟು ಬದಲಾವಣೆಗಳಾದವು. ಈ ರೀತಿಯ ಆರ್ಥಿಕ ಚಟುವಟಿಕೆಗಳು ಚೆನ್ನದಾಸರ ಸಮುದಾಯದಲ್ಲಿಯು ಕಂಡುಬರುತ್ತವೆ.

ಮೂಲತಃ ಯಲಬುರ್ಗಾ ಪ್ರದೇಶವು ಕೃಷಿ ಪ್ರಧಾನವಾದದ್ದು. ಇಲ್ಲಿ ನೆಲೆಸಿರುವ ಚೆನ್ನದಾಸರ ಭೀಕ್ಷಾಟನೆ, ವೃತ್ತಿಗಾಯನ, ಪಶುಪಾಲನೆ ಮಾಡುತ್ತಾ ಜೀವನ ಸಾಗಿಸುತ್ತಿದ್ದರು. ಅದರ ಆಧುನಿಕತೆಯ ಪ್ರಭಾವದಿಂದ ಹಾಗೂ ಸರಕಾರದ ಯೋಜನೆಗಳಿಂದಾಗಿ ಮೂಲ ವೃತ್ತಿಗಳನ್ನು ಬದಲಾಯಿಸಿಕೊಂಡು ಕೃಷಿಯಲ್ಲಿ ತೊಡಗಿದ್ದು, ಕೆಲವು ಗ್ರಾಮಗಳಲ್ಲಿ ಕಂಡುಬರುತ್ತದೆ. ಅಂತಹ ಗ್ರಾಮಗಳೆಂದರೆ ನಿಂಗಲಬಂಡಿ, ವಟಪರವಿ, ತುಮ್ಮರಗುದ್ದಿ, ರ್‍ಯಾವಣಿಕಿ ಪ್ರದೇಶಗಳಲ್ಲಿ ಕಾಣಬಹುದು. ಕೃಷಿಗೆ ಮೂಲಕಾರಣ ಕೆಲವು ಕುಟುಂಬಗಳು ಅಲೆಮಾರಿ ಜೀವನ ಸಾಗಿಸುವ ಸಮಯದಲ್ಲಿ ಬೇರೆ ಬೇರೆ ಸ್ಥಳಗಳಿಗೆ ಹೋದಾಗ ಆ ಭಾಗದ ಕೃಷಿ ಚಟುವಟಿಕೆಗಳನ್ನು ಗಮನಿಸಿ ಆ ಮೂಲಕ ತಾವು ಒಂದು ಕಡೆ ನೆಲೆಸಿ ಸ್ಥಿರ ಜೀವನ ಸಾಗಿಸಬೇಕು ಎಂಬ ಉದ್ದೇಶದಿಂದ ನೆಲೆನಿಂತು, ತಾವು ನೆಲೆಸಿದ ಗ್ರಾಮಗಳಲ್ಲಿ ಬೇರೆ ಸಮುದಾಯದವರ ಭೂಮಿಯನ್ನು ಗೇಣಿಯಂತೆ ತೆಗೆದುಕೊಂಡು ವ್ಯವಸಾಯ ಮಾಡಲು ಪ್ರಾರಂಭಿಸಿದರು. ಸ್ವಾತಂತ್ರ್ಯ ನಂತರ ''೧೯೭೭ರಲ್ಲಿ ಅನುಷ್ಠಾನಗೊಂಡು ಕೆಳವರ್ಗದ ರೈತರಿಗೆ ಭೂ ಹಂಚಿಕೆಯಲ್ಲಿ ಕ್ರಾಂತಿಯಾದ'' (ಪ್ರಭಾಕರ್, ೨೦೦೯: ೩೯). ಮೇಲೆ ಕೆಲವರಿಗೆ ಭೂಮಿ ದೊರೆತ ಫಲದಿಂದಾಗಿ ಭೂ ಒಡೆಯರಾಗಿ ತಮ್ಮದೇ

[illegible]

ಭೂಮಿಯಲ್ಲಿ ವ್ಯವಸಾಯ ಮಾಡಲು ಪ್ರಾರಂಭಿಸಿದರು. ಇನ್ನೂ ಕೆಲವರು ತಮ್ಮ ಮೂಲವೃತ್ತಿಯಿಂದ ಸಂಗ್ರಹಿಸಿಟ್ಟ ಅಲ್ಪ ಸ್ವಲ್ಪ ಹಣ ಹಾಗೂ ಊರಿನಲ್ಲಿರುವ ಜಮೀನ್ದಾರರ ಅನುಕಂಪದ ಆಧಾರದ ಮೇಲೆ ಭೂಮಿಯನ್ನು ಪಡೆದು ವ್ಯವಸಾಯದಲ್ಲಿ ತೊಡಗಿದ್ದನ್ನು ಕಾಣಬಹುದು. ಮೊದಲು ಭೂರಹಿತವಾಗಿದ್ದ ಈ ಸಮುದಾಯ ಭೂಮಿಯನ್ನು ಹೊಂದಿ ಮೂಲವೃತ್ತಿ ಕಸಬುಗಳೊಂದಿಗೆ ವ್ಯವಸಾಯದಲ್ಲಿ ತೊಡಗಲು ಪ್ರಾರಂಭಿಸಿದರು. ಅಂತಹ ಸ್ಥಳಗಳೆಂದರೆ, ನಿಂಗಲಬಂಡಿ, ವಟಪರವಿ, ತುಮ್ಮರಗುದ್ದಿ, ರ‍್ಯಾವಣಿಕಗಳಾಗಿವೆ.

ನಿಂಗಲಬಂಡಿ ಗ್ರಾಮ

ನಿಂಗಲಬಂಡಿ ಗ್ರಾಮದಲ್ಲಿ ೨೬ ಚೆನ್ನದಾಸರ ಕುಟುಂಬಗಳು ನೆಲೆಸಿದ್ದು, ಬಹುತೇಕ ಕುಟುಂಬಗಳು ವ್ಯಾಪಾರ ಹಾಗೂ ಇನ್ನಿತರ ವೃತ್ತಿಕಸಬುಗಳನ್ನು ಕೈಗೊಂಡರೆ, ಅದರಲ್ಲಿ ಕೆಲವು ಕುಟುಂಬಗಳು ವ್ಯವಸಾಯದಲ್ಲಿ ತೊಡಗಿದ್ದನ್ನು ಕಾಣಬಹುದು. ಹೆಚ್ಚಾಗಿ ಒಣ ಬೇಸಾಯ ಪದ್ಧತಿಯನ್ನು ಅವಲಂಬಿಸಿದ್ದು. ಮೂರು ಕುಟುಂಬಗಳು ಮಾತ್ರ ನೀರಾವರಿ ಆಧಾರಿತ ಬೇಸಾಯವನ್ನು ಅಳವಡಿಸಿಕೊಂಡಿದ್ದಾರೆ. ಈ ಭಾಗದ ಭೂಮಿಯು ಮರಳು ಮಿಶ್ರಿತ ಮತ್ತು ಕೆಂಪು ಮಣ್ಣಿನಿಂದ ಆವೃತಗೊಂಡಿದೆ. ಸಜ್ಜೆ, ಶೇಂಗಾ, ನವಣೆ, ಸೂರ್ಯಕಾಂತಿ ಜೋಳ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದು ಬೆಳೆದಂತಹ ಧಾನ್ಯಗಳನ್ನು ಆಹಾರಕ್ಕಾಗಿ ಇಟ್ಟುಕೊಂಡು ಹೆಚ್ಚಾದ ಧಾನ್ಯಗಳನ್ನು ಪಕ್ಕದ ಕುಷ್ಟಗಿ ಪಟ್ಟಣಕ್ಕೆ ತೆಗೆದುಕೊಂಡು ಹೋಗಿ ಮಾರಾಟ ಮಾಡಿ ಬಂದಂತಹ ಲಾಭದಿಂದ ಜೀವನ ನಿರ್ವಹಿಸುತ್ತಾರೆ (ಮೌಖಿಕ ಸಂದರ್ಶನ, ಬಸವರಾಜಪ್ಪ: ೨೦೦೯).

ವಟಪರವಿ ಗ್ರಾಮ

ವಟಪರವಿ ಗ್ರಾಮದಲ್ಲಿ ೮೦ ಕುಟುಂಬಗಳು ನೆಲೆಸಿದ್ದು ಬಹುತೇಕ ಕುಟುಂಬಗಳು ಸ್ಥಿರವಾಸಿಗಳಾಗಿದ್ದು, ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡ ಕುಟುಂಬಗಳ ಸಂಖ್ಯೆಯು ಸಹ ಹೆಚ್ಚಾಗಿದ್ದು ಕಂಡುಬರುತ್ತದೆ. ಅದಕ್ಕೆ ಕಾರಣ ಸರಕಾರ ಕಳೆದ ಐದು ವರ್ಷಗಳಲ್ಲಿ ೩೨ ಕೊಳವೆ ಭಾವಿಗಳನ್ನು ಮಂಜೂರ ಮಾಡಿದ್ದರ ಪ್ರಯುಕ್ತ ಮೂಲವೃತ್ತಿಗಳನ್ನು ಕೈಬಿಟ್ಟು ಕೃಷಿಯಲ್ಲಿ ತೊಡಗಿದ್ದುದನ್ನು ಕಾಣಬಹುದು. ಈ ಗ್ರಾಮದಲ್ಲಿ ಬಹುತೇಕ ನೀರಾವರಿ ಮತ್ತು ಒಣ ಬೇಸಾಯದ ಕೃಷಿಯನ್ನು ಕೈಗೊಂಡಿದ್ದಾರೆ. ಇಲ್ಲಿಯ ಭೂಮಿಯು ಕಪ್ಪು ಮುತ್ತು ಕೆಂಪು ಮಣ್ಣಿನಿಂದ ಆವೃತವಾಗಿದ್ದು ಹತ್ತಿ, ಶೇಂಗಾ, ಎಳ್ಳು, ತರಕಾರಿ, ಜೋಳ, ಮೆಕ್ಕಿಜೋಳ, ಸೂರ್ಯಕಾಂತಿ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಬೆಳೆದ ಫಸಲನ್ನು ಕುಟುಂಬಕ್ಕೆ ಬೇಕಾದಷ್ಟು ಇಟ್ಟುಕೊಂಡು ಉಳಿದ ಧಾನ್ಯವನ್ನು ಮಾರಾಟಮಾಡಿ ಕುಟುಂಬದ ನಿರ್ವಹಣೆಯನ್ನು ಕೈಗೊಂಡಿದ್ದಾರೆ (ಮೌಖಿಕ ಸಂದರ್ಶನ, ರಾಜಪ್ಪ: ೨೦೦೯).

ತಮ್ಮರಗುದ್ದಿ ಗ್ರಾಮ

ತುಮ್ಮರಗುದ್ದಿ ಗ್ರಾಮವು ಯಲಬುರ್ಗಾ ಪ್ರದೇಶದಲ್ಲಿಯೇ ಹೆಚ್ಚು ಚನ್ನದಾಸರ ಕುಟುಂಬಗಳನ್ನು ಒಳಗೊಂಡ ಗ್ರಾಮವಾಗಿದೆ. ಇಲ್ಲಿ ಸುಮಾರು ೧೩೫ ಕುಟುಂಬಗಳು ನೆಲೆಸಿದ್ದು, ಕೆಲವೊಂದು ಕುಟುಂಬಗಳು ಸ್ಥಿರ ನಿವಾಸಿಗಳಾಗಿದ್ದು ಅಂತಹವರು ಮಾತ್ರ ಕೃಷಿಯಲ್ಲಿ ತೊಡಗಿದ್ದಾರೆ. ಕೃಷಿಯು ಮಳೆಯಾಶ್ರಿತವಾಗಿದ್ದು, ಒಂದು ಕುಟುಂಬದವರು ಮಾತ್ರ ನೀರಾವರಿಯ ಮೂಲಕ ವ್ಯವಸಾಯವನ್ನು ಕೈಗೊಂಡಿದ್ದಾರೆ. ಈ ಭಾಗದಲ್ಲಿ ಭೂಮಿಯು ಮರಳು

ಮಿಶ್ರಿತವಾಗಿದ್ದು, ಶೇಂಗಾ, ಮೆಕ್ಕೆಜೋಳ, ಜೋಳ, ಸೂರ್ಯಕಾಂತಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಾರೆ (ಮೌಖಿಕ ಸಂದರ್ಶನ, ದುರುಗಪ್ಪ: ೨೦೦೯).

ರ್‍ಯಾವಣಕಿ ಗ್ರಾಮ

ಈ ಗ್ರಾಮದಲ್ಲಿ ಚೆನ್ನದಾಸರ ಸಮುದಾಯದ ಕುಟುಂಬಗಳ ಸಂಖ್ಯೆ ಕಡಿಮೆಯಿದ್ದು, ಎಲ್ಲಾ ಕುಟುಂಬಗಳು ಕೃಷಿಯನ್ನು ಅವಲಂಬಿಸಿದ್ದು, ಕೃಷಿಯಲ್ಲಿ ನೀರಾವರಿ ಮತ್ತು ಒಣ ಬೇಸಾಯವನ್ನು ಅಳವಡಿಸಿಕೊಂಡಿದ್ದಾರೆ. ಈ ಭಾಗದ ಭೂಮಿಯು ಕೆಂಪು ಮಣ್ಣಿನಿಂದ ಕೂಡಿದ್ದು, ಹತ್ತಿ, ಶೇಂಗಾ ಜೋಳ, ಸೂರ್ಯಕಾಂತಿ ಇತ್ಯಾದಿ ಪ್ರಮುಖ ಬೆಳೆಗಳನ್ನು ಬೆಳೆಯುತ್ತಾರೆ. ಬೆಳೆದಂತಹ ಧಾನ್ಯಗಳನ್ನು ಕೊಪ್ಪಳ ಮಾರುಕಟ್ಟೆಗೆ ಸಾಗಾಟು ಮಾಡಿ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಂಡಿದ್ದಾರೆ. ಹೀಗೆ ನಾಲ್ಕು ಗ್ರಾಮಗಳಲ್ಲಿ ಹಲವು ಕುಟುಂಬಗಳು ವ್ಯವಸಾಯ ಮಾಡಿದರೆ ಯಲಬುರ್ಗಾ, ಕುಕನೂರುಗಳಲ್ಲಿ ವ್ಯವಸಾಯ ಕಂಡುಬರುವುದಿಲ್ಲ. ಇದಕ್ಕೆ ಕಾರಣ ಇಲ್ಲಿಯ ನಿವಾಸಿಗಳಾಗಿ ಭೂಮಿ ಇಲ್ಲದೆ ಇರುವುದರಿಂದ ವ್ಯವಸಾಯವನ್ನು ಕೈಗೊಳ್ಳದೇ ಇನ್ನೂ ಮೂಲ ವೃತ್ತಿ ಕಸಬುಗಳನ್ನು ಕೈಗೊಂಡಿದ್ದಾರೆ (ಮೌಖಿಕ ಸಂದರ್ಶನ, ಯಮನಪ್ಪ: ೨೦೦೯).

ಒಟ್ಟಾರೆ ಚೆನ್ನದಾಸರ ಸಮುದಾಯದ ಕೆಲವು ಕುಟುಂಬಗಳು ವ್ಯವಸಾಯದಲ್ಲಿ ತೊಡಗಿ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವುದರ ಜೊತೆಗೆ ಹೊಸ ಹೊಸ ವೃತ್ತಿಗಳತ್ತ ಮುಖಮಾಡಿದರು ಇನ್ನುಳಿದ ಕುಟುಂಬಗಳು ಮೂಲ ವೃತ್ತಿಯನ್ನು ಅವಲಂಬಿಸಿದ್ದರ ಪ್ರಯುಕ್ತ ಇನ್ನೂವರಿಗೂ ಆರ್ಥಿಕ ಸ್ಥಿತಿಯು ಕೆಳಮಟ್ಟದಲ್ಲಿರುವದನ್ನು ಗುರುತಿಸಬಹುದು.

೪.೬. ವ್ಯಾಪಾರ

ವ್ಯಾಪಾರವು ಪ್ರಾಚೀನ ಕಾಲದಿಂದಲೂ ಬಂದಿರುವ ಒಂದು ವೃತ್ತಿಯಾಗಿದೆ. ಈ ವೃತ್ತಿಯು ಪ್ರಾಚೀನ ಕಾಲದಲ್ಲಿ ಕೆಲವೇ ವರ್ಗಗಳಿಗೆ ಮಾತ್ರ ಸೀಮಿತವಾಗಿತ್ತು ಅಂತಹ ವರ್ಗಗಳೆಂದರೆ ವ್ಯವಹಾರಿ, ಮುಮ್ಮುರಿ ದಂಡ, ಬಣಜಿ, ಶೆಟ್ಟಿ, ಮಾರಾವಾಡಿ ಮುಂತಾದವರು. ಕಾಲಾಂತರದಲ್ಲಿ ಈ ವೃತ್ತಿಯು ಇತರ ಜಾತಿಗಳಿಗೆ ವಿಸ್ತರಿಸಿಕೊಂಡಿತು. ಅದರಂತೆ ಚೆನ್ನದಾಸರ ಸಮುದಾಯವು ಇತ್ತೀಚೆಗೆ ವ್ಯಾಪಾರದಲ್ಲಿ ತೊಡಗಿಸಿಕೊಂಡಿದೆ. ಈ ಸಮುದಾಯದ ಮೂಲ ವೃತ್ತಿಕಸಬುಗಳಿಗೆ ಸಮಾಜದಲ್ಲಿ ಗೌರವ ಮತ್ತು ಮನ್ನಣೆ ಕಡಿಮೆಯಾದ ಪ್ರಯುಕ್ತ ಅನಿವಾರ್ಯವಾಗಿ ಕುಟುಂಬದ ನಿರ್ವಹಣೆಯ ದೃಷ್ಟಿಯಿಂದ ಹಾಗೂ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವ ಉದ್ದೇಶದಿಂದ ವ್ಯಾಪಾರದಲ್ಲಿ ತೊಡಗಿರುವುದು ಕಂಡುಬರುತ್ತದೆ.

ವ್ಯಾಪಾರದಲ್ಲಿ ಲೇಖನ ಸಾಮಗ್ರಿಗಳು, ಮಕ್ಕಳ ಆಟಿಕೆಯ ಸಾಮಾಗ್ರಿಗಳು, ಎಲೆಕ್ಟ್ರಾನಿಕ್ಸ್ ವಸ್ತುಗಳು, ಛತ್ರಿ ಇತ್ಯಾದಿ ವಸ್ತುಗಳ ಮಾರಾಟದಲ್ಲಿ ಅವರು ತೊಡಗಿಕೊಂಡಿದ್ದಾರೆ. ಇತ್ತೀಚೆಗೆ ಮುಕ್ತ ಮಾರುಕಟ್ಟೆ ವ್ಯಾಪಾರದ ಪ್ರಭಾವದಿಂದ ಹಲವಾರು ಚಿಕ್ಕಪುಟ್ಟ ಕೈಗಾರಿಕೆಗಳು ಹುಟ್ಟಿಕೊಳ್ಳುವುದರಿಂದ ಹಾಗೂ ವಿದೇಶಿ ವಸ್ತುಗಳು ಮಾರುಕಟ್ಟೆಯಲ್ಲಿ ಸುಲಭದ ದರದಲ್ಲಿ ಹಾಗೂ ಕಡಿಮೆ ಬಂಡವಾಳದಿಂದ ವ್ಯಾಪಾರ ಮಾಡಲು ಸಿಗುವದರಿಂದ ವ್ಯಾಪಾರ ಕೈಗೊಳ್ಳಲು ಅನುಕೂಲಕಾರಿಯಾಗಿದೆ.

ಇಂದು ಚೆನ್ನದಾಸರ ತಾವು ವಾಸಿಸುವ ಅಕ್ಕ ಪಕ್ಕದ ಅಥವಾ ಕಡಿಮೆ ದರದಲ್ಲಿ ಸಿಗುವ ಸಾಮಗ್ರಿಗಳನ್ನು ವಿತರಕರಿಂದ ಪಡೆದುಕೊಂಡು ಊರು ಊರುಗಳಲ್ಲಿ ಜನರಿಗೆ ಮಾರಾಟ ಮಾಡುತ್ತಾರೆ. ಗ್ರಾಹಕರು ಸಾಮ್ರಾಗಿಗಳ ಬೆಲೆಯನ್ನು ಕೇಳಿದಾಗ ಆ ವಸ್ತುವಿನ ಬೆಲೆಯ ಎರಡು ಪಟ್ಟು ಹೇಳಿ ಅಂತಿಮವಾಗಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ಹಣ ಸಂಪಾದನೆ ಮಾಡುವುದು ಕಂಡುಬರುತ್ತದೆ. ಮಹಿಳೆಯರು ಸ್ತ್ರೀಯರು ಬಳಸುವ ಕಾಡಿಗೆ, ಪೌಡರ್, ಬಾಚಣಿಕೆ, ಕುಂಕುಮದ ಸ್ಟಿಕ್ಕರ್ ಇತ್ಯಾದಿ ವಸ್ತುಗಳನ್ನು ಮಾರಾಟ ಮಾಡಿದರೆ, ಪುರುಷರು ಸುತ್ತ ಮುತ್ತಲಿರುವ ಪಟ್ಟಣಗಳ ವಾರದ ಸಂತೆಯಲ್ಲಿ ಕೈಗಡಿಯಾರ, ಗೋಡೆ ಗಡಿಯಾರ, ಛತ್ರಿ ಹಾಗೂ ಎಲೆಕ್ಟ್ರಾನ್ಸ್ ಇತ್ಯಾದಿ ವಸ್ತುಗಳನ್ನು ವ್ಯಾಪಾರ ಮಾಡುತ್ತಾರೆ (ಮೌಖಿಕ ಸಂದರ್ಶನ, ಬಾಲಪ್ಪ: ೨೦೦೯).

ಹೀಗೆ ಬಂಡವಾಳವಿಲ್ಲದೆ ಮಾಲಿಕರಿಂದ ಅಥವಾ ವಿತರಕರಿಂದ ಸಾಮಗ್ರಿಗಳನ್ನು ಪಡೆದುಕೊಂಡು ಮಾರಾಟ ಮಾಡಿ ಹಣವನ್ನು ಸಂಗ್ರಹಿಸಿ ಸಾಮಗ್ರಿಗಳನ್ನು ಕೊಟ್ಟಂತಹ ಮಾಲೀಕನಿಗೆ ಹಣಕೊಟ್ಟು ಮುಂದಿನ ವ್ಯಾಪಾರಕ್ಕೆ ಬೇಕಾದ ಸಾಮಗ್ರಿಗಳನ್ನು ಇವರು ಖರೀದಿಸಿಕೊಳ್ಳುತ್ತಾರೆ. ಆದರೆ ಸರಕಾರ ಈ ಅಲೆಮಾರಿ ಸಮುದಾಯದವರು ಮಾಡುವ ವ್ಯಾಪಾರವನ್ನು ಸರಿಯಾಗಿ ಗುರುತಿಸಿ ಆರ್ಥಿಕ ನೆರವು ನೀಡಿದರೆ ಮುಂದಿನ ದಿನಗಳಲ್ಲಿ ಸೇಠ ಮತ್ತು ಮಾರವಾಡಿಗಳಂತೆ ವ್ಯಾಪಾರದಲ್ಲಿ ಇವರು ಒಬ್ಬರು ಆಗಬಹುದು. ಈ ರೀತಿಯ ವ್ಯಾಪಾರವನ್ನು ಇನ್ನಿತರ ಅಲೆಮಾರಿ ಸಮುದಾಯಗಳಾದ ಹಗಲು ವೇಷಗಾರರು, ಪಾದ್ರಿ, ಸಿಂಧೋಳ್ಳಿ ಸಮುದಾಯದಲ್ಲಿಯೂ ಕಾಣಬಹುದು.

ಇಂದು ಈ ಸಮುದಾಯದವರು ಕೈಗೊಳ್ಳುವ ವ್ಯಾಪಾರ ವೃತ್ತಿಯು ಇವರ ಆರ್ಥಿಕ ಸ್ಥಿತಿಯನ್ನು ಉತ್ತಮ ಪಡಿಸುವಲ್ಲಿ ನೆರವಾಗುತ್ತದೆ. ವ್ಯಾಪಾರದ ಕುರಿತು ವಟಪರವಿ, ಯಲಬುರ್ಗಾದಲ್ಲಿ ನೆಲೆಸಿರುವ ಸಮುದಾಯದ ಜನರನ್ನು ಸಂದರ್ಶನ ಮಾಡಿದಾಗ ಇದರ ಕುರಿತು ಒಳ್ಳೇ ಪ್ರತಿಕ್ರಿಯೆಯನ್ನು ನೀಡಿದರು. ಆದರೆ ಬ್ಯಾಂಕ್‌ಗಳಲ್ಲಿ ಸಾಲ ಕೇಳಿದರೆ ಸಾಲ ಕೊಡುವುದಿಲ್ಲ ಎಂದು ನೋವಿನಿಂದ ತಮ್ಮ ಅಳಲನ್ನು ವ್ಯಕ್ತಪಡಿಸಿದರು. ಸರಕಾರ ಇಂತಹ ಸಮುದಾಯಗಳಿಗೆ ಆರ್ಥಿಕ ನೆರವು ಒದಗಿಸಿದಾಗ ಮಾತ್ರ ಆರ್ಥಿಕವಾಗಿ ಸ್ವಾವಲಂಬನೆಯತ್ತ ಹೋಗಲು ಸಾಧ್ಯವಾಗುತ್ತದೆ.

೪.೨. ನೌಕರಿ

ಯಾವುದೇ ಒಂದು ಸಮುದಾಯದ ಆರ್ಥಿಕ ಸ್ಥಿತಿ ಗತಿಯನ್ನು ಅರಿಯುವಾಗ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರದಲ್ಲಿ ಅದು ಪಡೆದಿರುವ ಅವಕಾಶವನ್ನು ಪರಿಗಣಿಸಲೇಬೇಕು. ಇಲ್ಲದೇ ಹೋದರೆ ಅದು ಅಪೂರ್ಣ ಎನಿಸುತ್ತದೆ. ಏಕೆಂದರೆ ಈ ಹುದ್ದೆಗಳು ವ್ಯಕ್ತಿಯ ಮತ್ತು ಆತನ ಕುಟುಂಬದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಚೆನ್ನದಾಸರ ಸಮುದಾಯವು ಹೊಂದಿರಬಹುದಾದ ಸರ್ಕಾರಿ ಮತ್ತು ಖಾಸಗಿ ಹುದ್ದೆಗಳನ್ನು ಕುರಿತು ಲಭ್ಯವಿರುವ ಮಾಹಿತಿಯನ್ನು ಆಧರಿಸಿ ವಿಶ್ಲೇಷಣೆ ಮಾಡಲು ಪ್ರಯತ್ನಿಸಿದೆ. ಒಂದು ಕಾಲಕ್ಕೆ ಸರ್ಕಾರಿ ನೌಕರಿಗಳು ಕೆಲವೇ ವರ್ಗಕ್ಕೆ ಸೀಮಿತವಾಗಿದ್ದವು. ಆದರೆ ಸ್ವಾತಂತ್ರ್ಯ ನಂತರ ಸಂವಿಧಾನದಲ್ಲಿ ಉದ್ಯೋಗದ ಹಕ್ಕನ್ನು ಒದಗಿಸಿಕೊಡುವುದರ ಜೊತೆಗೆ ಮೀಸಲಾತಿಯನುಗುಣವಾಗಿ ಭರ್ತಿ ಮಾಡುವ ಕಾರ್ಯವನ್ನು ಸರ್ಕಾರ

ಕೈಗೊಂಡಾಗ ಉದ್ಯೋಗದಲ್ಲಿ ಕೆಳ ಸಮುದಾಯಗಳು ಅವಕಾಶವನ್ನು ಪಡೆದಿವೆ. ಆದರೆ ಚನ್ನದಾಸರ ಸಮುದಾಯವು ಇದರಿಂದ ವಂಚಿತವಾಗಿದೆ. ಕಾರಣ ಇಂದಿಗೂ ಈ ಸಮುದಾಯದಲ್ಲಿ ಸರ್ಕಾರಿ ನೌಕರಿ ಹಾಗೂ ಖಾಸಗಿ ನೌಕರಿಯನ್ನು ಪಡೆದವರ ಸಂಖ್ಯೆ ಬಹಳ ವಿರಳ, ಕ್ಷೇತ್ರಕಾರ್ಯದಲ್ಲಿ ಸಮೀಕ್ಷೆ ಮಾಡಿದಾಗ ನಿಂಗಲಬಂಡಿ ಗ್ರಾಮವನ್ನು ಹೊರತುಪಡಿಸಿ ಉಳಿದ ಚೆನ್ನದಾಸರು ನೆಲೆಸಿರುವ ಗ್ರಾಮಗಳಲ್ಲಿ ನೌಕರಿ ಮಾಡುವವರು ಕಂಡುಬರುವುದಿಲ್ಲ.

ಪ್ರಸ್ತುತ ಅಧ್ಯಯನದ ಸಮೀಕ್ಷೆಯ ಪ್ರಕಾರ ಸಂಜೀವಪ್ಪ ಎನ್ನುವ ವಕ್ತೃ ಚೆನ್ನದಾಸರ ಕೃಷಿ ಇಲಾಖೆಯಲ್ಲಿ ಗುಮಾಸ್ತ ಕಾರ್ಯವನ್ನು ನಿರ್ವಹಿಸುತ್ತಿದ್ದರು. ಆದರೆ ೨೦೦೫ರಲ್ಲಿ ಸೇವಾವಧಿಯಲ್ಲಿ ಮರಣ ಹೊಂದಿದ ಪ್ರಯುಕ್ತ ಇವರ ಮಗನಾದ ಶರಣಪ್ಪ ಸಂಜೀವಪ್ಪ ಚೆನ್ನದಾಸರನನ್ನು ಅನುಕಂಪದ ಆಧಾರದ ಮೇಲೆ ಸರಕಾರ ನೇಮಕ ಮಾಡಿತು. ಇಂದು ಅವರು ಕುಷ್ಟಗಿ ತಾಲೂಕಿನ ದೋಟಿಹಾಳ ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳಾಗಿ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಈ ಗ್ರಾಮದಲ್ಲಿರುವ ಸರ್ಕಾರಿ ನೌಕರಿ ಮಾಡುವ ಇನ್ನಿತರರು ಎಂದರೆ ಧರ್ಮಣ್ಣ ತಂದೆ ಹನುಮಪ್ಪ ಚೆನ್ನದಾಸರ ಹಾಗೂ ಭರಮಪ್ಪ ತಂದೆ ಹಿರೇ ಹನುಮಪ್ಪ ಚೆನ್ನದಾಸರ ಇವರುಗಳು ಸರಕಾರಿ ಕಛೇರಿಗಳಲ್ಲಿ ಚಾಲಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರನ್ನು ಹೊರತುಪಡಿಸಿ ಈ ಸಮುದಾಯಲ್ಲಿ ಸರಕಾರಿ ನೌಕರಿ ಮಾಡುವವರು ಇಲ್ಲಾ. ಆದರೆ ಖಾಸಗಿ ಕಂಪನಿಯಲ್ಲಿ ಇಬ್ಬರೂ ಕಾವಲುಗಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನೌಕರಿ ಮಾಡುವವರ ಆರ್ಥಿಕ ಸ್ಥಿತಿಗೂ ಇತರರ ಆರ್ಥಿಕ ಸ್ಥಿತಿಗೂ ಕೂಲಿಕೆಲಸವನ್ನು ಮಾಡಿದಾಗ ಸರಕಾರಿ ಹಾಗೂ ಖಾಸಗಿ ನೌಕರರ ಆರ್ಥಿಕ ಸ್ಥಿತಿಯು ಉತ್ತಮ ಮಟ್ಟದಾಗಿದ್ದರೆ ಉಳಿದವರ ಸ್ಥಿತಿಯು ತೀರಾ ಕೆಳಮಟ್ಟದಲ್ಲಿ ಇರುವದು ಕಂಡುಬರುತ್ತದೆ. ಯಾವುದೇ ತೀರಾ ಒಂದು ಸಮುದಾಯವು ಅಭಿವೃದ್ಧಿ ಆಗಬೇಕಾದರೆ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿರಬೇಕಾಗುತ್ತದೆ. ಆ ನಿಟ್ಟಿನಲ್ಲಿ ಈ ಸಮುದಾಯಕ್ಕೆ ಆರ್ಥಿಕ ಸ್ವಾವಲಂಬನೆ ಅಗತ್ಯತೆ ಇದೆ. ಇವರಿಗ ಸರ್ಕಾರದ ಸೌಲಭ್ಯಗಳು ದೊರೆಯಬೇಕಾಗಿದೆ.

ಉಪ ಸಂಹಾರ

ಹೀಗೆ ಚೆನ್ನದಾಸರ ಸಮುದಾಯವು ಮೂಲತಃ ಒಂದು ಅಲೆಮಾರಿ ಸಮುದಾಯವಾಗಿ ತದನಂತರ ಅರೆ ಅಲೆಮಾರಿಗಳಾಗಿ, ಸ್ಥಿರನಿವಾಸಿಗಳಾಗಿ ಬದುಕು ಸಾಗಿಸುವದರೊಂದಿಗೆ ತಮ್ಮ ಆರ್ಥಿಕ ಸ್ಥಿತಿಯಲ್ಲಿಯೂ ಸಹ ಬದಲಾವಣೆಯನ್ನು ಕಂಡಿದ್ದು ಗೋಚರಿಸುತ್ತದೆ. ಕ್ಷೇತ್ರ ಕಾರ್ಯ ಕೈಗೊಂಡಾಗ ಬೇರೆ ಬೇರೆ ಗ್ರಾಮಗಳಲ್ಲಿ ವಿಭಿನ್ನವಾದ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿದ್ದನ್ನು ಕಾಣುವಂತಾಯಿತು. ಕೆಲವೊಂದು ಗ್ರಾಮಗಳಲ್ಲಿ ಕೆಲವು ಕುಟುಂಬಗಳು ಆರ್ಥಿಕತೆಯಲ್ಲಿ ಬೆಳವಣಿಗೆಯತ್ತ ಸಾಗುವುದನ್ನು ಕಂಡರೆ ಇನ್ನೂ ಕೆಲವೊಂದು ಕುಟುಂಬಗಳು ಮೂಲ ಸ್ಥಿತಿಯಲ್ಲಿ ಜೀವನ ಸಾಗಿಸುವುದು ಕಂಡುಬಂದಿದೆ. ಸ್ವಾತಂತ್ರ್ಯ ನಂತರ ಸರ್ಕಾರ ಪರಿಶಿಷ್ಟ ಜಾತಿ ಜನಾಂಗಕ್ಕಾಗಿ ಹಲವಾರು ಸೌಲಭ್ಯಗಳನ್ನು ಒದಗಿಸಿದ್ದರೂ, ಅಂತಹವುಗಳು ಇವರ ಪಾಲಿಗೆ ಕೇವಲ ಮರೀಚಿಕೆಯಾಗಿ ಉಳಿದಿವೆ. ಆದರೆ ಸರಕಾರ ನೂರಾರು ವರ್ಷಗಳಿಂದ ತುಳಿತಕ್ಕೆ ಒಳಗಾದ ಇಂತಹ ಸಮುದಾಯಗಳನ್ನು ಗುರುತಿಸಿ ಸೌಲಭ್ಯಗಳನ್ನು ನೇರವಾಗಿ ಕುಟುಂಬವನ್ನು ತಲುಪಿಸುವಂತಹ ಕ್ರಮ ಕೈಗೊಂಡಾಗ ಮಾತ್ರ ಈ ಸಮುದಾಯದ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳಲಿಕ್ಕೆ ಸಾಧ್ಯವಿದೆ.

ಟಿಪ್ಪಣಿಗಳು

೧. ಆಯ: ಹಳ್ಳಿಗಳಲ್ಲಿ ವಂಶ ಪರಂಪರೆಯಿಂದ ಸೇವೆ ಸಲ್ಲಿಸಿಕೊಂಡು ಬಂದಿರುವವರಿಗೆ ಕಣದಲ್ಲಿ ರಾಶಿ ಮಾಡುವಾಗ ಅಳೆದುಕೊಡುವ ನಿರ್ದಿಷ್ಟ ಪ್ರಮಾಣದ ಧಾನ್ಯ,-ವರ್ಷಾಶನ.

೨. ಏದು: ಯಲಬುರ್ಗಾ ಪ್ರದೇಶದಲ್ಲಿ ಮುಳ್ಳುಹಂದಿಗೆ ಏದು ಎನ್ನಲಾಗುತ್ತದೆ.

೩. ಖಗ: ಪಕ್ಷಿಗೆ ಇನ್ನೊಂದು ಪದ ಖಗ.

೪. ನಾಯಿ: ಈ ಸಮುದಾಯದಲ್ಲಿ ನಾಯಿ ಸಾಕುವುದು ಸರ್ವೇಸಾಮಾನ್ಯ. ಕೆಲಸಕ್ಕಾಗಿ ಹೊರಗೆ ತಿರುಗುವ ಇವರು ಮನೆಯ ಕಾಲವಲಿಗಾಗಿ, ಬೇಟೆಗಾಗಿ ನಾಯಿ ಸಾಕುವುದು ವಾಡಿಕೆ. ನಾಯಿ ಇರುವುದರಿಂದ ಗುಡಿಸಿಲಿನ, ಮನೆಯಲ್ಲಿನ ವಸ್ತು-ವಡೆವೆ, ಕಾಳು-ಕಡಿಗಳು ಕಳುವಾಗುವ ಭಯವಿರುವುದಿಲ್ಲ. ಇನ್ನು ಕೆಲವರು ಉತ್ತಮ ತಳಿಯ ಹೆಣ್ಣು ನಾಯಿಗಳನ್ನು ತಂದು ಅದಕ್ಕೆ ಉತ್ತಮ ತಳಿಯ ಗಂಡು ನಾಯಿಯಿಂದ ಗರ್ಭಧಾರಣೆ ಮಾಡಿಸಿ ಈದ ಮರಿಗಳನ್ನು ವಿಶೇಷವಾಗಿ ಗಂಡು ಮರಿಗಳನ್ನು ಮಾರುತ್ತಾರೆ. ಉತ್ತಮ ತಳಿಯ ಬೇಟೆಯ ನಾಯಿಗಳಿಗೆ ಬಹಳ ಬೆಲೆ ಇರುವುದರಿಂದ ಈ ರೀತಿಯ ವ್ಯಾಪಾರ ಮಾಡುವ ಜನಗಳು ಈ ಸಮುದಾಯದಲ್ಲಿದ್ದಾರೆ. ಇದು ಪ್ರಧಾನ ವೃತ್ತಿಯಾಗಿರದೆ ಉಪವೃತ್ತಿಯಾಗಿದೆ (ಹಿಮ್ಮಡಿ, ೨೦೦೮; ೧೯).

೫. ೧೯೭೭: ಈ ೧೯೭೫ರ ಭೂಸುಧಾರಣಾ ಕಾಯ್ದೆಯು ರಾಷ್ಟ್ರದಲ್ಲಿ ಜಾರಿಗೆ ಬಂದಿತು. ಆದರೆ ಸರಿಯಾಗಿ ಅನುಷ್ಠಾನಗೊಂಡಿದ್ದು, ೧೯೭೭ರ ಕಾಲಾವಧಿಯಲ್ಲಿ ಇದರಿಂದ ಕೆಳವರ್ಗದ ಭೂರಹಿತ ವರ್ಗದ ಜನರಿಗೆ ಭೂಮಿ ಹೊಂದಲು ಅವಕಾಶವಾಯಿತು (ಹಿಮ್ಮಡಿ, ೨೦೦೮; ೧೯).

* * *

ಅಧ್ಯಾಯ ಐದು

ಪ್ರಸ್ತುತ ಸಂದರ್ಭದಲ್ಲಿ ಚೆನ್ನದಾಸರ ಸ್ಥಿತಿಗತಿ

ಪ್ರಸ್ತಾವನೆ

೫.೧. ರಾಜಕೀಯ ಪ್ರವೇಶ

೫.೨. ಮೀಸಲಾತಿ

೫.೩. ಶಿಕ್ಷಣ

೫.೪. ಸರ್ಕಾರಿ ಸೌಲಭ್ಯಗಳು

ಅಧ್ಯಾಯ ಐದು

ಪ್ರಸ್ತುತ ಸಂದರ್ಭದಲ್ಲಿ ಚೆನ್ನದಾಸರ ಸ್ಥಿತಿಗತಿ

ಪ್ರಸ್ತಾವನೆ

ಸರಕಾರ ಸ್ವಾತಂತ್ರ್ಯೋತ್ತರ ಪರಿಶಿಷ್ಟಜಾತಿ, ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗದವರಿಗೆ ಹಲವಾರು ಯೋಜನೆಗಳನ್ನು ಹಾಕಿಕೊಂಡಿದ್ದರೂ ಚೆನ್ನದಾಸರಂತ ಕೆಲವು ಸಮುದಾಯಗಳು ಆಮೆಗತಿಯಲ್ಲಿ ಸಾಗಿರುವುದನ್ನು ಕಾಣಬಹುದು. ಈಗಾಗಲೇ ಚೆನ್ನದಾಸರ ಸಮುದಾಯದ ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಗತಿಯ ಕುರಿತು ಹಿಂದಿನ ಮೂರು ಅಧ್ಯಯನಗಳಲ್ಲಿ ಅಧ್ಯಯನ ಮಾಡಲಾಗಿದೆ. ಸಾಮಾಜಿಕ, ಧಾರ್ಮಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಲು ಮುಖ್ಯವಾಗಿ ಇರುವ ಅಂಶಗಳಾದ ಶಿಕ್ಷಣ, ಸರಕಾರಿ ಸೌಲಭ್ಯಗಳು, ರಾಜಕೀಯ ಪ್ರವೇಶ ಮತ್ತು ಮೀಸಲಾತಿಗಳು ಅವುಗಳ ಪ್ರಗತಿಗೆ ಪ್ರಮುಖವಾಗಿರುತ್ತವೆ. ಪ್ರಸ್ತುತ ಸಂದರ್ಭದಲ್ಲಿ ಈ ಸಮುದಾಯವು ಸಂವಿಧಾನಾತ್ಮಕವಾದ ಸವಲತ್ತುಗಳನ್ನು ಪಡೆದುಕೊಳ್ಳು ವಿಫಲವಾದ ಕಾರಣಗಳನ್ನು ಅಭ್ಯಸಿಸಲು ಯತ್ನಿಸಿದೆ.

ಈ ದಿಶೆಯಲ್ಲಿ ಅಧ್ಯಯನದ ದೃಷ್ಟಿಯಿಂದ ಬೇರೆ ಪ್ರಗತಿ ಹೊಂದಿದ ಸಮುದಾಯಗಳಿಗೆ ಮತ್ತು ಈ ಸಮುದಾಯಕ್ಕೆ ಹೋಲಿಕೆ ಮಾಡಿದಾಗ ಬೇರೆ ಕೆಲವು ಸಮುದಾಯಗಳು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಪ್ರಗತಿಯಾಗುವುದರ ಜೊತೆಗೆ ಮೀಸಲಾತಿ ಹಾಗೂ ಸರಕಾರಿ ಸೌಲಭ್ಯಗಳನ್ನು ಸಾಧ್ಯವಾದಷ್ಟು ಪಡೆದುಕೊಳ್ಳಲು ಯಶಸ್ವಿಯಾಗಿವೆ. ಚೆನ್ನದಾಸರ ಸಂದರ್ಭದಲ್ಲಿ ಈ ಯಶಸ್ವೀ ಮಾಪನಗಳು ಬಳಕೆಯಾದ ರೀತಿಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಪ್ರಸ್ತುತ ಅಧ್ಯಯನದ ಮೊದಲನೇ ಭಾಗದಲ್ಲಿ ಚೆನ್ನದಾಸರ ರಾಜಕೀಯ ಪ್ರವೇಶ ಕುರಿತು ಚರ್ಚಿಸಲಾಗಿದೆ. ಎರಡನೇಯ ಭಾಗದಲ್ಲಿ ಮೀಸಲಾತಿಯನ್ನು ಈ ಸಮುದಾಯ ಯಾವ ರೀತಿಯಾಗಿ ಉಪಯೋಗ ಮಾಡಿಕೊಂಡಿದೆ ಎನ್ನುವ ಅಂಶಗಳನ್ನು ಗುರುತಿಸಲಾಗಿದೆ. ಮೂರನೆಯ ಭಾಗದಲ್ಲಿ ಈ ಸಮುದಾಯದ ಜನರು ಹೊಂದಿರುವ ಶಿಕ್ಷಣದ ಮಟ್ಟವನ್ನು ಹಾಗೂ ನಾಲ್ಕನೇಯ ಭಾಗದಲ್ಲಿ ಸರಕಾರದ ಸೌಲಭ್ಯಗಳನ್ನು ಪಡೆದುಕೊಂಡ ಬಗೆಗಳನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ.

[illegible]

[illegible]

[illegible]

[illegible]

[illegible]

೫.೧. ರಾಜಕೀಯ ಪ್ರವೇಶ

ಒಂದು ಕಾಲದಲ್ಲಿ ರಾಜಕೀಯ ಕ್ಷೇತ್ರವನ್ನು ರಾಜರು ಮತ್ತು ಪುರೋಹಿತರು ನೋಡಿಕೊಳ್ಳುತ್ತಿದ್ದರ ಪರಿಣಾಮವಾಗಿ ಕೆಳಸ್ತರದ ಜನಸಮುದಾಯಕ್ಕೆ ಯಾವುದೇ ರೀತಿಯ ರಾಜಕೀಯ ಪ್ರವೇಶ ಕೈಗೊಳ್ಳಲು ಸಾಧ್ಯವಾಗಲಿಲ್ಲ. ಅದರಲ್ಲಿ ಕ್ಷತ್ರಿಯರು ಬ್ರಾಹ್ಮಣರ ಮಾರ್ಗದರ್ಶನದಂತೆ ಆಳ್ವಿಕೆಯನ್ನು ಮಾಡಿದರೆ, ವೈಶ್ಯ ಮತ್ತು ಶೂದ್ರರು ಇನ್ನಿತರ ಕಾರ್ಯಗಳಲ್ಲಿ ತೊಡುಗುತ್ತಿದ್ದರು. ಇದರಿಂದಾಗಿ ಕೆಳಸ್ತರದ ಜನರಿಗೆ ರಾಜಕೀಯದಲ್ಲಿ ಪ್ರವೇಶ ಪಡೆಯಲು ಶತಮಾನಗಳೇ ಬೇಕಾಯಿತು. ಚೆನ್ನದಾಸರ ಸಮುದಾಯವು ಚರಿತ್ರೆಯುದ್ದಕ್ಕೂ ಪೂರ್ಣವಾಗಿ ಅಲೆಮಾರಿಗಳಾಗಿದ್ದರ ಪ್ರಯುಕ್ತ ರಾಜಕೀಯವನ್ನು ಪ್ರವೇಶಿಸಲು ಸಾಧ್ಯವಾಗಲಿಲ್ಲ. ತದನಂತರ ಕಾಲದಲ್ಲಿ ಬ್ರಿಟೀಷ ಶಿಕ್ಷಣ ಪಡೆದಂತಹ ಸುಶಿಕ್ಷಿತ ಜನರು ಹಾಗೂ ಇನ್ನಿತರ ಜನ ಸಮುದಾಯ ಕೈಗೊಂಡ ಸ್ವಾತಂತ್ರ್ಯ ಚಳುವಳಿಯ ಹೋರಾಟದ ಫಲವಾಗಿ ಭಾರತ ಬಿ.ಆರ್.ಅಂಬೇಡ್ಕರ ಅವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ಭಾರತಕ್ಕೆಂದು ಸಂವಿಧಾನ ರಚನೆಯಾಯಿತು. ಇದು ಈ ನೆಲದಲ್ಲಿ ಪ್ರತಿಯೊಬ್ಬರಿಗೂ ಸಮಾನವಾದ ಹಕ್ಕನ್ನು ದೊರಕಿಸಿಕೊಟ್ಟಿತು. ಜೊತೆಗೆ ಕೆಲವೊಂದು ರಾಜಕೀಯ ಹಕ್ಕುಗಳನ್ನು ಮೀಸಲಾತಿಯ ಮೂಲಕ ಶೋಷಿತ ಜಾತಿಗಳಿಗೆ ನೀಡಿದ್ದರಿಂದ ಇಂದು ರಾಜಕಾರಣದಲ್ಲಿ ಅಲ್ಪ ಸ್ವಲ್ಪ ಭಾಗವಹಿಸಲು ಅವಕಾಶವಾಗಿದೆ.

ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಪಡೆದ ದಿನದಿಂದ ಇಲ್ಲಿಯವರೆಗೆ ಚೆನ್ನದಾಸರ ಸಮುದಾಯವು ಯಲಬುರ್ಗಾ ಪ್ರದೇಶದಲ್ಲಿ ಎಷ್ಟರ ಮಟ್ಟಿಗೆ ರಾಜಕೀಯ ಪ್ರವೇಶ ಮಾಡಿದೆ ಎಂಬುವುದನ್ನು ವಿಶ್ಲೇಷಣೆ ಮಾಡಲು ಪ್ರಯತ್ನಿಸಲಾಗಿದೆ. ಚೆನ್ನದಾಸರ ಸಮುದಾಯವು ಮೂಲತಃ ಅಲೆಮಾರಿಗಳಾಗಿದ್ದು ಇತ್ತೀಚೆಗೆ ಆ ಸಮುದಾಯದ ಕೆಲವೊಂದು ಕುಟುಂಬಗಳು ಸ್ಥಿರ ನಿವಾಸಿಗಳಾಗಿ ತಾವು ನೆಲೆಸಿರುವ ಗ್ರಾಮಗಳಲ್ಲಿ ಇನ್ನಿತರ ಜಾತಿಗಳಿಂದ ಗುರುತಿಸಲ್ಪಟ್ಟಿದ್ದಾರೆ. ಜೊತೆಗೆ ಸಮೂಹ ಮಾಧ್ಯಮಗಳ ಸಂಪರ್ಕದಿಂದಾಗಿ ಚೆನ್ನದಾಸರು ಪ್ರಜಾಪ್ರಭುತ್ವ ವ್ಯವಸ್ಥೆ ಹಾಗೂ ಸಂವಿಧಾನಾತ್ಮಕ ಅವಕಾಶಗಳನ್ನು ನಿಧಾನವಾಗಿ ತಿಳಿಯಲು ಯತ್ನಿಸುವದರೊಂದಿಗೆ ರಾಜಕೀಯ ಪ್ರವೇಶವನ್ನು ಕೆಳಮಟ್ಟದ ಹಂತದಿಂದ ಕೈಗೊಂಡಿದ್ದಾರೆ.

ಯಲಬುರ್ಗಾ ಪ್ರದೇಶದಲ್ಲಿ ಹೆಚ್ಚು ಜನಸಂಖ್ಯೆ ಹೊಂದಿರುವ ತುಮ್ಮರಗುದ್ದಿ ಮತ್ತು ವಟಪರವಿ ಗ್ರಾಮಗಳನ್ನು ಹೊರತುಪಡಿಸಿ ಉಳಿದ ಗ್ರಾಮಗಳಲ್ಲಿ ರಾಜಕೀಯ ಪ್ರವೇಶ ಮಾಡಿದ್ದು ಕಂಡುಬರುವುದಿಲ್ಲ.ತುಮ್ಮರಗುದ್ದಿ ಗ್ರಾಮದಲ್ಲಿ ಒಬ್ಬರು ಮತ್ತು ವಟಪರವಿ ಗ್ರಾಮದಲ್ಲಿ ಇಬ್ಬರೂ ಸದಸ್ಯರು ಗ್ರಾಮ ಪಂಚಾಯತಿ ಮಟ್ಟದಲ್ಲಿ ರಾಜಕೀಯ ಪ್ರವೇಶ ಮಾಡಿದ್ದಾರೆ. ಆದರೆ ಈ ಸಮುದಾಯದವರು ಯಲಬುರ್ಗಾ ಪ್ರದೇಶದಲ್ಲಿ ಗ್ರಾಮ ಪಂಚಾಯತ್ ಸದಸ್ಯರಾಗಿದ್ದು ಬಿಟ್ಟರೆ ಮೇಲ್ಮಟ್ಟದ ರಾಜಕೀಯದಲ್ಲಿ ಪ್ರವೇಶ ಮಾಡಿದ್ದು ಕಂಡುಬರುವುದಿಲ್ಲ. ಅದಕ್ಕೆ ಇವರಲ್ಲಿ ಸಮುದಾಯದ ಸಂಘಟನೆ ಕೊರತೆ ಕಂಡುಬರುತ್ತದೆ. ಜೊತೆಗೆ ಈ ಸಮುದಾಯದವರು ಆರ್ಥಿಕವಾಗಿ ಅಶಕ್ತರಾಗಿದ್ದಾರೆ. ಇದರಿಂದಾಗಿ ಪ್ರಸಕ್ತ ದಿನಮಾನಗಳಲ್ಲಿ ಈ ಸಮುದಾಯದವರು ಯಲಬುರ್ಗಾ ಪ್ರದೇಶದಲ್ಲಿ ರಾಜಕೀಯ ಪ್ರವೇಶ ಮಾಡಲು ಸಾಧ್ಯವಾಗಿಲ್ಲ.

ನಮ್ಮ ರಾಷ್ಟ್ರದಲ್ಲಿ ಯಾವುದೇ ಸಮುದಾಯವು ರಾಜಕೀಯದಲ್ಲಿ ಸರಿಯಾದ ರಾಜಕೀಯ ಪ್ರವೇಶ ಹೊಂದಬೇಕಾದರೆ, ಅಂತಹ ಸಮುದಾಯದ ಜನರಲ್ಲಿ ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳನ್ನು ಹೊಂದಿದಾಗ ಮಾತ್ರ ಸಾಧ್ಯವಾಗುತ್ತದೆ.

ಈ ಹಿನ್ನೆಲೆಯಿಂದ ಯಲಬುರ್ಗಾ ಪ್ರದೇಶದ ಚೆನ್ನದಾಸರು ಶಿಕ್ಷಣ, ಸಂಘಟನೆ ಮತ್ತು ಹೋರಾಟ ಎಂಬ ಈ ಮೂರು ಅಂಶಗಳನ್ನು ಎಲ್ಲಿಯವರಿಗೂ ತಮ್ಮ ಸಮುದಾಯದಲ್ಲಿ ಅಳವಡಿಸಿಕೊಳ್ಳುವುದಿಲ್ಲವೋ ಅಲ್ಲಿಯವರಿಗೆ ರಾಜಕೀಯವಾಗಿ ಹಿಂದುಳಿಯುತ್ತಾರೆ. ಇದನ್ನರಿತು ಈ ಸಮುದಾಯದ ಜನರು ತಮ್ಮ ಮಕ್ಕಳಿಗೆ ಸರಿಯಾದ ಶಿಕ್ಷಣ ಕೊಡಿಸುವುದರೊಂದಿಗೆ ಸಮುದಾಯವನ್ನು ಸಂಘಟನೆಯತ್ತ ಮುನ್ನಡೆಸ ಬೇಕಾಗಿದೆ. ಇದರೊಂದಿಗೆ ಹೋರಾಟದ ಮೂಲಕ ರಾಜಕೀಯ ಹೋರಾಟದ ಮೂಲಕ ರಾಜಕೀಯ ಪ್ರವೇಶ ಪಡೆದು ಇತರ ಸಮುದಾಯಗಳಂತೆ ಪ್ರಗತಿಯತ್ತ ಸಾಗುವದು ಮುಂದಿನ ದಿನಗಳಲ್ಲಿ ಅನಿವಾರ್ಯವಾಗಿದೆ.

೫.೨. ಮೀಸಲಾತಿ

ಸ್ವಾತಂತ್ರ್ಯ ನಂತರದ ಕಾಲಾವಧಿಯಲ್ಲಿ ಸರಕಾರಗಳು ಅಲೆಮಾರಿ ಸಮುದಾಯಗಳ ಸ್ಥಿತಿಗತಿಯನ್ನು ಮನಗೊಂಡು ಪರಿಶಿಷ್ಟ ಜಾತಿಗೆ ಸೇರ್ಪಡೆಗೊಳಸುವುದರೊಂದಿಗೆ ಮೀಸಲಾತಿಗೆ ಒಳಪಡಿಸಲಾಯಿತು. ಅಂತಹ ಅಲೆಮಾರಿ ಸಮುದಾಯಗಳಲ್ಲಿ ಒಂದಾದ ಚೆನ್ನದಾಸರ ಸಮುದಾಯವನ್ನು ದಿನಾಂಕ ೨೭.೦೭.೧೯೭೭ರಂದು ಕರ್ನಾಟಕದ ಪರಿಶಿಷ್ಟ ಜಾತಿ ಮೀಸಲಾತಿ ಪಟ್ಟಿಯ ಕ್ರಮ ಸಂಖ್ಯೆ ೨೯ರಲ್ಲಿ ಚೆನ್ನದಾಸರ ಎಂಬ ಪದವು ದಾಖಲಾಯಿತು. ಅದರನ್ವಯ ಈ ಸಮುದಾಯವು ಪರಿಶಿಷ್ಟ ಜಾತಿಗೆ ನೀಡಿರುವ ಶೇ.೧೫ರ ಮೀಸಲಾತಿಗೆ ಅರ್ಹತೆಯನ್ನು ಪಡೆಯಿತು. ಆದರೆ ಈ ಸಮುದಾಯದ ಜನರಿಗೆ ಚೆನ್ನದಾಸರ ಸಮುದಾಯವು ಪರಿಶಿಷ್ಟ ಜಾತಿಯಲ್ಲಿ ಸೇರ್ಪಡೆಗೊಂಡಿದೆ ಎಂಬ ಮಾಹಿತಿಯು ಬಹಳ ದಿನಗಳವರೆಗೆ ಗೊತ್ತಾಗಲಿಲ್ಲವೆಂದು ಆ ಸಮುದಾಯದ ಜನರು ತಿಳಿಸುತ್ತಾರೆ. ಹೊಟ್ಟೆ ಪಾಡಿಗಾಗಿ ಬೇರೆ ಊರುಗಳಲ್ಲಿ ಸುತ್ತಾಡುತ್ತಿರುವಾಗ ಮೀಸಲಾತಿ ಜ್ಞಾನ ತಮಗೆ ಇರಲಿಲ್ಲವಾದ್ದರಿಂದ ಇದರ ಪ್ರಯೋಜನವನ್ನು ಪಡೆಯಲಿಕ್ಕೆ ಸಾಧ್ಯವಾಗಿಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಪ್ರಸ್ತುತ ದಿನಗಳಲ್ಲಿ ಮೀಸಲಾತಿಯ ಸ್ಥಿತಿಗತಿಯ ಕುರಿತು ಈ ಪ್ರದೇಶದಲ್ಲಿ ಕ್ಷೇತ್ರಕಾರ್ಯದ ಮೂಲಕ ಸಮೀಕ್ಷೆಯನ್ನು ಕ್ಷೇತ್ರಕಾರ್ಯದ ಮೂಲಕ ಸಮೀಕ್ಷೆಯನ್ನು ಕೈಗೊಂಡಾಗ, ಈ ಸಮುದಾಯಗಳಲ್ಲಿರುವ ಜನರು ಮೀಸಲಾತಿ ಪಡೆಯುವಲ್ಲಿ ವಿಫಲರಾಗಿದ್ದು, ಸರಕಾರ ಕೊಟ್ಟಂತಹ ಮೀಸಲಾತಿ ಲಾಭವನ್ನು ಈ ಪ್ರದೇಶದಲ್ಲಿನ ಪರಿಶಿಷ್ಟ ಜಾತಿಗೆ ಸೇರಿರುವ ಇನ್ನಿತರ ಸಮುದಾಯಗಳೇ ಪಡೆದಿದ್ದು ಕಂಡುಬರುತ್ತದೆ. ಅದಕ್ಕೆ ಕಾರಣ ಆ ಸಮುದಾಯಗಳು ರಾಜಕೀಯವಾಗಿ, ಶೈಕ್ಷಣಿಕವಾಗಿ ಮತ್ತು ಸಂಘಟನೆಯಲ್ಲಿ ಪ್ರಗತಿಯನ್ನು ಹೊಂದಿದ್ದರ ಪರಿಣಾಮವಾಗಿ ಮೀಸಲಾತಿಯನ್ನು ಪಡೆಯಲು ಸಾಧ್ಯವಾಗಿವೆ. ಆದರೆ ಚೆನ್ನದಾಸರ ಸಮುದಾಯದಲ್ಲಿ ರಾಜಕೀಯ, ಶೈಕ್ಷಣಿಕ ಮತ್ತು ಸಂಘಟನೆಯ ಕೊರತೆಯಿಂದಾಗಿ ಮೀಸಲಾತಿಯನ್ನು ಪಡೆಯಲು ಸಾಧ್ಯವಾಗಿಲ್ಲ ಎಂಬುವುದು ಸ್ಪಷ್ಟವಾಗಿ ಗೋಚರಿಸುತ್ತದೆ (ಮೌಖಿಕ ಸಂದರ್ಶನ, ಮಾರೆಪ್ಪ: ೨೦೦೯).

ಈ ನಿಟ್ಟಿನಲ್ಲಿ ಚೆನ್ನದಾಸರ ಸಮುದಾಯವು ರಾಜಕೀಯವಾಗಿ, ಶೈಕ್ಷಣಿಕವಾಗಿ ಹಾಗೂ ಸಂಘಟನೆಯಲ್ಲಿ ಪ್ರಗತಿಯನ್ನು ಹೊಂದಿದಾಗ ಮಾತ್ರ ಮೀಸಲಾತಿಯನ್ನು ಪಡೆಯಲು ಸಾಧ್ಯವಾಗಬಲ್ಲದು. ಅಲ್ಲದೆ ಸರಕಾರ ಮತ್ತು ಸಂಘ ಸಂಸ್ಥೆಗಳು ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮೀಸಲಾತಿಯಿಂದ ದೂರವಾಗಿದ್ದ ಇಂತಹ ಸಮುದಾಯಗಳಿಗೆ ಮೀಸಲಾತಿಯ ಅರಿವನ್ನು ಮೂಡಿಸಿದಾಗ ಮಾತ್ರ ಮೀಸಲಾತಿ ಉಪಯೋಗವಾಗುತ್ತದೆ.

೫.೩. ಶಿಕ್ಷಣ

ಪ್ರಾಚೀನ ಕಾಲದಿಂದ ವಸಾಹತುಶಾಹಿಗಳ ಕಾಲದವರೆಗೆ ಶಿಕ್ಷಣವು ಕೆಲವೇ ವರ್ಗಗಳ ಸ್ವತ್ತಾಗಿತ್ತು. ಸ್ವಾತಂತ್ರ್ಯ ನಂತರ ಸಂವಿಧಾನದಲ್ಲಿ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಹಕ್ಕನ್ನು ನೀಡಿದ್ದರ ಪ್ರಯುಕ್ತ ಶತಮಾನಗಳಿಂದ ವಂಚನೆಗೆ ಒಳಪಟ್ಟ ವರ್ಗಗಳಿಗೆ ಅನುಕೂಲಕಾರಿಯಾಯಿತು. ಆದರೆ ಕೆಲವು ಸಮುದಾಯಗಳಿಗೆ ಸ್ವಾತಂತ್ರ್ಯ ನಂತರವು ಶಿಕ್ಷಣದ ಮಹತ್ವಗೊತ್ತಾಗಲಿಲ್ಲ. ಅಂತಹ ಸಮುದಾಯಗಳಲ್ಲಿ ಯಲಬುರ್ಗಾ ಪ್ರದೇಶದ ಚೆನ್ನದಾಸರ ಸಮುದಾಯ ಹೊರತಾಗಿಲ್ಲ. ಆ ಪ್ರದೇಶದ ಈ ಸಮುದಾಯಕ್ಕೆ ಸ್ವಾತಂತ್ರ್ಯ ನಂತರದಿಂದ ೧೯೯೦ರ ದಶಕದ ವರೆಗೂ ಶಿಕ್ಷಣದ ಅರಿವೇ ಇರಲಿಲ್ಲ. ಕಾರಣ ಈ ಅವಧಿಯಲ್ಲಿ ಅಲೆಮಾರಿ ಜೀವನ ಹಾಗೂ ವಂಶಪಾರಂಪರ್ಯ ವೃತ್ತಿ ಕಸಬುಗಳಿಗೆ ಹೆಚ್ಚಿನ ಒಲವನ್ನು ಹೊಂದಿದ್ದರು. ತದನಂತರದಲ್ಲಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಹಾಗೂ ಸರಕಾರ ಸಂವಿಧಾನದ ೪೫ನೇ ವಿಧಿಯ ಅನ್ವಯ ಪ್ರಾಥಮಿಕ ಶಿಕ್ಷಣ ಉಚಿತ ಮತ್ತು ಕಡ್ಡಾಯ ಎಂದು ಸಾರಿದ ಮೇಲೆ ಪ್ರಾಥಮಿಕ ಶಿಕ್ಷಣವನ್ನು ಬಲಪಡಿಸುವ ಉದ್ದೇಶದಿಂದ ಹಲವಾರು ಯೋಜನೆಗಳನ್ನು ರೂಪಿಸಿತು. ಅಂತಹವುಗಳೆಂದರೆ ಮಧ್ಯಾಹ್ನದ ಬಿಸಿಯೂಟ, ಅಕ್ಷರದಾಸೋಹ, ಕೂಲಿಯಿಂದ ಶಾಲೆಗೆ, ಬಾ ಬಾಲೇ ಶಾಲೆಗೆ, ಸರ್ವಶಿಕ್ಷಣ ಅಭಿಯಾನ, ಚಿಣ್ಣರ ಅಂಗಳ, ಸಮುದಾಯದತ್ತ ಶಾಲೆ ಹಾಗೂ ಮುರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ ಇತ್ಯಾದಿ ಯೋಜನೆಗಳನ್ನು ಶಿಕ್ಷಣ ಕ್ಷೇತ್ರದಲ್ಲಿ ಅವಳಡಿಸಿಕೊಂಡಿದ್ದರೂ ಸಹ ಈ ಸಮುದಾಯವು ಪರಿಪೂರ್ಣವಾಗಿ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸದೇ ಇರುವುದು ಕಂಡುಬರುತ್ತದೆ. ತೀರಾ ಕಡಿಮೆ ಮಟ್ಟದಲ್ಲಿ ಈ ಸಮುದಾಯದ ಮಕ್ಕಳು ಶಾಲೆಗೆ ಹೋಗುತ್ತಿರುವದು ದುರದೃಷ್ಟಕರ ಸಂಗತಿಯಾಗಿದೆ. ಈ ಸಮುದಾಯದಲ್ಲಿರುವ ಪಾಲಕರ ಅನಕ್ಷರತೆ, ಅಜ್ಞಾನ, ಬಡತನ ಇತ್ಯಾದಿ ಅಂಶಗಳು ಶಿಕ್ಷಣ ಪಡೆಯಲು ಅಡೆ ತಡೆಯುಂಟುಮಾಡಿವೆ.

ಪ್ರಸ್ತುತ ಸಂದರ್ಭದಲ್ಲಿ ಚೆನ್ನದಾಸರ ಸಮುದಾಯವು ಶಿಕ್ಷಣದಲ್ಲಿ ಯಾವ ರೀತಿ ತಮ್ಮ ಮಕ್ಕಳನ್ನು ತೊಡಗಿಸಿದ್ದಾರೆ ಎಂಬುವುದನ್ನು ಕ್ಷೇತ್ರಕಾರ್ಯದ ಸಮೀಕ್ಷೆಯಿಂದ ಹಾಗೂ ಇನ್ನಿತರ ಮಾಹಿತಿಗಳಿಂದ ದೊರೆತ ಅಂಕಿ ಸಂಖ್ಯೆಗಳ ಆಧಾರದ ಮೇಲೆ ಚರ್ಚಿಸಲು ಪ್ರಯತ್ನಿಸಲಾಗಿದೆ.

೫.೩.೧ ಪ್ರಾಥಮಿಕ ಶಿಕ್ಷಣ

ಸರಕಾರವು ೬ರಿಂದ ೧೪ ವರ್ಷದೊಳಗಿನ ಎಲ್ಲಾಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಉಚಿತ ಮತ್ತು ಕಡ್ಡಾಯ ಎಂದು ಘೋಷಣೆ ಮಾಡಿದ ಮೇಲೆ, ಈ ಹಂತದ ಶಿಕ್ಷಣವನ್ನು ಬಲಪಡಿಸುವ ಉದ್ದೇಶದಿಂದ ಹಲವಾರು

ಯೋಜನೆಗಳನ್ನು ಹಮ್ಮಿಕೊಂಡಿದ್ದರ ಫಲಶೃತಿಯಿಂದಾಗಿ, ಚೆನ್ನದಾಸರ ಸಮುದಾಯದಲ್ಲಿ ಕೆಲವೊಂದು ಕುಟುಂಬಗಳು ಪ್ರಾಥಮಿಕ ಶಿಕ್ಷಣ ಕೊಡಿಸಲು ಪ್ರಾರಂಭಿಸಿದ್ದಾರೆ. ಅಂತಹ ಮಾಹಿತಿಯು ಅವರು ನೆಲೆಸಿರುವ ಗ್ರಾಮಗಳಲ್ಲಿ ೨೦೦೯-೧೦ನೇ ಶೈಕ್ಷಣಿಕ ಸಾಲಿನಲ್ಲಿ ವಟಪರವಿಯಲ್ಲಿ ೩೮, ತುಮ್ಮರಗುದ್ದಿಯಲ್ಲಿ ೧೬, ನಿಂಗಲಬಂಡಿಯಲ್ಲಿ ೧೨, ಯಲಬುರ್ಗಾದಲ್ಲಿ ೧೦, ರ್‍ಯಾವಣಕಿಯಲ್ಲಿ ೩ ಮಕ್ಕಳು ಪ್ರಾಥಮಿಕ ಪಡೆಯುವಲ್ಲಿ ನಿರತರಾಗಿದ್ದು, ಪಾಲಕರ ಸಮೀಕ್ಷೆಯಿಂದ ತಿಳಿದುಬರುತ್ತದೆ.

೫.೩.೨ ಪ್ರೌಢಶಿಕ್ಷಣ

ಚೆನ್ನದಾಸರ ಸಮುದಾಯದಲ್ಲಿ ಪ್ರೌಢಶಿಕ್ಷಣ ಪಡೆಯುವ ಮಕ್ಕಳ ಸಂಖ್ಯೆಯನ್ನು ಪ್ರಾಥಮಿಕ ಶಿಕ್ಷಣಕ್ಕೆ ಹೋಲಿಸಿದರೆ ತೀರಾ ಕಡಿಮೆ ಇರುವದು ಕಂಡುಬರುತ್ತದೆ. ಅದಕ್ಕೆ ಕಾರಣ ಈ ಸಮುದಾಯ ನೆಲೆಸಿರುವ ಗ್ರಾಮಗಳಲ್ಲಿ ಪ್ರೌಢಶಾಲೆಗಳು ಇಲ್ಲದಿರುವುದು ಮತ್ತು ತಾವು ಕೈಗೊಳ್ಳುವ ವೃತ್ತಿಗಳಲ್ಲಿ ಮಕ್ಕಳನ್ನು ತೊಡಗಿಸಿಕೊಳ್ಳುವದರಿಂದ ಸಂಖ್ಯೆ ಕಡಿಮೆಯಾಗಿದೆ. ೨೦೦೯ ೧೦ನೇ ಶೈಕ್ಷಣಿಕ ಸಾಲಿನಲ್ಲಿ ಪ್ರೌಢಶಿಕ್ಷಣ ಪಡೆಯುದವರ ಸಂಖ್ಯೆಯು ವಟಪರವಿಯಲ್ಲಿ ೧೧, ತುಮ್ಮರಗುದ್ದಿಯಲ್ಲಿ ೪, ನಿಂಗಲಬಂಡಿಯಲ್ಲಿ ೩, ಯಲಬುರ್ಗಾದಲ್ಲಿ ೨, ರ್‍ಯಾವಣಕೆಯಲ್ಲಿ ಒಬ್ಬ ವಿದ್ಯಾರ್ಥಿ ಪ್ರೌಢಶಿಕ್ಷಣದಲ್ಲಿ ಶಿಕ್ಷಣ ಪಡೆಯುತ್ತಿರುವದು ಕಂಡುಬರುತ್ತದೆ. ಸರಕಾರ ಪ್ರೌಢಶಿಕ್ಷಣದ ಸುಧಾರಣೆಗಾಗಿ ಮಧ್ಯಾಹ್ನದ ಬಿಸಿಯೂಟ, ಸೈಕಲ್ ವಿತರಣೆ, ಶಿಷ್ಯವೇತನ, ಪಠ್ಯಪುಸ್ತಕ ಉಚಿತ ವಿತರಣ ಇತ್ಯಾದಿ ಸೌಲಭ್ಯಗಳನ್ನು ಒದಗಿಸಿದ್ದರೂ ಸಹ ಈ ಸಮುದಾಯದ ಗಮನಕ್ಕೆ ಬರದೆ ಇರುವುದು ದುರದೃಷ್ಟಕರ ಸಂಗತಿಯಾಗಿದೆ. ಈ ನಿಟ್ಟಿನಲ್ಲಿ ಸರಕಾರ ಸಂಘ-ಸಂಸ್ಥೆಗಳು ಜಾಗೃತಿ ಮೂಡಿಸುವ ಕಾರ್ಯಗಳಲ್ಲಿ ತೊಡಗಬೇಕಾಗಿದೆ (ಮೌಖಿಕ ಸಂದರ್ಶನ, ದುರಗಪ್ಪ: ೨೦೦೯).

೫.೩.೩ ಪದವಿಪೂರ್ವ ಶಿಕ್ಷಣ

ಈ ಹಂತದ ಶಿಕ್ಷಣವು ವಿದ್ಯಾರ್ಥಿಗಳ ಭವಿಷ್ಯವನ್ನು ನಿರ್ಮಿಸುವುದಾಗಿದೆ. ಅಂಥಹ ಶಿಕ್ಷಣವನ್ನು ಈ ಸಮುದಾಯದಲ್ಲಿ ತೀರಾ ನಿರ್ಲಕ್ಷಿಸಿದ್ದು ಕಂಡುಬರುತ್ತದೆ. ಅದಕ್ಕೆ ಕಾರಣ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಹಂತದಲ್ಲಿ ಗುಣಮಟ್ಟದ ಶಿಕ್ಷಣ ದೊರೆಯದೆ ಇರುವುದರಿಂದ ಈ ಮಟ್ಟದ ಶಿಕ್ಷಣ ಪಡೆಯಲು ಹಿಂದೇಟು ಹಾಕುತ್ತಾರೆ. ಜೊತೆಗೆ ಈ ಸಮುದಾಯಕ್ಕೆ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಕಾಡುವುದರ ಪರಿಣಾಮ ಪದವಿ ಪೂರ್ವ ಮಟ್ಟದ ಶಿಕ್ಷಣವನ್ನು ಹೆಚ್ಚಾಗಿ ಕೊಡಿಸದೇ ಇರುವುದಕ್ಕೆ ಕಾರಣವೆಂದು ಹೇಳಲಾಗದು. ೨೦೦೯-೧೦ನೇ ಸಾಲಿನ ಶೈಕ್ಷಣಿಕ ಅವಧಿಯಲ್ಲಿ ಓದುವ ವಿದ್ಯಾರ್ಥಿಗಳ ಸಂಖ್ಯೆ ಇಂತಿದೆ. ವಟಪರವಿಯಲ್ಲಿ ನಾಲ್ಕು ನಿಂಗಲಬಂಡಿಯಲ್ಲಿ ಇಬ್ಬರೂ ವಿದ್ಯಾರ್ಥಿಗಳನ್ನು ಹೊರತುಪಡಿಸಿದರೆ ಉಳಿದ ಗ್ರಾಮಗಳಲ್ಲಿ ಈ ಹಂತದ ಶಿಕ್ಷಣ ಪಡೆಯುವವರ ಸಂಖ್ಯೆ ಕಂಡುಬರುವುದಿಲ್ಲಾ.

೫.೩.೪ ವೃತ್ತಿಪರ ಹಾಗೂ ಉನ್ನತ ಶಿಕ್ಷಣ

ಚೆನ್ನದಾಸರ ಸಮುದಾಯದಲ್ಲಿ ವೃತ್ತಿಪರ ಕೋರ್ಸ್‌ಗಳಲ್ಲಿ ಅಧ್ಯಯನ ಕೈಗೊಂಡವರು ತುಂಬಾ ವಿರಳ. ಅದಕ್ಕೆ ಕಾರಣ ಈ ಸಮುದಾಯದಲ್ಲಿರುವ ಅಜ್ಞಾನ, ಅನಕ್ಷರತೆ, ಬಡತನ ಹಾಗೂ ಸರಕಾರ ಈ ಸಮುದಾಯವನ್ನು

ಸರಿಯಾಗಿ ಗುರ್ತಿಸದೇ ಇರುವದರಿಂದ ಈ ಹಂತದ ಶಿಕ್ಷಣ ಪಡೆಯುವಲ್ಲಿ ವಿಫಲರಾಗಿದ್ದಾರೆ. ಕ್ಷೇತ್ರ ಕಾರ್ಯದ ಸಮೀಕ್ಷೆಯ ಪ್ರಕಾರ ತುಮ್ಮರಗುದ್ದಿ ಗ್ರಾಮದಲ್ಲಿ ಡಿ.ಇಡಿ ಅಧ್ಯಯನ ಮಾಡುವರು ಒಬ್ಬರು. ನಿಂಗಲಬಂಡಿ ಗ್ರಾಮದಲ್ಲಿ ಡಿಪ್ಲೋಮಾ ಮತ್ತು ಬಿ.ಇಡಿಯಲ್ಲಿ ತಲಾ ಒಬ್ಬರು ಅಧ್ಯಯನ ಮಾಡುತ್ತಿದ್ದು, ವಟಪರವಿ ಗ್ರಾಮದಲ್ಲಿ ಹಿಂದಿ ಬಿ.ಇಡಿಯಲ್ಲಿ ಒಬ್ಬರು ಹಾಗೂ ಐ.ಟಿ.ಐನಲ್ಲಿ ಇಬ್ಬರೂ ವಿದ್ಯಾರ್ಥಿಗಳನ್ನು ಹೊರತುಪಡಿಸಿದರೇ ಇನ್ನುಳಿದ ಗ್ರಾಮಗಳಲ್ಲಿ ವೃತ್ತಿಪರ ಕೋರ್ಸ್‌ಗಳಲ್ಲಿ ಓದುವರು ಕಂಡುಬರುವುದಿಲ್ಲ.

ಇನ್ನು ಉನ್ನತ ಶಿಕ್ಷಣ ಅಧ್ಯಯನ ಮಾಡುವರು ಯಲಬುರ್ಗಾ ಪ್ರದೇಶದ ಚೆನ್ನದಾಸರ ಸಮುದಾಯದಲ್ಲಿ ಕಂಡುಬರುವುದಿಲ್ಲ. ಇದಕ್ಕೆ ಸಮುದಾಯದ ಸಾಕ್ಷರತೆಯ ಮಟ್ಟವೂ ಒಂದು ಕಾರಣವಾಗಿದೆ. ಈ ಸಮುದಾಯದ ಸಾಕ್ಷರತೆಯ ಪ್ರಮಾಣವು ೨೦೦೧ ಜನಗಣತಿಯಂತೆ ಪುರುಷರಲ್ಲಿ ಶೇ. ೩೩ ಮಹಿಳೆಯರಲ್ಲಿ ಶೇ. ೧೯ ಇರುವುದು ತಿಳಿದು ಬರುತ್ತದೆ.

ಒಟ್ಟಾರೆ ಈ ಸಮುದಾಯದ ಪ್ರಸ್ತುತ ಸಂದರ್ಭದ ಶಿಕ್ಷಣದ ಸ್ಥಿತಿಗತಿಯನ್ನು ಅವಲೋಕನ ಮಾಡಿದಾಗ ಇವನ ಶಿಕ್ಷಣದ ಮಟ್ಟ ಇನ್ನಿತರ ಸಮುದಾಯಗಳಿಗಿಂತ ತೀರಾ ಕೆಳಮಟ್ಟದಲ್ಲಿದೆ. ಇಂದಿನ ಸರಕಾರ ಶೈಕ್ಷಣಿಕ ಕ್ಷೇತ್ರವನ್ನು ಬಲಪಡಿಸುವ ಸಲುವಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದ್ದರು ಸಹ ಅಂತಹ ಯೋಜನೆಗಳು ಈ ಸಮುದಾಯಕ್ಕೆ ಮುಟ್ಟಲು ವಿಫಲವಾಗಿವೆ. ಇದನ್ನು ಗಮನಿಸಿ ಸರಕಾರ ಅಂಥಹ ಯೋಜನೆಗಳನ್ನು ಸಮರ್ಪಕವಾಗಿ ಒದಗಿಸಿಕೊಡುವುದರ ಜೊತೆಗೆ ಈಗಾಗಲೇ ಓದಿ ನಿರುದ್ಯೋಗಿಗಳಾಗಿ ಅಲೆದಾಡುತ್ತಿರುವ ನಿರುದ್ಯೋಗಿ ಯುವಕರಿಗೆ ಉದ್ಯೋಗ ಒದಗಿಸಿ ಕೊಟ್ಟಾಗ ಮಾತ್ರ, ಈ ಸಮುದಾಯದ ಶಿಕ್ಷಣದ ಪ್ರಗತಿ ಸಾಧ್ಯ ಎಂದು ಹೇಳಬಹುದು (ಮೌಖಿಕ ಸಂದರ್ಶನ, ಶರಣಪ್ಪ: ೨೦೦೯).

೫.೪. ಸರಕಾರಿ ಸೌಲಭ್ಯಗಳು

ಭಾರತದಲ್ಲಿ ಬಹಳಷ್ಟು ಬುಡಕಟ್ಟು ಅಲೆಮಾರಿ ಸಮುದಾಯಗಳು ಒಂದೇ ಕಡೆ ನೆಲಸದೆ ಜೀವನೋಪಾಯಕ್ಕಾಗಿ ಊರಿಂದ ಊರಿಗೆ ಅಲೆಯುತ್ತಾ ಆಯಾ ಊರುಗಳಲ್ಲಿರುವ ಹಾಳು ಮಂಟಪ, ದೇವಸ್ಥಾನ, ಗುಡಿ ಗುಂಡಾರಗಳಲ್ಲಿ, ಗುಡಾರ ಟೆಂಟುಗಳಲ್ಲಿ ವಾಸಿಸುತ್ತಿರುವುದನ್ನು ಮನಗಂಡ ಸರಕಾರ ಸ್ವಾತಂತ್ರ್ಯೋತ್ತರ ಅಂಥಹ ಸಮುದಾಯಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಲ್ಲಿ ಸೇರಿಸುವುದರೊಂದಿಗೆ ಆಯಾ ವರ್ಗಗಳ ಜನರ ಅಭಿವೃದ್ಧಿಯ ಬಗ್ಗೆ ವಿಶೇಷ ಕಾಳಜಿಯನ್ನು ವಹಿಸಿತು. ಆ ವರ್ಗದ ಜನರಿಗೆ ಶಿಕ್ಷಣ, ಉದ್ಯೋಗ, ವಸತಿ, ಆರೋಗ್ಯ ಮುಂತಾದ ಅಂಶಗಳ ಬಗ್ಗೆ ಆ ಮೂಲಕ ಅವರ ಅಭಿವೃದ್ಧಿಯನ್ನು ಹೊಂದುವಂತೆ ಮಾಡಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ, ಭೂಹೀನರಿಗೆ ಭೂ ಹಂಚಿಗೆ ಮಾತ್ರವಲ್ಲದೆ ಅವರ ಶಿಕ್ಷಣ ಮತ್ತು ಆರ್ಥಿಕ ಅಭಿವೃದ್ಧಿ ಮೂಡಲು ಈ ವರ್ಗದ ಜನರ ಕಲ್ಯಾಣಗಳನ್ನು ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ಜಾತಿ ಮತ್ತು ವರ್ಗದ ಅಭಿವೃದ್ಧಿ ನಿಗಮ ಮುಂತಾದ ಇಲಾಖೆಗಳನ್ನು ಸ್ಥಾಪಿಸಿ ಕ್ರಮಕೈಗೊಳ್ಳುವಂತೆ ಅವುಗಳಿಗೆ ನಿರ್ದೇಶನ ಮಾಡಲಾಯಿತು. ಈ ವರ್ಗದ ಜನರನ್ನು ಶೈಕ್ಷಣಿಕ ಮತ್ತು ಆರ್ಥಿಕವಾಗಿ ಅಭಿವೃದ್ಧಿಗೊಳಿಸುವಲ್ಲಿ ಇವು ಪ್ರಮುಖ ಪಾತ್ರವಹಿಸಿವೆ. ಇವು ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳನ್ನು

ಜಾರಿಗೆ ತರುವ ಹೊಣೆಗಾರಿಕೆ ಹೊತ್ತಿರುತ್ತವೆ. ಇದರೊಂದಿಗೆ ಕೇಂದ್ರ ಸರ್ಕಾರವು ಪರಿಶಿಷ್ಟ ಜಾತಿಯ ಜನರ ಆರ್ಥಿಕ ಅಭಿವೃದ್ಧಿಗಾಗಿ ವಿಶೇಷ ಯೋಜನೆಗಳನ್ನು ಮನಗಂಡು ೧೯೮೦-೮೧ನೇ ಸಾಲಿನಲ್ಲಿ ಭಾರತ ಸರ್ಕಾರವು ಪರಿಶಿಷ್ಟ ಜಾತಿಯ ಬಡವರ ಆರ್ಥಿಕಾಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆಯನ್ನು ಭಾರತದಾದ್ಯಂತ ಪ್ರಾರಂಭ ಮಾಡಲಾಯಿತು.

ವಿಶೇಷ ಘಟಕ ಯೋಜನೆಯಡಿಯಲ್ಲಿ ಹಲವಾರು ಅಭಿವೃದ್ಧಿ ಇಲಾಖೆಗಳು ತಮ್ಮ ಇಲಾಖೆಯ ಒಟ್ಟು ಆಯವ್ಯಯದಲ್ಲಿ ಶೇ ೧೫ರಷ್ಟು ಹಣವನ್ನು ತಮ್ಮ ಇಲಾಖೆಯಿಂದ ರೂಪಿಸಿದ ಆರ್ಥಿಕ ಅಭಿವೃದ್ಧಿ ಯೋಜನೆಗಳಿಗೆ ವೆಚ್ಚ ಮಾಡುತ್ತಾ ಬರಲಾಯಿತು. ಹೀಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಶಿಷ್ಟ ಜಾತಿ ಮತ್ತು ವರ್ಗದ ಜನರನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ವಿವಿಧ ಯೋಜನೆಗಳು ಈ ವರ್ಗದಲ್ಲಿ ಒಂದಾದ ಚೆನ್ನದಾಸರ ಸಮುದಾಯಕ್ಕೆ ಎಷ್ಟರ ಮಟ್ಟಿಗೆ ತಲುಪಿವೆ. ಹಾಗೂ ಪ್ರಸ್ತುತ ಸಂದರ್ಭದ ಸ್ಥಿತಿಯಲ್ಲಿ ಸರ್ಕಾರಿ ಸೌಲಭ್ಯಗಳು ಎಷ್ಟರ ಮಟ್ಟಿಗೆ ಲಭ್ಯವಾಗಿವೆ. ಇನ್ನೂ ಯಾವ ಸೌಲಭ್ಯಗಳು ಈ ಸಮುದಾಯಕ್ಕೆ ದೊರಯಬೇಕಾಗಿದೆ ಎಂಬುವುದನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

೫.೪.೧ ವಸತಿ ಯೋಜನೆ

ಭಾರತದಲ್ಲಿ ವಾಸಿಸುವ ಪ್ರತಿಯೊಬ್ಬ ಪ್ರಜೆಗೂ ಮೂಲಭೂತ ಅವಶ್ಯಕತೆಗಳು ಸಿಗಬೇಕು ಎಂಬುವುದು ರಾಷ್ಟ್ರ ಕಟ್ಟಿದ ನಾಯಕನ ಚಿಂತನೆಯಾಗಿತ್ತು ಅಂತಹ ಮೂಲಭೂತ ಅವಶ್ಯಕತೆಗಳಲ್ಲಿ ವಸತಿ ಯೋಜನೆಯು ಒಂದಾಗಿದೆ. ಈ ಹಿನ್ನೆಲೆಯಿಂದ ಭಾರತ ಸರ್ಕಾರವು ಸ್ವಾತಂತ್ರ್ಯ ನಂತರ ಆರ್ಥಿಕವಾಗಿ ಹಿಂದುಳಿದಿರುವ ಪರಿಶಿಷ್ಟ ಜಾತಿ ಮತ್ತು ವರ್ಗದ ಜನರ ವಸತಿಗೆ ಸಂಬಂಧಿಸಿದಂತೆ ಹಲವು ಯೋಜನೆಗಳನ್ನು ಜಾರಿಗೊಳಿಸಿತು. ಅಂತವುಗಳಲ್ಲಿ ಪ್ರಮುಖವಾದ ಯೋಜನೆಗಳೆಂದರೆ ಜನತಾ ಗೃಹ ನಿರ್ಮಾಣ ಯೋಜನೆ, ಇಂದಿರಾ ಆವಾಸ ಯೋಜನೆ, ಆಶ್ರಯ ಹಾಗೂ ಅಂಬೇಡ್ಕರ ವಸತಿ ಯೋಜನೆಗಳು, ಈ ಯೋಜನೆಯಡಿಯಲ್ಲಿ ಯಲಬುರ್ಗಾ ಪ್ರದೇಶದ ಚೆನ್ನದಾಸರ ಸಮುದಾಯ ಹೇಗೆ ಉಪಯೋಗ ಪಡೆದುಕೊಂಡಿರುವ ವಿವರಗಳನ್ನು ತಿಳಿಸಲು ಪ್ರಯತ್ನಿಸಲಾಗಿದೆ.

೫.೪.೨. ಆಶ್ರಯ ಯೋಜನೆ

ಆಶ್ರಯ ಯೋಜನೆಯನ್ನು ಸರಕಾರ ೧೯೯೦-೯೧ನೇ ಸಾಲಿನಲ್ಲಿ ಜಾರಿಗೊಳಿಸಿತು. ಈ ಯೋಜನೆಯು ಬಡತನದಲ್ಲಿ ಬದುಕುತ್ತಿರುವ ಜನರಿಗೆ ನಿವೇಶನ ಹಾಗೂ ಮನೆಗಳನ್ನು ನಿರ್ಮಿಸಿಕೊಡುವುದಾಗಿದೆ. ಇದರಡಿಯಲ್ಲಿ ವಟಪರವಿ ಗ್ರಾಮದಲ್ಲಿ ಎರಡು ಕುಟುಂಬಗಳಿಗೆ ವಸತಿಯನ್ನು ಒದಗಿಸಿಕೊಟ್ಟಿದ್ದನ್ನು ಬಿಟ್ಟರೇ ಇನ್ನಿತರ ಗ್ರಾಮಗಳಲ್ಲಿ ಈ ಯೋಜನೆಯ ಉಪಯೋಗವಾಗಿಲ್ಲ.

೫.೪.೩ ಡಾ. ಅಂಬೇಡ್ಕರ ವಸತಿ ಯೋಜನೆ

ಸರ್ಕಾರವು ಅಂಬೇಡ್ಕರರ ವಸತಿ ಯೋಜನೆಯನ್ನು ೧೯೯೭-೯೮ನೇ ಸಾಲಿನಲ್ಲಿ ಜಾರಿಗೆ ತರಲಾಯಿತು. ಈ ಯೋಜನೆಯಡಿಯಲ್ಲಿ ತುಮ್ಮರಗುದ್ದಿ ಗ್ರಾಮಗಳಲ್ಲಿ ೮ ಮನೆಗಳು, ವಟಪರವಿ ಗ್ರಾಮದಲ್ಲಿ ೩ ಮನೆಗಳು,

ನಿಂಗಲಬಂಡಿ ಗ್ರಾಮದಲ್ಲಿ ೨ ಮನೆಗಳನ್ನು ಈ ಸಮುದಾಯದ ಕುಟುಂಬದ ಸದಸ್ಯರಿಗೆ ಒದಗಿಸಿಕೊಡಲಾಯಿತು. ಆದರೆ ಇನ್ನುಳಿದ ಗ್ರಾಮಗಳಾದ ಯಲಬುರ್ಗಾ, ರ್‍ಯಾವಣಕಿ ಕುಕನೂರುಗಳಲ್ಲಿ ಈ ಯೋಜನೆಯ ಉಪಯೋಗವಾಗಲಿಲ್ಲ (ಪ್ರಭಾಕರ, ೨೦೦೬: ೫೩೦).

೫.೪.೪ ಇಂದಿರಾ ಆವಾಸ ಯೋಜನೆ

ಇಂದಿರಾ ಆವಾಸ ಯೋಜನೆಯನ್ನು ಕೇಂದ್ರ ಸರಕಾರವು ೧೯೮೫-೮೬ರಲ್ಲಿ ಜಾರಿಗೆ ತರಲಾಯಿತು. ಈ ಯೋಜನೆಯ ಉದ್ದೇಶ ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಗಿಂತ ಕೆಳಗೆ ಜೀವಿಸುತ್ತಿರುವ ಪರಿಶಿಷ್ಟ ಜಾತಿ ಹಾಗೂ ವರ್ಗ ಮತ್ತು ವಿಮುಕ್ತಗೊಂಡ ಜೀತದಾಳುಗಳಿಗೆ ಯಾವುದೇ ವೆಚ್ಚವಿಲ್ಲದೇ ಮನೆಗಳನ್ನು ನಿರ್ಮಿಸಿಕೊಡುವುದಾಗಿತ್ತು. ಇಂದಿಗೂ ಸಹ ಈ ಯೋಜನೆಯು ಅನುಷ್ಠಾನದಲ್ಲಿದ್ದು ಅಂತಹ ಕುಟುಂಬಗಳನ್ನು ಗುರುತಿಸಿ ಮನೆಗಳನ್ನು ನಿರ್ಮಿಸಿಕೊಡುವ ಕಾರ್ಯದಲ್ಲಿ ತೊಡಗಿದೆ. ಈ ಯೋಜನೆಯಡಿಯಲ್ಲಿ ಈ ಸಮುದಾಯವು ಪಡೆದ ಫಲಾನುಭವಿ ಕುಟುಂಬಗಳ ವಿವರ ಇಂತಿದೆ. ವಟಪರವಿಯಲ್ಲಿ ೧೨, ಯಲಬುರ್ಗಾದಲ್ಲಿ ೧೪, ನಿಂಗಲಬಂಡಿಯಲ್ಲಿ ೪ ಕುಟುಂಬಗಳು ಇದರ ಲಾಭ ಪಡೆದುಕೊಂಡಿವೆ. ಆದರೆ ಅಂಥಹ ಮನೆಗಳಿಗೆ ವಿದ್ಯುತ್ ಸಂಪರ್ಕ, ಶೌಚಾಲಯ ವ್ಯವಸ್ಥೆ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಸರ್ಕಾರ ಒದಗಿಸಿಕೊಟ್ಟರು. ಮೇಲಿನ ವಸತಿ ಯೋಜನೆಯಲ್ಲಿ ಕೆಲವು ಕುಟುಂಬಗಳು ವಸತಿ ಯೋಜನೆಯ ಲಾಭ ಪಡೆದುಕೊಂಡಿದ್ದರು ಸಹ ಇನ್ನೂ ಕೆಲವೊಂದು ಕುಟುಂಬಗಳು ಈಗಾಗಲೇ ನಿರ್ಮಾಣವಾಗಿರುವ ಇನ್ನಿತರ ಕುಟುಂಬಗಳ ಮನೆಯ ಪಕ್ಕದ ಖಾಲಿ ನಿವೇಶನದಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ವಾಸಿಸುತ್ತಿರುವುದನ್ನು ಕಾಣಬಹುದು. ಸರ್ಕಾರ ವಸತಿಯೋಜನೆಗಳನ್ನು ಮುಂದಿನ ದಿನಗಳಲ್ಲಿ ಕಾರ್ಯರೂಪಕ್ಕೆ ತರುವಾಗ ಈ ಸಮುದಾಯದಲ್ಲಿರುವ ವಸತಿ ರಹಿತ ಕುಟುಂಬಗಳನ್ನು ಪ್ರಾಮಾಣಿಕವಾಗಿ ಸಮೀಕ್ಷೆ ಕೈಗೊಂಡು ಮನೆಗಳನ್ನು ಒದಗಿಸಿಕೊಡುವದು ಸರಕಾರದ ಹಾಗೂ ಆಯಾ ಪ್ರದೇಶದ ಜನಪ್ರತಿನಿಧಿಗಳ ಜವಾಬ್ದಾರಿಯಾಗಿದೆ.

೫.೪.೫ ಭೂ ಒಡೆತನ ಯೋಜನೆ

ಭೂ ಒಡೆತನ ಯೋಜನೆಯು ಪರಿಶಿಷ್ಟ ಜಾತಿ ಮತ್ತು ವರ್ಗಕ್ಕೆ ಸೇರಿದವರಿಗೆ ನಿಗಮದ ವತಿಯಿಂದ ಭೂಮಿಯನ್ನು ಖರೀದಿಸಿ ಅರ್ಹಫಲಾನುಭವಿಗಳಿಗೆ ಹಂಚುವ ಯೋಜನೆಯಾಗಿದೆ. ಈ ಯೋಜನೆಯಡಿಯಲ್ಲಿ ಈ ಸಮುದಾಯಕ್ಕೆ ವಟಪರವಿಯಲ್ಲಿ ಮೂರು ಕುಟುಂಬಗಳ ಮತ್ತು ತಮ್ಮರಗುದ್ದಿಯಲ್ಲಿ ಎರಡು ಕುಟುಂಬಗಳು ಈ ಯೋಜನೆಯಲ್ಲಿ ಭೂ ಒಡೆತನವನ್ನು ಹೊಂದಿದ್ದು ಬಿಟ್ಟರೆ ಇನ್ನಿತರ ಗ್ರಾಮಗಳಲ್ಲಿ ವಾಸಿಸುವ ಈ ಸಮುದಾಯದ ಕುಟುಂಬಗಳು ಭೂ ಒಡೆತನ ಯೋಜನೆಯ ಸೌಲಭ್ಯದಿಂದ ವಂಚಿತರಾಗಿದ್ದು ಕಂಡುಬರುತ್ತದೆ.

೫.೪.೬ ವ್ಯಯಕ್ತಿಕ ನೀರಾವರಿ ಕೊಳವೆ ಭಾವಿ ಯೋಜನೆ

ಈ ಯೋಜನೆಯನ್ನು ೧೯೮೫ರಲ್ಲಿ ಕರ್ನಾಟಕ ಸರ್ಕಾರ ಕೇವಲ ಕೋಲಾರ, ವಿಜಾಪುರ, ಚಿತ್ರದುರ್ಗ ಮತ್ತು ಮೈಸೂರು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸುತ್ತಿದ್ದು, ನಂತರ ೧೯೮೬-೮೭ ಮತ್ತು ೧೯೯೦-೯೧ರಲ್ಲಿ ಇತರ ೮

ಜಿಲ್ಲೆಗಳಿಗೆ ವಿಸ್ತರಿಸಿತು. ೧೯೯೧-೯೨ರಲ್ಲಿ ಈ ಯೋಜನೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ವಿಸ್ತರಿಸಲಾಯಿತು. ಈ ಯೋಜನೆಯಲ್ಲಿ ನಿಗಮವು ಶೇ. ೭೫ ಭಾಗ, ಗರಿಷ್ಠ ೩೦ ಸಾವಿರ ರೂಪಾಯಿಗಳ ಸಹಾಯಧನವನ್ನು ನೀಡುವುದು. ಉಳಿದ ಮೊತ್ತವನ್ನು ಬ್ಯಾಂಕುಗಳ ಸಾಲವಾಗಿರುವುದು ಆದರೆ ದಿನಾಂಕ ೧೨.೨.೧೯೯೯ರಂದು ಕರ್ನಾಟಕ ಸರ್ಕಾರ ಈ ಯೋಜನೆಗೆ ಶೇ. ೧೦೦ ರಷ್ಟು ಸಹಾಯಧನವನ್ನು ಒದಗಿಸಲು ಆದೇಶ ನೀಡಿತು (ಪ್ರಭಾಕರ, ೨೦೦೬: ೫೪೧). ಈ ಯೋಜನೆಯಡಿಯಲ್ಲಿ ಚೆನ್ನದಾಸರ ಸಮುದಾಯದಲ್ಲಿ ಸೌಲಭ್ಯವನ್ನು ಪಡೆದ ಫಲಾನುಭವಿ ಕುಟುಂಬಗಳ ವಿವರ ಇಂತಿದೆ. ವಟಪರವಿಯಲ್ಲಿ ೮, ತುಮ್ಮರಗುದ್ದಿಯಲ್ಲಿ ೨, ನಿಂಗಲಬಂಡಿಯಲ್ಲಿ ೫ ಕುಟುಂಬದವರು ಈ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಆದರೆ ಈ ಮೂರು ಗ್ರಾಮಗಳನ್ನು ಹೊರತುಪಡಿಸಿ ಉಳಿದ ಗ್ರಾಮಗಳಲ್ಲಿ ನೆಲೆಸಿರುವ ಕುಟುಂಬಗಳು ಈ ಯೋಜನೆಯ ಸೌಲಭ್ಯದಿಂದ ವಂಚಿತರಾಗಿದ್ದಾರೆ.

೫.೪.೭ ಗಂಗಾ ಕಲ್ಯಾಣ ಯೋಜನೆ

ರಾಜ್ಯ ಸರ್ಕಾರವು ೧೯೮೪ ೮೫ರಲ್ಲಿ ಶ್ರೀ ಮುರಾರ್ಜಿ ದೇಸಾಯಿರವರ ಶತಮಾನೋತ್ಸವದ ಅಂಗವಾಗಿ ಪರಿಶಿಷ್ಟ ಜಾತಿ ಹಾಗೂ ವರ್ಗಕ್ಕೆ ಸೇರಿದ ಸಣ್ಣ ಮತ್ತು ಅತಿ ಸಣ್ಣ ರೈತರ ಸ್ಥಿತಿ-ಗತಿಗಳನ್ನು ಸುಧಾರಿಸಲು ಒಂದು ಸಣ್ಣ ನೀರಾವರಿ ಯೋಜನೆಯನ್ನು ಜಾರಿಗೆ ತರಲಾಯಿತು. ಅದೇ 'ಗಂಗಾ ಕಲ್ಯಾಣ ಯೋಜನೆ' ಈ ಯೋಜನೆಯಲ್ಲಿ ಒಂದೇ ಕಡೆ ಜಮೀನುಗಳನ್ನು ಹೊಂದಿರುವ ಸಣ್ಣ ರೈತ ಭೂಮಿಗಳನ್ನು ಒಂದು ಘಟಕವನ್ನಾಗಿ ಪರಿಗಣಿಸಿ ಅಲ್ಲಿ ಕೊಳವೆ ಭಾವಿಗಳನ್ನು ಸಹಾಯಧನದ ಮೂಲಕ ನಿರ್ಮಿಸಿ ಕೊಡಲು ನಿರ್ಧರಿಸಲಾಯಿತು.

ಈ ಯೋಜನೆಯಡಿ ಫಲಾನುಭವಿ ಹೊಂದಿದ ಈ ಸಮುದಾಯದ ಕುಟುಂಬಗಳ ಸಂಖ್ಯೆ ಇಂತಿದೆ. ವಟಪರವಿಯಲ್ಲಿ ೪, ತುಮ್ಮರಗುದ್ದಿಯಲ್ಲಿ ಒಂದು ಹಾಗೂ ನಿಂಗಲಬಂಡಿಯಲ್ಲಿ ಎರಡು ಕುಟುಂಬಗಳು ಈ ಯೋಜನೆಯ ಸೌಲಭ್ಯವನ್ನು ಪಡೆದಿದ್ದಾರೆ. ಆದರೆ ಇನ್ನಿತರ ಗ್ರಾಮಗಳಲ್ಲಿರುವ ಕುಟುಂಬಗಳು ಈ ಯೋಜನೆಯಿಂದ ವಂಚಿತರಾಗಿದ್ದಾರೆ.

ಈ ಮೇಲಿನ ಸೌಲಭ್ಯಗಳನ್ನು ಹೊರತುಪಡಿಸಿ ಪ್ರಸ್ತುತ ಸಂದರ್ಭದಲ್ಲಿ ಈ ಸಮುದಾಯವು ಇನ್ನು ಹಲವಾರು ಸೌಲಭ್ಯಗಳಿಂದ ವಂಚಿತವಾಗಿದ್ದನ್ನು ಕಾಣಬಹುದು. ಅಂತ ಸೌಲಭ್ಯಗಳೆಂದರೆ ರೈತರಿಗೆ ಸರಿಯಾದ ಸಮಯಕ್ಕೆ ಸಮರ್ಪಕವಾದ ಕೃಷಿ ಸಾಲ ಸಿಗದೇ ಇರುವುದು ಹಾಗೂ ಇವರು ನೆಲೆಸಿರುವ ಗ್ರಾಮಗಳಲ್ಲಿ ಎಲ್ಲರೂ ಸೇರಿ ಒಂದು ಕಡೆ ಸಮುದಾಯದ ಸಂಘಟನೆಯನ್ನು ಕೈಗೊಳ್ಳಲು ಸಮುದಾಯ ಭವನದ ಕಟ್ಟಡಗಳು ಇಲ್ಲದಿರುವುದು, ಚೆನ್ನದಾಸರು ವಾಸಿಸುವ ಮನೆಗಳಿಗೆ ಚರಂಡಿ ವ್ಯವಸ್ಥೆ, ಬೀದಿ ದೀಪ, ಶುದ್ಧವಾದ ಕುಡಿಯುವ ನೀರಿನ ವ್ಯವಸ್ಥೆ, ಹಾಗೂ ಪಡಿತರ ಕಾರ್ಡುಗಳು ಲಭ್ಯವಾಗದಿರುವುದು, ವೃದ್ಧಾಪ್ಯ ವೇತನ, ವಿಧವಾ ಮಾಶಾಸನ, ಕಲಾವಿದರಿಗೆ ಮಾಶಾಸನ, ಅಲ್ಲದೆ ಇತ್ತೀಚೆಗೆ ಕೈಗೊಳ್ಳುವ ವ್ಯಾಪಾರಕ್ಕೆ ಬ್ಯಾಂಕ್‌ಗಳಿಂದ ಸಬ್ಸಿಡಿ ರೂಪದಲ್ಲಿ ಸಾಲ ಸಿಗದೇ ಇರುವುದು ಹೀಗೆ ಹತ್ತು ಹಲವಾರು ಸರ್ಕಾರಿ ಸೌಲಭ್ಯಗಳಿಂದ ಈ ಸಮುದಾಯ ಅವಕಾಶವಂಚಿತವಾಗಿದ್ದನ್ನು ನೋಡಬಹುದು.

ಈ ನಿಟ್ಟಿನಲ್ಲಿ ಸರಕಾರವು ಮೇಲಿನ ಸೌಲಭ್ಯಗಳನ್ನು ಒದಗಿಸಿಕೊಟ್ಟಾಗ ಮಾತ್ರ ಈ ಸಮುದಾಯವು ಇನ್ನಿತರ ಸಮುದಾಯಗಳಂತೆ ಪ್ರಗತಿ ಹೊಂದಲು ಸಾಧ್ಯವಿದೆ. ಚೆನ್ನದಾಸರ ಸಮುದಾಯವು ಪ್ರಸ್ತುತ ಸಂದರ್ಭದಲ್ಲಿ

ರಾಜಕೀಯವಾಗಿ, ಶೈಕ್ಷಣಿಕವಾಗಿ, ಮೀಸಲಾತಿಯಿಂದಾಗಿ ಹಾಗೂ ಸರಕಾರಿ ಸೌಲಭ್ಯಗಳು ಸಮರ್ಪಕವಾಗಿ ಸಿಗದೇ ಇನ್ನಿತರ ಸಮುದಾಯಗಳಿಗಿಂತ ಪೂರ್ಣ ಹಿನ್ನಡೆ ಇರುವುದನ್ನು ಈ ಮೇಲಿನ ಅಂಶಗಳ ಅಧ್ಯಯನ ಸ್ಥಿತಿಗತಿಯಿಂದ ತಿಳಿದು ಬರುತ್ತದೆ. ಆ ದಿಸೆಯಿಂದ ಇಂದಿನ ಸರ್ಕಾರಗಳು ಪರಿಶಿಷ್ಟ ಜಾತಿಯಲ್ಲಿಯೇ ತುಳಿತಕ್ಕೆ ಒಳಗಾದ ಇಂಥಹ ಸಮುದಾಯಗಳನ್ನು ವಿಶೇಷವಾಗಿ ಗುರುತಿಸಿ ಸರಕಾರದಿಂದ ದೊರೆಯುವ ಸೌಲಭ್ಯಗಳನ್ನು ಪ್ರಾಮಾಣಿಕವಾಗಿ ಒದಗಿಸಿಕೊಟ್ಟಾಗ ಮಾತ್ರ ಈ ಸಮುದಾಯವು ಮುಂದಿನ ದಿನಗಳಲ್ಲಿ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯವಾಗುತ್ತದೆ.

ಟಿಪ್ಪಣಿಗಳು

೧. ದುರಗಪ್ಪ ಚೆನ್ನದಾಸರ:

ದುರಗಪ್ಪ ಚೆನ್ನದಾಸರ ತುಮ್ಮರಗುದ್ದಿ ಗ್ರಾಮದಲ್ಲಿರುವ ಚೆನ್ನದಾಸರ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ಇವರು ಇತರ ಸಮುದಾಯಗಳ ಒಡನಾಟದಿಂದಾಗಿ ಮತ್ತು ಅಲ್ಪ ಸ್ವಲ್ಪ ಸುಶಿಕ್ಷಿತರಾಗಿದ್ದರಿಂದ ಪರಿಶಿಷ್ಟ ಜಾತಿಯ ಮೀಸಲಾತಿಯಿಂದಾಗಿ ೧೯೯೪ರಲ್ಲಿ ಬಂಡಿ ಗ್ರಾಮ ಪಂಚಾಯತಿಗೆ ತುಮ್ಮರಗುದ್ದಿ ಗ್ರಾಮದಿಂದ ಪಂಚಾಯತಿ ಪ್ರತಿನಿಧಿಯಾಗಿ ಆಯ್ಕೆಗೊಂಡು ೧೯೯೯ರ ವರಿಗೆ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ. ಪುನ ಮತ್ತೊಂದು ಅವಧಿಗೆ ಗ್ರಾಮ ಪಂಚಾಯತಿ ಸದಸ್ಯರಾಗಿ ಆಯ್ಕೆಯಾಗಿ ಸೇವೆ ಸಲ್ಲಿಸಿ ತಮ್ಮ ಸದಸ್ಯತ್ವದ ಅವಧಿಯಲ್ಲಿ ಗ್ರಾಮ ಪಂಚಾಯತಿಯಲ್ಲಿರುವ ಸೌಲಭ್ಯಗಳನ್ನು ಸಮುದಾಯಕ್ಕೆ ತಲುಪಿಸಲು ಪ್ರಯತ್ನಿಸಿದ್ದರು ಸಹ ಪರಿಪೂರ್ಣವಾಗಿ ಈ ಗ್ರಾಮದಲ್ಲಿರುವ ಸಮುದಾಯಕ್ಕೆ ಸರಿಯಾದ ಸೌಕರ್ಯಗಳು ಅಥವಾ ಸವಲತ್ತುಗಳು ಪಂಚಾಯತಿ ಮಟ್ಟದಿಂದಾಗಲಿ ಇಲ್ಲವೇ ಸರಕಾರದಿಂದಾಗಲಿ ದೊರತಿದ್ದು ಕಂಡುಬರುವುದಿಲ್ಲ (ಮೌಖಿಕ ಸಂದರ್ಶನ, ದುರಗಪ್ಪ: ೨೦೦೯).

೨. ಸೋಮಪ್ಪ ನರಸಪ್ಪ ಚೆನ್ನದಾಸರ:

ಸೋಮಪ್ಪ ನರಸಪ್ಪ ಚೆನ್ನದಾಸರವರು ವಟಪರವಿ ಗ್ರಾಮದ ಚೆನ್ನದಾಸರ ನಿವಾಸಿಯಾಗಿದ್ದು ಈ ಸಮುದಾಯದಲ್ಲಿ ಪ್ರಥಮ ಬಾರಿಗೆ ಸ್ಥಳೀಯ ಮಟ್ಟದ ರಾಜಕೀಯದಲ್ಲಿ ಪ್ರವೇಶ ಪಡೆದ ವ್ಯಕ್ತಿಯಾಗಿದ್ದಾರೆ. ಇವರು ಕುದ್ರೆಮೂತಿ ಗ್ರಾಮ ಪಂಚಾಯಿತಿಗೆ ವಟಪರವಿ ಗ್ರಾಮದಿಂದ ಪಂಚಾಯಿತಿ ಸದಸ್ಯರಾಗಿ ಆಯ್ಕೆಯಾಗಿ ೧೯೯೪ಳರಿಂದ ೧೯೯೯ ರವರೆಗೆ ಸದಸ್ಯರಾಗಿ ಹಾಗೂ ಅಧ್ಯಕ್ಷರಾಗಿ ಸೇವೆಸಲ್ಲಿಸಿದ್ದಾರೆ. ತಮ್ಮ ರಾಜಕೀಯ ಅವಧಿಯಲ್ಲಿ ಸಮುದಾಯಕ್ಕೆ ಕೆಲವೊಂದು ಸೌಕರ್ಯಗಳನ್ನು ಒದಗಿಸಿದ್ದು ಕಂಡುಬಂದರು ಸಹ ಪರಿಪೂರ್ಣವಾಗಿ ಈ ಸಮುದಾಯ ಪ್ರಗತಿಯನ್ನು ಹೊಂದಿಲ್ಲ (ಮೌಖಿಕ ಸಂದರ್ಶನ, ಸೋಮಪ್ಪ: ೨೦೦೯).

೩. ವೆಂಕಟೇಶ ಚೆನ್ನದಾಸರ:

ವೆಂಕಟೇಶ ಚೆನ್ನದಾಸರವರು ವಟಪರವಿ ಗ್ರಾಮದ ನಿವಾಸಿಯಾಗಿದ್ದು, ಸೋಮಪ್ಪ ಚೆನ್ನದಾಸರ ನಂತರ ಎರಡನೆಯ ವ್ಯಕ್ತಿಯಾಗಿ ಗ್ರಾಮ ಪಂಚಾಯಿತಿಗೆ ಆಯ್ಕೆಯಾಗಿ ಸಮುದಾಯದಲ್ಲಿ ರಾಜಕೀಯ ಪ್ರವೇಶ ಪಡೆದ ಇನ್ನೋರ್ವ ವ್ಯಕ್ತಿಯಾಗಿದ್ದಾರೆ. ಇವರು ೨೦೦೦ರಲ್ಲಿ ಗ್ರಾಮ ಪಂಚಾಯಿತಿಗೆ ಪರಿಶಿಷ್ಟ ಜಾತಿಯ ಮೀಸಲಾತಿಯಡಿಯಲ್ಲಿ ಆಯ್ಕೆಗೊಂಡು

೨೦೦೫ರವರೆಗೆ ಸೇವೆ ಸಲ್ಲಿಸಿದ್ದಾರೆ. ತಮ್ಮ ಸೇವಾವಧಿಯಲ್ಲಿ ಸಮುದಾಯಕ್ಕೆ ಬೇಕಾದ ಸೌಲಭ್ಯಗಳನ್ನು ಪಂಚಾಯಿತಿಯಿಂದ ಒದಗಿಸಲು ಪ್ರಯತ್ನಿಸಿದ್ದಾರೆ (ಮೌಖಿಕ ಸಂದರ್ಶನ, ವೆಂಕಟೇಶ: ೨೦೦೯).

೪. ಮುರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆ:

ಪ್ರತಿಭಾವಂತ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣವನ್ನು ನೀಡುವುದು ಮತ್ತು ಓದಲು ಉತ್ತಮವಾದ ವಾತಾವರಣವನ್ನು ನಿರ್ಮಿಸುವುದು ಸರ್ಕಾರದ ಉದ್ದೇಶವಾಗಿದೆ. ಆ ಕಾರಣದಿಂದ ಈ ಯೋಜನೆಯನ್ನು ಪ್ರಾರಂಭಿಸಿ ಇದರಲ್ಲಿ ೬ ರಿಂದ ೧೦ನೇ ತರಗತಿಯ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲಾಗುತ್ತದೆ. ಇಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರ ಪ್ರವೇಶದ ಅನುಪಾತ ೫೦:೫೦ ಆಗಿರುತ್ತದೆ. ಈ ಯೋಜನೆಯನ್ನು ರಾಜ್ಯ ಸರ್ಕಾರವು ೧೯೯೬-೯೭ನೇ ಸಾಲಿನಲ್ಲಿ ಪ್ರಾರಂಭಿಸಿದೆ. ಇಲ್ಲಿನ ವಸತಿ ಶಾಲೆಯ ಪ್ರವೇಶಕ್ಕಾಗಿ ವಿದ್ಯಾರ್ಥಿಗಳನ್ನು ಪೂರ್ವ ಭಾವಿ ಪರೀಕ್ಷೆಯನ್ನು ಜಿಲ್ಲಾ ಮಟ್ಟದಲ್ಲಿ ನಡೆಸಿ, ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳನ್ನು ಮೀಸಲಾತಿ ಅನ್ವಯ ದಾಖಲು ಮಾಡಿಕೊಳ್ಳಲಾಗುತ್ತದೆ. ಈ ವಸತಿ ಶಾಲೆಯಲ್ಲಿ ಇರುವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣದ ಜೊತೆಗೆ ಉಚಿತ ಸೌಲಭ್ಯಗಳನ್ನು ನೀಡಲಾಗುತ್ತದೆ (ಪ್ರಭಾಕರ , ೨೦೦೬: ೫೩೮).

೫. ಗಂಗಾ ಕಲ್ಯಾಣ ಯೋಜನೆ:

ಶ್ರೀ ಮುರಾರ್ಜಿ ದೇಸಾಯಿರವರ ಶತಮಾನೋತ್ಸವದ ಅಂಗವಾಗಿ ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟು ವರ್ಗದ ಮತ್ತು ಹಿಂದುಳಿದ ವರ್ಗದ ಇತರೆ ಜನರು ತುಂಡು ಭೂಮಿಗಳಿಗೆ ನೀರಾವರಿ ಸೌಲಭ್ಯ ಒದಗಿಸಲು ಈ ಯೋಜನೆಯನ್ನು ಜಾರಿಗೆ ತಂದು ಅನುಷ್ಠಾನಗೊಳಿಸಲಾಗಿದೆ. ಸಣ್ಣ, ಅತಿಸಣ್ಣ ಗುಂಪಿಗೆ ಸೇರಿದ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ. ಪರಿಶಿಷ್ಟ ಜಾತಿ ಹಾಗೂ ಬುಡಕಟ್ಟು ವರ್ಗದವರಿಗೆ ಸೇರಿದ ೮ ರಿಂದ ೧೫ ಎಕರೆವರೆಗಿನ ಗುಂಪು ಜಮೀನುಗಳಿಗೆ ಒಂದು ಘಟಕವನ್ನಾಗಿ ಪರಿಗಣಿಸಿ ೨-೩ ಯಶಸ್ವಿ ಕೊಳವೆ ಬಾವಿಗಳನ್ನು ಕೊರೆಯಲಾಗುವುದು. ಈ ಯೋಜನೆಯಡಿ ನೀಡಲಾಗುವ ಎಕರೆಯ ಮಿತಿಯ ಘಟಕ ವೆಚ್ಚ ೨.೫೩ ಲಕ್ಷಗಳೆಂದು ನಿರ್ಧರಿಸಲಾಗಿದೆ. ಇಂತಹ ಘಟಕದಲ್ಲಿ ೨ ಯಶಸ್ವಿ ಕೊಳವೆ ಬಾವಿ ಕೊರೆಯಲು, ಪಂಪಸೆಟ್ ಜೋಡಣೆ ವಿದ್ಯುತ್ತೀಕರಣ, ಪಂಪಹೌಸ್, ಪೈಪ್‌ಲೈನ್ ಇತ್ಯಾದಿ ಎಲ್ಲ ಸೌಲಭ್ಯದ ಖರ್ಚುಗಳು ಸೇರಿದೆ. ಈ ಯೋಜನೆಯಡಿ ನೀಡುವ ಸೌಲಭ್ಯ ಪೂರ್ತಿ ಉಚಿತವಾಗಿದ್ದು ಫಲಾನುಭವಿಯು ಯಾವುದೇ ಖರ್ಚನ್ನು ಭರಿಸಬೇಕಾಗಿಲ್ಲ. ಇದರ ನಿರ್ವಹಣೆಯನ್ನು ೩ ವರ್ಷಗಳವರೆಗೆ ನಿಗಮವೇ ನೋಡಿಕೊಳ್ಳುವುದು. (ಪ್ರಭಾಕರ, ೨೦೦೬: ೫೪೩).

* * *

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

ಚರಿತ್ರೆಯ ಬರವಣಿಯಗೆಯಲ್ಲಿ ಚೆನ್ನದಾಸರ ಸಮುದಾಯವು ಸರಕಾರದಿಂದ ಹಾಗೂ ಸಮಾಜದ ಬಲಾಢ್ಯದಿಂದ ನಿರ್ಲಕ್ಷ್ಯಕ್ಕೆ ಒಳಪಟ್ಟಿರುವುದು ಪ್ರಸ್ತುತ ಅಧ್ಯಯನದಿಂದ ಸ್ಪಷ್ಟವಾಗಿ ಗೋಚರಿಸುತ್ತದೆ. ಈ ಸಮುದಾಯವು ಹಲವು ಶತಮಾನಗಳಿಂದಲೂ ಜೀವನದ ನಿರ್ವಹಣೆಗಾಗಿ ಊರೂರು ಅಲೆಯುತ್ತಾ ಅಲೆಮಾರಿ ಸಮುದಾಯವಾಗಿದ್ದರಿಂದ, ಹಾಗೂ ಪ್ರಾರಂಭದ ಚರಿತ್ರೆಕಾರರು ಚರಿತ್ರೆಯ ಬರವಣಿಗೆಯಲ್ಲಿ ರಾಜಪ್ರಭುತ್ವವನ್ನು ಕೇಂದ್ರೀಕರಿಸಿಕೊಂಡು, ಅದರಡಿಯಲ್ಲಿ ಬರುವ ರಾಣಿಯರು, ರಾಜಕುಮಾರರು, ಮಂತ್ರಿಗಳು, ರಾಜನಿಗೆ ಧಾರ್ಮಿಕ, ಮಾರ್ಗದರ್ಶನ ನೀಡುವ ಪುರೋಹಿತಶಾಹಿಯನ್ನೊಳಗೊಂಡ ಪರಿವಾರವನ್ನು ಮಾತ್ರ ಚರಿತ್ರೆಯಲ್ಲಿ ಗುರುತಿಸಿ ಕೆಳಸ್ತರದ ಜನಸಮುದಾಯಗಳನ್ನು ಗುರುತಿಸದೇ ಇರುವದರಿಂದ ಚೆನ್ನದಾಸರ ಸಮುದಾಯದಂತಹ ಸಮುದಾಯಗಳು ನಿರ್ಲಕ್ಷ್ಯಕ್ಕೆ ಒಳಗಾದವು. ಸ್ವಾತಂತ್ರ್ಯೋತ್ತರ ಚರಿತ್ರೆಯನ್ನು ಅಧ್ಯಯನ ಮಾಡುವ ದೃಷ್ಟಿಕೋನಗಳು ಬದಲಾದ ಪ್ರಯುಕ್ತ ಕೆಳಸ್ತರದ ಸಮುದಾಯಗಳು ಚರಿತ್ರೆಯಲ್ಲಿ ಸ್ಥಾನಹೊಂದಲು ಸಾಧ್ಯವಾಯಿತು. ಸಬಾಲ್ಟರ್ನ್ ಪಂಥದ ಚರಿತ್ರೆಕಾರರು ಬುಡಕಟ್ಟು, ಅಲೆಮಾರಿ ಸಮುದಾಯಗಳಿಗೂ ಚರಿತ್ರೆಯಿದೆ ಎನ್ನುವ ಆಶಯದಿಂದ ಅಧ್ಯಯನದಲ್ಲಿ ತೊಡಗಿದರು. ಆ ಫಲಶೃತಿಯಿಂದಾಗಿ ನಿರ್ಲಕ್ಷ್ಯಕ್ಕೆ ಒಳಪಟ್ಟ ಅನೇಕ ಸಮುದಾಯಗಳು ಚರಿತ್ರೆಯ ಬರವಣಿಗೆಯಲ್ಲಿ ಸ್ಥಾನಪಡೆದುಕೊಂಡವು. ಅಂತಹವುಗಳಲ್ಲಿ ಚೆನ್ನದಾಸರ ಸಮುದಾಯವು ಒಂದು. ಇಂಥಹ ಸಮುದಾಯದ ಅಧ್ಯಯನ ಕೈಗೊಂಡಾಗ ಅಧ್ಯಯನಕಾರರ ಎದುರು ಇರುವ ಮುಖ್ಯ ಸಮಸ್ಯೆಯೆಂದರೆ, ಸಮುದಾಯದ ಮೂಲ ಮತ್ತು ವಲಸೆಯಲ್ಲಿನ ಗೊಂದಲ. ಚೆನ್ನದಾಸರು ಮೂಲತಃ ದಾಸತ್ವಕ್ಕೆ ಒಳಪಟ್ಟವರು ಎಂದು ಅಧ್ಯಯನದಿಂದ ತಿಳಿದುಬರುತ್ತದೆ. ದಾಸರಲ್ಲಿಯೇ ಹಲವಾರು ಬೇರೆ ಬೇರೆ ವೃತ್ತಿಗನುಗುಣವಾದ ಸಮುದಾಯಗಳನ್ನು ಅಧ್ಯಯನದಲ್ಲಿ ಗುರುತಿಸಲಾಗಿದೆ. ಈ ಸಮುದಾಯ ಆಂಧ್ರ ಪ್ರದೇಶದಿಂದ ವಲಸೆ ಬಂದು ಕರ್ನಾಟಕದಲ್ಲಿ ನೆಲೆಸಿದ್ದು ಅಧ್ಯಯನಕ್ಕೆ ಸಹಾಯಕವಾದ ಆಕರಗಳು ಸ್ಪಷ್ಟಪಡಿಸುತ್ತವೆ.

ಪ್ರಸ್ತುತ ಅಧ್ಯಯನದ ಎರಡನೆಯ ಅಧ್ಯಾಯದಲ್ಲಿ ಚೆನ್ನದಾಸರು ಸಮಾಜಕ್ಕೆ ಪೂರಕವಾದ ವಿವಿಧ ಪ್ರಕಾರಗಳನ್ನೊಳಗೊಂಡ ತತ್ವಪದಗಳನ್ನು ಹಾಡುವದರ ಮೂಲಕ ಸಮಾಜದಿಂದ ಮರೆಯಾಗುತ್ತಿರುವ ಮೌಲ್ಯಗಳನ್ನು ಜನರಲ್ಲಿ ನೆನಪಿಸುವುದು, ತತ್ವಪದಗಳ ಮೂಲಕ ತಿಳಿದುಬರುತ್ತದೆ. ಈ ಸಮುದಾಯದ ಮೂಲ ವೃತ್ತಿ ಕಲಾ ನಟುವರಾಗಿದ್ದು, ೧೫, ೧೬ನೇ ಶತನಮಾನದಲ್ಲಿ ಹರಿದಾಸ ಪಂಥದಲ್ಲಿ ವೈಷ್ಣವ ಭೀಕ್ಷಕರಾಗಿ ಸ್ಥಾನಪಡೆದರು. ವೈದಿಕ ಧರ್ಮದ ಪ್ರಚಾರಕ್ಕಾಗಿ ಮೌಲ್ಯಯುತ ತತ್ವಪದಗಳನ್ನು ಏಕತಾರಿ ತಂಬೂರಿ ಮೂಲಕ ಹಾಡುತ್ತಾ ತತ್ವಪದ ಹಾಡುಗಾರರೆನಿಸಿಕೊಂಡರು ಎನ್ನುವ ಸಂಗತಿ ತಿಳಿಯುವುದರೊಂದಿಗೆ ಯಲಬುರ್ಗಾ ಪ್ರದೇಶದಲ್ಲಿರುವ ಈ ಸಮುದಾಯದ ತತ್ವಪದಕಾರರನ್ನು ವಸ್ತುವಿಷಯ ಮತ್ತು ಚಾರಿತ್ರಿಕತೆ ಎಂಬ ಉಪ ಅಧ್ಯಯನದಿಂದ ತಿಳಿದು ಬರುತ್ತದೆ. ಇಂದು ಚೆನ್ನದಾಸರು ತತ್ವಪದಗಳನ್ನು ಹಾಡುವಾಗ ಅವರಿಂದ ಬಂದಿರುವ ಭಾವನೆಗಳು ಹಾಗೂ ಜನರ ಭಾವನೆಗಳು ಹೇಗೆ ಇವೆ ಎನ್ನುವುದು ತಿಳಿದುಬರುತ್ತದೆ. ಇನ್ನು ಚೆನ್ನದಾಸರು ತತ್ವಪದಗಳ ಮೇಲೆ ಇಟ್ಟಿರುವ ನಂಬಿಕೆಗಳು ಹಾಗೂ ಜನರ ನಂಬಿಕೆಗಳು ಹೇಗೆ ಇರುತ್ತವೆ ಎನ್ನುವ ಸಂಗತಿಗಳು ಮೂಡಿ ಬರುತ್ತವೆ. ಈ ಅಧ್ಯಾಯದ ಕೊನೆಯ ಉಪ ಅಧ್ಯಾಯದಲ್ಲಿ ಚೆನ್ನದಾಸರು ಹಾಡುವ ತತ್ವಪದಗಳಿಗೂ ಇನ್ನಿತರ ಹಾಡುವ ತತ್ವಪದಗಳಿಗೂ ವ್ಯತ್ಯಾಸವಿರುವುದು ಇಲ್ಲಿ ತಿಳಿದುಬರುತ್ತದೆ. ಚೆನ್ನದಾಸರು ತತ್ವಪದಗಳನ್ನು ಹಾಡುವುದು ಪ್ರಮುಖ ವೃತ್ತಿಯನ್ನಾಗಿಸಿಕೊಂಡು ತಮ್ಮ ಬದುಕನ್ನು ಸಾಗಿಸಿದರು. ಆದರೆ ಇಂದು ತತ್ವಪದಗಳ ಹಾಡುಗಾರಿಕೆ ವೃತ್ತಿಯು ಮರೆಯಾಗುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

ಮೂರನೆಯ ಅಧ್ಯಾಯದಲ್ಲಿ ಚೆನ್ನದಾಸರ ಕೌಟುಂಬಿಕ ವ್ಯವಸ್ಥೆಯಲ್ಲಿ ಮಗು ಜನನವಾದಾಗ ಅನುಸರಿಸುವ ಕ್ರಮಗಳು, ನಂತರ ಹೆಣ್ಣು ಮಗುವಿನ ಋತುಮತಿ ಸಂದರ್ಭದಲ್ಲಿ ಅಳವಡಿಸಿಕೊಂಡಿರುವ ಸಮುದಾಯದ ಕಟ್ಟುಪಾಡುಗಳು ಹೇಗೆ ಇರುತ್ತವೆ ಎನ್ನುವುದು ಕಂಡುಬರುತ್ತದೆ. ಇನ್ನು ಈ ಸಮುದಾಯದವರು ವಿವಾಹ ಪದ್ಧತಿಗಳು ಹಾಗೂ ಮರಣ ಹೊಂದಿದಾಗ ಅನುಸರಿಸುವ ಅಂತ್ಯ ಸಂಸ್ಕಾರದ ಆಚರಣೆಗಳು ಕಾಣಬಹುದು. ಸಮುದಾಯವರಲ್ಲಿ ಉಡುಗೆ ತೊಡುಗೆ ಸಾಮಾನ್ಯವಾಗಿದ್ದರೂ ಆಹಾರ ಪದ್ಧತಿಯಲ್ಲಿ ವಿಶೇಷತೆ ಕಾಣಬಹುದು. ಈ ಸಮುದಾಯದಲ್ಲಿ ಹೆಚ್ಚಾಗಿ ಇಂದಿಗೂ ಮಾಂಸಹಾರ ಸೇವಿಸುವುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಆದರೆ ಈ ಸಮುದಾಯದವರು ವಾಸಿಸುವ ವಸತಿ ವ್ಯವಸ್ಥೆಯು ಇನ್ನಿತರ ಸಮುದಾಯಗಳಿಗಿಂತ ತೀರಾ ಕೆಳಮಟ್ಟದಲ್ಲಿರುವುದು ವ್ಯವಸ್ಥೆಯಲ್ಲಿ ಕೌಟುಂಬಿಕ ಕಟ್ಟುಪಾಡುಗಳು ಮತ್ತು ನ್ಯಾಯ ಪಂಚಾಯತವು ಇಂದು ಸಹ ಶಿಸ್ತುಬದ್ದ ಹಾಗೂ ಸಮುದಾಯದ ಚೌಕಟ್ಟಿನಲ್ಲಿರುತ್ತವೆ. ಈ ಸಮುದಾಯದವರ ಧಾರ್ಮಿಕ ಸ್ಥಿತಿಗತಿಗಳು ಅಧ್ಯಯನದಿಂದ ಸ್ಪಷ್ಟವಾಗಿ ತಿಳಿದುಬರುವ ಸಂಗತಿಯೆಂದರೆ ವಂಶಪಾರಂಪರ್ಯದಿಂದ ಆಚರಿಸುವ ಆರಾಧನೆ ಮತ್ತು ಹಬ್ಬಗಳು ಹಾಗೂ ಬಲಿಕೊಡುವ ಪದ್ಧತಿ ಇಂದಿಗೂ ಈ ಸಮುದಾಯದಲ್ಲಿ ಇವುಗಳನ್ನು ಅಳವಡಿಸಿಕೊಂಡಿರುವದು ತಿಳಿದುಬರುತ್ತದೆ.

ನಾಲ್ಕನೆಯ ಅಧ್ಯಾಯದಲ್ಲಿ ಚೆನ್ನದಾಸರ ಆರ್ಥಿಕ ಸ್ಥಿತಿಗತಿಯನ್ನು ಅವಲೋಕನ ಮಾಡಿದಾಗ ಈ ಸಮುದಾಯದಲ್ಲಿ ಪ್ರಾರಂಭದಲ್ಲಿದ್ದ ಭಿಕ್ಷಾಟನೆಯು ಇಂದಿಗೂ ಸಣ್ಣ ಮಕ್ಕಳಲ್ಲಿ ಕಂಡುಬರುತ್ತದೆ. ಈ ಸಮುದಾಯದಲ್ಲಿ ಬೇಟೆಯನ್ನು ಕೈಗೊಳ್ಳುವುದು ಉಪಕಸಬಾಗಿದೆ. ಅರಣ್ಯ ಇಲಾಖೆಯ ನಿರ್ಬಂಧದಿಂದ ಇಂದು

ಬೇಟೆಯನ್ನು ಆಡುವುದು ಕಡಿಮೆಯಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇದರ ಬದಲು ಪಶುಪಾಲನೆಯಲ್ಲಿ ವಿವಿಧ ಬಗೆಯ ಪ್ರಾಣಿಗಳನ್ನು ಸಾಕುವುದರೊಂದಿಗೆ ಮಾಂಸದ ಬಳಕೆಯನ್ನು ಇದರ ಮೂಲಕ ಪಡೆಯುತ್ತಾರೆ. ಅಲ್ಲದೆ ಪಶುಪಾಲನೆಯು ಇಂದು ಸಮುದಾಯದ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಮೂಲವಾಗಿದೆ. ಈ ಸಮುದಾಯದಲ್ಲಿ ಕೂಲಿಕೆಲಸ ಮೊದಲಿನಿಂದಲೂ ಇರಲಿಲ್ಲ. ಆದರೆ ಇತ್ತೀಚೆಗೆ ಕೆಲವು ಜನರು ಕೂಲಿ ಕೆಲಸದಲ್ಲಿ ತೊಡಗಿರುವದು ತಿಳಿದುಬರುತ್ತದೆ. ಸರಕಾರ ಭೂರಹಿತ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಭೂ ಒಡೆತನ ಹೊಂದುವ ಯೋಜನೆಯನ್ನು ಹಮ್ಮಿಕೊಂಡಿದ್ದರ ಫಲಶೃತಿಯಿಂದಾಗಿ ಯಲಬುರ್ಗಾ ಪ್ರದೇಶದಲ್ಲಿ ಈ ಸಮುದಾಯದ ಕೆಲವರು ವ್ಯವಸಾಯದಲ್ಲಿ ತೊಡಗಿರುವುದು ಕಂಡುಬರುತದೆ. ಈ ಸಮುದಾಯದ ಜನರು ಮೇಲಿನ ಆರ್ಥಿಕ ಚಟುವಟಿಕೆಗಳ ಜೊತೆಗೆ ಪ್ರಮುಖವಾಗಿ ಸ್ಟೇಷನರಿ ಸಾಮಗ್ರಿಗಳ ವ್ಯಾಪಾರವನ್ನು ಪ್ರಮುಖ ಆರ್ಥಿಕ ಮೂಲವನ್ನಾಗಿ ಮಾಡಿಕೊಂಡಿದ್ದು ಸ್ಪಷ್ಟವಾಗಿ ಕಂಡುಬರುತ್ತದೆ. ಇನ್ನು ಸರಕಾರಿ ನೌಕರಿಯಲ್ಲಿ ಈ ಸಮುದಾಯದ ಜನರು ಇತರ ಸಮುದಾಯಗಳಿಗಿಂತ ಪೂರ್ಣಹಿಂದುಳಿದಿದ್ದಾರೆ.

ಐದನೆಯ ಅಧ್ಯಾಯದಲ್ಲಿ ಯಲಬುರ್ಗಾ ಪ್ರದೇಶದ ಚೆನ್ನದಾಸರ ರಾಜಕೀಯ ಪ್ರವೇಶ, ಮೀಸಲಾತಿ, ಶಿಕ್ಷಣ ಮತ್ತು ಸರ್ಕಾರಿ ಸೌಲಭ್ಯಗಳ ಕುರಿತು ಚರ್ಚಿಸಲಾಗಿದೆ. ಈ ಪ್ರದೇಶದಲ್ಲಿ ಗ್ರಾಮ ಪಂಚಾಯತಿ ಮಟ್ಟ ಬಿಟ್ಟರೆ, ಮೇಲಿನ ರಾಜಕೀಯ ಹಂತದಲ್ಲಿ ಭಾಗವಹಿಸಲು ಆಗಿಲ್ಲ. ಈ ಸಮುದಾಯವನ್ನು ೧೯೭೭ರಲ್ಲಿ ಪರಿಶಿಷ್ಟ ಜಾತಿಗೆ ಸೇರ್ಪಡೆಗೊಳಿಸಿದ್ದರು ಸಹ ಸರಿಯಾದ ರೀತಿಯಲ್ಲಿ ಮೀಸಲಾತಿಯಡಿಯಲ್ಲಿ ಶಿಕ್ಷಣ ಮತ್ತು ಸರ್ಕಾರಿ ಸೌಲಭ್ಯಗಳನ್ನು ಪಡೆಯುವಲ್ಲಿ ಪೂರ್ಣವಾಗಿ ಹಿಂದುಳಿದಿದೆ. ಇಂದಿಗೂ ಭೂಮಿಯ ಒಡೆತನವನ್ನು ಹೊಂದಿರವರು ಬೆರಳೆಕೆಯಷ್ಟು ಕುಟುಂಬಗಳನ್ನು ಬಿಟ್ಟರೆ ಇನ್ನುಳಿದ ಶೇ.೯೦ರಷ್ಟು ಕುಟುಂಬಗಳು ಭೂಮಿಯ ಒಡೆತನವನ್ನು ಹೊಂದಲು ಸಾಧ್ಯವಾಗಿಲ್ಲ. ರಾಜಕೀಯ ಪ್ರವೇಶವು ಇವರಲ್ಲಿ ಹೆಚ್ಚಾಗಿ ಕಂಡುಬರುವುದಿಲ್ಲ. ಮೀಸಲಾತಿಯ ಪರಿಪೂರ್ಣ ಅರಿವು ಮತ್ತು ಸರಕಾರದ ಇನ್ನಿತರ ಸೌಲಭ್ಯಗಳನ್ನು ಪಡೆಯುವಲ್ಲಿ ವಿಫಲರಾಗಿದ್ದು ಕಂಡುಬರುತ್ತದೆ. ಈ ಸಮುದಾಯ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಉನ್ನತಿಯನ್ನು ಹೊಂದಬೇಕಾದರೆ ಮೇಲೆ ಸೂಚಿಸಿರುವ ಅಂಶಗಳಲ್ಲಿನ ಸವಲತ್ತುಗಳನ್ನು ತನ್ನದಾಗಿಸಿಕೊಳ್ಳಬೇಕು. ಈ ಸಮುದಾಯದಲ್ಲಿ ಇನ್ನು ಹಲವಾರು ಕುಟುಂಬಗಳು ಅಲೆಮಾರಿ, ಅರೆ-ಅಲೆಮಾರಿತನವನ್ನು ಬಿಟ್ಟು ಒಂದೇ ಕಡೆ ಸ್ಥಿರವಾಗಿ ನೆಲೆನಿಂತಾಗ ಮಾತ್ರ ಸರಕಾರ ಕಲ್ಪಿಸಿರುವ ಮೀಸಲಾತಿಯಡಿಯಲ್ಲಿ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಚಿಂತಿಸಲು ಸಾಧ್ಯ.

ಚೆನ್ನದಾಸರ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಹೊಂದಬೇಕಾದರೆ ಈ ಕೆಳಕಂಡ ಮೂಲಭೂತ ಸೌಲಭ್ಯಗಳನ್ನು ಹೊಂದಬೇಕಾಗುತ್ತದೆ. ಅವುಗಳೆಂದರೆ, ಭೂಮಿಯ ಒಡೆತನ, ಖಾಯಂ ಆಗಿ ಒಂದು ಪ್ರದೇಶದಲ್ಲಿ ನೆಲೆಗೊಳ್ಳುವುದು, ತತ್ವಪದಗಳನ್ನು ತಂತ್ರಜ್ಞಾನದ ಮೂಲಕ ಆಕರ್ಷಕಗೊಳಿಸುವುದು. ಶಿಕ್ಷಣವನ್ನು ಹೊಂದುವುದು ಹಾಗೂ ಸರಕಾರದ ಮೀಸಲಾತಿಯ ಸರಿಯಾದ ಬಳಕೆ, ಸಮುದಾಯದ ಎಲ್ಲಾ ಕುಟುಂಬಗಳು ಭೂಮಿಯ ಒಡೆತನವನ್ನು ಹೊಂದುವುದು ಈ ಸಮುದಾಯ ಇಲ್ಲಿಯವರೆಗೆ ಸಾಧ್ಯವಾಗಲಿಲ್ಲ. ಇಂದು ಆಧುನಿಕ ಮಾಧ್ಯಮಗಳು ಜಾಗತಿಕ ಮಟ್ಟದಲ್ಲಿ ತಮ್ಮ ಮೇಲ್ಮೆಯನ್ನು ಸಾಧಿಸುತ್ತಿರುವಾಗ ಈ ಸಂದರ್ಭದಲ್ಲಿ

ತತ್ವಪದಗಳ ಹಾಡುಗಾರಿಕೆ ಜನಸಮುದಾಯಕ್ಕೆ ಆಕರ್ಷಕವಾಗಿ ಕಂಡುಬರುವುದಿಲ್ಲ. ಇದರರ್ಥ ತತ್ವಪದಗಳ ಹಾಡುಗಾರಿಕೆ ವೃತ್ತಿಯನ್ನು ಆಕರ್ಷಕವನ್ನಾಗಿಸಲು ಸಾಧ್ಯವಿಲ್ಲ ಎಂದಲ್ಲ. ಈ ಸಮುದಾಯದ ಬಹುದೊಡ್ಡ ಸಮಸ್ಯೆ ಎಂದರೆ ಶಿಕ್ಷಣದಿಂದ ವಂಚಿತರಾಗಿರುವುದು ಶಿಕ್ಷಣದ ಪ್ರಾಮುಖ್ಯತೆಯನ್ನು ಅರಿತುಕೊಂಡಾಗ ಮಾತ್ರ ತಮ್ಮ ದೃಷ್ಟಿಕೋನದಲ್ಲಿ ಬದಲಾವಣೆಗಳನ್ನು ಕಾಣಲು ಸಾಧ್ಯ. ಇದರಿಂದ ಚೆನ್ನದಾಸರು ತಮ್ಮದೇ ಆದ ಲೋಕದೃಷ್ಟಿಯೊಂದನ್ನು ಹೊಂದುವಂತಾಗುತ್ತದೆ. ಅವರ ಈಗಿರುವ ಲೋಕದೃಷ್ಟಿಯ ವ್ಯಾಪ್ತಿ ತುಂಬಾ ಕಿರಿದಾದದ್ದು. ಈ ವ್ಯಾಪ್ತಿಯೊಳಗೆ ಏನೇ ಪ್ರಯೋಗಗಳನ್ನು ಮಾಡಿದರೂ ಹೊಸದನ್ನು ಸಾಧಿಸಲು ಸಾಧ್ಯವಿಲ್ಲ. ಹಾಗೂ ಸರಕಾರದಿಂದ ದೊರೆಯಬಹುದಾದ ಸೌಲಭ್ಯಗಳ ಅರಿವನ್ನು ಅವರು ಹೊಂದಲು ಸಾಧ್ಯವಿಲ್ಲ. ಸರಕಾರದ ಮೀಸಲಾತಿ ಪಟ್ಟಿಯಲ್ಲಿ ಚೆನ್ನದಾಸರ ಸಮುದಾಯ ಬರುವುದರಿಂದ ಸರಕಾರ ಬುಡಕಟ್ಟು, ಅಲೆಮಾರಿ ಸಮುದಾಯಗಳ ಅಭಿವೃದ್ಧಿಗಾಗಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳುತ್ತಿರುವುದು ಕೇವಲ ಕಾಗದ ಮತ್ತು ಘೋಷಣೆಗೆ ಸೀಮಿತವಾಗದೇ ಪ್ರಾಮಾಣಿಕವಾಗಿ ಸಮರ್ಪಕ ರೀತಿಯಲ್ಲಿ ಇಂತಹ ಸಮುದಾಯಗಳನ್ನು ಗುರುತಿಸಿ ಮೀಸಲಾತಿಯಡಿಯಲ್ಲಿ ನ್ಯಾಯುತವಾಗಿ ದೊರೆಯುವ ಸೌಲಭ್ಯಗಳನ್ನು ಈ ಸಮುದಾಯಕ್ಕೆ ಒದಗಿಸುವುದರೊಂದಿಗೆ ನೂರಾರು ವರ್ಷಗಳಿಂದ ಅಳವಡಿಸಿಕೊಂಡು ಬಂದ ತತ್ವಪದಗಳ ವೃತ್ತಿಯನ್ನು ಉಳಿಸಿ ಬೆಳಸಲು ಕ್ರಮಕೈಗೊಂಡರೆ ಮಾತ್ರ ಈ ಸಮುದಾಯ ಹೊಸತನ ಹೊಂದಲು ಸಾಧ್ಯ.

ಅನುಬಂಧಗಳು

೧. ಗ್ರಂಥಸೂಚಿ

೨. ಸಂದರ್ಶಿತ ವ್ಯಕ್ತಿಗಳು

೩. ನಕ್ಷೆಗಳು

೪. ಛಾಯಾಚಿತ್ರಗಳು

೧. ಗ್ರಂಥಸೂಚಿ

ಅ.ಪ್ರಕಟಿತ ಕನ್ನಡ ಗ್ರಂಥಗಳು

೧. ಅರ್ಜುನ ಗೊಳಸಂಗಿ, ೨೦೦೦, ದಲಿತರ ಬದುಕು ಮತ್ತು ಸಂಸ್ಕೃತಿ ಒಂದು ಅಧ್ಯಯನ, ಪ್ರಕಾಶಕರು, ವಿಮೋಚನ ಪ್ರಕಾಶನ, ಅಥಣಿ

೨. ಕನ್ನಡ ವಿಷಯ ವಿಶ್ವಕೋಶ, ಜಾನಪದ, ೨೦೦೬, ದಾಸರಾಟ ದೀಪ ಸಂಸ್ಕೃತಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೩. ಕರೀಗೌಡ ಬೀಚನಹಳ್ಳಿ, ೨೦೦೦, ಕರಕುಶಲ ಕಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೪. ಕರೀಗೌಡ ಬೀಚನಹಳ್ಳಿ, ೨೦೦೭, ೫೦ ಸುವರ್ಣ ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೫. ಕಲಬುರ್ಗಿ.ಎಂ.ಎಂ., (ಸಂ) ೧೯೯೪, ಕರ್ನಾಟಕದ ಕೈಫಿಯತ್ತುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೬. ಕುಪ್ಪೆ ನಾಗರಾಜ, ೨೦೦೮, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ದೊಂಬಿದಾಸರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೭. ಗೋಪಾಲರಾವ್.ಎಚ್.ಎಸ್., ೧೯೯೬, ಕರ್ನಾಟಕ ಏಕೀಕರಣ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು

೮. ಚಂದ್ರಶೇಖರ್.ಟಿ.ಆರ್., ೧೯೯೯, ಜಿಲ್ಲಾ ಅಭಿವೃದ್ಧಿ ಅಧ್ಯಯನ ಕೊಪ್ಪಳ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೯. ಚಂದ್ರಶೇಖರ ಕಂಬಾರ., ೧೯೮೫, ಸಂಪುಟ ೨, ಕನ್ನಡ ಜಾನಪದ ವಿಶ್ವಕೋಶ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೧೦. ಚಿದಾನಂದ ಮೂರ್ತಿ.ಎಂ., ೧೯೮೫, ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೧. ತೆಲಗಾವಿ ಲಕ್ಷ್ಮಣ್., ೨೦೦೪, ಮೌರ್ಯ ಮತ್ತು ಶಾತವಾಹನ ಯುಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೧೨. ದಿವಾಕರ.ಆರ್.ಆರ್., ೧೯೯೭, ಕರ್ನಾಟಕದ ಪರಂಪರೆ ಸಂಪುಟ ೧, ಕರ್ನಾಟಕ ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೧೩ ಧೂಪದ.ಎಂ.ಟಿ., ೧೯೭೧, ಕರ್ನಾಟಕ ಜಾನಪದ ರಂಗಭೂಮಿ ಹಂಸಧ್ವನಿ ಪ್ರಕಾಶನ, ಬೆಂಗಳೂರು

೧೪. ದೇವರಕೊಂಡಾರೆಡ್ಡಿ, ೧೯೯೯, ಕೊಪ್ಪಳ ಜಿಲ್ಲೆಯ ಶಾಸನಗಳು, ಸಂಪುಟ ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೧೫. ದೇ.ಜವರೇಗೌಡ., ೧೯೯೨, ಕ್ರಾಂತಿಕಾರ ಡಾ.ಅಂಬೇಡ್ಕರ್, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೧೬. ದೇರ್ಲ ನರೇಂದ್ರ ರೈ., ೨೦೦೭, ಬೇಟೆ ಪ್ರಭುತ್ವದಿಂದ ಪ್ರಜಾಪ್ರಭುತ್ವದೆಡೆಗೆ, ಪ್ರಕಾಶಕರು, ಕನಸು ಪ್ರಕಾಶನ ಮಾಡಾವು ಅಂಚೆ ಪುತ್ತೂರು ತಾಲೂಕು, ದ.ಕನ್ನಡ ಜಿಲ್ಲೆ

೧೭. ನಾಗೇಗೌಡ.ಎಚ್.ಎಲ್., ೧೯೭೮, ಕನ್ನಡ ಜಾನಪದ ಕೋಶ, ಪ್ರಕಾಶಕರು, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು

೧೮. ನಾವಡ.ಎ.ವಿ. (ಸಂ), ೨೦೦೨, ಈಸಬೇಕು ಇದ್ದು ಜಯಿಸಬೇಕು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೧೯. ನುಗಡೋಣಿ ಅಮರೇಶ, ೨೦೦೩, ಹೈದರಾಬಾದು ಕರ್ನಾಟಕ ಹಾಡುಪಾಡು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೨೦. ಪರಮಶಿವಯ್ಯ.ಜೀ.ಶಂ., ೧೯೭೬, ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೨೧. ಪರಮಶಿವಯ್ಯ.ಜೀ.ಶಂ., ೧೯೭೯, ಜಾನಪದ ಸಮಾವೇಶ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೨೨. ಪರಮಶಿವಯ್ಯ.ಜೀ.ಶಂ., ೧೯೮೦, ದೊಂಬಿದಾಸರು, ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು

೨೩. ಪಾಟೀಲ್.ಬಿ.ಸಿ., ೧೯೯೪, ಕೊಪ್ಪಳ ಸಾಂಸ್ಕೃತಿಕ ಪರಂಪರೆ, ಪ್ರಕಾಶಕರು, ಹರಿಹರ ಪ್ರಕಾಶನ ಜವಾಹರ ರಸ್ತೆ, ಕೊಪ್ಪಳ

೨೪. ಪೂಜಾರಹಳ್ಳಿ ವಿರೂಪಾಕ್ಷಿ, ೨೦೦೭, ಬೇಟೆ ಮತ್ತು ಬೇಡರು, ಪ್ರಕಾಶಕರು, ಚಿನ್ನಹಗರಿ ಪ್ರಕಾಶನ, ಪೂಜಾರಹಳ್ಳಿ

೨೫. ಪೋತೆ.ಹೆಚ್.ಟಿ., ೨೦೦೦, ಹೈದರಾಬಾದ ಕರ್ನಾಟಕ ಜನಪದ ಪ್ರದರ್ಶನ ಕಲೆಗಳು, ಅಂಬು ಪ್ರಕಾಶನ, ರಾಯಚೂರು

೨೬. ಪ್ರಶಾಂತ.ಎಚ್.ಡಿ. (ಸಂ), ೨೦೦೦, ಜನಸಮುದಾಯ ಸಂಪುಟ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೨೭. ಪ್ರಭಾಕರ.ಎ.ಎಸ್., ೨೦೦೭, ಬುಡಕಟ್ಟು ಬದುಕಿನ ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೨೮. ಬಡಿಗೇರ ವಾಸುದೇವ, ೨೦೦೧, ಕರ್ನಾಟಕ ದೇವಾಲಯಗಳ ಕೋಶ, ಕೊಪ್ಪಳ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೨೯. ಬಾಲಗುರು ಮೂರ್ತಿ ಪ್ರತಾಪ ರಾ ಬಹುರೂಪಿ, ೨೦೦೮, ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ ೧, ಬುಡ್ಗಜಂಗಮ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೩೦. ಬಿಳಿಮಲೆ ಪುರುಷೋತ್ತಮ, ೧೯೮೮, ದಲಿತ ಜಗತ್ತು, ಪ್ರಕಾಶಕರು, ಹೊಸದಿಕ್ಕು ಪ್ರಕಾಶನ, ಬೆಂಗಳೂರು

೩೧. ಬೆಟ್ಟದೂರು ಅಲ್ಲಮಪ್ರಭು, ೨೦೦೫, ಕೊಪ್ಪಳ ಜಿಲ್ಲಾದರ್ಶನ, ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೩೨. ಬೋರಲಿಂಗಯ್ಯ.ಹಿ.ಚಿ., ೧೯೮೧, ದಾಸಪ್ಪ, ಪ್ರಕಾಶಕರು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೩೩. ಬೋರಲಿಂಗಯ್ಯ.ಹಿ.ಚಿ., ೧೯೯೬, ಕರ್ನಾಟಕ ಜನಪದ ಕಲೆಗಳ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೩೪. ಬೋರಲಿಂಗಯ್ಯ.ಹಿ.ಚಿ., ೨೦೦೩, ಬುಡಕಟ್ಟು ಅಧ್ಯಯನ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೩೫. ಭಗವಾನ್ (ಅನು) ಸ್ವಾಮಿಧರ್ಮತೀರ್ಥ, ೨೦೦೩, ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, ಮಹಿಮೆ ಪ್ರಕಾಶನ, ಮೈಸೂರು

೩೬. ಮುಜಮ್‌ದಾರ್ ಪಿ.ಆರ್., ೧೯೯೯, ದಕ್ಷಿಣ ಭಾರತದ ಇತಿಹಾಸ, ಪ್ರಕಾಶಕರು, ಚೇತನ್ ಬುಕ್ ಹೌಸ ''ಅಂಜನಾದ್ರಿ'' ರೇಣಿಕಾಚಾರ್ಯ ದೇವಸ್ಥಾನದ ರಸ್ತೆ, ಮೈಸೂರು

೩೭. ಮೇತ್ರಿ.ಕೆ.ಎಂ. (ಸಂ), ೨೦೦೨, ಬುಡಕಟ್ಟು ಕುಲಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೩೮. ಮೇತ್ರಿ.ಕೆ.ಎಂ., ೨೦೦೫, ಬುಡ್ಗ ಜಂಗಮರು, ಪ್ರಕಾಶಕರು, ಕರ್ನಾಟಕ ಬುಡ್ಗಜಂಗಮ ಸಂಘ (ರಿ) ಹೊಸಪೇಟೆ

೩೯. ಮೋಹನ್‌ಕೃಷ್ಣ.ರೈ.ಕೆ., ೨೦೦೪, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೪೦. ರಮೇಶ.ಸ.ಚಿ., ೨೦೦೫, ಅಲೆಮಾರಿಗಳ ಸ್ಥಿತಿಗತಿ, ಪ್ರಕಾಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೪೧. ರಾಜಶೇಖರಯ್ಯ.ಎ.ಎಂ., ೧೯೯೮, ಡಾ.ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ಸಂಪುಟ-೭, ಪ್ರಕಾಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು

೪೨. ಲಕ್ಕಪ್ಪಗೌಡ.ಹೆಚ್.ಜೆ., (ಸಂ), ೧೯೯೮, ಕರ್ನಾಟಕ ಬುಡಕಟ್ಟುಗಳ ಸಂಪುಟ-೨, ಪ್ರಕಾಶಕರು, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೪೩. ಲಕ್ಕಪ್ಪಗೌಡ.ಹೆಚ್.ಜೆ., ೧೯೯೮, ಕರ್ನಾಟಕ ಬುಡಕಟ್ಟುಗಳು ಸಂಪುಟ-೧, ಪ್ರಕಾಶಕರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೪೪. ವಾಲಿ ಅಡಿವೆಪ್ಪ, ೨೦೦೪, ಮುದ್ದುಕವಿಯ ಸಿದ್ದಪದಗಳು, ಪ್ರಕಾಶಕರು, ಸುಮನ್ ವ್ಹಿ.ನಾಯ್ಕ ಗೋಕುಲ ರೋಡ ಕೆ.ಇ.ಸಿ.ಎದುರಿಗೆ, ಹುಬ್ಬಳ್ಳಿ

೪೫. ವಿಜಯ್ ಪೂಣಚ್ಚ ತಂಬಂಡ., ೨೦೦೪, ಪಳೆಮೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೪೬. ವಿಜಯ್ ಪೂಣಚ್ಚ ತಂಬಂಡ., ೨೦೦೧, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೪ ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೪೭. ವೀರಭದ್ರಪ್ಪ.ಬಿ.ವಿ., ೨೦೦೧, ವೇದಗಳಲ್ಲಿ ಜನಸಾಮಾನ್ಯರು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೪೮. ಶರ್ಮ.ಆರ್.ಎಸ್., ೨೦೦೨, ಪ್ರಾಚೀನ ಭಾರತ, ಪ್ರಕಾಶಕರು, ನವಕರ್ನಾಟಕ ಪ್ರಕಾಶನ, ಬೆಂಗಳೂರು

೪೯. ಶಾಂತರಸ., ೨೦೦೦, ತತ್ವಪದಗಳು, ಪ್ರಾತಿನಿಧಿಕ ಸಂಕಲನ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

೫೦. ಶಾಂತರಸ., ೧೯೮೩, ಕೂಡಲೂರು ಬಸವಲಿಂಗ ಶರಣರ ವಚನಗಳು, ಪ್ರಕಾಶಕರು, ವೀರಶೈವ ಅಧ್ಯಯನ ಸಂಸ್ಥೆ ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ

೫೧. ಶಿರೂರು.ಬಿ.ವ್ಹಿ., ೨೦೦೦, ಸಿದ್ಧಶ್ರೀ, ಪ್ರಕಾಶಕರು, ಪ್ರ:ಶ್ರೀ ಸಿದ್ಧರಾಮೇಶ್ವರ ಪ್ರಕಾಶನ ಯಲಬುರ್ಗಾ

೫೨. ಶಿರೂರು.ವಿ.ವ್ಹಿ., ೧೯೭೭, ಯಲಬುರ್ಗಿಯ ಸಿಂಧರು, ಪ್ರಕಾಶಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫೩. ಶಿವತಾರಕ.ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೫೪. ಶಿ.ಲಕ್ಷ್ಮಿ ಮಲ್ಲಿಕಾರ್ಜುನ, ೧೯೮೨, ಕಡಕೊಳ ಮಡಿವಾಳೇಶ್ವರ ವಿರಚಿತ ಸ್ವರವಚನಗಳು, ಪ್ರಕಾಶಕರು, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನ ಮಠ, ಗದಗ.

೫೫. ಶ್ರೀನಿವಾಸಮೂರ್ತಿ.ಚೆ., (ಅನು) ಶರ್ಮಾ.ಆರ್.ಎಸ್., ೨೦೦೪, ಪ್ರಚೀನ ಭಾರತದಲ್ಲಿ ಶೂದ್ರರು, ನವಕರ್ನಾಟಕ, ಪ್ರಕಾಶನ, ಬೆಂಗಳೂರು

೫೬. ಸಬರದ ಬಸವರಾಜ., ೧೯೯೯, ಹೈದರಾಬಾದ ಕರ್ನಾಟಕದ ತತ್ವಪದಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೫೭. ಸುಬ್ಬಣ್ಣ ರೈ.ಎ., (ಸಂ), ೨೦೦೧, ದ್ರಾವಿಡ ನಿಘಂಟು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೫೮. ಸೋಸಲೆ.ಎನ್.ಚಿನ್ನಸ್ವಾಮಿ., ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೫೯. ಸುಂಕಾಪುರ.ಎಂ.ಎಸ್., ೧೯೭೮, ಜಾನಪದ ಸಾಹಿತ್ಯ ದರ್ಶನ-೪, ಪ್ರಕಾಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೬೦. ಸುಂಕಾಪುರ.ಎಂ.ಎಸ್., ೧೯೭೮, ಜಾನಪದ ಸಾಹಿತ್ಯ ದರ್ಶನ-೨, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೬೧. ಹಕಾರಿ ದೇವೇಂದ್ರ ಕುಮಾರ., ೨೦೦೦, ಗ್ರಾಮ ಸಂಸ್ಕೃತಿ ಮಾಲೆ-೩, ಗ್ರಾಮೀಣ ಬೇಟೆಗಳು, ಪ್ರಕಾಶಕರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೬೨. ಹಿಮ್ಮಡಿ.ವೈ.ಬಿ., ಅಲೆಮಾರಿ ಸಮುದಾಯಗಳ ಅಧ್ಯಯನ ಮಾಲೆ, ಪ್ರಕಾಶಕರು, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೬೩. ಹೆಗಡೆ ರಾಜಾರಾಮ್, ೨೦೦೪, ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

ಆ.ಪ್ರಕಟಿತ ಇಂಗ್ಲೀಷ್ ಗ್ರಂಥಗಳು

೧. ಅನಂತಕೃಷ್ಣ ಅಯ್ಯರ್, ದಿ ಮೈಸೂರು ಟ್ರೈಬ್ಸ್ ಆಂಡ್ ಕ್ಯಾಸ್ಟ್ಸ್, ಸಂಪುಟ೫, ಮಿತ್ತಲ್ ಪಬ್ಲಿಕೇಶನ್ಸ್, ನವದೆಹಲಿ, ೧೯೯೩

೨. ಎಡ್ಗರ್ ಥರ್‍ಸ್ಟನ್, ಕ್ಯಾಸ್ಟ್ ಆಂಡ್ ಟ್ರೈಬ್ಸ್ ಆಫ್ ಸದರ್ನ್ ಇಂಡಿಯಾ ಎ ಈ ಎಸ್ ನವದೆಹಲಿ, ಮದ್ರಾಸ್, ೧೯೯೭

೩. ಎಸ್.ಎಮ್.ಚನ್ನ, ಇಂಡಿಯನ್ ಟ್ರೈಬ್ಸ್ ಆಂಡ್ ಕ್ಯಾಸ್ಟ್ಸ್, ಸಂಪುಟ-೫, ಕಸಮೊ ಪಬ್ಲಿಕೇಷನ್ಸ್, ನವದೆಹಲಿ, ೨೦೦೪

೪. ಸಿಂಗ್.ಕೆ.ಎಸ್., ದಿ ಸೆಡ್ಯೂಲ್ ಕ್ಯಾಸ್ಟ್ಸ್, ಸಂಪುಟ೨, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ದೆಹಲಿ, ೧೯೯೩

೫. ಸಯ್ಯದ್ ಸಿರಾಜ್ ಉಲ್ ಹಸನ್, ದಿ ಕ್ಯಾಸ್ಟ್ಸ ಆಂಡ್ ಟ್ರೈಬ್ಸ್ ಆಫ್ ಹೆಚ್.ಇ.ಹೆಚ್. ದಿ ನಿಜಾಮ್ ಡೊಮಿನಿಯನ್ಸ್, ಸಂಪುಟ-೧, ಎ.ಈ.ಎಸ್.ನವದೆಹಲಿ, ಮದ್ರಾಸ್, ೧೯೮೯

ಇ. ಗೆಝಟಿಯರ್‌ಗಳು

೧. ಕರ್ನಾಟಕ ಕೈಪಿಡಿ, ೧೯೯೬, ಕರ್ನಾಟಕ ಗ್ಯಾಸಟಿಯರ್ ಇಲಾಖೆ, ಕರ್ನಾಟಕ ಸರ್ಕಾರ

೨. ಕಟ್ಟೀ ವೆಂಕಟರಂಗೋ (ಅನು) ಗ್ಯಾಝುಟೀಯರು ಮುಂಬಯೀ ಇಲಾಖೆಗೆ ಸೇರಿದ ಕರ್ನಾಟಕ ಭಾಗದ್ದು: ಧಾರವಾಡ ,ಬೆಳಗಾವಿ, ವಿಜಾಪುರ, ಕಾನಾಡಾ ಈ ನಾಲ್ಕು ಜಿಲ್ಲೆಗಳದ್ದು (ಮುಂಬಯಿ: ಗವರ್ನ್‌ಮೆಂಟ್ ಸೆಂಟ್ರಲ್ ಬುಕ್ ಡಿಪೋ, ೧೮೮೩) ಪುನರ್ ಮುದ್ರಣ, ೧೯೮೪, ಹೊಸದೆಹಲಿ ಏಷಿಯನ್ ಏಜುಕೇಷನಲ್ ಸರ್ಮೀಸೆಸ್

೩. ಕಾಮತ್ ಸೂರ್ಯನಾಥ ಯು., ೧೯೮೬, ಕರ್ನಾಟಕ ರಾಜ್ಯ ಗ್ಯಾಸಟಿಯರ್ ಭಾಗ-೩, ಕರ್ನಾಟಕ ರಾಜ್ಯ ಸರಕಾರ ಪ್ರಕಟಣೆ

೪. ಹುಯಿಲಗೋಳ ವರದರಾಜ, ೧೯೮೭, ಭಾರತದ ಗ್ಯಾಸಟಿಯರ್ ಭಾರತದ ದೇಶ ಕೋಶ ಸಂ-೨, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕರ್ನಾಟಕ ಸರಕಾರ ಬೆಂಗಳೂರು

ಈ. ಅಪ್ರಕಟಿತ ಗ್ರಂಥಗಳು

೧. ಇಬ್ರಾಹಿಂಸಾಬ., ಕೊಪ್ಪಳ ಜಿಲ್ಲೆಯ ಐತಿಹಾಸಿಕ ಸ್ಥಳಗಳ ಸಾಂಸ್ಕೃತಿಕ ಅಧ್ಯಯನ, ಎಂ.ಫಿಲ್ ಪದವಿದಾಗಿ ಸಲ್ಲಿಸಿದ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೨. ಉಮೇಶ ಗುರಿಕಾರ, ಹೈದರಾಬಾದ ಕರ್ನಾಟಕದ ಕುರುಬರ ಚಾರಿತ್ರಿಕ ಅಧ್ಯಯನ, ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭

೩. ಕೆ.ಆರ್.ಜೆ.ರಾಜಕುಮಾರ್, ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಮಾದಿಗರು: ಚಾರಿತ್ರಿಕ ಅಧ್ಯಯನ, ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೦೪. ನಲ್ಲಾರಡ್ಡಿ., ದೇವದುರ್ಗಾ ತಾಲೂಕಿನ ಹಗಲು ವೇಷಗಾರರು, ಎಂ.ಫಿಲ್ ಪದವಿದಾಗಿ ಸಲ್ಲಿಸಿದ ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪

P T O

೦೫. ಜುಬೀರ್ ಮಲ್ಲಪ್ಪ., ಗುಲಬರ್ಗಾ ಜಿಲ್ಲೆಯ ಬುಡಕಟ್ಟು ರಾಜಕಾಯ ಅಧ್ಯಯನ, ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೦೬. ಮಾರುತಿ.ಎ.ಎಸ್., ಗೋಸಂಗಿ ಸಮುದಾಯ: ಒಂದು ಅಧ್ಯಯನ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೦೭. ಸರ್ವಮಂಗಳ ಸಕ್ರಿ., ರಾಯಚೂರು ಜಿಲ್ಲೆಯ ತತ್ವಪದ ಮತ್ತು ಅವರ ಸಾಹಿತ್ಯ, ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮

೦೮. ಲಕ್ಕಿ ಪೃಥ್ವಿರಾಜ್ ಸುದರ್ಶನ್, ಪಾರ್ಧಿ ಬುಡಕಟ್ಟು: ಒಂದು ಮಾನವ ಶಾಸ್ತ್ರೀಯ ಅಧ್ಯಯನ, ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೩

ಉ. ಪತ್ರಿಕೆಗಳು

ಅ. ದಿನ ಪತ್ರಿಕೆಗಳು

೧. ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ (೦೬.೦೮.೨೦೦೭)

೨. ಸುದ್ದಿ ಮೂಲ, ಕೊಪ್ಪಳ (೨೬.೦೭.೧೯೯೩)

ಆ. ವಾರಪತ್ರಿಕೆ

೧. ತರಂಗ, ಬೆಂಗಳೂರು (೨೧.೦೧.೧೯೯೦)

೨. ಹೊಸಶಕೆ, ಕೊಪ್ಪಳ (೩೦.೦೧.೨೦೦೫)

೩. ತರಂಗ, ಬೆಂಗಳೂರು (೨೦.೦೮.೨೦೦೯)

ಇ. ನಿಯತಕಾಲಿಕೆಗಳು

೧. ಬಸವರಾಜ ಕರುಗಲ್ (ಸಂ), ೨೦೦೯, ಜೂನ್ ತುಷಾರ, ಮಣಿಪಾಲ, ಉಡುಪಿ ಜಿಲ್ಲೆ

೨. ಸಂದರ್ಶಿತ ವ್ಯಕ್ತಿಗಳು

೧. ಡಾ.ಚಿನ್ನಸ್ವಾಮಿ ಸೋಸಲೆ, ಪ್ರವಾಚಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ದಿ.೦೨.೦೪.೨೦೦೯

೨. ಡಾ.ಎಸ್.ಎಸ್.ಅಂಗಡಿ., ಪ್ರವಾಚಕರು, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ದಿ.೦೩.೦೪.೨೦೦೯

೩. ಡಾ.ಎಂ.ಕೊಟ್ರೇಶ್, ಅಧ್ಯಾಪಕರು, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ದಿ.೦೩.೦೪.೨೦೦೯

೪. ಡಾ.ದೇವರಕೊಂಡಾರೆಡ್ಡಿ., ಪ್ರಾಧ್ಯಾಪಕರು, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ದಿ.೦೬.೦೪.೨೦೦೯

೫. ಡಾ.ಕೆ.ಎಂ.ಮೇತ್ರಿ, ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ದಿ.೧೩.೦೪.೨೦೦೯

೬. ಶ್ರೀ ಮಾರೆಪ್ಪ ಚೆನ್ನದಾಸರ, ತತ್ವಪದ ಹಾಡುಗಾರ, ಯಲಬುರ್ಗಾ, ದಿ.೨೨.೦೫.೨೦೦೯

೭. ಶ್ರೀ ಬಾಲಪ್ಪ ಚೆನ್ನದಾಸರ, ವ್ಯಾಪಾರ, ಯಲಬುರ್ಗಾ, ದಿ೨೨.೦೫.೨೦೦೯

೮. ಶ್ರೀ ಯಮನಪ್ಪ ರಾಜಪ್ಪ ಚೆನ್ನದಾಸರ, ತತ್ವಪದ ಹಾಡುಗಾರ, ತುಮ್ಮರಗುದ್ದಿ, ೨೪.೦೫.೨೦೦೯

೯. ಶ್ರೀದುರಗಪ್ಪ ಚೆನ್ನದಾಸರ, ಕೃಷಿ, ತುಮ್ಮರಗುದ್ದಿ, ೨೫.೦೫.೨೦೦೯

೧೦. ಶ್ರೀ ಬಸವರಾಜಪ್ಪ ಸಂಜೀವಪ್ಪ ಚೆನ್ನದಾಸರ, ಕೃಷಿ, ನಿಂಗಲಬಂಡಿ, ೨೬.೦೫.೨೦೦೯

೧೨. ಶ್ರೀ ಶರಣಪ್ಪ ಚೆನ್ನದಾಸರ, ಡಿ.ಇಡಿ ವಿದ್ಯಾರ್ಥಿ, ತುಮ್ಮರಗುದ್ದಿ ದಿ.೨೫.೦೫.೨೦೦೯

೧೩. ಶ್ರೀ ಆಂಜನೇಯ ಚೆನ್ನದಾಸರ, ವ್ಯಾಪಾರ ನಿಂಗಲಬಂಡಿ, ದಿ.೨೬.೦೫.೨೦೦೯

೧೪. ಶ್ರೀ ತಿಮ್ಮಣ್ಣ ಚೆನ್ನದಾಸರ, ವ್ಯಾಪಾರ, ನಿಂಗಲಬಂಡಿ, ದಿ೨೭.೦೫.೨೦೦೯

೧೫. ಶ್ರೀ ಹನುಮಪ್ಪ ಚೆನ್ನದಾಸರ, ತತ್ವಪದ ಹಾಡುಗಾರ, ನಿಂಗಲಬಂಡಿ,, ೨೭.೦೫.೨೦೦೯

೧೬. ಶ್ರೀ ಯಮನಪ್ಪ ಕುಂದಣ, ವ್ಯಾಪಾರ, ರ್‍ಯಾವಣಿಕೆ, ದಿ.೦೨.೦೫.೨೦೦೯

೧೭. ಶ್ರೀ ವೆಂಕಟೇಶ ಚೆನ್ನದಾಸರ, ಕೃಷಿ, ವಟಪರವಿ, ದಿ.೧೬.೦೫.೨೦೦೯

೧೮. ಶ್ರೀ ಸೋಮಪ್ಪ ಚೆನ್ನದಾಸರ, ಕೃಷಿ, ವಟಪರವಿ, ದಿ.೧೬.೦೫.೨೦೦೯

೧೯. ಶ್ರೀಮತಿ ಯಲ್ಲಮ್ಮ ಚೆನ್ನದಾಸರ, ಕೂಲಿ, ವಟಪರವಿ, ದಿ.೧೮.೦೫.೨೦೦೯


೨೦. ಶ್ರೀ ರಾಣಪ್ಪ ಚೆನ್ನದಾಸರ, ವ್ಯಾಪಾರ, ವಟಪರವಿ, ದಿ.೧೮.೦೫.೨೦೦೯

೨೧. ಶ್ರೀ ಯಲ್ಲಪ್ಪ ಚೆನ್ನದಾಸರ, ವ್ಯಾಪಾರ, ಕುಕನೂರ, ದಿ.೧೯.೦೫.೨೦೦೯

* * *

೩. ನಕ್ಷೆಗಳು

ಕೊಪ್ಪಳ ಜಿಲ್ಲೆ



ಕೃಪೆ: ದೇವರಕೊಂಡಾರೆಡ್ಡಿ ಅವರ ಕೊಪ್ಪಳ ಜಿಲ್ಲೆಯ ಶಾಸನಗಳು ಸಂಪುಟ-೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ (೧೯೯೯)

ಯಲಬುರ್ಗಾ ತಾಲೂಕು



ಕೃಪೆ: ದೇವರಕೊಂಡಾರೆಡ್ಡಿ ಅವರ ಕೊಪ್ಪಳ ಜಿಲ್ಲೆಯ ಶಾಸನಗಳು ಸಂಪುಟ-೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ (೧೯೯೯)



೪. ಛಾಯಾಚಿತ್ರಗಳು

ಯಲಬುರ್ಗಾದಲ್ಲಿ ಅಕ್ಟೋಬರ್ ೨೦೦೮ ರಲ್ಲಿ ಚೆನ್ನದಾಸರ ಸಮುದಾಯದ ಬಾಲ್ಯವಿವಾಹಕ್ಕೆ ಸಂಬಂಧಿಸಿದ ಛಾಯಾಚಿತ್ರಗಳು



ವಧುವರರಿಗೆ ವಿವಾಹಕ್ಕೆ ಅರಶಿಣ ಹಚ್ಚುವ ಮೂಲಕ ಸ್ನಾನಕ್ಕೆ ಸಿದ್ದತೆ ಮಾಡುವುದು



ವಧುವರರಿಗೆ ಮುತ್ತೈದೆ ಕಳಸ ಬೆಳಗುವುದು



ಸಹೋದರ ಕಳಸ ಬೆಳಗುವುದು



ವರನ ತಂದೆತಾಯಿಗಳು ಕಳಸ ಬೆಳಗುವುದು



ವಧುವರರು ತಾಳಿ ಕಟ್ಟಿದ ಮೇಲೆ ಬಾಸಿಂಗದೊಂದಿಗೆ ಕುಳಿತಿರುವುದು

ಯಲಬುರ್ಗಾ ಪ್ರದೇಶದ ಚೆನ್ನದಾಸರು ವಾದ್ಯಪರಿಕರಗಳೊಂದಿಗೆ ತತ್ವಪದಗಳನ್ನು ಹಾಡುವ ಛಾಯಾಚಿತ್ರಗಳು



ತುಮ್ಮರಗುದ್ದಿಗ್ರಾಮದಲ್ಲಿರುವ ತತ್ವಪದ ಹಾಡುಗಾರರು



ತುಮ್ಮರಗುದ್ದಿಗ್ರಾಮದಲ್ಲಿ ತತ್ವಪದಗಳನ್ನು ಧ್ವನಿಸುರಳಿಯಲ್ಲಿ ಸಂಗ್ರಹಿಸುವ ಸಂಶೋಧನಾ ವಿದ್ಯಾರ್ಥಿ



ಯಲಬುರ್ಗಾದಲ್ಲಿ ತತ್ವಪದಗಳನ್ನು ಹಾಡುವುದಕ್ಕೆ ಸಿದ್ದತೆಯಲ್ಲಿರುವುದು



ಕೊಪ್ಪಳದಲ್ಲಿ ಜರುಗಿದ ಸಾಂಸ್ಕೃತಿಕ ಸೌರಭ ಕಾರ್ಯಕ್ರಮದಲ್ಲಿ ತತ್ವಪದಗಳನ್ನು ಹಾಡುವ ಚೆನ್ನದಾಸರು

ಯಲಬುರ್ಗಾ ಪ್ರದೇಶದಲ್ಲಿರುವ ಚೆನ್ನದಾಸರ ಸಮುದಾಯದ ವಾಸಸ್ಥಳಗಳ ಛಾಯಾಚಿತ್ರಗಳು



ಯಲಬುರ್ಗಾದಲ್ಲಿ ಚೆನ್ನದಾಸರ ಕುಟುಂಬಗಳು ನೆಲೆಸಿರುವ ವಾಸಸ್ಥಳ



ಲಿಂಗನಬಂಡಿ ಗ್ರಾಮದಲ್ಲಿ ಚೆನ್ನದಾಸರ ಕುಟುಂಬಗಳು ನೆಲೆಸಿರುವ ವಾಸಸ್ಥಳ

ಯಲಬುರ್ಗಾದಲ್ಲಿ ಚೆನ್ನದಾಸರ ಸಮುದಾಯದ ಯಜಮಾನ ಮಕ್ಕಳಿಗೆ ಪಾಠ ಹೇಳುತ್ತಿರುವ ಛಾಯಾಚಿತ್ರ



ಅಕ್ಷರಭ್ಯಾಸದಲ್ಲಿ ತೊಡಗಿರುವ ಮಕ್ಕಳು



ಯಲಬುರ್ಗಾ ಪ್ರದೇಶದಲ್ಲಿ ವ್ಯಾಪಾರದಲ್ಲಿ ತೊಡಗಿರುವ ಚೆನ್ನದಾಸರ ಮಹಿಳೆ



ಯಲಬುರ್ಗಾದಲ್ಲಿ ಗುಡಾರಗಳನ್ನು ನವೀಕರಣಗೊಳಿಸಲು
ಸಿದ್ಧತೆಯಲ್ಲಿರುವ ಚೆನ್ನದಾಸರ ಯುವಕರು